ಮಂಗಳವಾರ, ಫೆಬ್ರುವರಿ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 56 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	₹/$
74,454	22,553	86.72

ಮುಡಾ: ಹಿಂದೆ ಜಿಲ್ಲಾಧಿಕಾರಿಯಾಗಿದ್ದಾಗ ಸಿದ್ದರಾಮಯ್ಯ ಪತ್ನಿಗೆ ನಿವೇಶನ ಹಂಚಿಕೆ ಪ್ರಕರಣ

ಕುಮಾರ ನಾಯಕರದ್ದೇ ಲೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಪರಿಹಾರ ರೂಪದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕರಣದಲ್ಲಿ, ಅಂದಿನ ಮೈಸೂರು ಜಿಲ್ಲಾಧಿಕಾರಿ, ಈಗಿನ ರಾಯಚೂರು ಕ್ಷೇತ್ರದ ಕಾಂಗ್ರೆಸ್ ಸಂಸದ ಜಿ.ಕುಮಾರ ನಾಯಕ ಅವರು ಕರ್ತವ್ಯಲೋಪ ಎಸಗಿದ್ದಾರೆ ಎಂದು ಲೋಕಾಯುಕ್ತ ಹೇಳಿದೆ.


ಜಿ. ಕುಮಾರ ನಾಯಕ

ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ವರದಿಯಲ್ಲಿ, ಕುಮಾರ ನಾಯಕ ಅವರ ಲೋಪವನ್ನು ಬೊಟ್ಟು ಮಾಡಲಾಗಿದ್ದು, ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು ಎಂದೂ ಹೇಳಿದೆ.

ಸಿದ್ದರಾಮಯ್ಯ, ಪಾರ್ವತಿ, ಪಾರ್ವತಿ ಅವರ ಸೋದರ ಮಲ್ಲಿಕಾರ್ಜುನ ಸ್ವಾಮಿ, ಜಮೀನಿನ ಮಾಲೀಕ ದೇವರಾಜು ಮತ್ತು ಸಿದ್ದರಾಮಯ್ಯ ಅವರ ಮಗ ಯತೀಂದ್ರ ಅವರ ವಿರುದ್ಧದ ಯಾವ ಆರೋಪಗಳೂ ಸಾಬೀತಾಗಿಲ್ಲ ಎಂದಿರುವ ಲೋಕಾಯುಕ್ತವು, ಅಧಿಕಾರಿಗಳಿಂದಲೇ ಎಲ್ಲ ತಪ್ಪುಗಳಾಗಿವೆ ಎಂದು ಆರೋಪಿಸಿದೆ.

ಕೆಸರೆ ಗ್ರಾಮ ವಿವಾದಿತ ಸರ್ವೆ ಸಂಖ್ಯೆ: 464ರ 3 ಎಕರೆ 16 ಗುಂಟೆ ಜಮೀನಿನ ಭೂಬಳಕೆ ಪರಿವರ್ತನೆಗೆ 2004–05ರಲ್ಲಿ ಮಲ್ಲಿಕಾರ್ಜುನಸ್ವಾಮಿ ಅರ್ಜಿ ಸಲ್ಲಿಸಿದಾಗ, ಕುಮಾರ ನಾಯಕ ಅವರು ಮೈಸೂರು ಜಿಲ್ಲಾಧಿಕಾರಿ ಆಗಿದ್ದರು. ಆ ಅವಧಿಯಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸದೆಯೇ ವರದಿ ಸಲ್ಲಿಸಿದ್ದಾರೆ ಎಂದು ಲೋಕಾಯುಕ್ತ ಹೇಳಿದೆ.

ಜಮೀನಿನ ಸ್ಥಳ ಪರಿಶೀಲನೆ ನಡೆಸಬೇಕಿತ್ತು. ಬದಲಿಗೆ ಅಧಿಕಾರಿಗಳು ಕೆಸರೆ ಗ್ರಾಮದ ನಕ್ಷೆ, ಭೂಸ್ವಾಧೀನ ಸಂಬಂಧಿ ನಕ್ಷೆ, ಬಡಾವಣೆ ಅಭಿವೃದ್ಧಿ ನಕ್ಷೆಗಳನ್ನು ಬಳಸಿಕೊಂಡು ಸ್ಥಳ ಪರಿಶೀಲನೆ ವರದಿ ಸಿದ್ಧಪಡಿಸಿದ್ದಾರೆ. ಈ ನಕ್ಷೆಗಳಲ್ಲಿ ಸರ್ವೆ ಸಂಖ್ಯೆ 464ರ ಜಮೀನು ಖಾಲಿ ಎಂದೇ ನಮೂದಾಗಿದೆ. ಹೀಗಾಗಿ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿಲ್ಲ ಎಂದು ವರದಿ ನೀಡಿದ್ದಾರೆ ಎಂದು ಉಲ್ಲೇಖಿಸಿದೆ.

'ಅಧೀನ ಅಧಿಕಾರಿಗಳು ನೀಡಿದ ಸ್ಥಳ ಪರಿಶೀಲನಾ ವರದಿಯನ್ನು ಕುಮಾರ ನಾಯಕ ಅನುಮೋದಿಸಿದ್ದಾರೆ. ವರದಿ ಖಾತರಿಪಡಿಸಿಕೊಳ್ಳದೇ ಭೂ ಪರಿವರ್ತನೆಗೆ ಆದೇಶಿಸಿದ್ದಾರೆ. ಇದು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪಕ್ಕೆ ಹಿಡಿದ ಕೈಗನ್ನಡಿ. ಆದರೆ, ಅವರು ಭೂಮಾಲೀಕರ ಜತೆ ಸೇರಿಕೊಂಡು ಅಕ್ರಮ ಎಸಗಿದ್ದಾರೆ, ಉದ್ದೇಶಪೂರ್ವಕವಾಗಿ ಸುಳ್ಳು ವರದಿ ನೀಡಿದ್ದಾರೆ ಎಂಬುದು ಸಾಬೀತಾಗುವುದಿಲ್ಲ.

ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ ಮತ್ತು ಇಲಾಖಾ ಶಿಸ್ತುಕ್ರಮ ತೆಗೆದುಕೊಳ್ಳಬೇಕು' ಎಂದು ಶಿಫಾರಸು ಮಾಡಿದೆ.

ತಮ್ಮಿಂದ ಕರ್ತವ್ಯಲೋಪವಾಗಿದೆ ಎಂದು ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿರುವ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಂಸದ ಕುಮಾರ ನಾಯಕ ಅವರಿಗೆ ಮೂರು ಬಾರಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಅವರಿಗೆ ಕಳುಹಿಸಲಾದ ಎರಡು ಸಂದೇಶಕ್ಕೂ ಪ್ರತಿಕ್ರಿಯೆ ನೀಡಲಿಲ್ಲ.

ಯಾವೆಲ್ಲಾ ಅಧಿಕಾರಿಗಳಿಂದ ಲೋಪ

1. ಜಿ.ಕುಮಾರ ನಾಯಕ, ಹಿಂದಿನ ಜಿಲ್ಲಾಧಿಕಾರಿ, ಮೈಸೂರು (ನಿವೃತ್ತ)
2. ಮಾಳಿಗ ಶಂಕರ್, ಹಿಂದಿನ ತಹಶೀಲ್ದಾರ್, ಮೈಸೂರು ತಾಲ್ಲೂಕು (ನಿವೃತ್ತ)
3. ಸಿದ್ದಪ್ಪಾಜಿ, ರೆವಿನ್ಯೂ ಇನ್‌ಸ್ಪೆಕ್ಟರ್, ಮೈಸೂರು ತಾಲ್ಲೂಕು ಕಚೇರಿ (ನಿವೃತ್ತ)
4. ಶಂಕರಪ್ಪ, ಭೂಮಾಪಕ, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ, ಮೈಸೂರು ತಾಲ್ಲೂಕು

ಜಿ.ಕುಮಾರ ನಾಯಕ ಅವರು ಐಎಎಸ್ ಅಧಿಕಾರಿಯಾಗಿ ನಿವೃತ್ತಿಯಾಗಿದ್ದು, ಅವರಿಗೆ ಅಖಿಲ ಭಾರತ (ಶಿಸ್ತು ನಡಾವಳಿಗಳು) ಮತ್ತು ಸೇವಾ (ಶಿಸ್ತು ಪಾಲನಾ ನಡಾವಳಿಗಳು) ನಿಯಮಗಳು ಅನ್ವಯಿಸುತ್ತವೆ. ಕರ್ತವ್ಯಲೋಪ ನಡೆದು 19 ವರ್ಷಗಳಾಗಿವೆ. ಹೀಗಾಗಿ ಶಿಸ್ತು ಕ್ರಮದ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಬಹುದಾಗಿರುತ್ತದೆ.

ಉಳಿದ ಅಧಿಕಾರಿಗಳ ವಿರುದ್ಧ ಸಂಬಂಧಿತ ಇಲಾಖೆಗಳ ನಿಯಮಾವಳಿಗಳ ಅನ್ವಯ ತನಿಖೆ ಮತ್ತು ಶಿಸ್ತು ಕ್ರಮ ತೆಗೆದುಕೊಳ್ಳಬಹುದು ಎಂದಿದೆ.

₹700 ಕೋಟಿಗೂ ಹೆಚ್ಚು ನಷ್ಟ

ಭೂಸ್ವಾಧೀನಪಡಿಸಿಕೊಳ್ಳದೇ ರೈತರ ಜಮೀನನ್ನು ಮುಡಾ ಬಳಕೆ ಮಾಡಿಕೊಂಡ ಪ್ರಕರಣಗಳಲ್ಲಿ, ಸರ್ಕಾರಕ್ಕೆ ₹700 ಕೋಟಿಗೂ ಹೆಚ್ಚು ನಷ್ಟವಾಗಿದೆ ಎಂದು ಲೋಕಾಯುಕ್ತವು ಹೇಳಿದೆ.

ಇಂತಹ ಪ್ರಕರಣಗಳಲ್ಲಿ ಮುಡಾವು 2016–2022ರ ಅವಧಿಯಲ್ಲಿ 50:50ರ ಅನುಪಾತದಲ್ಲಿ ಅಕ್ರಮವಾಗಿ 1,095 ನಿವೇಶನಗಳನ್ನು ಪರಿಹಾರವಾಗಿ ನೀಡಿದೆ. ಆದರೆ ಇವು ಭೂಮಾಲೀಕರು ಅಥವಾ ವಾರಸುದಾರರಿಗೆ ಸಿಗದೆ ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತು ಪ್ರಭಾವಿಗಳ ಪಾಲಾಗಿವೆ ಎಂದು ಹೇಳಿದೆ.

ಮುಡಾ ಆಯುಕ್ತರಾಗಿದ್ದ ದಿನೇಶ್ ಕುಮಾರ್ ಅವರು ಇದರಲ್ಲಿ ಭಾಗಿಯಾಗಿದ್ದಾರೆ. 50:50ರ ಅನುಪಾತದ ಪರಿಹಾರ ನಿಯಮವನ್ನು ಸರ್ಕಾರ ರದ್ದುಪಡಿಸಿದ ನಂತರವೂ ದಿನೇಶ್ ಕುಮಾರ್ ಮತ್ತು ಮುಡಾದ ಹಿಂದಿನ ಅಧ್ಯಕ್ಷ ಕೆ.ಮರೀಗೌಡ ಅವರ ಮೌಖಿಕ ಆದೇಶದಂತೆ 252 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಯಬೇಕು ಎಂದು ಹೇಳಿದೆ.


ಕೆ.ಮರೀಗೌಡ


ದಿನೇಶ್ ಕುಮಾರ್



ಮುತ್ತಿಗೆ ಯತ್ನ

ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ಆಯ್ಕೆಗೆ ಕೆಪಿಎಸ್‌ಸಿ ನಡೆಸಿದ ಪೂರ್ವಭಾವಿ ಮರು ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಭಾಷಾಂತರ ದೋಷದಿಂದ ಕನ್ನಡ ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು, ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿ ಬೆಂಗಳೂರಿನಲ್ಲಿ ಸೋಮವಾರ 'ಉದ್ಯೋಗ ಸೌಧ'ಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು ಚಿತ್ರ: ಎಂ.ಎಸ್. ಮಂಜುನಾಥ್

ಹುದ್ದೆ ಯಾವುದೇ ಇದ್ದರೂ ನನ್ನದೇ ನಾಯಕತ್ವ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಯಾವುದೇ ಹುದ್ದೆಯಲ್ಲಿದ್ದರೂ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವುದು ನನ್ನ ಕರ್ತವ್ಯ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'2028ರ ಚುನಾವಣೆ ನಿಮ್ಮ ನಾಯಕತ್ವದಲ್ಲಿ ನಡೆಯಲಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಹುದ್ದೆಗಳು ಪಕ್ಷವನ್ನು ಮುನ್ನಡೆಸುವಂತೆ ಮಾಡುವುದಿಲ್ಲ' ಎಂದರು.

'ನಾನು ಏನೇ ಆಗಬಹುದು, ಅದು ಮುಖ್ಯವಲ್ಲ. ಪಕ್ಷ ಕೊಟ್ಟಿರುವ ಶಕ್ತಿಯಿಂದ ನಾವು ನಾಯಕರಾಗಿದ್ದು, ಕಾಂಗ್ರೆಸಿಗನಾಗಿ ಪಕ್ಷಕ್ಕೆ ಶಕ್ತಿ ತುಂಬಿ ಮುನ್ನಡೆಸುವುದು ಮುಖ್ಯ' ಎಂದರು.

13ನೇ ಪುಟ ನೋಡಿ

'ಬದಲಾವಣೆ ಸುದ್ದಿ: ಕಪೋಲ ಕಲ್ಪಿತ'

'ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿಯ ಬದಲಾವಣೆ ಎಂಬ ಚರ್ಚೆಗಳು ಪತ್ರಿಕೆಗಳ ಕಪೋಲ ಕಲ್ಪಿತ ಸುದ್ದಿಗಳು' ಎಂದು ಎಐಸಿಸಿ ಅಧ್ಯಕ್ಷರೇ ಹೇಳಿದ್ದಾರೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಹೇಳಿದರು.

'ಈ ವಿಷಯವಾಗಿ ಯಾರೂ ಮಾತನಾಡಬಾರದು ಎಂದಿದ್ದಾರೆ. ಪರಮೇಶ್ವರ ಅವರೂ ಈಗ ಏನೂ ಮಾತನಾಡುತ್ತಿಲ್ಲ' ಎಂದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನ ಶಾಶ್ವತವಲ್ಲ'

'ಕೆಪಿಸಿಸಿ ಅಧ್ಯಕ್ಷ ಸ್ಥಾನ ಶಾಶ್ವತವಲ್ಲ. ಯಾವಾಗ ಯಾರು ಬದಲಾಗುತ್ತಾರೆ ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ನಮ್ಮಲ್ಲಿ ಯಾರೂ ನಿರುತ್ಸಾಹಿ ಸಚಿವರಿಲ್ಲ. ಎಲ್ಲರೂ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಹೇಳುವುದಿಲ್ಲ. ಆದರೆ, ಎಲ್ಲರೂ ಚೆನ್ನಾಗಿ ಕೆಲಸ ಮಾಡಬೇಕೆಂಬ ಪ್ರಯತ್ನವಂತೂ ಮಾಡುತ್ತಿದ್ದಾರೆ' ಎಂದರು.

ಶಿಶು ಮಾರಾಟ ಐವರ ಬಂಧನ

ಕುಣಿಗಲ್ (ತುಮಕೂರು): ಐದು ದಿನಗಳ ಹಿಂದೆ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಅವಿವಾಹಿತ ಯುವತಿ ಜನ್ಮನೀಡಿದ್ದ ಗಂಡು ಮಗುವನ್ನು ಮಾರಾಟ ಮಾಡಲಾಗಿದೆ. ಈ ವಿಷಯ ಗೊತ್ತಾಗುತ್ತಲೇ ಪೊಲೀಸರು ಮಗುವಿನ ತಾಯಿ ಮತ್ತು ಅಂಗನವಾಡಿ ಕಾರ್ಯಕರ್ತೆ ಸೇರಿ ಐವರನ್ನು ಬಂಧಿಸಿದ್ದಾರೆ.



ಮಗು ಮಾರಾಟಕ್ಕೆ ನೆರವಾಗಿದ್ದ ಅಂಗನವಾಡಿ ಕಾರ್ಯಕರ್ತೆ ಎನ್. ಜ್ಯೋತಿ, ಜತೆಗೂಡಿದ್ದ ಜ್ಯೋತಿ, ಮಗು ಖರೀದಿಸಿದ ಮುಬಾರಕ್ ಪಾಷಾ, ಮಗುವಿನ ತಾಯಿ ಮತ್ತು ಆಕೆಯ ಪ್ರಿಯಕರ ಮಾಗಡಿಯ ಶ್ರೀನಂದ ಎಂಬಾತನನ್ನು ಕುಣಿಗಲ್ ಪೊಲೀಸರು ಬಂಧಿಸಿದ್ದಾರೆ.

13ನೇ ಪುಟ ನೋಡಿ

ಪಂಚ ಯೋಜನೆಗಳ ಪುನರ್ ಪರಿಶೀಲನೆ: ಗೃಹ ಸಚಿವ ಜಿ.ಪರಮೇಶ್ವರ ಸುಳಿವು

ಬಡವರಿಗೆ ಮಾತ್ರ 'ಗ್ಯಾರಂಟಿ'

ಪ್ರಜಾವಾಣಿ ವಾರ್ತೆ

ತುಮಕೂರು: 'ಗ್ಯಾರಂಟಿ ಯೋಜನೆಗಳು ಬಡವರಿಗೆ ಮಾತ್ರ ಸಿಗುವಂತಾಗಬೇಕು. ಆ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳ ಪುನರ್ ಪರಿಶೀಲಿಸಲು ಸರ್ಕಾರದ ಹಂತದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದ್ದಾರೆ.

ನಗರದಲ್ಲಿ ಸೋಮವಾರ ನಡೆದ ಕೆಡಿಪಿ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಾಗ 'ಬಿಪಿಎಲ್ ಮಾನದಂಡ ಇಟ್ಟುಕೊಂಡು ಬಡವರಿಗೆ ಮಾತ್ರ ಗ್ಯಾರಂಟಿ ಯೋಜನೆಗಳ ಲಾಭ ಸಿಗುವಂತೆ ಮಾಡಬೇಕಿದೆ. ಈ ಬಗ್ಗೆ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡು ಸರ್ಕಾರಕ್ಕೆ ಏಕೆ ಕಳುಹಿಸಬಾರದು' ಎಂದು ಅವರು ಸಲಹೆ ಮಾಡಿದರು.

ವಿಷಯ ಪ್ರಸ್ತಾಪಿಸಿದ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ, '₹2 ಲಕ್ಷ ಸಂಬಳ ತೆಗೆದುಕೊಳ್ಳುವ ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡುತ್ತಿದ್ದಾರೆ. ನಮ್ಮದು ಅಷ್ಟೊಂದು ಶ್ರೀಮಂತ ರಾಜ್ಯವೇ' ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಸಚಿವರು, 'ಇದೊಂದು ಗಂಭೀರ ವಿಚಾರ. ಗೃಹಲಕ್ಷ್ಮಿ ಯೋಜನೆಯಲ್ಲಿ ಶ್ರೀಮಂತರೂ ಸೌಲಭ್ಯ ಪಡೆದುಕೊಳ್ಳುತ್ತಿದ್ದು ಇದನ್ನು ತಪ್ಪಿಸಬೇಕಿದೆ' ಎಂದು ಸಲಹೆ ಮಾಡಿದರು. ಕೃಷ್ಣಪ್ಪ ನೀಡಿದ ಸಲಹೆ ಒಪ್ಪುವುದಾದರೆ ಪರಿಷ್ಕರಿಸುವ ನಿರ್ಧಾರ ಕೈಗೊಳ್ಳೋಣ ಎಂದರು.

7ನೇ ಪುಟ ನೋಡಿ

ಆರ್ಥಿಕ ಹೊರೆ: ಪಾಟೀಲ

ಬಳ್ಳಾರಿ: 'ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಹೊರೆ ಆಗಿರುವುದು ನಿಜ. ವರ್ಷಕ್ಕೆ ₹50 ಸಾವಿರ ಕೋಟಿ ಸಣ್ಣ ಮೊತ್ತವಲ್ಲ. ಆದರೆ, ಬದ್ಧತೆ ಅನುಸಾರ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸುತ್ತೇವೆ. ನಮ್ಮ ಶಾಸಕರ್ಯಾರೂ ಗ್ಯಾರಂಟಿ ಕಡಿತದ ಬಗ್ಗೆ ಮಾತನಾಡಿಲ್ಲ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ಗ್ಯಾರಂಟಿಗಳ ಕುರಿತು ಕೇಳಿ ಬರುತ್ತಿರುವ ಪ್ರಶ್ನೆಗಳಿಗೆ ಸರ್ಕಾರವು ಬಜೆಟ್‌ನಲ್ಲಿ ಉತ್ತರಿಸಲಿದೆ. ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆಗಳ ಹಣ ಬಿಡುಗಡೆ ಮಾಡುತ್ತೇವೆ. ಯಾರಿಗೂ ಯಾವ ಸ್ವರೂಪದಲ್ಲೂ ತೊಂದರೆ ಆಗದಂತೆ ಕ್ರಮ ವಹಿಸುತ್ತೇವೆ. ಈಗಿನ ಗ್ಯಾರಂಟಿ ವ್ಯವಸ್ಥೆ ಬದಲಾಗದು' ಎಂದು ಹೇಳಿದರು.

ಸ್ಥಿತಿವಂತರು ಬಿಟ್ಟು ಕೊಡಲಿ: ಎಚ್.ಎಂ. ರೇವಣ್ಣ

ಕಾರವಾರ ಜಿಲ್ಲೆಯಲ್ಲಿ 2,800 ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಹಣ ತಮಗೆ ಬೇಡ. ತಾವು ಸ್ಥಿತಿವಂತರಿದ್ದು ಸೌಲಭ್ಯ ಬಿಟ್ಟುಕೊಡುವುದಾಗಿ ಪತ್ರ ಕೊಟ್ಟಿದ್ದಾರೆ. ಅದೇ ರೀತಿ ಇತರೆಡೆಗಳಲ್ಲೂ ಸ್ಥಿತಿವಂತರು ಯೋಜನೆಯ ಸೌಲಭ್ಯ ಬಿಟ್ಟುಕೊಡಬೇಕು ಎಂದು ಗ್ಯಾರಂಟಿ ಯೋಜನೆಗಳ ರಾಜ್ಯ ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಸಲಹೆ ನೀಡಿದರು.

ಠಾಣೆಗೆ ಬಂದ ಸಂತ್ರಸ್ತೆ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರಕ್ಕೊಳಗಾಗಿ ದೂರು ನೀಡಲು ಠಾಣೆಗೆ ಬಂದ ಬಾಲಕಿಗೆ ಸಹಾಯ ಮಾಡುವ ಸೋಗಿನಲ್ಲಿ ಅತ್ಯಾಚಾರ ಮಾಡಿದ ಆರೋಪದ ಮೇಲೆ ಪೊಲೀಸ್ ಕಾನ್‌ಸ್ಟೆಬಲ್ ಸೇರಿ ಇಬ್ಬರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿ, ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಿದ್ದಾರೆ.

17 ವರ್ಷದ ಸಂತ್ರಸ್ತೆಯ ತಾಯಿ ನೀಡಿರುವ ದೂರು ಆಧರಿಸಿ ಬೊಮ್ಮನಹಳ್ಳಿ ಠಾಣೆ ಕಾನ್‌ಸ್ಟೆಬಲ್ ಅರುಣ್ ತೊಣೆಪ ಹಾಗೂ ಸಂತ್ರಸ್ತೆಯ ಸ್ನೇಹಿತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಠಾಣಾ ವ್ಯಾಪ್ತಿಯಲ್ಲಿ ತನ್ನ ತಾಯಿಯೊಂದಿಗೆ ನೆಲಸಿರುವ ಸಂತ್ರಸ್ತೆಗೆ ಪಕ್ಕದ ಮನೆ ನಿವಾಸಿ, ವಿವಾಹಿತ ವ್ಯಕ್ತಿಯ ಪರಿಚಯವಾಗಿದೆ. ಆರೋಪಿಯು ಪ್ರೀತಿಸಿ, ಮದುವೆ ಮಾಡಿಕೊಳ್ಳುವುದಾಗಿ ಪುಸಲಾಯಿಸಿ, ಬಾಲಕಿಯ ಮೇಲೆ ನಿರಂತರ ಅತ್ಯಾಚಾರವೆಸಗಿ ಹಲ್ಲೆ ಮಾಡಿದ್ದಾನೆ. ಈ ವಿಷಯವನ್ನು ಬಾಲಕಿ, ತನ್ನ ತಾಯಿಗೆ ತಿಳಿಸಿದ್ದಳು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

13ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕುಂಭಮೇಳದಿಂದ ಮರಳುವಾಗ ಅಪಘಾತ: ಆರು ಮಂದಿ ಸಾವು



ಮಹಾ ಕುಂಭಮೇಳ ಮುಗಿಸಿಕೊಂಡು ಮರಳುವಾಗ, ಮಧ್ಯಪ್ರದೇಶದ ಜಬಲ್‌ಪುರ ಬಳಿ ಅಪಘಾತಕ್ಕೀಡಾದ ಬೆಳಗಾವಿ ಜಿಲ್ಲೆಯ ಭಕ್ತರ ವಾಹನ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ಪ್ರಯಾಗರಾಜ್‌ನ ಮಹಾ ಕುಂಭಮೇಳದಲ್ಲಿ ಪಾಲ್ಗೊಂಡು ಮರಳುತ್ತಿದ್ದ ವೇಳೆ ಸೋಮವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಆರು ಮಂದಿ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಗೋಕಾಕ ನಗರದ ಲಕ್ಷ್ಮೀ ಬಡಾವಣೆಯ ನಿವಾಸಿ ಬಾಲಚಂದ್ರ ನಾರಾಯಣ ಗೌಡರ (55), ಗೊಂಬಿಗುಡಿ ಬಡಾವಣೆ ನಿವಾಸಿ ಬಸವರಾಜ್ ನಿರೂಪಾದಪ್ಪ ಕುರಟ್ಟಿ (63), ಗುರುವಾರ ಪೇಟೆಯ ನಿವಾಸಿಗಳಾದ ಬಸವರಾಜ್ ಶಿವಪ್ಪ ದೊಡಮನಿ (49), ವಿರೂಪಾಕ್ಷ ಚನ್ನಪ್ಪ ಗುಮತಿ (61), ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಪೋಸ್ಟ್ ವ್ಯಾಪ್ತಿಯ ಆನಂದಪುರದ ಸುನೀಲ್ ಬಾಲಕೃಷ್ಣ ಶೇಡಶ್ಯಾಳೆ (45) ಹಾಗೂ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲ್ಲೂಕಿನ ಕಮತಗಿಯ ಈರಣ್ಣ ಶಂಕರಪ್ಪ ಶೇಬಿನಕಟ್ಟಿ (43) ಮೃತರು. ಗೋಕಾಕದ ಮುಸ್ತಾಕ ಶಿಂಧಿಕುರಬೇಟ್ (ವಾಹನ ಚಾಲಕ) ಹಾಗೂ ಸದಾಶಿವ ಉಪಲಾಳಿ ಗಾಯಗೊಂಡಿದ್ದಾರೆ.

13ನೇ ಪುಟ ನೋಡಿ



ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿ ಶಿಫಾರಸು

ಬಿಬಿಎಂಪಿ ಬದಲು 2–7 ಪಾಲಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ಕನಿಷ್ಠ ಎರಡರಿಂದ ಗರಿಷ್ಠ ಏಳು ಸಣ್ಣ ಪಾಲಿಕೆಗಳಾಗಿ ವಿಂಗಡಣೆ ಮಾಡುವಂತೆ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ಶಿಫಾರಸು ಮಾಡಿದೆ.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024' ಅನ್ನು ಪರಿಶೀಲಿಸಿ ವರದಿ ಸಲ್ಲಿಸಲು ಶಾಸಕ ರಿಜ್ವಾನ್ ಅರ್ಷದ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ಈ ಶಿಫಾರಸು ಮಾಡಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ರಿಜ್ವಾನ್ ಅರ್ಷದ್ ಅವರು ಈ ಕುರಿತ ವರದಿಯನ್ನು ಸಲ್ಲಿಸಿದರು. ಬಳಿಕ ಮಾತನಾಡಿದ ರಿಜ್ವಾನ್ ಅವರು, 'ಸಣ್ಣ ಪಾಲಿಕೆಗಳು ಉತ್ತಮ ಅಭಿವೃದ್ಧಿ, ದಕ್ಷ ಆಡಳಿತಕ್ಕೆ ಪೂರಕ ಆಗಲಿವೆ. ಒಂದೇ ಬಾರಿಗೆ ಏಳು ಪಾಲಿಕೆ ರಚನೆ ಮಾಡಬೇಕು ಎಂದಿಲ್ಲ. ಈ ಬಗ್ಗೆ ಸಂದರ್ಭಕ್ಕೆ ಅನುಗುಣವಾಗಿ ಸರ್ಕಾರ ತೀರ್ಮಾನ ಕೈಗೊಳ್ಳಬೇಕೆಂದು ಶಿಫಾರಸು ಮಾಡಿದ್ದೇವೆ' ಎಂದರು.

'ಐದು ತಿಂಗಳು ಈ ಮಸೂದೆಗೆ ಸಂಬಂಧಿಸಿದಂತೆ ವಿವಿಧ ಕಡೆ ಸಭೆಗಳನ್ನು ನಡೆಸಿದ್ದೇವೆ. ಕಾನೂನು ತಜ್ಞರು, ಬೆಂಗಳೂರು ನಗರವನ್ನು ಬಲ್ಲವರ ಜೊತೆ ಸಮಾಲೋಚನೆ ನಡೆಸಿದ್ದೇವೆ. ಸಾರ್ವಜನಿಕರಿಂದಲೂ ಸಲಹೆ, ಸೂಚನೆ ಅಭಿಪ್ರಾಯ ಸಂಗ್ರಹಿಸಿದ್ದೇವೆ' ಎಂದು ರಿಜ್ವಾನ್ ಅರ್ಷದ್ ಹೇಳಿದರು.

4ನೇ ಪುಟ ನೋಡಿ

ಆಗಸ್ಟ್ 15ರ ನಂತರ ಚುನಾವಣೆ: ಸರ್ಕಾರ

'ಬೆಂಗಳೂರಿನ ಪಾಲಿಕೆಗಳಿಗೆ ಆಗಸ್ಟ್ 15ರ ನಂತರ ಚುನಾವಣೆ ನಡೆಯಲಿದೆ. ಆ ವೇಳೆಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ, ರಾಜ್ಯ ಚುನಾವಣಾ ಆಯೋಗಕ್ಕೆ ವಾರ್ಡ್, ಮೀಸಲಾತಿ ವಿವರಗಳನ್ನು ಸಲ್ಲಿಸಲಾಗುವುದು' ಎಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದೆ.

ಬಿಬಿಎಂಪಿಗೆ ಚುನಾವಣೆ ನಡೆಸುವ ಸಂಬಂಧ ರಾಜ್ಯ ಸರ್ಕಾರ ಹಾಗೂ ಶಿವರಾಜು ಅವರ ನಡುವೆ ನಡೆಯುತ್ತಿರುವ ಮೊಕದ್ದಮೆಗೆ ಅನ್ವಯಿಸಿದಂತೆ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಫೆ.22ರಂದು ಪ್ರಮಾಣಪತ್ರ ಸಲ್ಲಿಸಿದ್ದಾರೆ.

ರಾಜ್ಯ ಸರ್ಕಾರ 'ಬೆಂಗಳೂರು ಆಡಳಿತ ಮಸೂದೆ–2024' (ಜಿಬಿಎ) ಅನ್ನು ವಿಧಾನ ಮಂಡಲದಲ್ಲಿ ಮಂಡಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ವಿಧಾನ ಮಂಡಲದ ಜಂಟಿ ಸಮಿತಿಯೂ ವರದಿ ಸಲ್ಲಿಸಲಿದೆ. ಮಾರ್ಚ್‌ನಲ್ಲಿ ನಡೆಯುವ ಬಜೆಟ್ ಅಧಿವೇಶನದಲ್ಲಿ ಮಸೂದೆ ಮಂಡಿಸಿ, ಅನುಮೋದನೆ ಪಡೆಯಲಾಗುತ್ತದೆ ಎಂದಿದ್ದಾರೆ.

2025ರ ಮಾರ್ಚ್ 31ರೊಳಗೆ ರಾಜ್ಯಪಾಲರಿಂದ ಮಸೂದೆಗೆ ಅಂಕಿತ ದೊರೆಯಲಿದೆ. ಜುಲೈ 15ರೊಳಗೆ ಪಾಲಿಕೆಗಳ ವಾರ್ಡ್‌ಗಳ ಗಡಿ ಗುರುತಿಸಿ, ಮರುವಿಂಗಡಣೆ ಕಾರ್ಯ ಪೂರ್ಣಗೊಳಿಸಲಾಗುತ್ತದೆ. ಆಗಸ್ಟ್ 15ರೊಳಗೆ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಿ, ರಾಜ್ಯ ಚುನಾವಣಾ ಆಯೋಗಕ್ಕೆ ಚುನಾವಣೆ ನಡೆಸಲು ಸಲ್ಲಿಸಲಾಗುವುದು ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.



ರಿಜ್ವಾನ್ ಅರ್ಷದ್ ನೇತೃತ್ವದಲ್ಲಿ ಜಂಟಿ ಸಮಿತಿ ಸಲ್ಲಿಸಿದ ವರದಿಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು

ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ
NO 1 JALAHALLI WEST, BENGALURU – 560015

(An Autonomous body under the Ministry of Education, Govt. of India)
KV CODE: 1051 CBSE AFFILIATION NO: 800004 CBSE SCHOOL CODE: 49003 UDISE: 29280229803
EMAIL: kv1jalahalli@gmail.com Contact No: 080-28388422
web: https://no1jalahalli.kvs.ac.in

Ref: F.No 13-49/KV1/JAL/2024-25 ದಿನಾಂಕ: 24.02.2025

ಗುತ್ತಿಗೆ ಶಿಕ್ಷಕರಿಗಾಗಿ ವಾಕ್–ಇನ್ ಸಂದರ್ಶನ: 2025–26

2025–26ನೇ ಶೈಕ್ಷಣಿಕ ವರ್ಷಕ್ಕೆ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ನೇಮಕಾತಿಗಾಗಿ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯ ನಂ.1 ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560 015 ರಲ್ಲಿ ಕೆಳಗೆ ತಿಳಿಸಲಾದ ಹುದ್ದೆಗಳು ಮತ್ತು ದಿನಾಂಕಗಳಿಗಾಗಿ ವಾಕ್–ಇನ್ ಸಂದರ್ಶನವನ್ನು ನಡೆಸಲಾಗುವುದು.

ಸಂದರ್ಶನದ ದಿನಾಂಕ	ಸಂದರ್ಶನಕ್ಕೆ ನೋಂದಣಿ	ಪೋಸ್ಟ್‌ಗಳು/ ವಿಷಯಗಳ ವರ್ಗ
06.03.2025 (ಗುರುವಾರ)	ಬೆಳಿಗ್ಗೆ 8:00 ರಿಂದ ಬೆಳಿಗ್ಗೆ 9:30 ರವರೆಗೆ	ಸ್ನಾತಕೋತ್ತರ ಶಿಕ್ಷಕರು: ಜೀವಶಾಸ್ತ್ರ/ ಕಂಪ್ಯೂಟರ್ ವಿಜ್ಞಾನ/ ಅರ್ಥಶಾಸ್ತ್ರ/ ವಾಣಿಜ್ಯ/ ಹಿಂದಿ. ತರಬೇತಿ ಪಡೆದ ಪದವೀಧರ ಶಿಕ್ಷಕರು: ಸಂಸ್ಕೃತ/ ವಿಜ್ಞಾನ/ ಸಮಾಜ ಅಧ್ಯಯನ/ ಇಂಗ್ಲಿಷ್/ ಗಣಿತ. ಪ್ರಾಥಮಿಕ ಶಿಕ್ಷಕರು ಮತ್ತು ಬಾಲವಟಿಕ ಶಿಕ್ಷಕರು
07.03.2025 (ಶುಕ್ರವಾರ)	ಬೆಳಿಗ್ಗೆ 8:00 ರಿಂದ ಬೆಳಿಗ್ಗೆ 9:30 ರವರೆಗೆ	ವೃತ್ತಿಪರ ಕೌಶಲ್ಯ ತರಬೇತುದಾರರು: ಆಟ ಮತ್ತು ಕ್ರೀಡಾ ತರಬೇತುದಾರರು/ ನರ್ಸ್/ ವೈದ್ಯರು/ವಿಶೇಷ ಶಿಕ್ಷಕರು/ಕಂಪ್ಯೂಟರ್ ಬೋಧಕರು/ಸಲಹೆಗಾರರು/ಹಿತ್ತಾಳೆ ಬ್ಯಾಂಡ್ ಬೋಧಕರು/ಪಿಆರ್‌ಟಿ ಕನ್ನಡ/ಕಲೆ ಮತ್ತು ಕರಕುಶಲ ವಸ್ತುಗಳು/ಸಂಗೀತ/ನೃತ್ಯ/ಯೋಗ ಬೋಧಕರು/ ಯೋಗ ತರಬೇತುದಾರರು.

ಅರ್ಹತೆ, ಶೈಕ್ಷಣಿಕ ಅರ್ಹತೆ ಮತ್ತು ಸಂಭಾವನೆ ಕುರಿತು ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ ವಿದ್ಯಾಲಯದ ವೆಬ್‌ಸೈಟ್ ನೋಡಿ: https://no1jalahalli.kvs.ac.in/ ದೂರವಾಣಿ : 080–28388422.
ಎಲ್ಲಾ ಪ್ರಮಾಣಪತ್ರಗಳ ಒಂದು ಸೆಟ್ ಫೋಟೋ ಪ್ರತಿಗಳನ್ನು ಮೂಲ ಪ್ರಮಾಣಪತ್ರಗಳು, ಫೋಟೋ ಮತ್ತು ಐಡಿ ಪ್ರೂಫ್‌ನೊಂದಿಗೆ ತನ್ನಿ.

ಪ್ರಾಂಶುಪಾಲರು

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಇಮೇಲ್: comp.secy@astrazeneca.com ವೆಬ್: www.astrazeneca.com/india
ದೂರವಾಣಿ: +91 80 67748000, ಫ್ಯಾಕ್ಸ್: +91 80 6774 8557

ಸದಸ್ಯರಿಗೆ ಸೂಚನೆ

ಫೆಬ್ರವರಿ 11, 2025ರ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳು ಮತ್ತು ಅದಕ್ಕೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಗಳ (ಸೂಚನೆ) ಬಗ್ಗೆ ತನ್ನ ಸದಸ್ಯರ ಅನುಮೋದನೆಯನ್ನು ಅಂಚೆ ಮತದಾನ ಸೂಚನೆಯ (ಕೇವಲ ರಿಮೋಟ್ ಇ–ಮತದಾನದ ಮೂಲಕ ಮಾತ್ರವೇ) ಮೂಲಕ ಕೋರುತ್ತ ಕಂಪನಿಯು, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿಯ, 2014 ('ನಿಯಮಾವಳಿ') ಜೊತೆಗೆ ಓದಿಕೊಂಡಂತೆ ಕಂಪನಿಗಳ ಕಾಯಿದೆ, 2013 ('ಕಾಯಿದೆ') ರ 108, 110 ಕಲಮುಗಳು ಮತ್ತು ಅನ್ವಯವಾಗುವಂತಹ ಇತರ ನಿಬಂಧನೆಗಳ, ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೆಟೇರಿಯಲ್ ಮಾನದಂಡ (SS-2) ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') [ಇದರಲ್ಲಿ, ಸದ್ಯ ಜಾರಿಯಲ್ಲಿ ಇರುವಂತಹ, ಅದರ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಪುನಃ–ವಿಧಿಸಿರುವ ಕಾನೂನು(ಗಳು) ಸೇರುತ್ತವೆ], ಸಾಮಾನ್ಯ ಸುತ್ತೋಲೆ ಸಂ. 14/2020 ದಿನಾಂಕ ಏಪ್ರಿಲ್ 8, 2020 ಮತ್ತು ಸಾಮಾನ್ಯ ಸುತ್ತೋಲೆ ಸಂ. 17/2020 ದಿನಾಂಕ ಏಪ್ರಿಲ್ 13, 2020 ('ಎಂಸಿಎ ಸುತ್ತೋಲೆಗಳು'), ಮತ್ತು ಮುಂದುವರಿದು ಇದಕ್ಕೆ ಸಂಬಂಧಿಸಿದಂತೆ ಇತ್ತೀಚಿನ 09/2024 ದಿನಾಂಕದ 19ನೇ ಸೆಪ್ಟೆಂಬರ್, 2024ಕ್ಕೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಸುತ್ತೋಲೆಗಳು (ಎಮ್‌ಸಿಎ ಸುತ್ತೋಲೆಗಳು) ಸೇರಿದಂತೆ ಸಂಬಂಧಪಟ್ಟ ಇತರ ಯಾವುದೇ ಸುತ್ತೋಲೆಗಳು, ಕಾನೂನುಗಳು ಮತ್ತು ನಿಬಂಧನೆಗಳ ಅನುಸಾರ ಕಂಪನಿಯು ಈ ಕೆಳಗಿನಂತೆ ಸೂಚನೆಯನ್ನು ನೀಡುತ್ತಿದೆ:

ಸಾಮಾನ್ಯ ಸುತ್ತೋಲೆ:

1. ಕಂಪನಿಯು ಆಸ್ಟ್ರಾಜೆನಿಕ ಯುಕೆ ಲಿಮಿಟೆಡ್ ನೊಂದಿಗೆ ಮಾಡಲಿರುವ ಮೆಟೀರಿಯಲ್ ರಿಲೇಟೆಡ್ ಪಾರ್ಟಿ ವ್ಯವಹಾರಗಳಿಗೆ ಅನುಮೋದನೆ.
2. ಕಂಪನಿಯು ಆಸ್ಟ್ರಾಜೆನಿಕ ಎಬಿ, ಸ್ವಿಡನ್ ನೊಂದಿಗೆ ಮಾಡಲಿರುವ ಮೆಟೀರಿಯಲ್ ರಿಲೇಟೆಡ್ ಪಾರ್ಟಿ ವ್ಯವಹಾರಗಳಿಗೆ ಅನುಮೋದನೆ.

ಕಾಯಿದೆಯ 108 ಮತ್ತು 110 ಕಲಮುಗಳನ್ನು ಅದರ ಅಡಿಯಲ್ಲಿ ರಚಿಸಲಾದ ನಿಯಮಾವಳಿ ಮತ್ತು ಲಿಸ್ಟಿಂಗ್ ನಿಬಂಧನೆಯ ನಿಬಂಧನೆ 44 ರ ಜೊತೆ ಓದಿಕೊಂಡ ಪ್ರಕಾರ ಕಂಪನಿಯು ತನ್ನ ಸದಸ್ಯರಿಗೆ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಒದಗಿಸಿರುವ ಇ–ಮತದಾನ ಸೌಲಭ್ಯದ ಮೂಲಕ ವಿದ್ಯುನ್ಮಾನ ವಿಧಾನದಲ್ಲಿ ತಮ್ಮ ಮತವನ್ನು ಚಲಾಯಿಸುವ ಸೌಲಭ್ಯವನ್ನು ಒದಗಿಸಲು ಹರ್ಷಿಸುತ್ತಿದೆ.

ಶುಕ್ರವಾರ, ಫೆಬ್ರವರಿ 21, 2025 ರ (ಕೊನೆಯ ದಿನಾಂಕದ) ವೇಳೆಗೆ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಅಥವಾ ಅವರಿಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಅವರವರ ಇಮೇಲ್‌ಗಳಿಗೆ ಮಾತ್ರವೇ ಕಂಪನಿಯು **ಸೋಮವಾರ, ಫೆಬ್ರವರಿ 24, 2025** ರಂದು ಅಂಚೆ ಮತದಾನದ ಸೂಚನೆಯನ್ನು ಕಳುಹಿಸಿದೆ. ಎಂಸಿಎ ಸುತ್ತೋಲೆಗಳ ಅಗತ್ಯತೆಗಳ ಅನುಸಾರ ಅಂಚೆ ಮತದಾನ ಸೂಚನೆಯ ಮುದ್ರಿತ ಪ್ರತಿ ಮತ್ತು ಅಂಚೆ ಮತದಾನದ ನಮೂನೆಗಳು ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆಗಳನ್ನು ಸದಸ್ಯರಿಗೆ ಕಳುಹಿಸುವುದಿಲ್ಲ, ಮತ್ತು ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಯ ಮೂಲಕವೇ ಕಳುಹಿಸಬೇಕಾಗುತ್ತದೆ.

ರಿಮೋಟ್ ಇ–ವೋಟಿಂಗ್‌ನ ಪ್ರಕ್ರಿಯೆ ಮತ್ತು ವಿಧಾನಗಳ ವಿವರಗಳನ್ನು ಈ ಸೂಚನೆಯಲ್ಲಿ ಒದಗಿಸಲಾಗಿದೆ.

ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದಿರುವ ಆದರೆ ಅವರ ಮೊಬೈಲ್ ಸಂಖ್ಯೆಗಳು ನಮ್ಮಲ್ಲಿ ಲಭ್ಯವಿರುವಂತಹವರಿಗೆ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮೂಲಕ ಎಸ್ಸೆಮೆಸ್ ಗಳನ್ನು ಕಳುಹಿಸಲಾಗುತ್ತಿದೆ, ಮತ್ತು ಸೂಚನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅದರಲ್ಲಿ ವೆಬ್‌ಲಿಂಕ್ ಕೂಡ ಇದೆ. ಪ್ರಸ್ತಾವಿತ ರಿಮೋಟ್ ಇವೋಟಿಂಗ್‌ನಲ್ಲಿ ಭಾಗವಹಿಸುವ ಉದ್ದೇಶವನ್ನು ಹೊಂದಿರುವಂತಹ ಸದಸ್ಯರಲ್ಲಿ ಕೆಲವರಿಗೆ ಈ ವಿಷಯದ ಕುರಿತಾಗಿ ನೀಡಿರುವಂತಹ ಇತರ ಸಂವಹನವು ತಪ್ಪಿಹೋಗಿರುವಂತಹ/ತಲುಪಿಲ್ಲದಿರುವಂತಹ ಸಂದರ್ಭಗಳಿರಬಹುದು. ಆದ್ದರಿಂದ ಎಲ್ಲ ಸದಸ್ಯರಿಗೂ ವಿಷಯ ತಿಳಿಯಲಿ ಎಂಬ ಉದ್ದೇಶದಿಂದಲೇ ಈ ಸೂಚನೆಯನ್ನು ನೀಡುತ್ತಿದ್ದೇವೆ ಎಂಬುದನ್ನು ದಯವಿಟ್ಟು ತಿಳಿಯಿರಿ.

ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿರದ, ಮತ್ತು ಆ ಕಾರಣವಾಗಿ ಸದರಿ ಸೂಚನೆಯನ್ನು ಸ್ವೀಕರಿಸಲಾಗದಿರುವ ಸದಸ್ಯರು https://www.integratedregistry.in/KYCRegister.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು RTA ನೊಂದಿಗೆ ನೋಂದಾಯಿಸಿಕೊಳ್ಳಬಹುದು. ಇಮೇಲ್ ವಿಳಾಸದ ನೋಂದಾವಣಿ ಯಶಸ್ವಿಯಾದ ನಂತರ ಸದಸ್ಯರಿಗೆ ಸೂಚನೆಯ ವಿದ್ಯುನ್ಮಾನ ಪ್ರತಿ ಮತ್ತು ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನ, ಜೊತೆಗೆ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಗಳು ದೊರೆಯುತ್ತವೆ, ಮತ್ತು ಇವುಗಳ ನೆರವಿನಿಂದ ಸದಸ್ಯರು ಈ ಸೂಚನೆಯ ಮೇಲೆ ರಿಮೋಟ್ ಇ–ವೋಟಿಂಗ್ ಮಾಡಬಹುದು. ಏನಾದರೂ ಸಂದೇಹಗಳಿದ್ದರೆ ದಯವಿಟ್ಟು ಸಂಪರ್ಕಿಸಿ: **giri@integratedindia.in.**

ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ಡಿಪಾಸಿಟರೀಸ್/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೂ, ಕಾಗದದ ರೂಪದಲ್ಲಿ ಷೇರುಗಳನ್ನು ಹೊಂದಿರುವವರು RTAನೊಂದಿಗೂ ನೋಂದಾಯಿಸಿಕೊಳ್ಳಬೇಕಾಗಿ ಕೋರುತ್ತೇವೆ.

RTA ನೊಂದಿಗೆ ಇಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವ ಸಂಬಂಧವಾಗಿ ಸದಸ್ಯರು https://www.integratedregistry.in/KYCRegister.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಲ್ಲಿ ಹೇಳುವಂತಹ ನೋಂದಾವಣಿ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ತಮ್ಮ ಇಮೇಲ್ ವಿಳಾಸವನ್ನು RTA ನೊಂದಿಗೆ ನೋಂದಾಯಿಸಿಕೊಳ್ಳಬಹುದು. ಹಾಗಿಲ್ಲವಾದರೆ ಸದಸ್ಯರು, ಮತದಾನದ ಅವಧಿ ಮುಕ್ತಾಯವಾಗುವುದಕ್ಕೆ 48 ತಾಸುಗಳಿಗೆ ಮುಂಚಿನ ಎಲ್ಲ ಕೆಲಸದ ದಿನಗಳಂದು (ಶನಿವಾರ ಮತ್ತು ಭಾನುವಾರ ಹೊರತುಪಡಿಸಿ) ಬೆಳಗ್ಗೆ 09.00 ರಿಂದ ಸಂಜೆ 05.00 ರ ನಡುವೆ ಇಲ್ಲಿ ಮುಂದೆ ತಿಳಿಸಿರುವ, ಕಂಪನಿಯ ಅಥವಾ RTAನ ಇಮೇಲ್ ವಿಳಾಸಕ್ಕೆ ಮನವಿ/ಸಂವಹನ ಕಳುಹಿಸಬಹುದು. ಅದರಲ್ಲಿ ಪುಟ ಸಂಖ್ಯೆ/ಡೀಮ್ಯಾಟ್ ಖಾತೆ ಸಂಖ್ಯೆಗಳನ್ನು ತಿಳಿಸಿರಬೇಕು. ಕಂಪನಿಯ ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: comp.secy@astrazeneca.com/ 080 67748000 ಮತ್ತು RTA ಇಮೇಲ್ ವಿಳಾಸ ಮತ್ತು ಸಂಪರ್ಕ ವಿವರಗಳು: giri@integratedindia.in / 080 23460815-18.

ಇ–ವೋಟಿಂಗ್ ಅವಧಿಯು **ಬುಧವಾರ, ಫೆಬ್ರವರಿ 26, 2025** ರಂದು ಬೆಳಗ್ಗೆ 09.00 ರಿಂದ (ಭಾ.ಕಾ.) ಆರಂಭವಾಗಿ **ಗುರುವಾರ, ಮಾರ್ಚ್ 27, 2025** ರಂದು ಸಂಜೆ 05.00 ಕ್ಕೆ (ಭಾ.ಕಾ.) ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ, **ಶುಕ್ರವಾರ, ಫೆಬ್ರವರಿ 21, 2025** ರಂದು (ಕೊನೆಯ ದಿನಾಂಕ) ಭೌತಿಕ ಅಥವಾ ಡೀಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತಗಳನ್ನು ಇಲೆಕ್ಟ್ರಾನಿಕ್ ವಿಧಾನದಲ್ಲಿ ಚಲಾಯಿಸಬಹುದು. ಮೇಲೆ ಹೇಳಿದ ದಿನಾಂಕ ಮತ್ತು ಸಮಯ ಕಳೆದ ನಂತರ NSDL, ಇ–ವೋಟಿಂಗ್ ಮಾಡ್ಯೂಲನ್ನು ನಿಷ್ಕ್ರಿಯಗೊಳಿಸುವುದರಿಂದ ಮತದಾನ ಸಾಧ್ಯವಾಗುವುದಿಲ್ಲ. ಒಮ್ಮೆ ಸದಸ್ಯರು ನಿರ್ಣಯಗಳ ಮೇಲೆ ಮತವನ್ನು ಚಲಾಯಿಸಿ ದೃಢಪಡಿಸಿದ ನಂತರ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ. ಅಂಚೆ ಮತದಾನದ ಸೂಚನೆಯನ್ನು ಸ್ವೀಕರಿಸಿರುವ ಯಾರೇ ಆಗಲಿ, ಕೊನೆಯ ದಿನಾಂಕದಂದು ಕಂಪನಿಯ ಸದಸ್ಯರಾಗಿರದಿದ್ದರೆ ಅಂತಹವರು ಸದರಿ ಅಂಚೆ ಮತದಾನದ ಸೂಚನೆಯನ್ನು ಸುಮ್ಮನೆ ಮಾಹಿತಿಗಾಗಿ ಎಂದು ಭಾವಿಸಬೇಕು. ಸದಸ್ಯರ ಮತದಾನದ ಹಕ್ಕುಗಳು ಕೊನೆಯ ದಿನಾಂಕದಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಷೇರುಗಳ ಪ್ರಮಾಣಕ್ಕೆ ಅನುಬದ್ಧವಾಗಿರುತ್ತದೆ.

ಅಂಚೆ ಮತದಾನದ ಸೂಚನೆ ಮತ್ತು ಇ–ವೋಟಿಂಗ್ ಪ್ರಕ್ರಿಯೆಯ ವಿಧಾನವನ್ನು www.evoting.nsdl.com ಅಥವಾ www.astrazeca.com/india ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅಂಚೆ ಮತದಾನ ಪ್ರಕ್ರಿಯೆಯು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕೆಂದು ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಬೆಂಗಳೂರು, ಸಿ.ಪಿ. ಸಂ.980, ಸದಸ್ಯತ್ವ ಸಂಖ್ಯೆ FCS:1788, ಇವರನ್ನು ಅಂಚೆ ಮತದಾನ ಪ್ರಕ್ರಿಯೆಯ ಸೂಕ್ಷ್ಮ ಪರಿಶೀಲಕರೆಂದು ನೇಮಕ ಮಾಡಿದೆ.

ಅಂಚೆ ಮತದಾನದ (ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ) ಮೂಲಕ ನಡೆಸುವ ಮತದಾನದ ಫಲಿತಾಂಶವನ್ನು **ಸೋಮವಾರ, ಮಾರ್ಚ್ 31, 2025** ರಂದು ಅಥವಾ ಅದರೊಳಗಾಗಿ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು. ಫಲಿತಾಂಶವನ್ನು ಮತ್ತು ಸೂಕ್ಷ್ಮಪರಿಶೀಲಕರ ವರದಿಯನ್ನು ಕಂಪನಿಯ **www.astrazeneca.com/india** ವೆಬ್‌ಸೈಟ್‌ನಲ್ಲಿ ಹಾಕಲಾಗುವುದು, ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಲಿಸ್ಟ್ ಮಾಡಿರುವ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಬಿಎಸ್‌ಇ ಲಿಮಿಟೆಡ್ ಗಳಿಗೂ ಕಳುಹಿಸಲಾಗುವುದು.

ನಿರ್ಣಯದ ಪರವಾಗಿ ಅಗತ್ಯ ಬಹುಮತ ದೊರೆತರೆ ರಿಮೋಟ್ ಇ–ವೋಟಿಂಗ್‌ಗಾಗಿ ಕಂಪನಿಯು ನಿಗದಿಪಡಿಸಿರುವ ಕೊನೆಯ ದಿನಾಂಕದಿಂದಲೇ ನಿರ್ಣಯವು ಜಾರಿಗೊಂಡಿದೆ ಎಂದು ಪರಿಗಣಿಸಲಾಗುವುದು.

ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದರೆ: www.evoting.nsdl.com ನ ಡೌನ್‌ಲೋಡ್ ವಿಭಾಗಗಳಲ್ಲಿರುವ ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳು (FAQs) ಮತ್ತು ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿಗಳನ್ನು ಪರಾಮರ್ಶಿಸಬಹುದು ಅಥವಾ ವಿನಂತಿ ಇಮೇಲ್ ಅನ್ನು evoting@nsdl.co.in ಗೆ ಕಳುಹಿಸಬಹುದು. ಇಲೆಕ್ಟ್ರಾನಿಕ್ ವೋಟಿಂಗ್‌ಗೆ ಸಂಬಂಧಿಸಿದಂತೆ ದೂರುಗಳೇನಾದರೂ ಇದ್ದರೆ ದಯವಿಟ್ಟು ಸಂಪರ್ಕಿಸಿ: ಶ್ರೀ ಸೋನಿ ಸಿಂಗ್, ಅಸಿಸ್ಟೆಂಟ್ ಮ್ಯಾನೇಜರ್ ಅಥವಾ ಶ್ರೀಮತಿ ಸರಿತಾ ಮೊಟೆ, ಅಸಿಸ್ಟೆಂಟ್ ಮ್ಯಾನೇಜರ್ NSDL 4ನೇ ಮಹಡಿ, 'ಎ' ಶಾಖೆ, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ್, ಲೋವರ್ ಪರೇಲ್, ಮುಂಬೈ–400 013, ದೂರವಾಣಿ: 022 – 4886 7000/022 – 2499 7000.

ಅಸ್ಟ್ರಾಜೆನಿಕ ಫಾರ್ಮ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: **ಬೆಂಗಳೂರು**
ದಿನಾಂಕ: **ಫೆಬ್ರವರಿ 24, 2025**

ಮಾನಸ. ಆರ್
ಕಂಪನಿ ಸೆಕ್ರೆಟರಿ

ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಮಾರ್ಚ್ 5ರವರೆಗೆ ಶೇ 10ರಷ್ಟು ರಿಯಾಯತಿ

ಕಲ್ಲಂಗಡಿ, ದ್ರಾಕ್ಷಿ ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೆಳೆದ ದ್ರಾಕ್ಷಿ ಮತ್ತು ಕಲ್ಲಂಗಡಿ ಹಣ್ಣುಗಳನ್ನು ರೈತರಿಂದ ನೇರವಾಗಿ ಖರೀದಿಸಿ ಹಾಪ್‌ಕಾಮ್ಸ್ ಮೂಲಕ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ' ಎಂದು ಶಾಸಕ ಉದಯ್ ಬಿ. ಗರುಡಾಚಾರ್ ಹೇಳಿದರು.

ಎಂ.ಎಚ್. ಮರೀಗೌಡ ರಸ್ತೆಯಲ್ಲಿರುವ ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದ (ಹಾಪ್‌ಕಾಮ್ಸ್) ಕೇಂದ್ರ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ 'ದ್ರಾಕ್ಷಿ ಹಾಗೂ ಕಲ್ಲಂಗಡಿ ಮೇಳ' ಉದ್ಘಾಟಿಸಿ ಅವರು ಮಾತನಾಡಿದರು.

'ಬೇಸಿಗೆ ಕಾಲದಲ್ಲಿ ದ್ರಾಕ್ಷಿ ಮತ್ತು ಕಲ್ಲಂಗಡಿ ಹಣ್ಣುಗಳಿಗೆ ಬೇಡಿಕೆ ಹೆಚ್ಚು, ಆದ್ದರಿಂದ ಈ ಮೇಳವನ್ನು ಆಯೋಜಿಸಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಹೆಚ್ಚು ಹಣ್ಣುಗಳನ್ನು ಖರೀದಿಸುವುದರ ಮೂಲಕ ರೈತರಿಗೆ ನೆರವಾಗಬೇಕು' ಎಂದರು.

'ಕರಾವಳಿ ಮತ್ತು ಮಲೆನಾಡಿನ ಪ್ರದೇಶ ಹೊರತು ಪಡಿಸಿ ರಾಜ್ಯದಾದ್ಯಂತ ಬೆಳೆದ ಕಿರಣ್ ಕಲ್ಲಂಗಡಿ, ಹಳದಿ ಬಣ್ಣದ ಕಲ್ಲಂಗಡಿ, ಮತ್ತು ವಿಜಯಪುರ, ಬಾಗಲಕೋಟೆ, ಕೊಪ್ಪಳ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳಲ್ಲಿ ಬೆಳೆದ ಬೆಂಗಳೂರು ನೀಲಿ, ಕೃಷ್ಣ ಶರದ್, ಥಾಮ್ಸನ್ ಸೀಡ್‌ಲೆಸ್, ಸೋನಾಕ, ಸೂಪರ್ ಸೋನಾಕ, ಇಂಡಿಯನ್ ರೆಡ್ ಗ್ಲೋಬ್ ಸೇರಿದಂತೆ ಸುಮಾರು 12 ತಳಿಯ ದ್ರಾಕ್ಷಿ ಹಣ್ಣುಗಳನ್ನು ಮೇಳದಲ್ಲಿ ಖರೀದಿಸಬಹುದು' ಎಂದರು.



ದ್ರಾಕ್ಷಿ–ಕಲ್ಲಂಗಡಿ ಮಾರಾಟ ಮೇಳದಲ್ಲಿ ದ್ರಾಕ್ಷಿ ಗೊಂಚಲು ಹಿಡಿದು ಕುತೂಹಲದಿಂದ ವೀಕ್ಷಿಸಿದ ಪುಟಾಣಿ ಪ್ರಜಾವಾಣಿ ಚಿತ್ರ

ನಗರದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಮಾರ್ಚ್ 5ರವರೆಗೆ ರವರೆಗೆ ಶೇ 10ರಷ್ಟು ರಿಯಾಯಿತಿ ದರದಲ್ಲಿ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತದೆ. ಮೇಳದಲ್ಲಿ ಒಂದು ಕೆ.ಜಿ. ದ್ರಾಕ್ಷಿಗೆ ಕನಿಷ್ಠ ₹76 ರಿಂದ ಗರಿಷ್ಠ ₹310 ರವರೆಗೂ ದರವಿದೆ. ಒಂದು ಕೆ.ಜಿ. ಕಲ್ಲಂಗಡಿಗೆ ಕನಿಷ್ಠ ₹22 ರಿಂದ ಗರಿಷ್ಠ ₹40ರವರೆಗೂ ಇದೆ.

ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್, ಹಾಪ್‌ಕಾಮ್ಸ್ ಅಧ್ಯಕ್ಷ ಗೋಪಾಲ ಕೃಷ್ಣ, ವ್ಯವಸ್ಥಾಪಕ ನಿರ್ದೇಶಕ ಉಮಾಶಂಕರ್ ಮಿರ್ಜಿ ಉಪಸ್ಥಿತರಿದ್ದರು.

ಮೆಟ್ರೊ ದರ ಏರಿಕೆ: 28ಕ್ಕೆ ವಕೀಲರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೆಟ್ರೊ ಪ್ರಯಾಣ ದರವನ್ನು ಶೇ 100ರಷ್ಟು ಏರಿಕೆ ಮಾಡಿರುವುದು ಅವೈಜ್ಞಾನಿಕ ಮತ್ತು ಜನವಿರೋಧಿಯಾಗಿದೆ' ಎಂದು ಖಂಡಿಸಿರುವ 'ಮೆಟ್ರೊ ವಕೀಲರ ಪ್ರಯಾಣಿಕರ ಒಕ್ಕೂಟ' ಇದೇ 28ರಂದು ಮಧ್ಯಾಹ್ನ 2 ಗಂಟೆಗೆ ಹೈಕೋರ್ಟ್ ಗೇಟ್ ಸಂಖ್ಯೆ 1ರ (ಮೆಟ್ರೊ ನಿಲ್ದಾಣದ ಪಕ್ಕ) ಬಳಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.



'ದರ ಏರಿಕೆಯ ನಿರ್ಧಾರ ಕೈಗೊಂಡಿರುವ ಜನವಿರೋಧಿ ನೀತಿಗೆ ಮೆಟ್ರೊ ಅಧಿಕಾರಿಗಳೇ ಮುಖ್ಯ ಕಾರಣಕರ್ತರಾಗಿದ್ದಾರೆ. ಕೂಡಲೇ ಅವರನ್ನು ಹೊರಹಾಕಿ ಮೆಟ್ರೊ ಆರ್ಥಿಕ ಸ್ಥಿತಿಗತಿಯ ಬಗ್ಗೆ ಶ್ವೇತಪತ್ರ ಹೊರಡಿಸಬೇಕು' ಎಂದು ಒಕ್ಕೂಟದ ಅಧ್ಯಕ್ಷರೂ ಆದ ಹೈಕೋರ್ಟ್ ವಕೀಲ ಎನ್.ಕೆ.ಧರಣೇಶ್ ಮತ್ತು ಕಾರ್ಯದರ್ಶಿ ಎಂ.ಶಿವಪ್ರಕಾಶ್ ಆಗ್ರಹಿಸಿದ್ದಾರೆ.

'ಮೆಟ್ರೊ ಲಾಭ–ನಷ್ಟವಿಲ್ಲದೆ ನಡೆಸುವ ಒಂದು ಸಾರ್ವಜನಿಕ ಸಂಸ್ಥೆ. ಮೆಟ್ರೊ ಸಂಸ್ಥೆ ನೂರಾರು ಕೋಟಿ ರೂಪಾಯಿ ಲಾಭದಲ್ಲಿದೆ ಎಂದು ಕಳೆದ ವರ್ಷ ಹೇಳಿಕೆ ಕೊಟ್ಟಿದ್ದ ಅಧಿಕಾರಿಗಳು, ಈಗ ದಿಢೀರನೆ ಪ್ರಯಾಣಿಕರ ಟಿಕೆಟ್ ಬೆಲೆಯನ್ನು ಗಗನಕ್ಕೆ ಏರಿಸಿದ್ದಾರೆ' ಎಂದು ಒಕ್ಕೂಟ ಅಸಮಾಧಾನ ವ್ಯಕ್ತಪಡಿಸಿದೆ.

'ದರ ಏರಿಕೆಯಿಂದಾಗಿ ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್, ಮ್ಯಾಜಿಸ್ಟ್ರೇಟ್ ಕೋರ್ಟ್, ಮೆಯೊಹಾಲ್ ಕೋರ್ಟ್, ವಾಣಿಜ್ಯ ನ್ಯಾಯಾಲಯಗಳು ಮತ್ತು ಕೆಎಟಿ ನ್ಯಾಯಾಲಯಗಳಿಗೆ ಪ್ರಯಾಣಿಸುವ ವಕೀಲರೂ ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ಕಾರಣದಿಂದ ಪ್ರತಿಭಟನೆ ಆಯೋಜಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ –1 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು – 560 002
ನಮೂನೆ –3 (ನಿಯಮ–3 ರ ಉಪ–ನಿಯಮ (3) ನೋಡಿ)

ಸಂಖ್ಯೆ: ಬೃಬೆಂಮಪಾ/ಆಯುಕ್ತರು/ಪಿಎಸ್‌ಆರ್(ಜಿ)/3445/2024–25 ದಿನಾಂಕ:24.02.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, **45.00 ಮೀಟರ್‌ಗಳ ಅಗಲದಂತೆ, ಅನುಮೋದಿತ ಮಹಾಯೋಜನೆ 2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ವರ್ತೂರು, ಗುಂಜೂರುಪಾಳ್ಯ ಮಾರ್ಗವಾಗಿ ಗೇರ್ ಶಾಲೆ ರಸ್ತೆಯಿಂದ ಪೆರಿಫೆರಲ್ ವರ್ತುಲ ರಸ್ತೆಯವರೆಗೆ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರಿಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು / ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮೀಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂಮಾಲೀಕರ ಪಟ್ಟಿ

ಜಿಲ್ಲೆಯ ಹೆಸರು : ಬೆಂಗಳೂರು ನಗರ, ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ, ಗ್ರಾಮದ ಹೆಸರು : ಪಣತ್ತೂರು

Sy. No. Khatha No.	Type of land: Vacant	Type of land: Built up	Nature of land: Agriculture	Nature of land: Converted Undeveloped	Nature of land: Approved layout / developed land Building site	Dimension of the land/ Plot & Extent in Sq.M: Dimension	Extent	Boundaries of the land: East	West	North	South	Building Details: Extent in Sq.M	Type of Construction and No,. of floors	Floor Area Ratio	Present Activity on Land/Building (Specify Specific activity such as Shop, Office, factory, Apartment, Individual House etc.)	Market (guide lines) value of the land per Sq.M (in Rs.)	Name and address of the owner of the plot/Land for which DRC is to be issued
Sy No. 59/15 Khatha Sl No.4383 Muncipal No. 4383	Vacant land		Converted Land			455.26 Sqm		Sy No.59/16	Sy No.59/14	Sy No.59/1	Sy No.59/22	None	None	None	Vacant	60,000/-	Shri Lakshmana S/o Kotaramaiah, R/at No. 63, BBMP Office Road, Panathuru, Banglaore - 560103

Note: Market guideline value of this property is considered subject to conditions of payment of fee as per Government Order No: ನಅಇ 137 ಎಂಎನ್‌ಯು 2024 (ಇ), ದಿನಾಂಕ:09.09.2024 and as per the Circular No: ಆಯುಕ್ತರು/ಪಿ.ಎಸ್.ಆರ್/ಜಿ/1802/2024–25, ದಿನಾಂಕ:21.09.2024.

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು

ವಿಭಾಗ / ಉಪ ವಿಭಾಗ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂ ಸ್ವಾಧೀನ & ಟಿಡಿಆರ್, 2ನೇ ಮಹಡಿ, ಕೊಠಡಿ ಸಂಖ್ಯೆ 208, ಆನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.

ಸಹಿ/–ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ವೈ/ಇ.29/2024–25/90
ದಿನಾಂಕ : 14–02–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಚಿಕ್ಕಜಾಜೂರು ಯಾರ್ಡ್‌ನಲ್ಲಿ ಪಾಯಿಂಟ್ 110 ಸ್ಥಳಾಂತರಕ್ಕಾಗಿ ಓಹೆಚ್‌ಇ ಮಾರ್ಪಾಡು.	ರೂ. 10,58,421.78

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **10–03–2025 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಮೈಸೂರು
ಪಿಯುಬಿ/801/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ (ಷೆಡ್ಯೂಲ್ ಸ್ವತ್ತು) ಸ್ವತ್ತನ್ನು ಅದರ ಮಾಲೀಕರಾದ ಡಾ. ಎನ್. ವಿದ್ಯಾಸಾಗರ್ ಬಿನ್ ಲೇಟ್ ಎಲ್.ಪಿ. ನಂಜಪ್ಪ, ವಯಸ್ಸು ಸುಮಾರು 81 ವರ್ಷ, ವಾಸ ನಂ. 58, ರೈಲ್ವೇ ಪ್ಯಾರಲಲ್ ರಸ್ತೆ, ಟಾಟಾ ಕಾಫಿ ಲಿಮಿಟೆಡ್ ಎದುರು, ಕುಮಾರ ಪಾರ್ಕ್ ವೆಸ್ಟ್, ಶೇಷಾದ್ರಿಪುರಂ, ಬೆಂಗಳೂರು–560 020 ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಯಾರಿಗಾದರು ಸದರಿ ಸ್ವತ್ತಿನ ವಿಚಾರವಾಗಿ ಯಾವುದೇ ರೀತಿಯ ಹಕ್ಕು, ಧಾರಣೆ, ಹಿತಾಸಕ್ತಿ ಅಥವಾ ಶೀರ್ಷಿಕೆ ಅಥವಾ ಕ್ಲೇಮು ಅಥವಾ ಒಪ್ಪಂದವಿದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 10 **ದಿನಗಳ** ಅವಧಿಯೊಳಗೆ ಕೆಳಗೆ ಸಹಿ ಮಾಡಿದವರಿಗೆ ತಮ್ಮನ್ನು ಬೆಂಬಲಿಸುವ ದಾಖಲೆಗಳ ಪ್ರತಿಗಳನ್ನು ಒದಗಿಸಬೇಕು. ಒಂದು ವೇಳೆ ಯಾವುದೇ ಕಾನೂನುಬದ್ಧವಾಗಿ ಸಮರ್ಥನೀಯ ಕ್ಲೈಮ್ ಸ್ವೀಕರಿಸದಿದ್ದಲ್ಲಿ, ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ವಿಚಾರವಾಗಿ ಯಾವುದೇ ತಕರಾರುಗಳಿಲ್ಲವೆಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿನ ಮಾರಾಟ ಪ್ರಕ್ರಿಯೆಯನ್ನು ಮುಂದುವರೆಸುತ್ತಾರೆಂದು ತಿಳಿಯುವುದು, ನಿಗದಿತ ಸಮಯದ ನಂತರ ಬರುವ ಯಾವುದೇ ತಂಟೆ ತಕರಾರುಗಳಿಗೆ ಮಾನ್ಯತೆಯಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಬೆಂಗಳೂರು–560 020, ಶೇಷಾದ್ರಿಪುರಂ, ಕುಮಾರ ಪಾರ್ಕ್ ವೆಸ್ಟ್ ಎಕ್ಸ್‌ಟೆನ್ಷನ್, ರೈಲ್ವೇ ಪ್ಯಾರಲಲ್ ರಸ್ತೆಯಲ್ಲಿರುವ ವಸತಿ ಸ್ಥಿರಾಸ್ತಿ ಸ್ವತ್ತು ಮುನಿಸಿಪಲ್ ನಂ.58, (ಹಳೇ ಸಿಐಟಿಬಿ ಸೈಟ್ ನಂ.2, ಬ್ಲಾಕ್ ನಂ.1) ಪಿಐಡಿ ನಂ. 27–77–58, ಹೊಸ ಇಪಿಐಡಿ ನಂ.4018446852 ಅಳತೆ ದಕ್ಷಿಣದ ಕಡೆಗೆ 15x65 ಅಡಿಗಳು ಮತ್ತು ಪಶ್ಚಿಮದ ಕಡೆಗೆ 55x80 ಅಡಿಗಳು, ಒಟ್ಟು ಅಳತೆ 5375 ಚದರ ಅಡಿಗಳು ಹಾಗೂ ಮನೆ ಸಹಿತವಾದ ಸ್ವತ್ತಾಗಿದ್ದು, ನೆಲ ಮತ್ತು 4 ಮೇಲಂತಸ್ತು ಮಹಡಿಗಳ ಸ್ವತ್ತಾಗಿದ್ದು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಾಗಿದ್ದು (ವಾರ್ಡ್ ನಂ. 94) ಹಾಗೂ ಇದರ ಚೆಕ್ಕುಬಂದಿ–

ಪೂರ್ವಕ್ಕೆ : ರಸ್ತೆ,
ಪಶ್ಚಿಮಕ್ಕೆ : ಪಾರ್ಕ್ ಏರಿಯಾ ಸಿಐಟಿಬಿ
ಉತ್ತರಕ್ಕೆ : ಬಂಗಲೆ ಸೈಟ್ ನಂ.3, ಬ್ಲಾಕ್ ನಂ. 1 ಮತ್ತು ಶ್ರೀ ಗೌತಮ್ ಸಾಗರ್ ರವರಿಗೆ ಸೇರಿದ ಸೈಟ್ ನಂ. 58/1
ದಕ್ಷಿಣಕ್ಕೆ : ಬಂಗಲೆ ಸೈಟ್ ನಂ.3, ಬ್ಲಾಕ್ ನಂ.1

ಸಿ.ಆರ್. ಕೃಷ್ಣಪ್ಪ, ವಕೀಲರು
ನಂ. 313, 3ನೇ ಮಹಡಿ, ಕರ್ನಾಟಕ ಪ್ರದೇಶ ಕುರುಬರ ಸಂಘ ಬಿಲ್ಡಿಂಗ್, 2ನೇ ಅಡ್ಡರಸ್ತೆ, 2ನೇ ಮೈನ್, ಗಾಂಧಿನಗರ, ಬೆಂಗಳೂರು–560 009.
ಮೊಬೈಲ್: 98455 77155

ಹೂವಿನ ಕರಗ ಇಂದಿನಿಂದ

ಬೆಂಗಳೂರು: ರಾಜಾಜಿನಗರ ನಾಗಪ್ಪ ಬ್ಲಾಕ್‌ನ ಶ್ರೀ ಅಂಕಾಳ ಪರಮೇಶ್ವರಿ ದೇವಸ್ಥಾನದ 39ನೇ ವರ್ಷದ ಹೂವಿನ ಕರಗ ಮಹೋತ್ಸವ ಇದೇ 25 (ಮಂಗಳವಾರ) ರಿಂದ 28ರವರೆಗೆ ನಡೆಯಲಿದೆ.

ಬುಧವಾರ ಮಹಾಶಿವರಾತ್ರಿ ಪ್ರಯುಕ್ತ ಶಕ್ತಿ ಕರಗ ಮೆರವಣಿಗೆ, ಹಾಲು ಕೊಡ ಮೆರವಣಿಗೆ, ಹೂವಿನ ಕರಗ ಉತ್ಸವವೂ ನಡೆಯಲಿದೆ. ಗುರುವಾರ ಅಘೋರ ವೀರಭದ್ರ ಸ್ವಾಮಿಗೆ ಪೂಜೆ ಏರ್ಪಡಿಸಲಾಗಿದ್ದು, ಕಾಳಿ ವೇಷದ ರುದ್ರತಾಂಡವ ಮತ್ತು ಮಹಾರುದ್ರಭೂಮಿ ಸೂರೆ ಕಾರ್ಯಕ್ರಮ ಜರುಗಲಿದೆ. ಇರ್ಲಪ್ಪ ಸ್ವಾಮಿ, ಕಾಲಭೈರವ ಸ್ವಾಮಿ ಮತ್ತು ಕರ್ಪನ್ನ ಸ್ವಾಮಿಗೆ ವಿಶೇಷ ಪೂಜೆ ಮತ್ತು ಉತ್ಸವ ಏರ್ಪಡಿಸಲಾಗಿದೆ. ಶುಕ್ರವಾರ ಲಲಿತಾ ಸಹಸ್ರನಾಮ, ಲಕ್ಷಾರ್ಚನೆ, ವಸಂತೋತ್ಸವ, 108 ಸುಮಂಗಲಿಯರಿಗೆ ಸುಮಂಗಲಿ ಪೂಜೆ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆ ತಿಳಿಸಿದೆ.

IN THE COURT OF HON' BLE 61ST ADDL CITY CIVIL JUDGE AT BANGALORE
CRL.A NO.1108/2023

BETWEEN : DEBANJANA CHAKRABORTY W/o, Arnab Chakraborty Aged about 33 years R/a, 2nd Cross No.6 Raju Colony, Yemlur, Bellendur, Bangalore - 560037

AND : 1. **ARNAB CHAKRABORTY** S/o, Late Arun Kumar Chakraborty Aged about 36 years R/a, Flat no 014, BVS Pinnacale, Boganahalli, Panthur Road Boganahalli, Bangalore - 560103.
2. **SWATI CHAKRABORTY** W/o, Arun Kumar Chakraborty Aged about 65 years R/a, Flat no 014, BVS Pinnacale, Boganahalli, Panthur Road Boganahalli Bengaluru- 560 103
3. **ANTRA CHATERJEE** D/o, Arun Kumar Chakraborty Aged about 34 Years R/a, L-P3, N.I.H.O Sealtish Garden Ahinsakhand-2 Indrapuram Gaziabad Uttar Pradesh - 201014

Public Notice

Whereas the Appellant has filed the above appeal U/s 29 of the Protection of Women from Domestic Violence Act 2005 praying for an order to reinstate
Crl. Misc. No. 13/2020 which was dismissed for default
The respondent is hereby called upon to appear before the Hon'ble LX ADDL CITY CIVIL AND SESSION JUDGE at Bangalore **19/03/2025 at 11.00 AM** to show cause against the Appellant failing which the appearance of the respondent will be consider as Ex-party
Given under my hand and seal of the court, this notice is issued on 05/2/2025 under my signature

By Order of the Court
Sd/- Assistant Registrar
City Civil Court Bangalore

Address of the Advocate
OMAR SHARIFF & Associates
Chambers, #101, Pentagon 1st Floor, Frazer Town, Bengaluru 560005

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ – 1, ನರಸಿಂಹರಾಜ ಚೌಕ, ಬೆಂಗಳೂರು – 560002

ಸಂ. ಬೃಬೆಂಮಪಾ/ಮುಆ/ಪಿಎಸ್‌ಆರ್(ಜಿ)/3457/2024–25 ದಿನಾಂಕ : 24–02–2025

ಸಾರ್ವಜನಿಕ ಪ್ರಕಟಣೆ

ನಮೂನೆ – 3
(ನಿಯಮ–3ರ ಉಪ–ನಿಯಮ (3)ನ್ನು ನೋಡಿ)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ರಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, 45.00 ಮೀಟರ್‌ಗಳ ಅಗಲಕ್ಕಾಗಿ ಅನುಮೋದಿತ ಮಹಾ ಯೋಜನೆ –2015 ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಗುಂಜೂರು ಪಾಳ್ಯ, ವರ್ತೂರು ಮಾರ್ಗವಾಗಿ ಗೇರ್ ಶಾಲೆ ರಸ್ತೆಯಿಂದ ಹೊರ ವರ್ತುಲ ರಸ್ತೆವರೆಗೆ ರಸ್ತೆಯನ್ನು ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು / ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳ ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ / ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ / ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ / ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆಯ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ, ಉಪ ಆಯುಕ್ತರವರ ಕಛೇರಿ (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ / ಕಟ್ಟಡ ಪ್ರದೇಶವನ್ನು ನೀಡಿದ / ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

Sl. No.	Name of the District	Name of the Taluk	Name of the Village	Sy.No/ Khatha No.	Type of Land: Vacant	Built up	Nature of Land: Agriculture	Converted undeveloped	Approved Layout / developed land building site	Dimension of the land / plot & extent in Sq.m: Dimension	Extent	Boundaries of the land / plot: East	West	North	South	Building details: Extent in Sq.m	Type of Construction and No. of floors	Floor Area Ratio	Present activity on land / Building (Specify Specific activity such as shop, office, factory, apartment, individual house etc.,	Market (guidelines) value of the land per Sq.m	Name and address of the owner of the plot / land for which DRC is to be issued
1	Bengaluru Urban	Bengaluru East	Gunjuru	Sy. No: 163/2, Khata Sl. No: 1165, Municipal No: 1165	Vacant Land		Converted Land			204.23		Sy No. 164	Sy No. 163/1	Sy No. 163/1	Remaining Portion of Sy No. 163/2	None	None	None	Vacant	50,000/-	1. Sri. P.K. Srinivasa Reddy 2. Sri. P.K. Jayachandra Reddy Both are residing at No. 45, 1st Cross,Kaverappa Layout,Panathur, Bengaluru-560103

ಸೂಚನೆ : ಸರ್ಕಾರದ ಆದೇಶ ಸಂ. ನಅಇ 137 ಎಂಎನ್‌ಯು 2024 (ಇ), ದಿನಾಂಕ : 09–09–2024 ಮತ್ತು ಸುತ್ತೋಲೆ ಸಂ. ಆಯುಕ್ತರು/ಪಿ.ಎಸ್.ಆರ್/ಜಿ/1802/2024–25 ದಿನಾಂಕ : 21–09–2024ಗೆ ಅನುಸಾರವಾಗಿ ಶುಲ್ಕ ಪಾವತಿಯ ನಿಬಂಧನೆಗಳಿಗೆ ತಕ್ಕಂತೆ ಈ ಸ್ವತ್ತಿನ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯವನ್ನು ಪರಿಗಣಿಸಲಾಗುವುದು.

ವಿಭಾಗ / ಉಪ–ವಿಭಾಗ / ಶಾಖೆ ಕಛೇರಿಯ ಹೆಸರು ಮತ್ತು ವಿಳಾಸ :
ಉಪ ಆಯುಕ್ತರು, ಭೂಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂ.208, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃಬೆಂಮಪಾ, ಬೆಂಗಳೂರು – 560002.

ಸಹಿ/– ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ (ಷೆಡ್ಯೂಲ್ ಸ್ವತ್ತು) ಸ್ವತ್ತನ್ನು ಅದರ ಮಾಲೀಕರಾದ ಶ್ರೀ ಗೌತಮ್ ಸಾಗರ್ ಬಿನ್ ಡಾ. ಎನ್. ವಿದ್ಯಾಸಾಗರ್, ವಯಸ್ಸು ಸುಮಾರು 48 ವರ್ಷ, ವಾಸ ನಂ. 58, ರೈಲ್ವೇ ಪ್ಯಾರಲಲ್ ರಸ್ತೆ, ಟಾಟಾ ಕಾಫಿ ಲಿಮಿಟೆಡ್ ಎದುರು, ಕುಮಾರ ಪಾರ್ಕ್ ವೆಸ್ಟ್, ಶೇಷಾದ್ರಿಪುರಂ, ಬೆಂಗಳೂರು–560 020 ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಯಾರಿಗಾದರು ಸದರಿ ಸ್ವತ್ತಿನ ವಿಚಾರವಾಗಿ ಯಾವುದೇ ರೀತಿಯ ಹಕ್ಕು, ಧಾರಣೆ, ಹಿತಾಸಕ್ತಿ ಅಥವಾ ಶೀರ್ಷಿಕೆ ಅಥವಾ ಕ್ಲೇಮು ಅಥವಾ ಒಪ್ಪಂದವಿದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 10 **ದಿನಗಳ** ಅವಧಿಯೊಳಗೆ ಕೆಳಗೆ ಸಹಿ ಮಾಡಿದವರಿಗೆ ತಮ್ಮನ್ನು ಬೆಂಬಲಿಸುವ ದಾಖಲೆಗಳ ಪ್ರತಿಗಳನ್ನು ಒದಗಿಸಬೇಕು. ಒಂದು ವೇಳೆ ಯಾವುದೇ ಕಾನೂನುಬದ್ಧವಾಗಿ ಸಮರ್ಥನೀಯ ಕ್ಲೈಮ್ ಸ್ವೀಕರಿಸದಿದ್ದಲ್ಲಿ, ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ವಿಚಾರವಾಗಿ ಯಾವುದೇ ತಕರಾರುಗಳಿಲ್ಲವೆಂದು ಪರಿಗಣಿಸಿ ಷೆಡ್ಯೂಲ್ ಸ್ವತ್ತಿನ ಮಾರಾಟ ಪ್ರಕ್ರಿಯೆಯನ್ನು ಮುಂದುವರೆಸುತ್ತಾರೆಂದು ತಿಳಿಯುವುದು, ನಿಗದಿತ ಸಮಯದ ನಂತರ ಬರುವ ಯಾವುದೇ ತಂಟೆ ತಕರಾರುಗಳಿಗೆ ಮಾನ್ಯತೆಯಿರುವುದಿಲ್ಲ.

ಷೆಡ್ಯೂಲ್ ಸ್ವತ್ತು

ಬೆಂಗಳೂರು–560 020, ಶೇಷಾದ್ರಿಪುರಂ, ಕುಮಾರ ಪಾರ್ಕ್ ವೆಸ್ಟ್, ರೈಲ್ವೇ ಪ್ಯಾರಲಲ್ ರಸ್ತೆಯಲ್ಲಿರುವ ವಸತಿ ಸ್ಥಿರಾಸ್ತಿ ಸ್ವತ್ತು ಮುನಿಸಿಪಲ್ ನಂ. 58/1, (ಸಿಐಟಿಬಿ ಸೈಟ್ ನಂ. 2, ಬ್ಲಾಕ್ ನಂ.1) ಅಳತೆ ಪೂರ್ವದಿಂದ ಪಶ್ಚಿಮಕ್ಕೆ 65 ಅಡಿಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 65 ಅಡಿಗಳು, ಒಟ್ಟು ಅಳತೆ 4225 ಚದರ ಅಡಿಗಳು, ಪಿಐಡಿ ನಂ. 27–77–58/1, ಹೊಸ ಇಪಿಐಡಿ ನಂ. 8472733296, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಸ್ವತ್ತಾಗಿದ್ದು (ವಾರ್ಡ್ ನಂ. 94) ಹಾಗೂ ಇದರ ಚೆಕ್ಕುಬಂದಿ–

ಪೂರ್ವಕ್ಕೆ : ರಸ್ತೆ,
ಪಶ್ಚಿಮಕ್ಕೆ : ಇದೇ ಸೈಟ್ ನಂ.58ರ ಉಳಿದ ಭಾಗದ ಸ್ವತ್ತು (ಹಳೇ ನಂ.2, ಬ್ಲಾಕ್–1)
ಉತ್ತರಕ್ಕೆ : ಸೈಟ್ ನಂ.3, ಬ್ಲಾಕ್–1,
ದಕ್ಷಿಣಕ್ಕೆ : ಇದೇ ಸೈಟ್ ನಂ.58ರ ಉಳಿದ ಭಾಗದ ಸ್ವತ್ತು (ಹಳೇ ನಂ.2, ಬ್ಲಾಕ್–1)

ಸಿ.ಆರ್. ಕೃಷ್ಣಪ್ಪ, ವಕೀಲರು
ನಂ. 313, 3ನೇ ಮಹಡಿ, ಕರ್ನಾಟಕ ಪ್ರದೇಶ ಕುರುಬರ ಸಂಘ ಬಿಲ್ಡಿಂಗ್, 2ನೇ ಅಡ್ಡರಸ್ತೆ, 2ನೇ ಮೈನ್, ಗಾಂಧಿನಗರ, ಬೆಂಗಳೂರು–560 009.
ಮೊಬೈಲ್: 98455 77155

ಸುರಂಗ ರಸ್ತೆ ಸೇರಿದಂತೆ ಬೃಹತ್ ಕಾಮಗಾರಿಗಳಿಗೆ ವಿಶೇಷ ಘಟಕ

ಮೂಲಸೌಕರ್ಯ ಯೋಜನೆಗೆ ಎಸ್‌ಪಿವಿ

• ನವೀನ್ ಮಿನೇಜಸ್

ಬೆಂಗಳೂರು: ಮೆಟ್ರೊ, ಜಲಮಂಡಳಿ, ವಿದ್ಯುತ್ ಸರಬರಾಜು ಕಂಪನಿಯಂತೆ ನಗರದಲ್ಲಿ ರಸ್ತೆಗಳ ಬೃಹತ್ ಕಾಮಗಾರಿಗಳಿಗಾಗಿ ಪ್ರತ್ಯೇಕ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್‌ಗಳಂತಹ ಬೃಹತ್ ಮೂಲಸೌಕರ್ಯ ಯೋಜನೆಗಳಿಗೆ ಎಸ್‌ಪಿವಿ ಸ್ಥಾಪಿಸಲು ರಾಜ್ಯ ಸರ್ಕಾರ ಚರ್ಚೆ ನಡೆಸುತ್ತಿದೆ. ಎಸ್‌ಪಿವಿ ರಚನೆಯಿಂದ ಬಿಬಿಎಂಪಿಯ ಮೂಲ ಜವಾಬ್ದಾರಿ ಕಡಿಮೆಯಾಗಲಿದ್ದು, ನಾಗರಿಕರಿಂದ ಪ್ರತಿರೋಧ ವ್ಯಕ್ತವಾಗುವ ಸಾಧ್ಯತೆ ಇದೆ.

ಬೆಂಗಳೂರು ಸ್ಮಾರ್ಟ್ ಮೊಬಿಲಿಟಿ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿಎಸ್‌ಎಂಐಎಲ್) ಅಥವಾ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿಎಸ್‌ಐಎಲ್) ಎಂದು ಹೊಸ ಎಸ್‌ಪಿವಿಗೆ ಹೆಸರಿಡುವ ಸಾಧ್ಯತೆ ಇದೆ.ಇದನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 7ರಂದು ಮಂಡಿಸುವ ಬಜೆಟ್‌ನಲ್ಲಿ ಪ್ರಕಟಿಸಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ.



ಮುಖ್ಯಾಂಶಗಳು

- ಬಜೆಟ್‌ನಲ್ಲಿ ಸಿ.ಎಂ ಸಿದ್ದರಾಮಯ್ಯ ಪ್ರಕಟಿಸುವ ಸಾಧ್ಯತೆ
- 1 ಲಕ್ಷ ಕೋಟಿ ವೆಚ್ಚದ ಕಾಮಗಾರಿಗಳ ಹಸ್ತಾಂತರಕ್ಕೆ ಚಿಂತನೆ

ಮುಂಬೈ ಮಹಾನಗರ ಅಭಿವೃದ್ಧಿ ಪ್ರಾಧಿಕಾರದ (ಎಂಎಂಆರ್‌ಡಿಎ) ಮಾದರಿಯಲ್ಲಿ ಈ ಎಸ್‌ಪಿವಿ ಕಾರ್ಯನಿರ್ವಹಿಸಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ₹ 40 ಸಾವಿರ ಕೋಟಿ ವೆಚ್ಚದ ಎರಡು ಸುರಂಗ ರಸ್ತೆಗಳು, ಡಬಲ್ ಡೆಕರ್ ಯೋಜನೆ, ಸ್ಕೈಡೆಕ್, 1,700 ಕಿ.ಮೀ ಉದ್ದದ ರಸ್ತೆಗಳ ವೈಟ್ ಟಾಪಿಂಗ್, ಎಲಿವೇಟೆಡ್ ಕಾರಿಡಾರ್‌ಗಳು ಸೇರಿದಂತೆ ₹ 1 ಲಕ್ಷ ಕೋಟಿ ವೆಚ್ಚದ ಯೋಜನೆಗಳನ್ನು ಈ ವರ್ಷದ ಆರಂಭದಲ್ಲಿ ಪ್ರಕಟಿಸಿದ್ದರು. ಈ ಯೋಜನೆಗಳನ್ನು ಹೊಸ ಎಸ್‌ಪಿವಿಗೆ ಹಸ್ತಾಂತರಿಸಲು ಉಪ ಮುಖ್ಯಮಂತ್ರಿ ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮತ್ತೊಂದೆಡೆ, ಬಿಬಿಎಂಪಿಯ ಅಧಿಕಾರವನ್ನು ಮೊಟಕುಗೊಳಿಸಿ ಹಲವು ಸಣ್ಣ ನಗರಪಾಲಿಕೆಗಳನ್ನು ಸೃಷ್ಟಿಸಲು ಸರ್ಕಾರ ನಿರ್ಧರಿಸಿದೆ.

‘ಬೆಂಗಳೂರಿನಲ್ಲಿ ಮುಂದಿನ 20-30 ವರ್ಷಗಳಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಅಭಿವೃದ್ಧಿಗಾಗಿ ನಾವು ಹಲವು ಯೋಜನೆಗಳನ್ನು ಹೊಂದಿದ್ದೇವೆ. ಬೃಹತ್ ಯೋಜನೆಗಳನ್ನು ನಿರ್ವಹಿಸಲು ಹೊಸ ಎಸ್‌ಪಿವಿ ಸ್ಥಾಪನೆಯ ಪ್ರಸ್ತಾವ ಇದೆ. ಇದರ ಸಾಧಕ-ಬಾಧಕಗಳ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ಇನ್ನೂ ಅಂತಿಮ ನಿರ್ಧಾರ ಮಾಡಿಲ್ಲ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಯುವಕನ ಕೊಲೆ

ಬೆಂಗಳೂರು: ಚಾಕುವಿನಿಂದ ಇರಿದು ಯುವಕನನ್ನು ಕೊಲೆ ಮಾಡಿರುವ ಘಟನೆ ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ. ಅನಂತಪುರದ ಸುಬ್ರಹ್ಮಣಿ (23) ಕೊಲೆಯಾದವರು. ಗಣೇಶ್, ಮುರಳೀಧರ್ ಸಿಂಗ್ ಅವರನ್ನು ಬಂಧಿಸಲಾಗಿದೆ.

‘ಸುಬ್ರಹ್ಮಣಿ ಗೆಳೆಯರಾದ ಭುವನ್, ಮುರಳೀಧರ್ ಹಾಗೂ ಗಣೇಶ್ ಮಧ್ಯೆ ಗಲಾಟೆ ನಡೆದಿದೆ. ಗಣೇಶ್, ಮುರಳೀಧರ್ ಸಹೋದರರು. ಮೂವರು ಪದವೀಧರರು ಕೆಲಸಕ್ಕೆ ಹೋಗುತ್ತಿರಲಿಲ್ಲ. ಕಾರ್ಪೆಂಟರ್ ಒಬ್ಬರ ಬಗ್ಗೆ ಮಾಹಿತಿ ನೀಡಲಿಲ್ಲ ಎಂದು ಜಗಳ ತಗೆದು ‘ಭುವನ್‌ನನ್ನು ಹೊಡೆಯಲು ಮುರಳೀಧರ್ ಹೋಗಿದ್ದ. ಮನೆಯವರು ಆತನನ್ನು ಸಮಾಧಾನ ಪಡಿಸಿದ್ದರು. ಇಷ್ಟಕ್ಕೆ ಸುಮ್ಮನಾಗದ ಭುವನ್, ಸುಬ್ರಹ್ಮಣಿ ಸೇರಿದಂತೆ 3-4 ಸ್ನೇಹಿತರ ಜತೆ ಮುರುಳೀಧರ್ ಮನೆಗೆ ಹೋಗಿ ಗಲಾಟೆ ಮಾಡಿದ್ದಾನೆ. ಈ ಮಧ್ಯೆ ಚಾಕು ಕಸಿದುಕೊಂಡ ಸಹೋದರರು, ಸುಬ್ರಹ್ಮಣಿಗೆ ಇರಿದು ಕೊಂದಿದ್ದಾರೆ.

ಇನ್ನೂ 3 ಸಾವಿರ ಆಸ್ತಿಗಳಿಗೆ ನೋಟಿಸ್: ಮೌದ್ಗಿಲ್

ಹರಾಜಿಗೆ ಹೆದರಿ ತೆರಿಗೆ ಪಾವತಿ

ಬೆಂಗಳೂರು: ತೆರಿಗೆ ಸುಸ್ತಿದಾರರ ಆಸ್ತಿ ಹರಾಜು ಮಾಡುವ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಬಹುತೇಕ ಮಾಲೀಕರು ತೆರಿಗೆಯನ್ನು ಪಾವತಿಸಿದ್ದಾರೆ.

ಬಿಎಂಪಿಯ 8 ವಲಯಗಳಲ್ಲಿ ದೀರ್ಘ ಕಾಲದಿಂದ ಆಸ್ತಿ ತೆರಿಗೆ ಪಾವತಿಸದ 608 ಆಸ್ತಿ ಹರಾಜು ಪ್ರಕ್ರಿಯೆಯನ್ನು ಬಿಬಿಎಂಪಿ ಆರಂಭಿಸಿತ್ತು. ಆರಂಭದಲ್ಲಿ, ಫೆ. 13ರಂದು ನಡೆದಿದ್ದ ಹರಾಜು ಪ್ರಕ್ರಿಯೆಗೆ ಬಿಡ್ಡುದಾರರೇ ಬಂದಿರಲಿಲ್ಲ. ಫೆ.14ರಂದು ನಡೆಯಬೇಕಿದ್ದ ಹರಾಜು ಪ್ರಕ್ರಿಯೆಗೆ ಮುನ್ನವೇ ಬಹುತೇಕ ಆಸ್ತಿ ಮಾಲೀಕರು ಬಾಕಿ ತೆರಿಗೆ ಪಾವತಿಸಿದ್ದಾರೆ. ‘ಹರಾಜು ಪ್ರಕ್ರಿಯೆ ಆರಂಭಿಸಿದಾಗಲೇ ಹರಾಜು ನೋಟಿಸ್ ಪಡೆದಿದ್ದ ಬಹುತೇಕರು ತೆರಿಗೆ ಪಾವತಿಸಿದ್ದಾರೆ. ಉಳಿದವರು ಕೂಡಲೇ ಪಾವತಿಸುವುದಾಗಿ ಮನವಿ ಮಾಡಿದ್ದರು. ಹೀಗಾಗಿ, ಯಾವುದೇ ಆಸ್ತಿ ಹರಾಜು ಆಗಿಲ್ಲ’ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ತೆರಿಗೆ ಪಾವತಿ ಮಾಡದ ಮೂರು ಸಾವಿರ ಆಸ್ತಿಗಳ ಹರಾಜು ಪ್ರಕ್ರಿಯೆ ಆರಂಭವಾಗಿದ್ದು, ಸುಸ್ತಿದಾರರು ಈಗಲಾದರೂ ಎಲ್ಲ ತೆರಿಗೆ ಪಾವತಿಸದೇ ಇದ್ದರೆ ದಂಡ ತೆರಬೇಕಾಗುತ್ತದೆ ಎಂದರು.

ರಸ್ತೆ ಗುಂಡಿ ಮುಚ್ಚಲು ಅಭಿಯಾನ

ಬೆಂಗಳೂರು: ಉತ್ತಮ ರಸ್ತೆಗಳು, ಉತ್ತಮ ಜೀವನ ಅಭಿಯಾನಕ್ಕೆ ಡಾನ್ ಬಾಸ್ಕೊ ಕಾಲೇಜಿನ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳು ‘ಬಿಬಿಎಂಪಿ ರೋಡ್ ಸೇಫ್ಟಿ ಫಿಕ್ಸ್ ಪಾಟ್‌ಹೋಲ್ ಆ್ಯಪ್’ನ ಮೂಲಕ ದೂರು ಸಲ್ಲಿಸುವ ಅಭಿಯಾನಕ್ಕೆ ಚಾಲನೆ ನೀಡಿದರು.

ಟಿ.ಸಿ. ಪಾಳ್ಯ ಮುಖ್ಯ ರಸ್ತೆಯಿಂದ ಸೇಂಟ್ ಆಂಟೋನೀಸ್ ಚರ್ಚ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದ್ದು, ಪಾದಚಾರಿ ಮಾರ್ಗಕ್ಕೆ ಅಳವಡಿಸಿರುವ ಕಾಂಕ್ರೀಟ್ ಸ್ಲ್ಯಾಬ್ ಒಡೆದು ಹೋಗಿದೆ. ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ಕೂಡಲೇ ಬಿಬಿಎಂಪಿ ಅಧಿಕಾರಿಗಳು ಈ ಪಾದಚಾರಿ ಮಾರ್ಗದ ದುರಸ್ತಿಗೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅಭಿಯಾನದಲ್ಲಿ ಸಾಮಾಜಿಕ ಕಾರ್ಯ ವಿಭಾಗದ ಮುಖ್ಯಸ್ಥೆ ರೋಸ್ಮೇರಿ ಎಫ್.ಎನ್., ಪ್ರಾಧ್ಯಾಪಕರಾದ ಅರ್ಚಾ ಸುಕುಮಾರನ್, ಸೌರಭ್ ಕಮಲ್ ಇದ್ದರು. ವಿದ್ಯಾರ್ಥಿಗಳಾದ ಅಕ್ಷಯ್ ಕುಮಾರ್, ಅಷ್ಣಾನ್ ಸನ್ನಿ, ಎ.ಬಿ.ಎಸ್ ವರ್ಗೀಸ್, ಕಾವ್ಯಾಶ್ರೀ ವೇಣುಗೋಪಾಲ್, ನಿಂಬೆವ್ ಕ್ಷೇತ್ರಿ, ಶ್ರೀಧರ ಎಂ., ಅನಿಲ್ ಡಿ., ರಾಜೇಶ್, ಯಶ್ವಂತ್, ಅನಿಲ್ ಕುಮಾರ್, ಭರತ್, ಗಣೇಶ್, ರಾಮು ಭಾಗವಹಿಸಿದ್ದರು.



ಪಾದಚಾರಿ ಮಾರ್ಗವನ್ನು ಸರಿಪಡಿಸುವಂತೆ ವಿದ್ಯಾರ್ಥಿಗಳು ಅಭಿಯಾನ ನಡೆಸಿದರು

ಆರ್‌ಒ ಘಟಕ ಹಸ್ತಾಂತರಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ನಿರ್ವಹಣೆ ಮಾಡುತ್ತಿರುವ ಶುದ್ಧ ಕುಡಿಯುವ ನೀರಿನ ಘಟಕಗಳ (ಆರ್.ಒ ಪ್ಲಾಂಟ್) ನಿರ್ವಹಣೆಯ ಹೊಣೆಯನ್ನು ಬೆಂಗಳೂರು ಜಲಮಂಡಳಿಗೆ ಹಸ್ತಾಂತರಿಸಲು ಸೂಕ್ತ ಆದೇಶ ಹೊರಡಿಸಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿದ್ದಾರೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಶಿವಕುಮಾರ್ ಅವರು, ‘ನಗರದ ನಾಗರಿಕರಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಜವಾಬ್ದಾರಿಯನ್ನು ಬೆಂಗಳೂರು ಜಲಮಂಡಳಿ ನಿರ್ವಹಿಸುತ್ತಿದೆ. ಆದರೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಬಿಬಿಎಂಪಿ ನಿರ್ವಹಣೆ ಮಾಡುತ್ತಿದೆ. ಬೇಸಿಗೆ ಆರಂಭವಾಗುತ್ತಿದ್ದು, ಕೊಳವೆಬಾವಿಗಳು ಬತ್ತಿ ಹೋದರೆ ಆರ್.ಒ ಘಟಕಗಳಿಗೆ ಬೇಕಾಗುವ ನೀರನ್ನು ಬೆಂಗಳೂರು ಜಲಮಂಡಳಿ ಮೂಲಕವೇ ಪೂರೈಸಬೇಕಾಗುತ್ತದೆ. ನೀರು ಸರಬರಾಜು ವಿಷಯದಲ್ಲಿ ಎರಡೂ ಸಂಸ್ಥೆಗಳ ನಡುವೆ ಸಮನ್ವಯ ಕೊರತೆ ಉಂಟಾದರೆ ನಾಗರಿಕರಿಗೆ ತೊಂದರೆಯಾಗುತ್ತದೆ. ಹೀಗಾಗಿ, ಬಿಬಿಎಂಪಿಯಿಂದ ಆರ್.ಒ ಘಟಕಗಳನ್ನು ಜಲಮಂಡಳಿಗೆ ಹಸ್ತಾಂತರಿಸಲು ಅಧಿಕಾರಿಗಳಿಗೆ ಸೂಚಿಸಬೇಕು’ ಎಂದು ತಿಳಿಸಿದ್ದಾರೆ.

ಲಕ್ಷ್ಮೀ ಹೆಬ್ಬಾಳ್ಕರ ರಾಜೀನಾಮೆಗೆ ಆಗ್ರಹ

ಬೆಂಗಳೂರು: ‘ಬೆಳಗಾವಿಯಲ್ಲಿ ಹಲ್ಲೆಗೊಳಗಾದ ಕಂಡಕ್ಟರ್ ಮಹದೇವ ಹುಕ್ಕೇರಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲು ಒತ್ತಡ ಹೇರಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ರಾಜೀನಾಮೆ ಪಡೆಯಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಗುರುದೇವ ನಾರಾಯಣಕುಮಾರ್ ಒತ್ತಾಯಿಸಿದರು.

ಸೋಮವಾರ ಸಿ. ಎಂ ಭೇಟಿ ಮಾಡಿದ್ದ ಗುರುದೇವ, ‘ಮರಾಠಿಗರನ್ನು ಓಲೈಸಲು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಅವರು, ಮರಾಠಿಗರಿಂದ ಮಹದೇವ ಹುಕ್ಕೇರಿ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಲು ಪೊಲೀಸರ ಮೇಲೆ ಒತ್ತಡ ಹಾಕಿದ್ದಾರೆ. ರಾಜ್ಯದಲ್ಲೇ ಕನ್ನಡಿಗರ ಮೇಲೆ ಹಲ್ಲೆ ನಡೆಸಲು ಸಚಿವರೇ ಕುಮ್ಮಕ್ಕು ನೀಡುತ್ತಿರುವುದನ್ನು ಸಹಿಸಲು ಸಾಧ್ಯವಿಲ್ಲ’ ಎಂದಿದ್ದಾರೆ.

‘ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಹಾರಾಷ್ಟ್ರ ಬೆಂಬಲಿತ ಸಂಘಟನೆಗಳಿಗೆ ಕರ್ನಾಟಕದ ದಾಖಲೆಗಳನ್ನು ಮರಾಠಿಯಲ್ಲಿ ಒದಗಿಸಿ, ಕನ್ನಡ ವಿರೋಧಿಯಾಗಿ ವರ್ತಿಸಿದ್ದಾರೆ. ಅವರನ್ನು ವರ್ಗಾವಣೆ ಮಾಡಬೇಕು’ ಎಂದರು.

‘ಜಾಣ ಜಾಣೆಯರ ನಗೆ ಜಾಗರಣೆ’ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾಣ ಜಾಣೆಯರ ನಗೆ ಜಾಗರಣೆ’ಯನ್ನು ಚಿಕ್ಕಲಾಲ್‌ಬಾಗ್ ಬಳಿಯ ತುಳಸಿ ತೋಟದ ಆಟದ ಮೈದಾನದಲ್ಲಿ ಫೆ.26ರಂದು ಆಯೋಜಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

‘ಪ್ರತಿ ವರ್ಷದಂತೆ ಈ ವರ್ಷವೂ ಶಿವರಾತ್ರಿಯ ಜಾಗರಣೆಗಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಫೆ.26ರ ಸಂಜೆ ಶಿವ–ಪಾರ್ವತಿಯರ ಅಂಬಾರಿ ಉತ್ಸವ 30 ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಸಾಲಿಗ್ರಾಮದ ಆನಂದ ಗುರೂಜಿ, ಶಾಸಕರು ಮತ್ತು ಅಘೋರಿಗಳು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.

ರುದ್ರ ಲಕ್ಷಾರ್ಚನೆ, ಮಹಾರುದ್ರ ಹೋಮ ಆಯೋಜಿಸಲಾಗಿದ್ದು, ತೀರ್ಥ ಮತ್ತು ಪ್ರಸಾದ ವಿತರಿಸಲಾಗುತ್ತದೆ. ಎಂ.ಎಸ್. ನರಸಿಂಹಮೂರ್ತಿ, ಪ್ರೊ. ಕೃಷ್ಣೇಗೌಡ, ಮಿಮಿಕ್ರಿ ದಯಾನಂದ್, ಮಿಮಿಕ್ರಿ ಗೋಪಿ, ವೈಜನಾಥ ಸಜ್ಜನಶೆಟ್ಟಿ, ಆಶಾ ನಾಯಕ್, ಕೋಣನಕುಂಟೆ ಜಿ. ವೆಂಕಟೇಶ್, ಮಹೇಶ್, ಪ್ರತಾಪ್, ಉಮೇಶ್ ಗೌಡ ಸೇರಿದಂತೆ ಹಾಸ್ಯ ಭಾಷಣಕಾರರು ರಂಜನೆ ನೀಡಲಿದ್ದಾರೆ ಎಂದು ಹೇಳಿದರು.

₹5 ಸಾವಿರ ಕೋಟಿ ಅನುದಾನಕ್ಕೆ ವಿವಿಧ ಸಂಘಟನೆಗಳ ಆಗ್ರಹ

ಕೊಳೆಗೇರಿಗಳ ಅಭಿವೃದ್ಧಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಳೆಗೇರಿ ನಿವಾಸಿಗಳ ಜನಸಂಖ್ಯೆಗೆ ಅನುಗುಣವಾಗಿ ಕೊಳಗೇರಿ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ₹5 ಸಾವಿರ ಕೋಟಿ ಅನುದಾನವನ್ನು ಮುಂಬರುವ ಬಜೆಟ್‌ನಲ್ಲಿ ಮೀಸಲಿಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾವಿತ್ರಿ ಬಾಯಿ ಫುಲೆ ಮಹಿಳಾ ಸಂಘಟನೆ ಹಾಗೂ ಸ್ಲಂ ಜನಾಂದೋಲನ ಕರ್ನಾಟಕ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ನೂರಾರು ಜನರು, ಕೊಳೆಗೇರಿಗಳಲ್ಲಿ ವಸತಿ, ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ, ಶೌಚಾಲಯ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸದಿರುವುದಕ್ಕೆ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಖಾಸಗಿ ಮಾಲೀಕತ್ವದ ಕೊಳಚೆ ಪ್ರದೇಶಗಳ ಘೋಷಣೆಗೆ ತೊಡಕಾಗಿರುವ ವಸತಿ ಇಲಾಖೆ ಸುತ್ತೋಲೆಯನ್ನು ಹಿಂಪಡೆದು ಭೂಸ್ವಾಧೀನಕ್ಕೆ ಹಣ ಒದಗಿಸಬೇಕು. ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಸುವರ್ಣ ಸಂಭ್ರಮದ ನೆನಪಿಗಾಗಿ ಮಂಡಳಿಯ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ಕೊಳೆಗೇರಿ ನಿವಾಸಿಗಳ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾವಿತ್ರಿ ಬಾಯಿ ಫುಲೆ ಮಹಿಳಾ ಸಂಘಟನೆ ಹಾಗೂ ಸ್ಲಂ ಜನಾಂದೋಲನ ಕರ್ನಾಟಕ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು ಪ್ರಜಾವಾಣಿ ಚಿತ್ರ

ಕೊಳೆಗೇರಿ ನಿವಾಸಿಗಳ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಪ್ರತ್ಯೇಕ ಸಚಿವಾಲಯ ಆರಂಭಿಸಬೇಕು. ಜನರ ಜೀವನೋಪಾಯಕ್ಕಾಗಿ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ವಂಚಿತ ಸಮುದಾಯಗಳಿಗೆ ವಸತಿ ಸೌಲಭ್ಯ ಕಲ್ಪಿಸಲು 2017–18ರ ಬಜೆಟ್ ಘೋಷಣೆಯಂತೆ ನಗರ ಭೂ ಬ್ಯಾಂಕ್ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಅರ್ಧದಷ್ಟು ಕೊಳೆಗೇರಿಗಳು ಬೆಂಗಳೂರು ನಗರದಲ್ಲಿದ್ದು, ಇಲ್ಲಿನ ನಿವಾಸಿಗಳ ಪುನರ್ವಸತಿಗಾಗಿ ಭೂ ಮಂಜೂರಾತಿ ನೀಡಲು ಜಿಲ್ಲಾಧಿಕಾರಿಗೆ ಸೂಚಿಸಬೇಕು ಎಂದು ಮನವಿ ಮಾಡಿದರು.

ಸಾವಿತ್ರಿ ಬಾಯಿ ಫುಲೆ ಮಹಿಳಾ ಸಂಘಟನೆ ಸಂಚಾಲಕಿ ಚಂದ್ರಮ್ಮ, ಸ್ಲಂ ಜನಾಂದೋಲನ ಕರ್ನಾಟಕದ ಸಂಚಾಲಕ ಎ. ನರಸಿಂಹಮೂರ್ತಿ ಅವರು ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಮತ್ತು ಆಯುಕ್ತ ಅಶೋಕ್ ಅವರಿಗೆ ಮನವಿ ಸಲ್ಲಿಸಿದರು.

‘ಕಲಾವಿದರಿಗೆ ಸಂಗೀತವೇ ಬದುಕು’

ಗಾನಚಂದ್ರಿಕಾ ಕಲ್ಚರಲ್ ಫೌಂಡೇಷನ್ ದಶಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಗೀತ-ನೃತ್ಯ ಪ್ರಕಾರಗಳಂತಹ ಕಲೆಗಳು ಎಲ್ಲರಿಗೂ ಸಿದ್ಧಿಸುವುದಿಲ್ಲ. ಸತತ ಪರಿಶ್ರಮದಿಂದ ಕಲಾವಿದರು ಸಂಗೀತವನ್ನೇ ಬದುಕಾಗಿಸುತ್ತಾರೆ’ ಎಂದು ಶಾಸಕ ಸಿ.ಕೆ. ರಾಮಮೂರ್ತಿ ಅಭಿಪ್ರಾಯಪಟ್ಟರು.

ನಗರದಲ್ಲಿ ನಡೆದ ಗಾನಚಂದ್ರಿಕಾ ಕಲ್ಚರಲ್ ಫೌಂಡೇಷನ್‌ನ ದಶಮಾನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ‘ಗಾನಚಂದ್ರಿಕಾದಂತಹ ಸಂಸ್ಥೆಗಳು ನಾಡಿನ ಕಲೆ, ಪರಂಪರೆಯನ್ನು ಉಳಿಸಲು ಶ್ರಮಿಸುತ್ತಿವೆ. ಇವು ಇನ್ನಷ್ಟು ಉತ್ತಮ ಕಾರ್ಯಕ್ರಮಗಳನ್ನು ನಡೆಸಲು ನನ್ನ ಕೈಲಾದ ನೆರವು ನೀಡಲು ಸಿದ್ಧ’ ಎಂದರು.

ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ‘ನಾಡಿನ ಜೀವನಾಡಿ ಆಗಿರುವ ಸಾಂಸ್ಕೃತಿಕ ಸಂಘಟನೆಗಳನ್ನು ಸರ್ಕಾರ ಪೋಷಿಸಬೇಕು. ಅವುಗಳನ್ನು ನಿರ್ಲಕ್ಷಿಸುವುದು ಸಂಸ್ಕೃತಿಗೆ ಮಾಡುವ ಅಪಚಾರ’ ಎಂದರು.

ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಷಡಕ್ಷರಿ ‘ನಾಗಚಂದ್ರಿಕಾ ಅವರು ಗಾನಚಂದ್ರಿಕಾ ಸಂಸ್ಥೆ ಮೂಲಕ ಪ್ರತಿ ವರ್ಷ ವಿಭಿನ್ನ ರೂಪದ ಸಂಗೀತ ಕಾರ್ಯಕ್ರಮ ಏರ್ಪಡಿಸುತ್ತಾರೆ. ನೂರಾರು ಮಕ್ಕಳಿಗೆ ಸಂಗೀತವುಣಿಸಿ ಪೋಷಿಸಿದ್ದಾರೆ’ ಎಂದು ಶ್ಲಾಘಿಸಿದರು.



ಕಾರ್ಯಕ್ರಮದಲ್ಲಿ, ಸಂಗೀತ ಸಂಯೋಜಕರಾದ ಜಯಶ್ರೀ ಅರವಿಂದ್, ಎನ್.ಎಸ್.ಪ್ರಸಾದ್, ಕೆ.ಯುವರಾಜ್, ಬಿ.ವಿ.ಶ್ರೀನಿವಾಸ್, ದೇವೇಂದ್ರ ಕುಮಾರ್ ಪತ್ತಾರ್ ಅವರಿಗೆ ‘ಗಾನಚಂದ್ರಿಕಾ ಗೌರವ ಸನ್ಮಾನ’ ನೀಡಿ ಪುರಸ್ಕರಿಸಲಾಯಿತು. ನಿಂತವರು(ಎಡದಿಂದ) ಮಾಧವಿ ಭಟ್, ಬಿ.ಕೆ.ಸುಮತಿ, ಗಾನಚಂದ್ರಿಕಾ ಕಲ್ಚರಲ್ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷೆ ನಾಗಚಂದ್ರಿಕಾ ಭಟ್, ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಷಡಕ್ಷರಿ, ಸಂಗೀತ ನಿರ್ದೇಶಕ ವಿ.ಮನೋಹರ್, ಲೇಖಕಿ ವತ್ಸಲಾ ಮೋಹನ್ ಉಪಸ್ಥಿತರಿದ್ದರು

‘ಚಿತ್ರಗೀತೆಗಳು ಸಿನಿಮಾ ಬಿಡುಗಡೆ ಆಗಿ ಸ್ವಲ್ಪ ಸಮಯದಲ್ಲೇ ತೆರೆ ಮರೆಗೆ ಸರಿಯುತ್ತವೆ. ಭಾವಗೀತೆಗಳು ಸದಾ ಮನಸ್ಸಿನ ಭಾವನೆಗಳನ್ನು ಮೀಟಿ ನುಡಿಸುತ್ತಿರುತ್ತವೆ. ಸುಗಮ ಸಂಗೀತ ಅಮರ ಸಂಗೀತ’ ಎಂದು ಸಂಗೀತ ನಿರ್ದೇಶಕ ವಿ.ಮನೋಹರ್ ವ್ಯಾಖ್ಯಾನಿಸಿದರು.

ಕಾರ್ಯಕ್ರಮದಲ್ಲಿ ದಿನವಿಡೀ ವಿವಿಧ ಸಂಗೀತ ಪ್ರಕಾರಗಳ ಕಾರ್ಯಕ್ರಮಗಳು ನಡೆದವು. ಸಂಗೀತ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.





‘ಡಾ.ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ’ ಪ್ರಶಸ್ತಿ ಪ್ರದಾನ ಸಮಾರಂಭ

‘ಕಲಬುರ್ಗಿ ಹತ್ಯೆ ಹಿಂದೆ ರಾಷ್ಟ್ರೀಯ ಸಂಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಂ.ಎಂ.ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಅವರ ಹತ್ಯೆಯ ಹಿಂದೆ ಒಂದು ರಾಷ್ಟ್ರೀಯ ಸಂಚು ನಡೆದಿದೆ. ಅದು ಕೋಮುವಾದಿಗಳು ನಡೆಸಿದ ಕ್ರೂರ ಸಂಚು’ ಎಂದು ಸಾಹಿತಿ ಕೆ. ಮರುಳಸಿದ್ದಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಆಯೋಜಿಸಿದ್ದ ಸಮಾರಂಭದಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅವರಿಗೆ ‘ಡಾ. ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಈ ಇಬ್ಬರ ಹತ್ಯೆ ವೈಯಕ್ತಿಕ ಕಾರಣಕ್ಕಾಗಿ ನಡೆದಿದ್ದಲ್ಲ. ಕೊಂದಿರುವವರು ಯಾರೇ ಇರಬಹುದು. ಅವರು ಕೇವಲ ಅಸ್ತ್ರವಷ್ಟೇ. ಬಂದೂಕು ಯಾವುದೇ ಇರಬಹುದು, ಆದರೆ ಹತ್ಯೆಗೆ ನಡೆದ ಸಂಚು ಮಾತ್ರ ರಾಷ್ಟ್ರೀಯ ನೆಲೆಯಲ್ಲಿ ನಡೆದಿರುವಂಥದ್ದು’ ಎಂದು ಹೇಳಿದರು.

‘ಕಲಬುರ್ಗಿಯವರು ಲಿಂಗಾಯತ ಧರ್ಮವನ್ನು ಸ್ಥಾಪಿಸಲು ಹೋರಾಟ ನಡೆಸಿದರು. ಹಿಂದೂ ಧರ್ಮಕ್ಕೂ ಶರಣ ಧರ್ಮಕ್ಕೂ ಸಂಬಂಧವಿಲ್ಲ ಎಂದು ಪ್ರತಿಪಾದಿಸುತ್ತಿದ್ದರು. ಅವರ ಈ ನಿರ್ಭೀತ ಹೋರಾಟಕ್ಕೆ ತಿರುಗಿಬಿದ್ದು ಎರಡು ಮೂರು ಬಾರಿ ಹಲ್ಲೆ ನಡೆಸಲಾಗಿತ್ತು. ಇದ್ಯಾವುದಕ್ಕೂ ಹೆದರದೇ ಧೈರ್ಯವಾಗಿ ನಂಬಿದ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತಿದ್ದರು’ ಎಂದರು.



ಜನಪರ ಹೋರಾಟಗಾರ ಮಾವಳ್ಳಿ ಶಂಕರ್ ಅವರಿಗೆ 'ಡಾ.ಎಂ.ಎಂ ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ ರೇವಣ್ಣ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ ನಾಗರಾಜ ಮೂರ್ತಿ, ಸಾಹಿತಿ ಪ್ರೊ.ಕೆ ಮರುಳಸಿದ್ದಪ್ಪ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಖಜಾಂಚಿ ಎಂ.ಸದಾಶಿವಪ್ಪ, ರಾಜ್ಯ ಯೋಜನಾ ಮತ್ತು ನೀತಿ ಆಯೋಗದ ಉಪಾಧ್ಯಕ್ಷ ಬಿ.ಆರ್ ಪಾಟೀಲ್, ಪ್ರತಿಷ್ಠಾನದ ಅಧ್ಯಕ್ಷ ಎಸ್.ಮಹದೇವಯ್ಯ, ನಿರ್ದೇಶಕ ದಯಾನಂದ ಪಾಟೀಲ್, ಜಗದೀಶ್ ಜಾಲ ಮತ್ತು ಇಂದಿರಾ ಕೃಷ್ಣಪ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್ ಪಾಟೀಲ, ‘ಬಸವಣ್ಣನವರನ್ನು ರಾಜ್ಯದ ಹಳ್ಳಿ ಹಳ್ಳಿಗೆ ತಲುಪಿಸಿದವರು ದಲಿತ ಸಂಘರ್ಷ ಸಮಿತಿಯವರು. ಇಂಥ ಚಳವಳಿಗಳಲ್ಲಿ ಸಕ್ರಿಯವಾಗಿದ್ದು, ಜನಪರ ಚಳವಳಿಗೆ ಬೆಂಬಲವಾಗಿ ನಿಂತ ಮಾವಳ್ಳಿ ಶಂಕರ್ ಅವರಿಗೆ ಕಲಬುರ್ಗಿ ಹೆಸರಿನ ಪ್ರಶಸ್ತಿ ದೊರೆತಿರುವುದು ಅರ್ಥಪೂರ್ಣವಾಗಿದೆ’ ಎಂದರು.

‘ಮಕ್ಕಳ ರಕ್ಷಣೆಗೆ ಅನುದಾನ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ರಕ್ಷಣೆಗೆ 2025–26ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸಬೇಕು ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ನಿರ್ದೇಶಕ ನಾಗಸಿಂಹ ಜಿ. ರಾವ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, ‘ಅಂತರ್ಜಾಲದ ಅತಿ ಬಳಕೆಯಿಂದ ಆಗುವ ಅಪಾಯಗಳ ಬಗ್ಗೆ ಮಕ್ಕಳಿಗೆ, ಹದಿಹರೆಯದವರಲ್ಲಿ ಜಾಗೃತಿ ಮೂಡಿಸಬೇಕು. ಈ ಬಗ್ಗೆ ಆಂದೋಲನಗಳು, ಜಾಗೃತಿ ಕಾರ್ಯಕ್ರಮಗಳು ಹಾಗೂ ಸಂಶೋಧನೆಗಳು ನಡೆಯಬೇಕಿದೆ. ರಾಜ್ಯದಲ್ಲಿ ಮಕ್ಕಳ ರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳಬೇಕು. ಈ ಕೆಲಸಗಳಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು’ ಎಂದು ಆಗ್ರಹಿಸಿದ್ದಾರೆ.


‘ಪರೀಕ್ಷಾ ಒತ್ತಡ, ಸಾಮಾಜಿಕ ಒತ್ತಡ, ಸಾಮಾಜಿಕ ಮಾಧ್ಯಮಗಳಿಂದ ಆತಂಕ ಸೇರಿದಂತೆ ಮಕ್ಕಳು ಹಲವಾರು ಮಾನಸಿಕ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಆದ್ದರಿಂದ ಶಾಲೆಗಳಲ್ಲಿ ಆಪ್ತ ಸಮಾಲೋಚಕರನ್ನು ನೇಮಿಸಬೇಕು. ಬಾಲ ಗರ್ಭಿಣಿಯರ ಪ್ರಕರಣಗಳು ವರದಿಯಾಗುತ್ತಿದ್ದು, ಇವರಿಗೆ ಪುನರ್ವಸತಿ ಕಲ್ಪಿಸಲು ಹಣದ ಅವಶ್ಯಕತೆ ಇದೆ. ಪೋಕ್ಸೊ ಪ್ರಕರಣಗಳು ಹೆಚ್ಚುತ್ತಿದ್ದು, ಪೋಕ್ಸೊ ಕಾಯ್ದೆ ಬಗ್ಗೆ ಅರಿವು ಮೂಡಿಸಲು ಅನುದಾನ ನಿಗದಿಪಡಿಸಬೇಕು. ಬಾಲ್ಯ ವಿವಾಹ ನಿಷೇಧಿಸಲು ಅಧಿಕಾರಿಗಳಿಗೆ ತರಬೇತಿ ಹಾಗೂ ಪ್ರೋತ್ಸಾಹಧನ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

‘ಅಂಗವಿಕಲ ಮಕ್ಕಳ ಪುನರ್ವಸತಿ, ಚಿಕಿತ್ಸೆ, ಶಿಕ್ಷಣಕ್ಕೆ ಹೆಚ್ಚು ಅನುದಾನ ಮೀಸಲಿಡಬೇಕು’ ಎಂದು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ವಾಣಿ ಸ್ಮರಣೆ: ಉದ್ಘಾಟನೆ: ಶೈಲಜಾ ಸುರೇಶ್, ‘ವಾಣಿ ಸ್ಮರಣೆ’: ಮಂಗಳಾ ಪ್ರಿಯದರ್ಶಿನಿ ಡಿ., ‘ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿ’ ಪ್ರದಾನ: ಎಚ್. ವಿಶ್ವನಾಥ್, ಪ್ರಶಸ್ತಿ ಸ್ವೀಕರಿಸುವವರು: ಎ.ಪಿ. ಮಾಲತಿ, ಅಧ್ಯಕ್ಷತೆ: ಶಾಂತರಾಜು, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಬಿ.ಎಸ್. ಮಂಜುನಾಥ್ ಅವರ ‘ಯೋಗಪಥ’ ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಪ್ರಧಾನ ಗುರುದತ್ತ, ಅತಿಥಿಗಳು: ರಾಮಲಿಂಗಾರೆಡ್ಡಿ, ಎನ್.ವಿ. ಪ್ರಸಾದ್, ಪ್ರಿಯಾಂಕಾ ಉಪೇಂದ್ರ, ಸಿ.ಎಸ್. ಷಡಾಕ್ಷರಿ, ಆಯೋಜನೆ: ಜಾಗೃತಿ ಟ್ರಸ್ಟ್, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಮಧ್ಯಾಹ್ನ 1.30



ಚಂದ್ರಶೇಖರ ಕಂಬಾರ

‘ಪೋಸ್ಟ್‌ಮೆನ್ ಫಜೀತಿ’ ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ವೇಣುಗೋಪಾಲ್, ಸಂಗೀತ: ಪ್ರವೀಣ್, ಪ್ರಸ್ತುತಿ: ರಂಗಧಾಮ ಸಾಂಸ್ಕೃತಿಕ ಟ್ರಸ್ಟ್, ‘ಜಡ್ಡಣಕ–ಪಂಪಣಕ’ ನಾಟಕ ಪ್ರದರ್ಶನ: ನಿರ್ದೇಶನ: ದತ್ತು ದೇಸಾಯಿ, ಸಂಗೀತ: ಸುಭಾಷ್, ಪ್ರಸ್ತುತಿ: ಸನಾತನ ಭಾರತಿ ಪಾರಂಪರಿಕ ಶಿಕ್ಷಣ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಮಧ್ಯಾಹ್ನ 3ರಿಂದ

‘ಪ್ರೊ.ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ’, ‘ರಾಜಸಭಾ ಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾವ್ ದತ್ತಿ, ಕರ್ಪೂರ ರಾಮಾರಾವ್ ಜನ್ಮಶತಾಬ್ದಿ ದತ್ತಿ ನಿಧಿ’ ಪ್ರಶಸ್ತಿ ಪ್ರದಾನ: ಕೃಷ್ಣ ದೀಕ್ಷಿತ್, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿಗಳು: ನಿರ್ಮಲಾ ಕರ್ಪೂರರಾವ್, ಟಿ. ಕೃಷ್ಣಕುಮಾರ, ಎಸ್. ರಾಜಶೇಖರ್, ಪ್ರಶಸ್ತಿ ಸ್ವೀಕರಿಸುವವರು: ಬಿ.ವಿ. ವಸಂತಕುಮಾರ್, ಮ. ನಂಜುಂಡ ಸ್ವಾಮಿ, ಸುಧಾ ನರಸಿಂಹರಾಜು, ಸಿದ್ಧ ಗಂಗಯ್ಯ ಹೊಲತಾಳು, ಚಿಕ್ಕನಾಯಕನ ಹಳ್ಳಿ ಕನ್ನಡ ಸಂಘ, ಸುಪ್ರಿಯಾ ಎಸ್.ಆರ್., ಮಮತಾ ಎಸ್.ಟಿ., ಬಾಲಗೌರಮ್ಮ ಬಿ., ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಎಟಿಸಿಎಸ್ ಯಶಸ್ವಿ ಕಾರ್ಯ ನಿರ್ವಹಣೆ: ಪ್ರಮುಖ ಕಾರಿಡಾರ್‌ಗಳಲ್ಲಿ ತಗ್ಗಿದ ಸಂಚಾರ ದಟ್ಟಣೆ • ನಿಯಮ ಉಲ್ಲಂಘಿಸುವವರ ಪತ್ತೆಯೂ ಸುಲಭ

125 ಜಂಕ್ಷನ್ ಸಿಗ್ನಲ್‌ಗಳಲ್ಲಿ 'ಎ.ಐ' ಕಣ್ಗಾವಲು

• ಕೆ.ಎಸ್. ಸುನಿಲ್


ಬೆಂಗಳೂರು: ಸಂಚಾರ ದಟ್ಟಣೆಗೆ ಕಡಿವಾಣ ಹಾಕಲು ನಗರದ ಹಲವು ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ವಾಹನಗಳ ದಟ್ಟಣೆ ಆಧರಿಸಿ ಸ್ವಯಂ ಚಾಲಿತ ಸಿಗ್ನಲ್ ನಿರ್ವಹಣೆ ವ್ಯವಸ್ಥೆಯ (ಅಡ್ಯಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್–ಎಟಿಸಿಎಸ್) ಪ್ರಾಯೋಗಿಕ ಅನುಷ್ಠಾನ ಯಶಸ್ವಿಯಾದ ಬೆನ್ನಲ್ಲೇ 125 ಜಂಕ್ಷನ್‌ಗಳಲ್ಲಿ ಎ.ಐ ಆಧಾರಿತ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.

ಹೊಸ ತಂತ್ರಜ್ಞಾನ ಅಳವಡಿಕೆಯಿಂದ ಪ್ರಮುಖ ಕಾರಿಡಾರ್‌ಗಳಲ್ಲಿ ಸಂಚಾರ ದಟ್ಟಣೆ ತಗ್ಗಲಾರಂಭಿಸಿದೆ. ಎಐ ಆಧಾರಿತ ಕ್ಯಾಮೆರಾಗಳ ಮೂಲಕ ಸಂಚಾರ ನಿಯಮಗಳ ಉಲ್ಲಂಘಿಸುವವರ ಪತ್ತೆ ಸುಲಭವಾಗುವುದರ ಜೊತೆಯಲ್ಲೇ ದಟ್ಟಣೆಯ ಮಾರ್ಗವನ್ನು ಗುರುತಿಸಿ ಸಿಗ್ನಲ್ ನೀಡುವುದಕ್ಕೂ ಅನುಕೂಲವಾಗಿದೆ. ಇದರಿಂದಾಗಿ ಸಂಚಾರ ವಿಭಾಗದ ಪೊಲೀಸರಿಗೆ ಸಂಚಾರ ದಟ್ಟಣೆ ನಿರ್ವಹಣೆಗೆ ಹೊಸ ಮಾರ್ಗ ತೆರೆದುಕೊಂಡಿದೆ.

ಎಟಿಸಿಎಸ್ ವ್ಯವಸ್ಥೆಯನ್ನು ಅಳವಡಿಸಿ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಸಿ–ಡಾಕ್ ಕಂಪನಿಗೆ ವಹಿಸಲಾಗಿದ್ದು, ಕಂಪನಿ ಅಧಿಕಾರಿಗಳು, ಸ್ಥಳೀಯ ಕಾರ್ಮಿಕರೊಂದಿಗೆ ನೂತನ ಸಿಗ್ನಲ್‌ಗಳನ್ನು ಅಳವಡಿಸುತ್ತಿದ್ದಾರೆ.

ಎಐ ತಂತ್ರಜ್ಞಾನ ಬಳಸಿಕೊಂಡು ಆಯಾ ರಸ್ತೆಗಳಲ್ಲಿನ ವಾಹನ ದಟ್ಟಣೆಯನ್ನು ಗ್ರಹಿಸಿ ಎಟಿಸಿಎಸ್ ಹಸಿರು ನಿಶಾನೆ ತೋರುತ್ತದೆ. ಸಿಗ್ನಲ್ ಬಳಿಯ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆ ಆಧರಿಸಿ ಹಸಿರು ದೀಪ ಬೆಳಗಿಸಲಾಗುತ್ತದೆ.

'ಬಸವನಗುಡಿ, ಜಯನಗರ, ಜೆ.ಪಿ.ನಗರ ಹಾಗೂ ಹಡ್ಸನ್ ವೃತ್ತದ ಸಿಗ್ನಲ್‌ಗಳಿಗೂ ಈ ತಂತ್ರಜ್ಞಾನ ಆಧಾರಿತ ಸಿಗ್ನಲ್ ಅಳವಡಿಸಲಾಗಿದೆ. ಹೊಸ ಸಿಗ್ನಲ್ ಅಳವಡಿಸಿದ ನಂತರ ಈ ಜಂಕ್ಷನ್‌ಗಳಲ್ಲಿ ಸುಗಮ ಸಂಚಾರ ವ್ಯವಸ್ಥೆ, ಪ್ರಯಾಣಿಕರ ಸುರಕ್ಷತೆ ಹಾಗೂ ತಂತ್ರಜ್ಞಾನ ಪರಿಣಾಮದ ಕುರಿತು ಅಧ್ಯಯನ ನಡೆಸಲಾಗಿದೆ. ಗಣನೀಯ ಸುಧಾರಣೆ ಕಂಡು ಬಂದಿದೆ. ಕೆ.ಆರ್.ರಸ್ತೆಯಂತಹ ಪ್ರಮುಖ ಕಾರಿಡಾರ್‌ನಲ್ಲೂ ಪ್ರಯಾಣದ ಸಮಯದಲ್ಲಿ ಬದಲಾವಣೆ ಆಗಿದೆ' ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.



ಹಡ್ಸನ್ ವೃತ್ತದಲ್ಲಿ ಎ.ಐ ತಂತ್ರಜ್ಞಾನ ಆಧಾರಿತ ಎಟಿಸಿಎಸ್ ಅನ್ನು ಸೋಮವಾರ ಅಳವಡಿಸಲಾಯಿತು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ನಗರದಲ್ಲಿ ನಿತ್ಯ ಒಂದು ಕೋಟಿಗೂ ಅಧಿಕ ವಾಹನಗಳು ರಸ್ತೆಗಿಳಿಯುತ್ತಿವೆ. ಈ ಮಧ್ಯೆ ನಿತ್ಯ ಸುಮಾರು ಒಂದೂವರೆಯಿಂದ ಎರಡು ಸಾವಿರ ದ್ವಿಚಕ್ರ ವಾಹನಗಳು ಹೊಸದಾಗಿ ನೋಂದಣಿ ಅಗುತ್ತಿವೆ. ಪರಿಣಾಮ ಪ್ರಮುಖ ಜಂಕ್ಷನ್, ವೃತ್ತ, ಮಾರುಕಟ್ಟೆಗಳು, ಜನನಿಬಿಡ ಸ್ಥಳಗಳಲ್ಲಿ ವಾಹನ ದಟ್ಟಣೆ ಹೆಚ್ಚುತ್ತಿದ್ದು, ಸಂಚಾರ ನಿರ್ವಹಣೆ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

ಬೆಂಗಳೂರು ನಗರ ಸಂಚಾರ ದಟ್ಟಣೆ ನಗರಿಯಾಗಿ ಮಾರ್ಪಟ್ಟಿದೆ. ಹೊರ ವರ್ತುಲ ರಸ್ತೆಗಳು, ಪ್ರಮುಖ ರಸ್ತೆಗಳು ಹಾಗೂ ವೃತ್ತಗಳಲ್ಲಿ ದಟ್ಟಣೆ ಸಾಮಾನ್ಯವಾಗಿದೆ. ನಿತ್ಯ ಕೆಲಸಕ್ಕೆ ಹೋಗುವ ಜನ ವಾಹನ ದಟ್ಟಣೆಯಲ್ಲಿ ಸಿಲುಕಿ ಪರದಾಡುತ್ತಿದ್ದಾರೆ.

ಈ ಸಮಸ್ಯೆಗೆ ಪೊಲೀಸರು ಎಟಿಸಿಎಸ್ ಮೂಲಕ ತಕ್ಕಮಟ್ಟಿಗೆ ಪರಿಹಾರ ಕಂಡುಕೊಂಡಿದ್ದಾರೆ. ಎಟಿಸಿಎಸ್ ಬಳಕೆಯಿಂದಾಗಿ ಎಂಟು ಕಾರಿಡಾರ್‌ಗಳಲ್ಲಿ ಶೇಕಡ 16ರಿಂದ 61ರಷ್ಟು ಸಂಚಾರ ವೇಗ ಹೆಚ್ಚಳವಾಗಿದೆ.

ಅಂಕಿಅಂಶಗಳ ಪ್ರಕಾರ, ಈ ಕಾರಿಡಾರ್‌ಗಳಲ್ಲಿ 3.5 ಕಿ.ಮೀ. ದೂರ ಸಂಚರಿಸಲು ತೆಗೆದುಕೊಳ್ಳುವ ಸಮಯ 17ರಿಂದ 14 ನಿಮಿಷಕ್ಕೆ ಇಳಿಕೆಯಾಗಿದೆ. ಗಂಟೆಗೆ ಸರಾಸರಿ ವೇಗ 12.5 ಕಿ.ಮೀ.ನಿಂದ 15 ಕಿ.ಮೀ.ಗೆ ಹೆಚ್ಚಳವಾಗಿದೆ.

'ಬನ್ನೇರುಘಟ್ಟ ರಸ್ತೆಯ 5.9 ಕಿ.ಮೀ ಉದ್ದದ ಮಾರ್ಗದಲ್ಲಿ ಐದು ಜಂಕ್ಷನ್‌ಗಳಿವೆ. ಎಟಿಸಿಎಸ್ ಅಳವಡಿಕೆಗೂ ಮುನ್ನ ನಾಲ್ಕು ಚಕ್ರದ ವಾಹನಗಳು ಗಂಟೆಗೆ 17.9 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿದ್ದವು. ಹೊಸ ಸಿಗ್ನಲ್ ಅಳವಡಿಕೆ ಬಳಿಕ ವಾಹನಗಳ ವೇಗ ಗಂಟೆಗೆ 20.8 ಕಿ.ಮೀಗೆ ಹೆಚ್ಚಳವಾಗಿದೆ' ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.

'ಐದು ಕಾರಿಡಾರ್‌ಗಳ 72 ಜಂಕ್ಷನ್‌ಗಳಲ್ಲಿ ವಿವಿಧ ಸಮಯಗಳಲ್ಲಿ ಜಿಪಿಎಸ್ ಅಳವಡಿಸಿರುವ ವಾಹನಗಳು ಸಾಗಿರುವುದನ್ನು ವಿಶ್ಲೇಷಿಸಿ ದತ್ತಾಂಶ ಸಿದ್ಧಪಡಿಸಲಾಗಿದೆ. ಸಂಚಾರದ ಆರಂಭ, ಮುಕ್ತಾಯ, ತೆಗೆದುಕೊಂಡ ಸಮಯ, ವೇಗವನ್ನು ಪರಿಗಣಿಸಲಾಗಿದೆ' ಎಂದು ಹೇಳಿದರು.



ಶಾಂತಲಾ ಜಂಕ್ಷನ್‌ನಲ್ಲಿ ಎಟಿಸಿಎಸ್ ಅನ್ನು ಸೋಮವಾರ ಅಳವಡಿಸಲಾಯಿತು ಪ್ರಜಾವಾಣಿ ಚಿತ್ರ: ರಂಜು ಪಿ

₹53 ಕೋಟಿ ಯೋಜನೆಯ ವೆಚ್ಚ

125 ಜಂಕ್ಷನ್‌ಗಳಲ್ಲಿ ಎ.ಐ ಆಧಾರಿತ ಸಿಗ್ನಲ್ ಕಾರ್ಯಾಚರಣೆ

165 (ಮೊದಲ ಹಂತ) ಜಂಕ್ಷನ್‌ಗಳಲ್ಲಿ ಎ.ಐ ಸಿಗ್ನಲ್ ಅಳವಡಿಸುವ ಯೋಜನೆ

ಎಟಿಸಿಎಸ್‌ನಿಂದ ವೇಗ ಹೆಚ್ಚಳ ಎಷ್ಟು?

ರಸ್ತೆ	ಉದ್ದ (ಕಿ.ಮೀ)	ಜಂಕ್ಷನ್	ಎಟಿಸಿಎಸ್‌ಗೆ ಮುನ್ನ (ನಿಮಿಷ)*	ಎಟಿಸಿಎಸ್ ನಂತರ (ನಿಮಿಷ)*	ಶೇಕಡಾವಾರು ಸುಧಾರಣೆ
ಬನ್ನೇರುಘಟ್ಟ ರಸ್ತೆ	5.9	5	17.9	20.8	16
ಸಾರಕ್ಕಿ	2.5	4	10.6	14.2	34
ಹೊಸೂರು ರಸ್ತೆ	3.9	5	9.2	13.7	48
ಹೊರವರ್ತುಲ ರಸ್ತೆ (ಜೆ.ಪಿ.ನಗರ)	4.9	7	12.7	15.6	19
ಜಯನಗರ ಕಾರಿಡಾರ್	4.3	8	8.7	11.7	34
ಬಿಟಿಎಂ ಕಾರಿಡಾರ್	4.3	6	12.2	17.5	43
ಜೆ.ಸಿ.ರಸ್ತೆ	4.9	8	4.8	7.8	61
ಕೆ.ಆರ್.ರಸ್ತೆ	4.5	11	13.8	16.2	18

* ಕಿ.ಮೀ. ಪ್ರತಿ ಗಂಟೆಗೆ

'ವಾಹನಗಳ ಸಂಚಾರ ಸಮಯ ಕಡಿಮೆ'



'ಎಟಿಸಿಎಸ್ ತಂತ್ರಜ್ಞಾನ ಬಳಕೆಯಿಂದ ವಾಹನಗಳ ಸಂಚಾರ ಸಮಯ ಕಡಿಮೆಯಾಗಿರುವುದು ಒಳ್ಳೆಯ ಬೆಳವಣಿಗೆ. ಪ್ರಾಯೋಗಿಕವಾಗಿ 41 ಕಡೆ ಅನುಷ್ಠಾನಗೊಳಿಸಲಾಗಿದ್ದ ಎಟಿಸಿಎಸ್ ಯೋಜನೆಯ ಮುಂದುವರೆದ ಭಾಗವಾಗಿ ನಗರದ 165 ಜಂಕ್ಷನ್‌ಗಳ ಪೈಕಿ 125 ಕಡೆ ನೂತನ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ. ಇದರಿಂದಾಗಿ ಸುಗಮ ಸಂಚಾರ ಮಾತ್ರವಲ್ಲದೆ ಪ್ರಯಾಣದ ಸಮಯ ಸಹ ಕಡಿಮೆಯಾಗುತ್ತಿದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದರು.

'ಎಟಿಸಿಎಸ್ ಅಳವಡಿಸಿರುವ ಕಡೆಗಳಲ್ಲಿ ಶೇಕಡ 20ರಷ್ಟು ವಾಹನ ಸವಾರರ ಪ್ರಯಾಣದ ಅವಧಿ ಕಡಿಮೆಯಾಗಿದೆ. ಒಟ್ಟಾರೆ ಶೇಕಡ 15ಕ್ಕಿಂತ ಹೆಚ್ಚು ಸಂಚಾರ ದಟ್ಟಣೆ ತಗ್ಗಿದೆ. ಎರಡನೇ ಹಂತದಲ್ಲಿ ಉಳಿದ 235 ಜಂಕ್ಷನ್‌ಗಳಲ್ಲಿ ಎಐ ಆಧಾರಿತ ಸಿಗ್ನಲ್ ಅಳವಡಿಸಲಾಗುವುದು' ಎಂದು ವಿವರಿಸಿದರು.



ಕೆಲವು ಜಂಕ್ಷನ್‌ಗಳಲ್ಲಿ ಸಮಸ್ಯೆ

ಎಐ ತಂತ್ರಜ್ಞಾನ ಬಳಸಿಕೊಂಡು ನಗರದ ಹಲವು ಜಂಕ್ಷನ್‌ಗಳಲ್ಲಿ ಎಟಿಸಿಎಸ್ ಅಳವಡಿಕೆ ಮಾಡಲಾಗುತ್ತಿದೆ. ಸಣ್ಣ ಜಂಕ್ಷನ್‌ಗಳಲ್ಲೂ ಕಾಮಗಾರಿ ನಡೆಸಲಾಗುತ್ತಿದೆ. ಕೆಲವು ಜಂಕ್ಷನ್‌ಗಳಲ್ಲಿ ಈ ಎಟಿಸಿಎಸ್ ವೈಜ್ಞಾನಿಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ವಾಹನ ದಟ್ಟಣೆಯನ್ನು ಸರಿಯಾಗಿ ಗ್ರಹಿಸುತ್ತಿಲ್ಲ. ಅಲ್ಲದೇ ಏಕಾಏಕಿ ಹಸಿರು ದೀಪ ಬೆಳಗಿಸುತ್ತವೆ. ಇದರಿಂದ ವಾಹನ ಸವಾರರಿಗೆ ತೊಂದರೆಯಾಗುವ ಸಾಧ್ಯತೆಯಿದೆ. ಅಲ್ಲದೇ ಪಾದಚಾರಿಗಳಿಗೆ ಆಗುತ್ತಿರುವ ಸಮಸ್ಯೆಯನ್ನೂ ಪರಿಹರಿಸಬೇಕು ಎಂದು ವಾಹನ ಸವಾರರು ಆಗ್ರಹಿಸಿದ್ದಾರೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಉದ್ಯಾನ, ಗಿಡ-ಮರಕ್ಕೆ ಸಂಸ್ಕರಿತ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಉದ್ಯಾನಗಳು, ಕೆರೆಗಳು, ರಸ್ತೆ ವಿಭಜಕಗಳಲ್ಲಿರುವ ಗಿಡ–ಮರಗಳಿಗೆ ಸಂಸ್ಕರಿತ ನೀರನ್ನೇ ಬಳಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದರು.



ತುಷಾರ್ ಗಿರಿನಾಥ್

ಅಧಿಕಾರಿಗಳ ಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಗಿಡ–ಮರಗಳಿಗೆ ನೀರು ಪೂರೈಸಲು ಎಷ್ಟು ಟ್ಯಾಂಕರ್‌ಗಳ ಅಗತ್ಯವಿದೆ ಎಂಬುದನ್ನು ಪಟ್ಟಿ ಮಾಡಿ, ಸಂಸ್ಕರಿತ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕು' ಎಂದು ಸೂಚಿಸಿದರು.

ಉದ್ಯಾನಗಳಲ್ಲಿ ಕೊಳವೆಬಾವಿಗಳ ಸ್ಥಿತಿ-ಗತಿಯ ಕುರಿತು ವರದಿ ನೀಡಲು ಸೂಚಿಸಿದ ತುಷಾರ್ ಗಿರಿನಾಥ್, 'ಕೊಳವೆ ಬಾವಿಗಳು ದುರಸ್ತಿಯಲ್ಲಿರುವ ಉದ್ಯಾನಗಳಿಗೆ, ತ್ಯಾಜ್ಯ ನೀರು ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ನೀರನ್ನು ಟ್ಯಾಂಕರ್‌ಗಳ ಮೂಲಕ ಪೂರೈಸಬೇಕು' ಎಂದರು.

ನಗರದಲ್ಲಿ ಮರದ ಎಲೆಗಳು ಉದುರುತ್ತಿದ್ದು, ಅವುಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನಗರದ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದಲೂ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ 1,280 ಉದ್ಯಾನಗಳಲ್ಲಿ 100 ಉದ್ಯಾನಗಳಲ್ಲಿ ಎಲೆ ಗೊಬ್ಬರ ತಯಾರಿಕಾ ಘಟಕಗಳ (ಲೀಫ್ ಕಾಂಪೋಸ್ಟರ್) ನಿರ್ಮಾಣ ಶೀಘ್ರ ಪೂರ್ಣಗೊಳಿಸಿ, ಉದುರಿದ ಎಲೆಗಳನ್ನು ಸ್ಥಳದಲ್ಲಿಯೇ ಗೊಬ್ಬರವನ್ನಾಗಿಸಬೇಕು. ಅದನ್ನು ಉದ್ಯಾನಗಳಲ್ಲಿಯೇ ಬಳಸಿಕೊಳ್ಳಬೇಕು ಎಂದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತರಾದ ಸತೀಶ್, ಅರ್ಚನಾ, ರಮ್ಯಾ, ಕರೀಗೌಡ, ಸ್ನೇಹಲ್, ರಮೇಶ್, ದಿಗ್ವಿಜಯ್ ಬೋಡ್ಕೆ, ಗಿರೀಶ್ ಉಪಸ್ಥಿತರಿದ್ದರು.

ಪ್ರಾಣಿವಧೆ ನಿಷೇಧ

ಬೆಂಗಳೂರು: ಮಹಾ ಶಿವರಾತ್ರಿ ಪ್ರಯುಕ್ತ ಫೆಬ್ರುವರಿ 26ರ ಬುಧವಾರದಂದು ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

'ಪುಸ್ತಕ ಮೇಳ: ಶಾಸಕರಿಗೆ ಅವಕಾಶ'

ಪುಸ್ತಕ ಖರೀದಿಸಿ ಶಾಲಾ–ಕಾಲೇಜುಗಳಿಗೆ ನೀಡಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ಸಚಿವಾಲಯದ ವತಿಯಿಂದ ವಿಧಾನಸೌಧದ ಆವರಣದಲ್ಲಿ ಇದೇ 27ರಿಂದ ಮಾರ್ಚ್ 3ರವರೆಗೆ ಆಯೋಜಿಸಲಾಗಿರುವ 'ಪುಸ್ತಕ ಮೇಳ'ದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರಸಕ್ತ ಸಾಲಿನ ಅನುದಾನದಲ್ಲಿ ₹2 ಲಕ್ಷ ಮಿತಿಯೊಳಗೆ ಪುಸ್ತಕಗಳನ್ನು ಖರೀದಿಸಿ ತಮ್ಮ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲಾ-ಕಾಲೇಜುಗಳಿಗೆ ನೀಡಲು ಅವಕಾಶ ಕಲ್ಪಿಸಲಾಗಿದೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪುಸ್ತಕ ಮೇಳವನ್ನು 27ರಂದು ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ, ಸಚಿವರು, ಸಾಹಿತಿಗಳು ಭಾಗವಹಿಸಲಿದ್ದಾರೆ' ಎಂದರು.

'ವಿಧಾನಸೌಧದ ಆವರಣದಲ್ಲಿ 28ರಿಂದ ಮಾರ್ಚ್ 2ರವರೆಗೆ ಎರಡು ವೇದಿಕೆಗಳಲ್ಲಿ ಸಂವಾದ ಕಾರ್ಯಕ್ರಮಗಳು, ಕವಿಗೋಷ್ಠಿ, ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿವೆ. ವಿವಿಧ ಲೇಖಕರ ಪುಸ್ತಕಗಳ ಬಿಡುಗಡೆಗೂ ಅವಕಾಶ ಮಾಡಿಕೊಡಲಾಗುವುದು. ಈ ಎಲ್ಲ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗುವುದು' ಎಂದರು.

'216ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲು ಬೇಡಿಕೆಯಿದೆ. 150 ಮಳಿಗೆ ತೆರೆಯಲು ಮಾತ್ರ ಅವಕಾಶವಿದ್ದು, ವಿವಿಧ ಅಕಾಡೆಮಿಗಳ ಮಳಿಗೆಗಳು, ಖಾಸಗಿ ಮಳಿಗೆಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ಮಾರ್ಚ್ 3ರಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪುಸ್ತಕ ಮೇಳ ವೀಕ್ಷಿಸಲಿದ್ದಾರೆ' ಎಂದೂ ತಿಳಿಸಿದರು.

'ಪುಸ್ತಕ ಮಳಿಗೆ ತೆರೆಯಲು ರಾಜ್ಯ, ಹೊರರಾಜ್ಯ, ಅಂತರರಾಷ್ಟ್ರೀಯ ಮಟ್ಟದ ಪ್ರಕಾಶಕರು ಅವಕಾಶ ಕೋರಿದ್ದಾರೆ. ರಿಯಾಯಿತಿ ದರದಲ್ಲಿ ಪುಸ್ತಕಗಳು ಲಭ್ಯವಾಗಲಿದೆ. ಮೇಳದ ಅಂಗವಾಗಿ ಐದು ಮಂದಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು' ಎಂದರು.

'ಪ್ರತಿ ದಿನ ಸಂಜೆ 5 ಗಂಟೆಯ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಮಾರ್ಚ್ 2ರಂದು ಸಾಧುಕೋಕಿಲ ಅವರಿಂದ ಸಂಗೀತ ರಸಸಂಜೆ ಆಯೋಜಿಸಲಾಗಿದೆ' ಎಂದೂ ಮಾಹಿತಿ ನೀಡಿದರು.



ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ಶಾಲಾ ವಾಹನ ತಪಾಸಣೆ ನಡೆಸಿದರು

65 ಶಾಲಾ ವಾಹನ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಅನುಸರಿಸದೇ ನಗರದಲ್ಲಿ ಸಂಚರಿಸುತ್ತಿದ್ದ 65 ಶಾಲಾ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಸಾರಿಗೆ ಆಯುಕ್ತರು ತಿಳಿಸಿದ್ದಾರೆ.

'ತೆರಿಗೆ ಪಾವತಿಸದೆ, ಅರ್ಹತಾ ಪತ್ರ ನವೀಕರಿಸದೇ ರಹದಾರಿ ನಿಯಮಗಳನ್ನು ಉಲ್ಲಂಘಿಸಿ ಶಾಲಾ ವಾಹನಗಳು ಸಂಚರಿಸುತ್ತಿರುವುದು ಗಮನಕ್ಕೆ ಬಂದತ್ತು. ಇದಕ್ಕಾಗಿಯೇ ಸಾರಿಗೆ ಇಲಾಖೆಯ ಜಂಟಿ ಆಯುಕ್ತರ ನೇತೃತ್ವದಲ್ಲಿ 10 ತಂಡಗಳನ್ನು ರಚಿಸಲಾಗಿತ್ತು. ಕಾರ್ಯಾಚರಣೆ ವೇಳೆ 500ಕ್ಕೂ ಹೆಚ್ಚು ಶಾಲಾ ವಾಹನಗಳನ್ನು ತಪಾಸಣೆ ನಡೆಸಲಾಯಿತು. 231 ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇವೆ ಕಾಯಂಗೆ ಪೌರಕಾರ್ಮಿಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಪೌರಕಾರ್ಮಿಕರು ನೇರಪಾವತಿ ಮತ್ತು ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಕೂಡಲೇ ನೇಮಕಾತಿ ಮಾಡಿಕೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ನಾರಾಯಣ, 'ಬಿಬಿಎಂಪಿಯಲ್ಲಿ ನೇರ ಪಾವತಿ ಪೌರಕಾರ್ಮಿಕರ ಸೇವೆಯನ್ನು ಕಾಯಂ ಮಾಡುವ ಪ್ರಕ್ರಿಯೆ ನಿಧಾನಗತಿಯಲ್ಲಿ ನಡೆಯುತ್ತಿದೆ. ಬಿಬಿಎಂಪಿ ಸೇರಿದಂತೆ ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಸ ಸಾಗಣಿಕೆ, ಕಸ ಸಂಗ್ರಹಿಸುವ ಲೋಡರ್ಸ್, ಕ್ಲೀನರ್ಸ್, ಕಸದ ವಾಹನ ಚಲಾಯಿಸುವ ಚಾಲಕರು ಗುತ್ತಿಗೆ ಪದ್ಧತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೆಲ್ಲರನ್ನೂ ನೇರನೇಮಕ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

'ರಾಜ್ಯದ 10 ಮಹಾನಗರ ಪಾಲಿಕೆಗಳ ಒಳಚರಂಡಿ ಸ್ವಚ್ಛತಾ ಸಹಾಯಕರು ಹಾಗೂ ಜೆಟ್ಟಿಂಗ್–ಸಕ್ಕಿಂಗ್ ಯಂತ್ರಗಳ ಚಾಲಕರ ಸೇವೆಯನ್ನು ಕಾಯಂಗೊಳಿಸಲು ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿದರೂ, ನಗರಾಭಿವೃದ್ಧಿ ಇಲಾಖೆ ಮತ್ತು ಪೌರಾಡಳಿತ ನಿರ್ದೇಶನಾಲಯ ವಿಳಂಬ ಮಾಡುತ್ತಿವೆ. ಎಲ್ಲ ಪೌರಕಾರ್ಮಿಕರಿಗೆ ಗೃಹಭಾಗ್ಯ, ವಸತಿ ಯೋಜನೆಯನ್ನು ವಿಸ್ತರಿಸಬೇಕು. ಆರೋಗ್ಯ ಭದ್ರತೆ ಮತ್ತು ಸುರಕ್ಷತೆಗೆ ನಗದುರಹಿತ ಆರೋಗ್ಯ ಕಾರ್ಡ್ ನೀಡಬೇಕು. ಸರ್ಕಾರಿ–ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಪಡೆಯಲು ವ್ಯವಸ್ಥೆ ಮಾಡಬೇಕು' ಎಂದು ಆಗ್ರಹಿಸಿದರು.

'ನಮ್ಮ ಸಂಘ 25 ವರ್ಷ ಪೂರೈಸಿದ್ದು, ಏ. 3ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಪೌರಕಾರ್ಮಿಕರ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದರು.

ವಿದ್ಯುತ್ ಚಾಲಿತ ವಾಹನ ದೇಣಿಗೆ ನೀಡಿದ ಎಸ್‌ಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಅಪಘಾತ ಹಾಗೂ ತುರ್ತು ಚಿಕಿತ್ಸಾ ಕೇಂದ್ರಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ₹38.16 ಲಕ್ಷ ಮೌಲ್ಯದ 4 ವಿದ್ಯುತ್ ಚಾಲಿತ ವಾಹನಗಳನ್ನು ದೇಣಿಗೆ ನೀಡಿದೆ.

ಬ್ಯಾಂಕ್‌ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಅಡಿ, ವಿಕ್ಟೋರಿಯ ಆಸ್ಪತ್ರೆಯ ಆವರಣದಲ್ಲಿ, ರೋಗಿಗಳು, ರೋಗಿಗಳ ಪರಿಚಾರಕರು ಹಾಗೂ ವೈದ್ಯರಿಗೆ ನೆರವಾಗಲು 4 ವಿದ್ಯುತ್ ಚಾಲಿತ ವಾಹನಗಳನ್ನು (2 ಸ್ಟ್ರೆಚರ್ ಸಹಿತ, 2 ಸ್ಟ್ರೆಚರ್ ರಹಿತ) ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಜೂಹಿ ಸ್ಮಿತಾ ಸಿನ್ಹಾ ಅವರು ಹಸ್ತಾಂತರಿಸಿದರು. ಎಸ್‌ಬಿಐ ಬೆಂಗಳೂರು ವೃತ್ತದ ಪ್ರಧಾನ ವ್ಯವಸ್ಥಾಪಕ (ನೆಟ್‌ವರ್ಕ್-1) ಸುಶೀಲ್ ಕುಮಾರ್ ಸಿಂಗ್, ಅಪಘಾತ ಮತ್ತು ತುರ್ತು ಕೇಂದ್ರದ ವಿಶೇಷ ಅಧಿಕಾರಿ ಡಾ. ಬಾಲಾಜಿ ಎಸ್ ಪೈ, ಬಿಎಂಸಿಆರ್‌ಐನ ಪ್ರಾಂಶುಪಾಲರು ಹಾಗೂ ನೋಡಲ್ ಅಧಿಕಾರಿ ಡಾ. ಅಶೀಮಾ ಬಾನು ಇದ್ದರು.



ಬೆಂಗಳೂರಿನ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮತ್ತು ಅಪಘಾತ ಹಾಗೂ ತುರ್ತು ಚಿಕಿತ್ಸಾ ಕೇಂದ್ರದ ಅಧಿಕಾರಿಗಳಿಗೆ ಎಸ್‌ಬಿಐ ಅಧಿಕಾರಿಗಳು ನಾಲ್ಕು ವಿದ್ಯುತ್ ಚಾಲಿತ ವಾಹನಗಳನ್ನು ಹಸ್ತಾಂತರ ಮಾಡಿದರು

ರಾಜಾಜಿನಗರ: ಆಟದ ಮೈದಾನದಲ್ಲಿದ್ದ ಕಸ ತೆರವು



ರಾಜಾಜಿನಗರದ ರಾಮ ಮಂದಿರ ಆಟದ ಮೈದಾನವನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ಸ್ವಚ್ಛಗೊಳಿಸಿದರು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ರಾಜಾಜಿನಗರದ ರಾಮ ಮಂದಿರ ಆಟದ ಮೈದಾನದಲ್ಲಿನ ಕಸದ ರಾಶಿಯನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ತೆರವುಗೊಳಿಸಿದ್ದಾರೆ.

'ಪ್ರಜಾವಾಣಿ'ಯ ಫೆಬ್ರುವರಿ 24ರ ಸಂಚಿಕೆಯ ಕುಂದು ಕೊರತೆ ವಿಭಾಗದಲ್ಲಿ 'ಆಟದ ಮೈದಾನದಲ್ಲಿ ಕಸದ ರಾಶಿ' ಎಂಬ ಶೀರ್ಷಿಕೆ ಅಡಿಯಲ್ಲಿ ಸಾರ್ವಜನಿಕರ ಅಹವಾಲು ಪ್ರಕಟವಾಗಿತ್ತು. ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಸುರೇಶ್ ಕುಮಾರ್ ಅವರು ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಗಮನಿಸಿದ್ದು, ಆಟದ ಮೈದಾನ ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಬಿಬಿಎಂಪಿಯ ಅಧಿಕಾರಿಗಳಿಗೆ ಸೂಚಿಸಿದ್ದರು.

'ಆಟದ ಮೈದಾನದಲ್ಲಿದ್ದ ಕಸದ ರಾಶಿಯನ್ನು ತೆರವುಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ತಕ್ಷಣವೇ ಕಾರ್ಯಪ್ರವೃತ್ತರಾದ ಬಿಬಿಎಂಪಿ ಸಿಬ್ಬಂದಿ ಆಟದ ಮೈದಾನವನ್ನು ಸ್ವಚ್ಛಗೊಳಿಸಿದ್ದಾರೆ' ಎಂದು ಸುರೇಶ್ ಕುಮಾರ್ ಎಸ್. ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಫೋಟೊಗಳನ್ನು ಹಂಚಿಕೊಂಡಿದ್ದಾರೆ.

ಹೊಸ ತಳಿ, ನವೀನ ತಂತ್ರಜ್ಞಾನ, ಮೌಲ್ಯವರ್ಧಿತ ಉತ್ಪನ್ನಗಳ ಅನಾವರಣ

ಹೆಸರಘಟ್ಟ: 27ರಿಂದ ತೋಟಗಾರಿಕೆ ಮೇಳ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಇಲ್ಲಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ(ಐಐಎಚ್‌ಆರ್) ಆವರಣದಲ್ಲಿ ಇದೇ 27ರಿಂದ ಮಾರ್ಚ್ 1ರವರೆಗೆ 'ಅಂತರರಾಷ್ಟ್ರೀಯ ತೋಟಗಾರಿಕೆ ಮೇಳ 2025' ಆಯೋಜಿಸಲಾಗಿದೆ.

ಹೊಸ ತಳಿಗಳು, ನೂತನ ತಂತ್ರಜ್ಞಾನ, ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಸೇರಿದಂತೆ ತೋಟಗಾರಿಕೆ ಕ್ಷೇತ್ರದ ಹಲವು ಸಂಶೋಧನೆಗಳು ಮೇಳದಲ್ಲಿ ಅನಾವರಣಗೊಳ್ಳಲಿವೆ.

'ವಿಕಸಿತ ಭಾರತಕ್ಕಾಗಿ ತೋಟಗಾರಿಕೆ – ಪೋಷಣೆ, ಸಬಲೀಕರಣ ಮತ್ತು ಜೀವನೋಪಾಯ' ಶೀರ್ಷಿಕೆ ಅಡಿಯಲ್ಲಿ ಈ ಬಾರಿಯ ಮೇಳವನ್ನು ಆಯೋಜಿಸುತ್ತಿದೆ' ಎಂದು ಐಐಎಚ್‌ಆರ್ ನಿರ್ದೇಶಕ ತುಷಾರ್ ಕಾಂತಿ ಬೆಹೆರಾ ತಿಳಿಸಿದರು.

ಉತ್ತಮ ಪೌಷ್ಟಿಕಾಂಶಯುತ್ತ ಬೆಳೆ ಬೆಳೆಯುವ ತಂತ್ರಜ್ಞಾನಗಳನ್ನು ಮೇಳದಲ್ಲಿ ಪರಿಚಯಿಸಲಾಗುತ್ತದ ಎಂದು ಅವರು ವಿವರಿಸಿದರು.



ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಪ್ರದರ್ಶಿಸಲಿರುವ ಯಾಂತ್ರೀಕೃತ ಸಸಿ ಉತ್ಪಾದನಾ ಘಟಕದ ಕುರಿತು ವಿವರಿಸಿದ ವಿಜ್ಞಾನಿ ಶಂಕರ್ ಹೆಬ್ಬಾರ್
ಪ್ರಜಾವಾಣಿ ಚಿತ್ರ

250 ಮಳಿಗೆಗಳು: ಮೇಳದಲ್ಲಿ 250ಕ್ಕೂ ಹೆಚ್ಚು ಸಂಸ್ಥೆಗಳು ಪಾಲ್ಗೊಳ್ಳಲಿವೆ. 190ಕ್ಕೂ ಹೆಚ್ಚು ವೈವಿಧ್ಯಮಯ ಮಳಿಗೆಗಳಿರುತ್ತವೆ. 75,000ಕ್ಕೂ ಹೆಚ್ಚಿನ ರೈತರು ಮತ್ತು ತೋಟಗಾರಿಕಾ ಕ್ಷೇತ್ರದ ಇತರೆ ಭಾಗಿದಾರರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಮೇಳದ ಆಯೋಜನ ಕಾರ್ಯದರ್ಶಿ ಶಂಕರ್ ಹೆಬ್ಬಾರ್ ತಿಳಿಸಿದರು.

'20 ರಾಜ್ಯಗಳಿಂದ ರೈತರು ಪಾಲ್ಗೊಳ್ಳಲಿದ್ದಾರೆ. ನಮ್ಮ ರಾಜ್ಯದ 30 ಜಿಲ್ಲೆಗಳಿಂದಲೂ ರೈತರು ಮೇಳದಲ್ಲಿ ಭಾಗವಹಿಸಲಿದ್ದಾರೆ. ಹೊರ ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಮಳಿಗೆಗಳಲ್ಲಿ ಸಸಿಗಳು ಮತ್ತು ಬೀಜಗಳ ಮಾರಾಟ ವ್ಯವಸ್ಥೆ ಮಾಡಲಾಗಿದೆ' ಎಂದು ಮೇಳದ ಪ್ರಚಾರ ಸಮಿತಿ ಅಧ್ಯಕ್ಷ ನಂದೀಶ್ ಪಿ ತಿಳಿಸಿದರು.

ಬಿಡುಗಡೆಯಾಗುವ ಹೊಸ ತಳಿಗಳು

- ಸಮೃದ್ಧಿ ಕಲ್ಲಂಗಡಿ ಸೆಲೆಕ್ಷನ್–4
- ಅಂಟುಕಾಂಡ ಕೊಳೆರೋಗ ನಿರೋಧಕ ಸೋರೆಕಾಯಿ
- ಎಲೆ ಸುರುಳಿ ನಂಜಾಣು ರೋಗ ನಿರೋಧಕ ಮೆಣಸಿನಕಾಯಿ
- ಅವಕಾಡೊ (ಬೆಣ್ಣೆ ಹಣ್ಣು)
- ಜಾವಾ ರೋಸ್ ಆಪಲ್
- ಅರ್ಕ ಹಲಸಿನಕಾಯಿ

ಲಾಕಪ್ ಡೆತ್ ಆರೋಪ ಪೋಷಕರ ಪ್ರತಿಭಟನೆ

ಕಲಬುರಗಿ: 'ಮಹಿಳೆ ನಾಪತ್ತೆ ಪ್ರಕರಣ ವಿಚಾರಣೆ ನೆಪದಲ್ಲಿ ವಶಕ್ಕೆ ಪಡೆದಿದ್ದ ಕೃಷ್ಣ ವಿಠಲ ರಾಠೋಡ (26) ಪೊಲೀಸರ ದೌರ್ಜನ್ಯದಿಂದ ಮೃತಪಟ್ಟಿದ್ದಾನೆ' ಎಂದು ಆರೋಪಿಸಿ ಆತನ ಪೋಷಕರು ಹಾಗೂ ಸಂಬಂಧಿಕರು ನಗರ ಪೊಲೀಸ್ ಆಯುಕ್ತರ ಕಚೇರಿ ಎದುರು ಸೋಮವಾರ ರಾತ್ರಿ ಪ್ರತಿಭಟಿಸಿದರು.

'ಮಿಜಗುರಿ ಕ್ರಾಸ್‌ನಿಂದ ಮೈನಾಬಾಯಿ ಎಂಬ ಮಹಿಳೆ ನಾಪತ್ತೆಯಾಗಿದ್ದ ಪ್ರಕರಣದಲ್ಲಿ ರೋಜಾ ಠಾಣೆಯ ಪೊಲೀಸರು ಹಡಗಿಲ್ ಹಾರುತಿ ಗ್ರಾಮದ ಕೃಷ್ಣ ರಾಠೋಡನನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದರು. ಪೊಲೀಸರ ವಶದಲ್ಲಿದ್ದಾಗ ಅನುಮಾನಾಸ್ಪದವಾಗಿ ಆತ ಮೃತಪಟ್ಟಿದ್ದಾನೆ. ಆತನ ಸಹೋದರ, ತಾಯಿಯ ಸಮ್ಮುಖದಲ್ಲಿ ಪೊಲೀಸರು ಒತ್ತಾಯದಿಂದ ಶವವನ್ನು ಸುಟ್ಟು ಹಾಕಿಸಿದ್ದಾರೆ' ಎಂದು ಬಂಜಾರ ಸಮುದಾಯದ ಮುಖಂಡರು ಆರೋಪಿಸಿದ್ದಾರೆ.

'ಯುವಕನ ಸಾವಿಗೆ ನ್ಯಾಯ ಕೊಡಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು' ಎಂದು ಒತ್ತಾಯಿಸಿ ಬಂಜಾರ ಸಮುದಾಯದ ಮುಖಂಡರು, ಕುಟುಂಬಸ್ಥರು ಡಿಸಿಪಿ ಕನಿಕಾ ಸಿಕ್ರಿವಾಲ್ ಅವರಿಗೆ ಮನವಿ ಮಾಡಿದರು.

ಲಾಕಪ್ ಡೆತ್: 'ಯುವಕನನ್ನು ಠಾಣೆಗೆ ಕರೆದೊಯ್ದು ಪೊಲೀಸರು ತಲೆ, ಕಾಲಿಗೆ ಬಲವಾಗಿ ಹೊಡೆದಿದ್ದಾರೆ. ಪೊಲೀಸರ ಹೊಡೆತದಿಂದ ಸಾವನ್ನಪ್ಪಿದ್ದು, ಪ್ರಕರಣವನ್ನು ಮುಚ್ಚಿ ಹಾಕಲು ಯುವಕನ ತಾಯಿ ಹಾಗೂ ತಮ್ಮನನ್ನು ಹೆದರಿಸಿದ್ದಾರೆ. ಹೃದಯಘಾತದಿಂದ ಸಾವನ್ನಪ್ಪಿದ್ದಾನೆ ಎಂದು ಹೇಳದಿದ್ದರೆ ಡಬಲ್ ಮರ್ಡರ್ ಕೇಸ್ ಹಾಕುವುದಾಗಿ ಬೆದರಿಸಿ, ತಮಗೆ ಬೇಕಾದಂತೆ ಮೃತನ ತಮ್ಮನಿಂದ ಹೇಳಿಕೆ ಪಡೆದುಕೊಂಡಿದ್ದಾರೆ' ಎಂದು ಸಮುದಾಯದ ಮುಖಂಡ ರಾಮಚಂದ್ರ ಜಾಧವ ಆರೋಪಿಸಿದರು.

'ಲಾಕಪ್ ಡೆತ್ ಮುಚ್ಚಿಹಾಕಲು ಬೆದರಿಕೆ ಜತೆಗೆ ತಾಯಿ ಮತ್ತು ತಮ್ಮನಿಗೆ ಹಣವನ್ನೂ ಕೊಟ್ಟಿದ್ದಾರೆ. ತರಾತುರಿಯಲ್ಲಿ ಶವವನ್ನು ನಗರದಲ್ಲೇ ಸುಟ್ಟು ಹಾಕಿದ್ದಾರೆ. ತಪ್ಪಿತಸ್ಥರ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲಿಸಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು' ಎಂದು ಆಗ್ರಹಿಸಿದರು.

ಬಿಬಿಎಂಪಿ ಚುನಾವಣೆ: ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಕೆ

ಸುಪ್ರೀಂ ಕೋರ್ಟ್‌ ಮೆಟ್ಟಿಲೇರಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಕೂಡಲೇ ಚುನಾವಣೆ ನಡೆಸಬೇಕೆಂದು ನಿರ್ದೇಶಿಸಲು ಕೋರಿ ಬಿಜೆಪಿಯು ಸುಪ್ರೀಂ ಕೋರ್ಟ್‌ಗೆ ಸೋಮವಾರ ಅರ್ಜಿ ಸಲ್ಲಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಈ ಸಂಬಂಧ ಸಮಿತಿಯೊಂದನ್ನು ರಚಿಸಿದ್ದರು. ಈ ಸಮಿತಿಯು ಹಿರಿಯ ವಕೀಲ ಸಂದೀಪ್ ಪಾಟೀಲ ಮೂಲಕ ಸುಪ್ರೀಂ ಕೋರ್ಟ್‌ಗೆ ವಕಾಲತ್ತು ಸಲ್ಲಿಸಿ ಮನವಿ ಮಾಡಿದೆ. ಮಾಜಿ ಮೇಯರ್‌ಗಳಾದ ಎಂ. ಗೌತಮ್, ಆರ್. ನಾರಾಯಣಸ್ವಾಮಿ, ಮಾಜಿ ಉಪ ಮೇಯರ್ ಎಸ್. ಹರೀಶ್ ಅವರು ಸಹ ಮಾಡಿ ಈ ವಕಾಲತ್ತು ಸಲ್ಲಿಸಿದ್ದಾರೆ.



ಬಿಬಿಎಂಪಿ ಸದಸ್ಯರ ಅಧಿಕಾರ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿತ್ತು. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ–2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಸಂಬಂಧ, ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲೆಂದೇ ನೂತನ ಕಾನೂನನ್ನು ಅಂಗೀಕರಿಸಲಾಗಿದೆ ಎಂದು ಮೇಲ್ಮನವಿಯಲ್ಲಿ ಹೇಳಿತ್ತು.

ಅಲ್ಲದೆ, ಹೊಸದಾಗಿ ಜಾರಿಗೊಳಿಸಲಾದ ಕಾಯ್ದೆಯನ್ನು ರಿಟ್ ಅರ್ಜಿಯ ಮೂಲಕ ಪ್ರಶ್ನಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲ ಎಂದೂ ಸರ್ಕಾರ ಹೇಳಿತ್ತು.

ವಾರ್ಡ್‌ಗಳ ಪುನರ್ ವಿಂಗಡಣೆ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಅಂತಿಮಗೊಳಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ ಕೂಡಲೇ ಬಿಬಿಎಂಪಿಯ ಚುನಾವಣೆ ನಡೆಸುವಂತೆ ಕರ್ನಾಟಕ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮೇ 20ರಂದು ಸೂಚಿಸಿತ್ತು. ಬಿಬಿಎಂಪಿಯ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಒಬಿಸಿ ಮೀಸಲಾತಿ ನಿರ್ಣಯದ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರಕ್ಕೆ ಎಂಟು ವಾರಗಳ ಕಾಲಾವಕಾಶ ನೀಡಿತ್ತು. ವಾರ್ಡ್‌ಗಳ ಮೀಸಲಾತಿಯ ಅಧಿಸೂಚನೆಯನ್ನು ವಾರದೊಳಗೆ ಪ್ರಕಟಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 2022ರಲ್ಲಿ ನಿರ್ದೇಶನ ನೀಡಿತ್ತು.

ಇಂದು ಅರ್ಜಿ ವಿಚಾರಣೆ

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದ ಅರ್ಜಿ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರ ನಡೆಯಲಿದೆ.

ಬಿಬಿಎಂಪಿ ಬದಲು 2–7 ಪಾಲಿಕೆ?

ಒಂದನೇ ಪುಟದಿಂದ...

‘ಬೆಂಗಳೂರು ನಗರ ದೇಶದ ಆರ್ಥಿಕತೆಯ ಕೇಂದ್ರ ಬಿಂದು. ಹಲವರಿಗೆ ಕನಸಿನ ನಗರ. ಅದಕ್ಕೆ ಪೂರಕವಾದ ಆಡಳಿತ ಶಕ್ತಿ, ಜನರಿಗೆ ಅಗತ್ಯವಾದ ಸವಲತ್ತು ಕೊಡುವ ಆಡಳಿತಾತ್ಮಕ ಮಾದರಿಯೊಂದನ್ನು ಸಿದ್ಧಪಡಿಸಬೇಕಿತ್ತು. ಹಾಲಿ ಬಿಬಿಎಂಪಿಯಿಂದ ಜನರಿಗೆ ಸಹಾಯ ಆಗುತ್ತಿದೆಯೇ ಎಂದು ಕೇಳಿದಾಗ ಸಾರ್ವಜನಿಕರು ಪರ್ಯಾಯ ವ್ಯವಸ್ಥೆ ಬೇಕೆಂದು ಒಕ್ಕೊರಲಿನ ಸಲಹೆ ನೀಡಿದ್ದಾರೆ. ಒಂದೇ ಪಾಲಿಕೆಯಿಂದ ಅಭಿವೃದ್ಧಿ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ’ ಎಂದರು.

2ರಿಂದ 7 ನಗರ ಪಾಲಿಕೆಗಳು	100 ವಾರ್ಡ್‌ನಿಂದ 125 ವಾರ್ಡ್ ಪ್ರತಿ ನಗರ ಪಾಲಿಕೆಗಳ ವ್ಯಾಪ್ತಿ
• ಜೂನ್, 2025 ವಾರ್ಡ್‌ಗಳ ಗಡಿ ನಿಗದಿಗೆ ಗಡುವು • ಜುಲೈ, 2025 ಪಾಲಿಕೆಗಳಿಗೆ ಚುನಾವಣೆ	30 ತಿಂಗಳು ಮೇಯರ್ ಅಧಿಕಾರ ಅವಧಿ

‘ಸದ್ಯ ಬಿಬಿಎಂಪಿ 870 ಚದರ ಕಿ.ಮೀ. ವ್ಯಾಪ್ತಿಯಲ್ಲಿದ್ದು, 1.51 ಕೋಟಿ ಜನಸಂಖ್ಯೆಯಿದೆ. ಬೆಂಗಳೂರಿನಲ್ಲಿರುವ ವಿವಿಧ ನಗರ ಮೂಲಸೌಕರ್ಯ ಕಲ್ಪಿಸುವ ಸಂಸ್ಥೆಗಳ ಮಧ್ಯೆ ಸಮನ್ವಯ ಇಲ್ಲ. ಸಮನ್ವಯ ಸಾಧಿಸಲು ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ರಚನೆ ಮಾಡಬೇಕಿದೆ. ವಿಧಾನಸಭಾ ಕ್ಷೇತ್ರವಾರು ‘ಸಮಾಲೋಚನಾ ಸಮಿತಿ’ ರಚಿಸಲೂ ಸಲಹೆ ನೀಡಿದ್ದೇವೆ. ಸಣ್ಣ ಪಾಲಿಕೆಗಳನ್ನು ರಚಿಸಿ ಪ್ರತಿ ಪಾಲಿಕೆಗಳಲ್ಲಿ ಲೆಕ್ಕಪರಿಶೋಧನೆ ಮಾಡಬೇಕೆಂದು ಶಿಫಾರಸು ಮಾಡಿದ್ದೇವೆ. ಮೇಯರ್ ಅಧಿಕಾರಾವಧಿ 30 ತಿಂಗಳು ಇರಬೇಕು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಲಹೆ ನೀಡಿದ್ದೇವೆ’ ಎಂದು ಮಾಹಿತಿ ನೀಡಿದರು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಮುಖ್ಯಮಂತ್ರಿ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರು ನಗರಾಭಿವೃದ್ಧಿ ಸಚಿವರು ಪ್ರಾಧಿಕಾರದ ಉಪಾಧ್ಯಕ್ಷರಾಗಿರುತ್ತಾರೆ. ಮೆಟ್ರೊ, ಬಿಡಿಎ, ಜಲಮಂಡಳಿ ಯಥಾರೀತಿ ಮುಂದುವರಿಯಲಿವೆ. ಪಾಲಿಕೆ ವಿಂಗಡಣೆ ಮಾಡುವಾಗ ಆದಾಯ ಸಂಗ್ರಹವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಹೀಗೆ ರಚನೆಯಾಗುವ ಪಾಲಿಕೆಗಳಿಗೆ ಸಂಪೂರ್ಣ ಸ್ವಾಯತ್ತೆ ಇರಬೇಕು. ಆದಾಯ ಕೊರತೆ ಆಗದಂತೆ ಪಾಲಿಕೆ ರಚನೆ ಮಾಡಲು ಸಲಹೆ ಮಾಡಿದ್ದೇವೆ’ ಎಂದರು.

ಬಿಜೆಪಿಯವರಿಂದ ಸಮ್ಮತಿ: ರಿಜ್ವಾನ್ ಅರ್ಷದ್

‘ಸಮಿತಿಯಲ್ಲಿರುವ ಬಿಜೆಪಿ ಸದಸ್ಯರೂ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಎಲ್ಲರೂ ವರದಿಗೆ ಸಹಿ ಮಾಡಿದ್ದಾರೆ. ಈ ಹಿಂದೆ ಮಂಡಿಸಿದ್ದ ಮಸೂದೆಯಲ್ಲಿ ಪಾಲಿಕೆ ವ್ಯಾಪ್ತಿಯ ಆದಾಯವು ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ಕ್ಕೆ ಬರುವ ಅಂಶ ಇತ್ತು. ಅದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಆಯಾ ಪಾಲಿಕೆಗೆ ನೇರವಾಗಿ ಆದಾಯ ಸಂದಾಯ ಆಗಬೇಕು ಎಂಬ ಬಿಜೆಪಿಯವರ ಸಲಹೆಯನ್ನು ಒಪ್ಪಿ ವರದಿಯಲ್ಲಿ ಶಿಫಾರಸು ಮಾಡಿದ್ದೇವೆ’ ಎಂದು ಶಾಸಕ ರಿಜ್ವಾನ್ ಅರ್ಷದ್ ತಿಳಿಸಿದರು. ‘ಹೊಸ ಪಾಲಿಕೆಗಳಿಗೆ ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಬೆಂಗಳೂರು ಪಶ್ಚಿಮ... ಹೀಗೆ ಹೆಸರು ಇರಬೇಕು. ಆದಾಯ ಸಂಗ್ರಹದ ಮಾನದಂಡದ ಆಧಾರದಲ್ಲಿ ಪಾಲಿಕೆಗಳನ್ನು ರಚನೆ ಮಾಡಬೇಕು. ಸಂಪೂರ್ಣ ಅಭಿವೃದ್ಧಿ ಹೊಂದಿರುವ ಗ್ರಾಮಗಳನ್ನು ಪಾಲಿಕೆಗೆ ಸೇರಿಸಬಹುದು ಎಂದೂ ಸಲಹೆ ನೀಡಿದ್ದೇವೆ’ ಎಂದರು.



ಕನಕಪುರ ಆರ್‌ಇಎಸ್ ಸಂಸ್ಥೆ ಮುಂಭಾಗದಲ್ಲಿ ಕುಸಿದು ಬಿದ್ದ ನಿರ್ಮಾಣ ಹಂತದ ಕಮಾನು ಗೋಪುರದ ತೆರವು ಕಾರ್ಯಾಚರಣೆ ನಡೆಯಿತು

ಕನಕಪುರ: ಹತ್ತು ಕಾರ್ಮಿಕರಿಗೆ ಗಾಯ

ಕುಸಿದ ಶಾಲಾ ಕಮಾನು ಗೋಪುರ; ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ: ಇಲ್ಲಿಯ ಆರ್‌ಇಎಸ್ ಶಿಕ್ಷಣ ಸಂಸ್ಥೆಯ ನಿರ್ಮಾಣ ಹಂತದ ಸ್ವಾಗತ ಕಮಾನಿನ ಗೋಪುರ ಸೋಮವಾರ ಕುಸಿದ ಪರಿಣಾಮ ಕಟ್ಟಡ ಕಾರ್ಮಿಕ ಸಾವಿಗೀಡಾಗಿದ್ದು, ಹತ್ತು ಕಾರ್ಮಿಕರು ಗಾಯಗೊಂಡಿದ್ದಾರೆ.

ಬಿಹಾರ ಮೂಲದ ಮನೋಜ್ (60) ಮೃತ ಕಾರ್ಮಿಕ. ರಾಯಚೂರು ಮತ್ತು ಬಿಹಾರದ ಹತ್ತಕ್ಕೂ ಹೆಚ್ಚು ಕಾರ್ಮಿಕರು ಗಾಯಗೊಂಡಿದ್ದು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರ್‌ಇಎಸ್ ಶಿಕ್ಷಣ ಸಂಸ್ಥೆ ಮುಂಭಾಗದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡುತ್ತಿದ್ದು, ಅದಕ್ಕೆ ಹೊಂದಿಕೊಂಡಂತೆ ಪ್ರವೇಶ ದ್ವಾರದ ಕಮಾನು ಗೋಪುರ ನಿರ್ಮಾಣ ಹಂತದಲ್ಲಿತ್ತು. ಸೋಮವಾರ ಮಧ್ಯಾಹ್ನ 1ಕ್ಕೆ ನಿರ್ಮಾಣ ಹಂತದ ಕಮಾನು ಗೋಪುರ ಏಕಾಏಕಿ ಕುಸಿದು ಬಿದ್ದಿದೆ.

ಗೋಪುರ ಬಿದ್ದಾಗ ಕೆಲಸ ಮಾಡುತ್ತಿದ್ದ ಕಾರ್ಮಿಕರು ಆಚೆಗೆ ಓಡಿ ಬಂದರು. ಎಲ್ಲರೂ ಸುರಕ್ಷಿತವಾಗಿ ಪಾರಾಗಿದ್ದಾರೆ ಎಂದು ಕಾರ್ಮಿಕರು ಭಾವಿಸಿದ್ದರು. ಗೋಪುರದ ಕೆಳಗೆ ಕೆಲಸ ಮಾಡುತ್ತಿದ್ದ ಮನೋಜ್ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದನ್ನೂ ಯಾರೂ ಗಮನಿಸಿಲ್ಲ. ಕಟ್ಟಡದ ಅವಶೇಷ ಹೊರ ತೆಗೆದಾಗ ಮನೋಜ್ ಸಿಲುಕಿರುವುದು ತಿಳಿಯಿತು.

ಗೋಪುರ ಕುಸಿದ ವಿಷಯ ತಿಳಿದ ತಕ್ಷಣ ಸ್ಥಳದಲ್ಲಿ ಸಾವಿರಾರು ಮಂದಿ ಜಮಾಯಿಸಿದರು. ಪೊಲೀಸರು ಜನರನ್ನು ಚದುರಿಸಿ ಬೃಹತ್ ಯಂತ್ರಗಳ ಮೂಲಕ ಕಟ್ಟಡ ಅವಶೇಷಗಳನ್ನು ಹೊರತೆಗೆದರು.

ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಮನೋಜ್ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ. ಕೂಡಲೇ ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ, ಮಾರ್ಗಮಧ್ಯದಲ್ಲಿಯೇ ಆತ ಮೃತಪಟ್ಟಿದ್ದಾನೆ ಎಂದು ವೈದ್ಯರು ತಿಳಿಸಿದರು.

ಯಾವ ಕಾರಣದಿಂದ ಗೋಪುರ ಕುಸಿದಿದೆ ಎಂಬುದು ಸದ್ಯಕ್ಕೆ ತಿಳಿದು ಬಂದಿಲ್ಲ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೃತರ ಕುಟುಂಬಕ್ಕೆ ಮಾಹಿತಿ ತಿಳಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರವೆಸಗಿ ಪರಾರಿ

ಕಂಪನಿಯೊಂದರ ಭದ್ರತಾ ಸಿಬ್ಬಂದಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶಾಲಾ ಬಾಲಕಿ ಮೇಲೆ ಭದ್ರತಾ ಸಿಬ್ಬಂದಿಯೊಬ್ಬ ಅತ್ಯಾಚಾರವೆಸಗಿ ಪರಾರಿಯಾಗಿರುವ ಘಟನೆ ನಡೆದಿದೆ.

ಈ ಸಂಬಂಧ ಪೊಲೀಸರು ಪೋಕ್ಸೊ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಯ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ. ‘ಬಾಲಕಿ ಮನೆಯ ಸಮೀಪದಲ್ಲಿಯೇ ವಾಸವಿದ್ದ ಆರೋಪಿ ಖಾಸಗಿ ಕಂಪನಿಯೊಂದರದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾನೆ. ಹತ್ತನೇ ತರಗತಿ ಓದುತ್ತಿರುವ ಬಾಲಕಿ, ನಿತ್ಯ ಶಾಲೆಗೆ ಹೋಗುವ ವೇಳೆ ಪರಿಚಯಿಸಿಕೊಂಡು, ಮದುವೆಯಾಗುವುದಾಗಿ ನಂಬಿಸಿದ್ದಾನೆ. ಆಕೆಯನ್ನು ಪುಸಲಾಯಿಸಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರವೆಸಗಿ ಪರಾರಿಯಾಗಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಬಾಲಕಿ ತಾಯಿಯ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಗೆ ಹುಡುಕಾಟ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ.

ಕೌಟುಂಬಿಕ ಸಮಸ್ಯೆ: ಬಿಬಿಎಂಪಿ ಬೆರಳಚ್ಚುಗಾರ್ತಿ ಆತ್ಮಹತ್ಯೆ

ಬೆಂಗಳೂರು: ಬಿಬಿಎಂಪಿ ಕಚೇರಿಯ ಬೆರಳಚ್ಚುಗಾರ್ತಿಯೊಬ್ಬರು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರ ರಾತ್ರಿ ಚಾಮರಾಜಪೇಟೆಯಲ್ಲಿ ನಡೆದಿದೆ.

ನಂದಿನಿ (32) ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ಚಾಮರಾಜಪೇಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಎಂಟು ವರ್ಷಗಳ ಹಿಂದೆ ನಂದಿನಿ ಅವರು ಶ್ರೀಕಾಂತ್ ಅವರನ್ನು ವಿವಾಹವಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಸಣ್ಣಪುಟ್ಟ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆಯುತ್ತಿತ್ತು. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾರ ಮೇಲೂ ಅನುಮಾನ ಇಲ್ಲ ಎಂದು ಮೃತಳ ತಂದೆ ದೂರಿನಲ್ಲಿ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಘಟನೆ ನಡೆದ ಸಂದರ್ಭದಲ್ಲಿ ಮನೆಯಲ್ಲಿ ಯಾರೂ ಇರಲಿಲ್ಲ. ಮನೆಗೆ ಬಂದು ಪತಿ ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ನಂದಿನಿ ಅವರ ತಮ್ಮ ಹಾಗೂ ಪತಿ ತಕ್ಷಣ ಕೊಠಡಿಯ ಬಾಗಿಲ ಬೀಗ ಒಡೆದು, ಮೃತದೇಹವನ್ನು ಕೆಳಗಿ ಇಳಿಸಿ, ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ವೈದ್ಯರು ಪರಿಶೀಲಿಸಿ, ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬೈಕ್ ಡಿಕ್ಕಿ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು–ಬಾಗಲೂರು ರಸ್ತೆಯ ಸಿಎಂಆರ್ ಕಾಲೇಜು ಬಳಿ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಕಾರ್ಮಿಕರೊಬ್ಬರು ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ.

ಪಶ್ಚಿಮ ಬಂಗಾಳ ನಿವಾಸಿ ಸೂರಜ್ ದಾಸ್ ಮೃತ ವ್ಯಕ್ತಿ. ರಸ್ತೆ ದಾಟುವ ವೇಳೆ ವೇಗವಾಗಿ ಬಂದ ಬೈಕ್ ಸವಾರ ಸೂರಜ್ ಅವರಿಗೆ ಡಿಕ್ಕಿ ಹೊಡೆದಿದ್ದಾನೆ. ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ತಿಳಿಸಿದರು.

ಘಟನೆಯಲ್ಲಿ ಬೈಕ್ ಸವಾರ ಸಹ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಂದಾಯ ಸಚಿವ ಕೃಷ್ಣಬೈರೇಗೌಡ ಭರವಸೆ

ರಂಜಾನ್‌ಗೂ ಮುನ್ನ ಸಂತ್ರಸ್ತರಿಗೆ ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಂಎ (ಐ–ಮಾನಿಟರಿ ಅಡ್ವೈಸರಿ) ಬಹುಕೋಟಿ ವಂಚನೆ ಪ್ರಕರಣದಲ್ಲಿ ಹಣ ಕಳೆದುಕೊಂಡ ಎಲ್ಲ ಠೇವಣಿದಾರರಿಗೂ ರಂಜಾನ್‌ಗೂ ಮೊದಲೇ ನಿಗದಿತ ಪರಿಹಾರದ ಹಣ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಭರವಸೆ ನೀಡಿದರು.

ಐಎಂಎ ಹಗರಣದ ಸಂತ್ರಸ್ತರಿಗೆ ಹಣ ಹಿಂತಿರುಗಿಸುವ ಕುರಿತು ಸೋಮವಾರ ವಿಕಾಸಸೌಧದಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯಲ್ಲಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕ ರಿಜ್ವಾನ್ ಅರ್ಷದ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಮತ್ತು ಸಂತ್ರಸ್ತರು ಹಾಜರಿದ್ದರು.

ಐಎಂಎನಲ್ಲಿ ಹಣ ಹೂಡಿ ಮೋಸ ಹೋದವರಿಗೆ ಅವರ ಹೂಡಿಕೆ ಅನುಪಾತದ ಆಧಾರದಲ್ಲಿ ಪರಿಹಾರ ನೀಡಲಾಗುವುದು ಎಂದು ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ದುಪ್ಪಟ್ಟು ಹಣ ಸಿಗುತ್ತದೆ ಎಂಬ ಆಸೆಯಿಂದ ಸುಮಾರು ಒಂದು ಲಕ್ಷಕ್ಕೂ ಅಧಿಕ ಠೇವಣಿದಾರರ ಖಾತೆಗಳ ಮೂಲಕ ₹3,213.58 ಕೋಟಿಗಳನ್ನು ಐಎಂಎ ಕಂಪನಿಯಲ್ಲಿ ಹೂಡಿ ಮೋಸ ಹೋಗಿದ್ದಾರೆ. ಕಂಪನಿಯ ಒಟ್ಟು ಠೇವಣಿದಾರರ ಸಂಖ್ಯೆ 69,069. ಈ ಪೈಕಿ ₹1,400 ಲಾಭಾಂಶ ಮಾದರಿಯಲ್ಲಿ ಐಎಂಎ ಕಾಲ ಕಾಲಕ್ಕೆ ಠೇವಣಿದಾರರಿಗೆ ನೀಡುತ್ತಾ ಬಂದಿದೆ. ಹಗರಣ ಪತ್ತೆಯಾದ ಬಳಿಕ ವಿಶೇಷ ನ್ಯಾಯಾಲಯದ ಆದೇಶದಂತೆ ಕಂಪನಿ ಖಾತೆಯಲ್ಲಿದ್ದ ₹19.12 ಕೋಟಿಗಳನ್ನು ₹50 ಸಾವಿರದಂತೆ 6,858 ಸಂತ್ರಸ್ತ ಖಾತೆಗಳಿಗೆ 2022 ಏಪ್ರಿಲ್‌ನಲ್ಲಿ ಜಮೆ ಮಾಡಲಾಗಿತ್ತು ಎಂದು ಹೇಳಿದರು.

₹66.66 ಕೋಟಿಯನ್ನು 53,142 ಜನ ಸಂತ್ರಸ್ತರ ಖಾತೆಗಳಿಗೆ 2023 ನವೆಂಬರ್‌ನಲ್ಲಿ ಜಮೆ ಮಾಡಲಾಗಿತ್ತು. ₹1.28 ಯನ್ನು 626 ಸಂತ್ರಸ್ತರ ಖಾತೆಗಳಿಗೆ 2024 ರ ಮೇ 23 ರಂದು ಜಮೆ ಮಾಡಲಾಗಿತ್ತು. ಒಟ್ಟಾರೆ ಈವರೆಗೆ ₹87.43 ಕೋಟಿಗಳನ್ನು 60,902 ಜನ ಸಂತ್ರಸ್ತರ ಖಾತೆಗಳಿಗೆ ಜಮೆ ಮಾಡಲಾಗಿದೆ ಎಂದು ಸಚಿವರು ಸಭೆಗೆ ತಿಳಿಸಿದರು.

ಐಎಂಎ ಹಗರಣ

ಐಎಂಎ ಕಂಪನಿಗೆ ಸಂಬಂಧಿಸಿದ ಹತ್ತಕ್ಕೂ ಹೆಚ್ಚು ಆಸ್ತಿಗಳನ್ನು ಈಗಾಗಲೇ ಸರ್ಕಾರ ವಶಕ್ಕೆ ಪಡೆದಿದೆ. ಚರಾಸ್ತಿಗಳ ಮೌಲ್ಯ ₹106.92 ಕೋಟಿ ಹಾಗೂ ಸ್ಥಿರಾಸ್ತಿಗಳ ಮೌಲ್ಯ ₹401.92 ಕೋಟಿ ಎಂದು ಅಂದಾಜಿಸಲಾಗಿದೆ. ಇದಲ್ಲದೇ, ಕಂಪನಿಗೆ ಸಂಬಂಧಿಸಿದ ವಿವಿಧ ಬ್ಯಾಂಕ್ ಖಾತೆಗಳಿಂದ ₹2.88 ಕೋಟಿ, ನಗದು ಹಣ ₹11.72 , ಹೂಡಿಕೆ ಪತ್ರ ₹11.06 ಕೋಟಿ ಸೇರಿ ಒಟ್ಟು ₹534.05 ಕೋಟಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ. ನ್ಯಾಯಾಲಯದ ಆದೇಶದಂತೆ ಶೀಘ್ರವೇ ಈ ಆಸ್ತಿಗಳನ್ನು ಹರಾಜು ಹಾಕಿ, ಇದರಿಂದ ಬಂದ ಹಣವನ್ನು ಹೂಡಿಕೆದಾರರಿಗೆ ಹಿಂತಿರುಗಿಸಲಾಗುವುದು ಎಂದು ಕೃಷ್ಣಬೈರೇಗೌಡ ಹೇಳಿದರು.

ಚರಂಡಿಗೆ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಅಟ್ಟಿಸಿಕೊಂಡು ಬಂದ ನಾಯಿಗಳಿಂದ ತಪ್ಪಿಸಿಕೊಳ್ಳುವ ವೇಳೆ ಚರಂಡಿಗೆ ಬಿದ್ದು ಕಟ್ಟಡ ನಿರ್ಮಾಣ ಕಾರ್ಮಿಕರೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ನಾಗರಾಜ (22) ಮೃತ ವ್ಯಕ್ತಿ. ಓಎಂಆರ್ ಸರ್ಕಲ್ ಬಳಿ ಘಟನೆ ನಡೆದಿದೆ. ಮೃತರ ಸಹೋದರನ ದೂರು ಆಧರಿಸಿ ಗಂಗಮ್ಮನಗುಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ಕಟ್ಟಡ ನಿರ್ಮಾಣ ಕಾರ್ಮಿಕರಾದ ನಾಗರಾಜ ಅವರು ಅಬ್ಬಿಗೇರಿಯಲ್ಲಿ ಶೆಡ್ ಹಾಕಿಕೊಂಡು ವಾಸವಿದ್ದರು. ಭಾನುವಾರ ರಾತ್ರಿ ಬಾರ್‌ನಲ್ಲಿ ವಿಪರೀತ ಮದ್ಯ ಸೇವಿಸಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಬಳಿಕ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಓಎಂಆರ್ ಸರ್ಕಲ್ ಬಳಿ ನಾಯಿಗಳು ಅವರನ್ನು ಅಟ್ಟಿಸಿಕೊಂಡು ಬರುತ್ತಿದ್ದಂತೆ ಓಡಲು ಆರಂಭಿಸಿದ್ದಾರೆ. ಆಗ ನಿಯಂತ್ರಣ ತಪ್ಪಿ ಚರಂಡಿಗೆ ಬಿದ್ದಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಚರಂಡಿಗೆ ಬಿದ್ದ ಅವರ ಮೇಲೆ ನಾಯಿಗಳು ದಾಳಿ ಮಾಡಿ, ಕಚ್ಚಿ ಗಾಯಗೊಳಿಸಿವೆ. ಮೃತದ ದೇಹದ ಮೇಲೆ ನಾಯಿ ಕಚ್ಚಿರುವ ಗುರುತುಗಳು ಪತ್ತೆಯಾಗಿವೆ. ಮರಣೋತ್ತರ ಪರೀಕ್ಷೆಯ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ ಎಂದು ಹೇಳಿದರು.

ನಾಗರಾಜ ಅವರು ಚರಂಡಿಗೆ ಬಿದ್ದ ವೇಳೆ ತಲೆಗೆ ಪೆಟ್ಟು ಬಿದ್ದು ಮೃತಪಟ್ಟಿದ್ದಾರೆಯೇ ಅಥವಾ ನಾಯಿಗಳು ಕಚ್ಚಿದ್ದರಿಂದ ಸಾವಿಗೀಡಾಗಿದ್ದಾರೆಯೇ ಎಂಬುದು ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ನಿಖರವಾಗಿ ಗೊತ್ತಾಗಲಿದೆ ಎಂದರು.



ಶ್ರೀವಿಜಯ ಚಂದ್ರಿಕಾ ಸಂಗೀತ ಚಂದನ ಹಾಗೂ ಸಂಗೀತ ಧಾಮ ಮ್ಯೂಸಿಕ್ ಅಕಾಡೆಮಿ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ದೊಡ್ಡರಂಗೇಗೌಡ ಅವರು ಭಾವಗೀತೆಗಳ ಧ್ವನಿಸಾಂದ್ರಿಕೆ ಬಿಡುಗಡೆಗೊಳಿಸಿದರು. ಸಂಗೀತ ನಿರ್ದೇಶಕ ಮೃತ್ಯುಂಜಯ ದೊಡ್ಡವಾಡ, ಉಮಾದೇವಿ ಚಿಪಳೂನಕರ್, ಗಾಯಕ ಶ್ರೀಧರ್ ಅಯ್ಯರ್, ಭಾವಗೀತೆಗಳ ರಚನೆಕಾರ ಚಂದ್ರಹಾಸ್ ಕೋಟೆಕಾರ್ ಉಪಸ್ಥಿತರಿದ್ದರು

–ಪ್ರಜಾವಾಣಿ ಚಿತ್ರ

ಶಿಕ್ಷಣದಲ್ಲಿ ಮಾನವೀಯ ಮೌಲ್ಯ ಚರ್ಚೆ

ಮುದ್ದೇನಹಳ್ಳಿ: ಅಖಿಲ ಭಾರತ ಕುಲಪತಿಗಳ ಸಮಾವೇಶ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿ ಸೋಮವಾರ ಅಖಿಲ ಭಾರತ ಕುಲಪತಿಗಳ ಸಮ್ಮೇಳನ ನಡೆಯಿತು.

ಸಮ್ಮೇಳನದಲ್ಲಿ ಎರಡು ಅವಧಿಯಲ್ಲಿ ನಡೆದ ಸಂವಾದ ಮತ್ತು ವಿಚಾರ ಸಂಕಿರಣದಲ್ಲಿ ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳ ಅಳವಡಿಕೆಯ ಕುರಿತು ಪ್ರಾಯೋಗಿಕ ಅನುಷ್ಠಾನದ ಬಗ್ಗೆ ಚರ್ಚಿಸಲಾಯಿತು.

ಸದಾಚಾರದ ಪಾಲನೆ, ಶಿಕ್ಷಣ ಮತ್ತು ಸಮಾಜ ಸೇವೆ ಎಂಬ ವಿಚಾರದ ಕುರಿತು ಗೋಷ್ಠಿಗಳು ನಡೆದವು. ಹದಿನೆಂಟು ರಾಜ್ಯಗಳ 47 ವಿಶ್ವವಿದ್ಯಾಲಯಗಳ ಕುಲಪತಿಗಳು ಭಾಗವಹಿಸಿದ್ದರು.

ಗೋಷ್ಠಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತದಲ್ಲಿ ಮೌಲ್ಯಗಳ ಅಳವಡಿಕೆ, ಶಿಕ್ಷಣ ಕ್ರಮ, ಶೈಕ್ಷಣಿಕ ಸಂಶೋಧನೆ, ಶಿಕ್ಷಣದಲ್ಲಿ ಸಾಮಾಜಿಕ ಬದ್ಧತೆ, ಮಾನವೀಯ ಮೌಲ್ಯಗಳ ಪ್ರಾಯೋಗಿಕ ಅನುಷ್ಠಾನ, ಶಿಕ್ಷಣದ ಯಶಸ್ಸಿನಲ್ಲಿ ಪೋಷಕರ ಪಾತ್ರ ಮತ್ತಿತರ ವಿಚಾರಗಳ ಬಗ್ಗೆ ಚರ್ಚೆ, ಸಂವಾದಗಳು ನಡೆದವು. ಮೌಲ್ಯಾಧಾರಿತ ಸಮಗ್ರ ಶಿಕ್ಷಣವನ್ನು ರೂಪಿಸಲು ಒಮ್ಮತಕ್ಕೆ ಬರಲಾಯಿತು.

ಕಾರ್ಯಕ್ರಮದ ಸಾನ್ನಿಧ್ಯವಹಿಸಿದ್ದ ಸದ್ಗುರು ಮಧುಸೂದನ ಸಾಯಿ, ಬದಲಾದ ಶಿಕ್ಷಣ ವ್ಯವಸ್ಥೆಯಿಂದ ಸಮಾಜದಲ್ಲಿ ವೈಪರೀತ್ಯಗಳು ತಲೆದೋರಿದವು. ನಮ್ಮ ವೈಭವದ ಪರಂಪರೆಯನ್ನು ಮರು ಸ್ಥಾಪಿಸಿ ಪ್ರಾಚೀನ ಕಾಲದಲ್ಲಿದ್ದ ವಿವೇಕಯುಕ್ತ ಶಿಕ್ಷಣವನ್ನು ಮರಳಿ ಸಮಾಜಕ್ಕೆ ಒದಗಿಸುವ ಕಲ್ಪನೆ ಶಿಕ್ಷಣದ ಗುರಿಯಾಗಬೇಕು. ಶಿಕ್ಷಣದಲ್ಲಿ ಮೌಲ್ಯ ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಸಂಸ್ಕೃತ ವಿಶ್ವವಿದ್ಯಾಲಯದ ಪ್ರೊ.ಅಹಲ್ಯಾ, ಶಿಕ್ಷಣದಲ್ಲಿ ಮೌಲ್ಯಗಳ ಅಳವಡಿಕೆಯ ರೂಪುರೇಷೆಗಳ ಬಗ್ಗೆ ವಿವರಿಸಿದರು. ಜಾರ್ಖಂಡ್ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಜಯಪ್ರಕಾಶ್ ಲಾಲ್ ಮಾತನಾಡಿ, ಅಧ್ಯಾತ್ಮ ವಿವೇಕ ಮತ್ತು ಪ್ರಾಯೋಗಿಕ ಜ್ಞಾನ ರಹಿತವಾದ ಶಿಕ್ಷಣ ನಿರರ್ಥಕ. ಮೌಲ್ಯಗಳ ಲೇಪನ ಇಲ್ಲದ ಶಿಕ್ಷಣದಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಇವೆರಡು ಮಿಳಿತವಾದ ಪ್ರಾಯೋಗಿಕ ಶಿಕ್ಷಣ ಇಂದಿನ ಅಗತ್ಯವಾಗಿದೆ ಎಂದು ಹೇಳಿದರು.

ಒತ್ತುವರಿ ತೆರವು: ವಿಷ ಕುಡಿದ ರೈತ

ವಿಜಯಪುರ (ದೇವನಹಳ್ಳಿ): ಇಲ್ಲಿನ ಧರ್ಮಾಪುರ ಗ್ರಾಮದಲ್ಲಿ ಸೋಮವಾರ ಅರಣ್ಯ ಇಲಾಖೆ ಕೈಗೊಂಡ ಒತ್ತುವರಿ ತೆರವು ಕಾರ್ಯಾಚರಣೆ ವಿರೋಧಿಸಿ ರೈತರೊಬ್ಬರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಅಸ್ವಸ್ಥರಾದ ರೈತ ಶಂಕರ್ ಅವರನ್ನು ದೇವನಹಳ್ಳಿ ಆಸ್ಪತ್ರೆಗೆ ಸೇರಿಸಲಾಗಿದೆ. ಸದ್ಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಕಂದಾಯ ಮತ್ತು ಅರಣ್ಯ ಇಲಾಖೆಗೆ ಸೇರಿದ ಜಾಗ ಒತ್ತುವರಿ ತೆರವಿಗೆ ಈಚೆಗೆ ಜಂಟಿ ಸರ್ವೆ ನಡೆದಿತ್ತು. ಸರ್ವೆ ವರದಿ ಆಧಾರದಲ್ಲಿ ಅರಣ್ಯ ಇಲಾಖೆ ತೆರವು ಕಾರ್ಯಾಚರಣೆ ನಡೆಸುತ್ತಿದೆ. ಕಾರ್ಯಾಚರಣೆ ಕುರಿತು ಯಾವುದೇ ಮಾಹಿತಿ ನೀಡದೆ ಏಕಾಏಕಿ ಜಮೀನಿನಲ್ಲಿ ಇದ್ದ ವಾಸದ ಮನೆ ಕೆಡವಲಾಗಿದೆ. ಎಂದು ರೈತನ ಕುಟುಂಬ ಸದಸ್ಯರು ಆರೋಪಿಸಿದ್ದಾರೆ.

ತರಾತುರಿಯಲ್ಲಿ ‘ಬಿ–ಖಾತಾ’ ವಿತರಣೆ ಏಕೆ: ಎಚ್‌ಡಿಕೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಅನಧಿಕೃತ ಬಡಾವಣೆಗಳ ನಿವೇಶನ ಹಾಗೂ ಮನೆಗಳಿಗೆ ರಾಜ್ಯ ಸರ್ಕಾರವು ತರಾತುರಿಯಲ್ಲಿ ‘ಬಿ–ಖಾತಾ’ ಏಕೆ ವಿತರಿಸುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕೇಳಿದರು.

‘ನ್ಯಾಯಾಲಯದಲ್ಲಿ ವ್ಯಾಜ್ಯವಿದ್ದರೂ, ಸ್ಪಷ್ಟತೆ ಇಲ್ಲದಿದ್ದರೂ ರಾಜ್ಯದ ಖಜಾನೆಯಲ್ಲಿ ಹಣವಿಲ್ಲವೆಂಬ ಕಾರಣಕ್ಕೆ ಅಕ್ರಮ- ಸಕ್ರಮ ಎಂದು ಹೊರಟಿದ್ದಾರೆ. ಜನರ ಮೇಲಿನ ಪ್ರೀತಿಯಿಂದೇನೂ ಅಲ್ಲ. ದರ ಏರಿಕೆಯಿಂದಲೇ ಸರ್ಕಾರ ನಡೆಯುತ್ತಿದೆ’ ಎಂದು ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಕೇಂದ್ರವು ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯ ಮಾಡಿಲ್ಲ. ಪ್ರತಿ ರಾಜ್ಯಗಳಿಗೂ ಇಲಾಖಾವಾರು ಹಣ ಹಂಚಿಕೆಯಾಗಿದೆ. ಇದು ಕಾಂಗ್ರೆಸ್ ಸರ್ಕಾರವಿದ್ದಾಗಿನಿಂದಲೂ ನಡೆದಿರುವಂಥದ್ದೇ. ಕೇಂದ್ರ ಕೊಡದೇ ಇಲ್ಲಿ ಸರ್ಕಾರ ನಡೆಯುತ್ತಿದೆಯೇ? ಮಾರ್ಗಸೂಚಿ ಪ್ರಕಾರ ಎಲ್ಲವೂ ಆಗಿದೆ. ಆದರೆ, ರಾಜ್ಯ ಸರ್ಕಾರ ಅಪಪ್ರಚಾರ ಮಾಡುತ್ತಿದೆ’ ಎಂದು ದೂರಿದರು.

‘ಈ ಸರ್ಕಾರದಲ್ಲಿ ಆರ್ಥಿಕ ಸದೃಢತೆ ಎಲ್ಲಿದೆ? ಜನವರಿ 31ರವರೆಗಿನ ಆರ್ಥಿಕ ಪ್ರಗತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಹಿರಂಗಪಡಿಸಲಿ’ ಎಂದು ಸವಾಲು ಹಾಕಿದರು.

‘ಜಾತಿ ಗಣತಿ ವರದಿ ಪೂಜೆ ಮಾಡ್ತಿದ್ದೀರಾ?’

‘ಜಾತಿ ಗಣತಿ ವರದಿ ಇಟ್ಕೊಂಡು ಪೂಜೆ ಮಾಡುತ್ತಿದ್ದೀರಾ? ಬಿಡುಗಡೆ ಮಾಡದಂತೆ ನಿಮ್ಮನ್ನು ಹಿಡಿದುಕೊಂಡಿರುವವರು ಯಾರು’ ಎಂದು ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.


‘ಸಮೀಕ್ಷೆಯಾಗಿ 10 ವರ್ಷಗಳಾಗಿವೆ. ಬಳಿಕ ಸಾಕಷ್ಟು ಬದಲಾವಣೆಗಳಾಗಿವೆ. ವೈಜ್ಞಾನಿಕವಾಗಿ ಮಾಡಬೇಕಾಗಿತ್ತು. ಗಣತಿದಾರರು ನಮ್ಮ ಮನೆಗೇ ಬಂದಿಲ್ಲ ಎಂದು ಕಾಂಗ್ರೆಸ್ ಶಾಸಕರೇ ಹೇಳಿದ್ದಾರೆ. ವರದಿ ಬಿಡುಗಡೆ ಮಾಡಲಿ ಆಗ ಗೊತ್ತಾಗುತ್ತದೆ’ ಎಂದರು.

‘ಪರಮೇಶ್ವರಗೆ ರಾಜಕೀಯ ವೈರಾಗ್ಯ’

‘ಗೃಹ ಸಚಿವ ಜಿ. ಪರಮೇಶ್ವರ ಅವರ ಇತ್ತೀಚಿನ ಹೇಳಿಕೆ ಗಮನಿಸಿದರೆ, ಅವರಿಗೆ ರಾಜಕೀಯ ವೈರಾಗ್ಯ ಬಂದಂತಿದೆ. ಅವರಿಗೆ ನಿಯಂತ್ರಣ ಇದೆಯಾ’ ಎಂದು ಕುಮಾರಸ್ವಾಮಿ ಟೀಕಿಸಿದರು.

‘ಜನ ಹಾಗೂ ಅಧಿಕಾರಿಗಳಿಗೆ ಏನು ಸಂದೇಶ ಕೊಡುತ್ತಿದ್ದೀರಿ? ಮರ್ಯಾದಸ್ಥರು ಈ ಸರ್ಕಾರದಲ್ಲಿ ಇರುವುದು ಒಳ್ಳೆಯದಲ್ಲ ಎಂಬ ತೀರ್ಮಾನಕ್ಕೆ ಪರಮೇಶ್ವರ ಬಂದಿರಬೇಕು. ಈ ಸರ್ಕಾರದಲ್ಲಿ ಯಾರಿಗೆ ರಕ್ಷಣೆ ಕೊಡುತ್ತಾರೆ?’ ಎಂದರು.

ಮೈಸೂರು ರಾಜವಂಶಸ್ಥರು ಸಿದ್ದರಾಮಯ್ಯ ಅವರಿಗೆ ಏನು ಅನ್ಯಾಯ ಮಾಡಿದ್ದಾರೆ? ಏಕಿಷ್ಟು ಗದಾಪ್ರಹಾರ ಮಾಡುತ್ತಿದ್ದಾರೆ? ಅವರ ಮೇಲೆ ಏಕಿಷ್ಟು ದ್ವೇಷ?



ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

‘ಬಸ್ ಪ್ರಯಾಣದರ ಏರಿಸಿದ್ದಾರೆ. ಹಾಲು, ನೀರಿನ ದರ ಏರಿಸುತ್ತಾರಂತೆ. ಜನರ ಕಿಸೆಗೆ ಕೈಹಾಕುತ್ತಿದ್ದಾರೆ. ಇದು ಇವರ ಆರ್ಥಿಕ ಶಕ್ತಿನಾ? ಅಭಿವೃದ್ಧಿ ಕಾರ್ಯ ಎಲ್ಲಿ ನಡೆಯುತ್ತಿದೆ. ಯಾವ ಕಾರ್ಯಕ್ರಮಕ್ಕೆ ಹಣ ಕೊಟ್ಟಿದ್ದಾರೆ? ಆರ್ಥಿಕವಾಗಿ ಶಕ್ತವಾಗಿದ್ದರೆ, ‘ಗೃಹಲಕ್ಷ್ಮಿ’ ಹಣವನ್ನು ಪ್ರತಿ ತಿಂಗಳೂ ಏಕೆ ಕೊಡಲಾಗುತ್ತಿಲ್ಲ’ ಎಂದು ಕೇಳಿದರು.

‘ಸಿದ್ದರಾಮಯ್ಯ ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರಿಂದ ತಮಗಿಷ್ಟ ಬಂದಂತೆ ಬರೆಸಿಕೊಂಡಿದ್ದಾರೆ’ ಎಂದು ಆರೋಪಿಸಿದರು.

ಧನಸಹಾಯ ನೀಡಿ, ಅದೇ ಶಾಲೆಗೆ ಮಗನನ್ನು ಸೇರಿಸಿದ ಉದ್ಯಮಿ

ಸರ್ಕಾರಿ ಶಾಲೆಗೆ ₹2.18 ಕೋಟಿ ನೆರವು

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು): ಸರ್ಕಾರಿ ಶಾಲೆಯಲ್ಲಿ ಓದಿ, ಕಾಫಿ ರಫ್ತು ಉದ್ಯಮಿಯಾಗಿ ಗುರುತಿಸಿಕೊಂಡಿರುವ ಮುದ್ರೆಮನೆ ಕಾಫಿ ಕ್ಯೂರಿಂಗ್ ಸಂಸ್ಥೆಯ ಮಾಲೀಕ ಸಂತೋಷ್, ತಮ್ಮ ಘಟಕದ ಸಮೀಪದಲ್ಲೇ ಇರುವ ಸರ್ಕಾರಿ ಶಾಲೆಯ ಅಭಿವೃದ್ಧಿಗೆ ₹2.18 ಕೋಟಿ ನೆರವು ನೀಡಿದ್ದಾರೆ. ತಮ್ಮ ಪುತ್ರನನ್ನೂ ಇದೇ ಶಾಲೆಗೆ ಸೇರಿಸಿ ಸರ್ಕಾರಿ ಶಾಲೆ ಬಗೆಗಿನ ಅಭಿಮಾನ ಮೆರೆದಿದ್ದಾರೆ.

ತಾಲ್ಲೂಕಿನ ಮುತ್ತಿಗೆಪುರ ಗ್ರಾಮದಲ್ಲಿರುವ ಈ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸದ್ಯ 363 ವಿದ್ಯಾರ್ಥಿಗಳಿದ್ದಾರೆ. 1973ರಲ್ಲಿ ಪ್ರಾರಂಭವಾದ ಈ ಶಾಲೆಯು ಸದ್ಯ ಜಿಲ್ಲೆಯ ಮಾದರಿ ಸರ್ಕಾರಿ ಶಾಲೆಯಾಗಿದ್ದು, ಇಲ್ಲಿ ಪ್ರವೇಶ ಪಡೆಯಲು ಖಾಸಗಿ ಶಾಲೆಗಳಿಗಿಂತ ಹೆಚ್ಚಿನ ಪೈಪೋಟಿ ಇದೆ.

ಮುಖ್ಯಾಂಶಗಳು

- ಸದ್ಯ ಶಾಲೆಯಲ್ಲಿದ್ದಾರೆ 363 ವಿದ್ಯಾರ್ಥಿಗಳು
- 1973ರಲ್ಲಿ ಆರಂಭ
- ಶಾಲೆಗೆ ಪ್ರವೇಶ ಪಡೆಯಲು ಹೆಚ್ಚಿನ ಪೈಪೋಟಿ

ನಮ್ಮ ಶಾಲೆ ಇಡೀ ರಾಜ್ಯಕ್ಕೆ ಮಾದರಿಯಾಗಿ ಹೊರ ಹೊಮ್ಮುತ್ತಿದೆ. ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಮತ್ತು ದಾನಿಗಳ ಸಾಮಾಜಿಕ ಕಳಕಳಿ ಇದಕ್ಕೆ ಕಾರಣ

ಮಧುಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ

ಉದ್ಯಮಿ ಸಂತೋಷ್ ನೀಡಿದ ನೆರವಿನಿಂದ ಎಂಟು ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಲಾಗಿದೆ. ₹18 ಲಕ್ಷ ವೆಚ್ಚದಲ್ಲಿ ಸಭಾಂಗಣ ನಿರ್ಮಿಸಲಾಗಿದೆ. ವಿವೇಕ ಯೋಜನೆಯಡಿ ₹56 ಲಕ್ಷ ವೆಚ್ಚದಲ್ಲಿ ನಾಲ್ಕು ಕೊಠಡಿಗಳನ್ನು ನಿರ್ಮಿಸಲಾಗಿದೆ. ಒಟ್ಟು 12 ಕೊಠಡಿಗಳನ್ನು ಫೆ. 28ರಂದು ಉದ್ಘಾಟಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.



ದಾನಿಗಳ ನೆರವಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಮೂಡಿಗೆರೆ ತಾಲ್ಲೂಕಿನ ಮುತ್ತಿಗೆಪುರ ಸರ್ಕಾರಿ ಶಾಲೆಯ ಕಟ್ಟಡ

ಇದೇ ಶಾಲೆಗೆ ಸ್ಥಳೀಯರಾದ, ಸೌದಿ ಅರೇಬಿಯಾದಲ್ಲಿರುವ ಉದ್ಯಮಿ ಸಿದ್ದಿಕ್ ಎಂಬುವರು ₹60 ಸಾವಿರ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಒದಗಿಸಿದ್ದಾರೆ. ಶರ್ಲಿನ್ ವಿಲಿಯಮ್ಸ್ ಎಂಬ ಕಂಪನಿ ₹18 ಲಕ್ಷ ವೆಚ್ಚದಲ್ಲಿ ಶಾಲೆಗೆ ಪೀಠೋಪಕರಣ ಒದಗಿಸಿದೆ. ಯೂತ್ ಫಾರ್ ಸೇವಾ ಸಂಸ್ಥೆ ಎಂಟು ಕಂಪ್ಯೂಟರ್ ಹಾಗೂ ಅದನ್ನು ಬಳಸಲು ಬೇಕಾಗಿರುವ ಮೇಜನ್ನು ಒದಗಿಸಿದೆ. ಶಾಲೆಯಲ್ಲಿ ಮಕ್ಕಳಿಗೆ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಹಾಗೂ ಸ್ಪೋಕನ್ ಇಂಗ್ಲಿಷ್ ತರಬೇತಿ ವ್ಯವಸ್ಥೆಯನ್ನು ಎಸ್‌ಡಿಎಂಸಿ ಸದಸ್ಯರು ಮತ್ತು ಶಿಕ್ಷಕರು ಮಾಡಿದ್ದಾರೆ.

ಶಾಲೆಯ ಆವರಣ, ಕೊಠಡಿಗಳಲ್ಲಿ ಒಟ್ಟು 20 ಸಿಸಿಟಿವಿ ಕ್ಯಾಮೆರಾ ಅಳವಡಿಸಲು ದಾನಿಗಳು ಮುಂದೆ ಬಂದಿದ್ದಾರೆ. ₹5 ಲಕ್ಷ ವೆಚ್ಚದಲ್ಲಿ ಹೈಟೆಕ್ ಬಿಸಿಯೂಟದ ಅಡುಗೆಮನೆ ನಿರ್ಮಾಣಕ್ಕೆ ದಾನಿಗಳು ಕೈಜೋಡಿಸಿದ್ದಾರೆ. ಮೈಕ್ ಹಾಗೂ ಸ್ಪೀಕರ್‌ಗಳ ಮೂಲಕ ಮಕ್ಕಳಿಗೆ, ಶಿಕ್ಷಕರಿಗೆ ಸಂದೇಶ, ಮಾಹಿತಿ ನೀಡುವ ವ್ಯವಸ್ಥೆ ಶಾಲೆಯಲ್ಲಿದೆ. ಖಾಸಗಿ ಶಾಲೆಗಳಲ್ಲಿರುವ ಸೌಲಭ್ಯದಂತೆ ಇಲ್ಲಿನ ಮಕ್ಕಳಿಗೂ ಶಾಲಾ ಬಸ್ ಸೌಲಭ್ಯ ಕಲ್ಪಿಸಲು ದಾನಿಗಳು ಮುಂದಾಗಿದ್ದಾರೆ.

ಅರಣ್ಯ, ಪರಿಸರ ಇಲಾಖೆಯ ತಾಂತ್ರಿಕ ಕೋಶದ ಆಯಕಟ್ಟಿನ ಸ್ಥಳ • ಸರ್ಕಾರದ ಕ್ರಮಕ್ಕೆ ಆಕ್ಷೇಪ

ಖಾಸಗಿ ಕಾಲೇಜು ಅಧ್ಯಾಪಕರಿಗೆ ನಿರ್ದೇಶಕ ಹುದ್ದೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅರಣ್ಯ ಮತ್ತು ಪರಿಸರ ಇಲಾಖೆಯ ತಾಂತ್ರಿಕ ಕೋಶದ ನಿರ್ದೇಶಕ ಸ್ಥಾನಕ್ಕೆ ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರೊಬ್ಬರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದ್ದು, ಸರ್ಕಾರದ ಕ್ರಮಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ತಾಂತ್ರಿಕ ಕೋಶದ ಮುಖ್ಯಸ್ಥರಾಗಿದ್ದ ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ಅಧಿಕಾರಿ ಆರ್. ಗೋಕುಲ್ ಅವರನ್ನು ವರ್ಗಾವಣೆ ಮಾಡಿ, ಆ ಜಾಗಕ್ಕೆ ಬಿಎಂಎಸ್ ಕಾಲೇಜಿನ ಕೆಮಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಸಿ.ಟಿ. ಪುಟ್ಟಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ. ನೇಮಕಾತಿ ಸಂಬಂಧ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಅರಣ್ಯ ಮತ್ತು ಪರಿಸರ ಇಲಾಖೆ ಸೂಚಿಸಿದೆ.

ಸರ್ಕಾರದ (ಪರಿಸರ) ಪ್ರಧಾನ ಕಾರ್ಯದರ್ಶಿ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಈ ತಾಂತ್ರಿಕ ಕೋಶದ ನಿರ್ದೇಶಕರು 'ರಾಜ್ಯ ತಜ್ಞರ ಮೌಲ್ಯ ನಿರ್ಣಯ ಸಮಿತಿ' (ಎಸ್‌ಇಎಸಿ) ರಾಜ್ಯ ಪರಿಸರ ಪರಿಣಾಮ ಮೌಲ್ಯ ನಿರ್ಣಯ ಪ್ರಾಧಿಕಾರ (ಎಸ್‌ಇಐಎಎ) ಹಾಗೂ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ (ಕೆಎಸ್‌ಸಿಝಡ್‌ಎಂಎ) ಸದಸ್ಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡುತ್ತಾರೆ. ಪರಿಸರ ಕಾಯ್ದೆಗಳನ್ನು ಅನ್ವಯಿಸಿ ಅನುಷ್ಠಾನಗೊಳಿಸುವ ಯಾವುದೇ ಯೋಜನೆಗಳನ್ನು ಜಾರಿಗೊಳಿಸಲು, ಕೈಗಾರಿಕೆಗಳನ್ನು ಸ್ಥಾಪಿಸಲು ತಜ್ಞರ ಮೌಲ್ಯಮಾಪನ ಸಮಿತಿ, ಪ್ರಾಧಿಕಾರಗಳಿಂದ ಅನುಮತಿ, ನಿರಾಕ್ಷೇಪಣಾ ಪತ್ರ ಪಡೆಯುವುದು ಕಡ್ಡಾಯ. ಪರಿಸರ ಸಂಬಂಧಿ ಯೋಜನೆಗಳ ಅನುಷ್ಠಾನ, ಕೈಗಾರಿಕೆ ಮತ್ತಿತರ ಯೋಜನೆಗಳಿಂದ ಆಗುವ ಜಲ, ವಾಯು, ಶಬ್ದ ಮಾಲಿನ್ಯದ ಪರಿಶೀಲನೆ, ಅಧ್ಯಯನ, ಮೌಲ್ಯಮಾಪನ ನಡೆಸುವ ಅಧಿಕಾರ ಹೊಂದಿರುವ ಈ ಎಲ್ಲ ಅಂಗ ಸಂಸ್ಥೆಗಳಿಗೆ ತಾಂತ್ರಿಕ ಕೋಶ ತಾಂತ್ರಿಕ ನೆರವು ನೀಡುತ್ತದೆ. ನಿರ್ದೇಶಕರ ಕಾರ್ಯಕ್ಕೆ ವೈಜ್ಞಾನಿಕ ಹಿನ್ನೆಲೆ ಇರುವ ನಾಲ್ವರು ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಮೂವರು ತಜ್ಞರು ನೆರವಾಗುತ್ತಾರೆ. ಕರಾವಳಿ ಜಿಲ್ಲೆಗಳ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಬಂದರು ಪ್ರಸ್ತಾವಗಳನ್ನು ಪರಿಶೀಲಿಸಿ, ಮುಂದಿನ ಕ್ರಮಕ್ಕಾಗಿ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ (ಕೆಎಸ್‌ಸಿಝಡ್‌ಎಂಎ) ಕಳುಹಿಸುವ ಕಾರ್ಯವನ್ನೂ ತಾಂತ್ರಿಕ ಕೋಶ ನಿರ್ವಹಿಸುತ್ತದೆ.

ಮುಖ್ಯಾಂಶಗಳು
- ಪರಿಸರ ಇಲಾಖೆಯ ಪ್ರಭಾವಿ ಹುದ್ದೆ
- ಐಎಫ್‌ಎಸ್ ಅಧಿಕಾರಿ ಗೋಕುಲ್ ಎತ್ತಂಗಡಿ
- ಸ್ವಂತ ವೇತನಶ್ರೇಣಿ ಆಧಾರದಲ್ಲಿ ನೇಮಕಾತಿ

ಹೆಚ್ಚುವರಿ ಕಾರ್ಯದರ್ಶಿ ಹುದ್ದೆಗೆ ಸಮ

ತಾಂತ್ರಿಕ ಕೋಶದ ನಿರ್ದೇಶಕ ಸ್ಥಾನವು ಸರ್ಕಾರದ ಹೆಚ್ಚುವರಿ ಅಥವಾ ವಿಶೇಷ ಕಾರ್ಯದರ್ಶಿ ಸ್ಥಾನಕ್ಕೆ ಸಮಾನವಾದುದು. ಈ ಸ್ಥಾನದ ಅಧಿಕಾರಿಗಳು ಲಭ್ಯ ಇಲ್ಲದೇ ಇದ್ದಾಗ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಗಳನ್ನು ನಿಯೋಜನೆ ಮಾಡಬಹುದು.

ಭಾರತದ ವಿಶ್ವವಿದ್ಯಾಲಯಗಳ ಕಾಯ್ದೆಯ ಅನ್ವಯ ಸ್ಥಾಪಿತವಾದ ವಿಶ್ವವಿದ್ಯಾಲಯಗಳು ಅಥವಾ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು, ಅಧಿಕಾರಿಗಳನ್ನು ನೇಮಿಸಬಹುದು.

'ಹಲವು ವರ್ಷ ಈ ಸ್ಥಾನದಲ್ಲಿ ಬೆಂಗಳೂರು ಐಐಎಸ್‌ಸಿಯ ವಿಜ್ಞಾನಿ ಟಿ.ವಿ. ರಾಮಚಂದ್ರ ಅವರು ಕಾರ್ಯನಿರ್ವಹಿಸಿದ್ದರು. ಇದಕ್ಕೂ ಮೊದಲು ಹಾಗೂ ನಂತರ ಹಲವು ಐಎಫ್‌ಎಸ್ ಅಧಿಕಾರಿಗಳು ಈ ಹುದ್ದೆಯಲ್ಲಿದ್ದರು. ಖಾಸಗಿ ಕಾಲೇಜೊಂದರ ಅಧ್ಯಾಪಕರಿಗೆ ಇಂತಹ ಉನ್ನತ ಹುದ್ದೆ ನೀಡಿರುವುದು ಸರಿಯಲ್ಲ. ನಾವು ಆಕ್ಷೇಪ ವ್ಯಕ್ತಪಡಿಸುವ ವರದಿಯ ಈ ವಿಷಯ ಇಲಾಖೆಯ ಸಚಿವರ ಗಮನಕ್ಕೆ ತರಲಿದ್ದೇವೆ' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಬಯಸದ ಐಎಫ್‌ಎಸ್ ಅಧಿಕಾರಿ.

ನಿಯಮಗಳಿಗೆ ಅನುಗುಣವಾಗಿಯೇ ಸ್ವಂತ ವೇತನಶ್ರೇಣಿಯ ಆಧಾರದ ಮೇಲೆ ಸರ್ಕಾರ ನಿರ್ದೇಶಕ ಸ್ಥಾನಕ್ಕೆ ನೇಮಿಸಿದೆ. ಲೋಪ ಆಗಿಲ್ಲ
ಸಿ.ಟಿ. ಪುಟ್ಟಸ್ವಾಮಿ, ನಿರ್ದೇಶಕ, ತಾಂತ್ರಿಕ ಕೋಶ (ಪರಿಸರ)

'ಮಹಿಳೆಯರಿಗೆ ತ್ರಿಶೂಲ ದೀಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲವ್ ಜಿಹಾದ್'ನಿಂದ ಹಿಂದೂ ಮಹಿಳೆಯರನ್ನು ರಕ್ಷಿಸಲು ಹಾಗೂ ಧೈರ್ಯ ತುಂಬಲು ರಾಜ್ಯದ 100 ಕಡೆಗಳಲ್ಲಿ ತ್ರಿಶೂಲ ದೀಕ್ಷೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು' ಎಂದು ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ ಮುತಾಲಿಕ್ ಹೇಳಿದರು.



ಪ್ರಮೋದ ಮುತಾಲಿಕ್

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರೀತಿಯ ಹೆಸರಿನಲ್ಲಿ 'ಲವ್ ಜಿಹಾದ್' ಎಂಬ ಷಡ್ಯಂತ್ರ ನಡೆಯುತ್ತಿದೆ. ಇಸ್ಲಾಂ ಧರ್ಮದ ಜನಸಂಖ್ಯೆ ಹೆಚ್ಚಿಸಲು, ಹಿಂದೂಗಳ ನೈತಿಕತೆ ಕುಸಿಯುವಂತೆ ಮಾಡಲು, ವೇಶ್ಯಾವಾಟಿಕೆ, ಭಯೋತ್ಪಾದನೆಗೆ, ಮಾದಕವಸ್ತುಗಳ ಕಳ್ಳಸಾಗಣೆಗೆ ಲವ್ ಜಿಹಾದ್ ನಡೆಸಲಾಗುತ್ತಿದೆ. ಸರ್ಕಾರ ಇದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಪೊಲೀಸ್ ಇಲಾಖೆ 'ಲವ್ ಜಿಹಾದ್' ಪ್ರಕರಣಗಳ ವಿರುದ್ಧ ತಕರಾರು ಅರ್ಜಿಗಳನ್ನು ಸ್ವೀಕರಿಸಬೇಕು. ಇಂತಹ ಪ್ರಕರಣಗಳನ್ನು ತ್ವರಿತ ನ್ಯಾಯಾಲಯಗಳ ಮೂಲಕ ನಾಲ್ಕು ತಿಂಗಳೊಳಗೆ ಇತ್ಯರ್ಥಗೊಳಿಸಿ, ಆರೋಪಿಗಳಿಗೆ ಶಿಕ್ಷೆ ವಿಧಿಸುವಂತಾಗಬೇಕು. ಮುಸ್ಲಿಂ ಸಮುದಾಯದ ಮುಖಂಡರು ತಮ್ಮ ಯುವಕರಿಗೆ 'ಲವ್ ಜಿಹಾದ್' ಬಗ್ಗೆ ಎಚ್ಚರಿಸಬೇಕು. ಈ ಬಗ್ಗೆ ಶಾಲಾ–ಕಾಲೇಜುಗಳಲ್ಲಿ ಪ್ರಕರಣಗಳನ್ನು ಹಂಚುವ ಮೂಲಕ ಜಾಗೃತಿ ಮೂಡಿಸಲಾಗುವುದು' ಎಂದು ತಿಳಿಸಿದರು.

ಈ ಸಂದರ್ಭದಲ್ಲಿ 'ಲವ್ ಜಿಹಾದ್' ಪುಸ್ತಕದ ಎರಡನೇ ಆವೃತ್ತಿಯನ್ನು ಬಿಡುಗಡೆಗೊಳಿಸಲಾಯಿತು.

ಉದಯಗಿರಿ ಪ್ರಕರಣ: ನಿಷೇಧಾಜ್ಞೆ ನಡುವೆ ನಡೆದ 'ಮೈಸೂರು ಚಲೋ'

ಸಮಾವೇಶಕ್ಕೆ ಹೈಕೋರ್ಟ್ ಅನುಮತಿ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಉದಯಗಿರಿ ಠಾಣೆ ಹಾಗೂ ಪೊಲೀಸರಿಗೆ ಕಲ್ಲೆಸೆತ ಪ್ರಕರಣ ಸಂಬಂಧ ವಿವಿಧ ಸಂಘಟನೆಗಳು ಪ್ರತ್ಯೇಕವಾಗಿ ಮೆರವಣಿಗೆ ನಡೆಸಲು ಪೊಲೀಸರು ಸೋಮವಾರ ಅವಕಾಶ ನೀಡಲಿಲ್ಲ. ನಿಷೇಧಾಜ್ಞೆ ಜಾರಿಯಲ್ಲಿದ್ದರಿಂದ ಯಾರೊಬ್ಬರೂ ಗುಂಪುಗೂಡದಂತೆ ತಡೆದರು. ಮಧ್ಯಾಹ್ನದ ವೇಳೆಗೆ ಹೈಕೋರ್ಟ್ ಅನುಮತಿ ಪಡೆದ 'ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ'ಯು ಪ್ರತಿಭಟನಾ ಸಮಾವೇಶ ನಡೆಸಿತು.

ಸಮಿತಿಯು ಹಮ್ಮಿಕೊಂಡಿದ್ದ 'ಮೈಸೂರು ಚಲೋ'ದಲ್ಲಿ ಪಾಲ್ಗೊಳ್ಳಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ನಗರಕ್ಕೆ ಬಂದಿದ್ದರು. ಅವರು ನಗರ ಪ್ರವೇಶ ಮಾಡದಂತೆ ಬೆಂಗಳೂರು– ನೀಲಗಿರಿ ರಸ್ತೆಯ ರಿಂಗ್ ರೋಡ್ ಜಂಕ್ಷನ್ ಬಳಿ ನೂರಾರು ಪೊಲೀಸರನ್ನು ನಿಯೋಜಿಸಲಾಗಿತ್ತು. ಹೀಗಾಗಿ, ಅಲ್ಲಿಗೆ ಸಮೀಪದ ಖಾಸಗಿ ಹೋಟೆಲ್‌ಗೆ ತೆರಳಿದರು.

ಅಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ, 'ನಮ್ಮ ಹೋರಾಟ ಹತ್ತಿಕ್ಕಲು ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ನಾವು ಯಾವುದಕ್ಕೂ ಹೆದರುವುದಿಲ್ಲ. ಕೋರ್ಟ್ ಆದೇಶಕ್ಕಾಗಿ ಕಾಯುತ್ತಿದ್ದೇವೆ' ಎಂದರು.

'ಮುಸ್ಲಿಮರ ಮತಕ್ಕಾಗಿ ಕಾಂಗ್ರೆಸ್ ಯಾವ ಹಂತಕ್ಕೆ ಬೇಕಾದರೂ ಇಳಿಯುತ್ತದೆ. ರಾಜ್ಯದ ಕಾನೂನು ಸುವ್ಯವಸ್ಥೆ ಹಾಳು ಮಾಡಿರುವ ಸರ್ಕಾರವನ್ನು ಕಿತ್ತೊಗೆಯುತ್ತೇವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾವಿರಾರು ಪೊಲೀಸರ ನಿಯೋಜನೆ: ಗನ್‌ಹೌಸ್, ಅರಮನೆ ಕೋಟೆ ಆಂಜನೇಯ ಸ್ವಾಮಿ ದೇಗುಲ, ರಾಮಸ್ವಾಮಿ ವೃತ್ತ ಸಮೀಪದ ಬಿಜೆಪಿ ಕಚೇರಿ ಸೇರಿದಂತೆ ವಿವಿಧೆಡೆ ಬೆಳಿಗ್ಗೆ 7ರಿಂದಲೇ ಸಾವಿರಕ್ಕೂ ಹೆಚ್ಚು ಪೊಲೀಸರು ಜಮಾಯಿಸಿದ್ದರು.



ಹೈಕೋರ್ಟ್ ಅನುಮತಿ ಪಡೆದು 'ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ' ಸದಸ್ಯರು ಸೋಮವಾರ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನ ಫುಟ್‌ಬಾಲ್ ಮೈದಾನದಲ್ಲಿ ನಡೆಸಿದ ಪ್ರತಿಭಟನಾ ಸಮಾವೇಶದಲ್ಲಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್‌ಮಹೇಶ್ ಮಾತನಾಡಿದರು

'ನಾಲ್ವರಿಗಿಂತ ಹೆಚ್ಚು ಜನ ಸೇರಬಾರದೆಂದು ಹೇಳಿದ್ದೀರಿ. ಒಬ್ಬರೇ ನಿಂತು ಪ್ರತಿಭಟಿಸುತ್ತೇವೆ' ಎಂದು ಗನ್‌ಹೌಸ್ ಬಳಿ ಪ್ರತಿಭಟನೆಗೆ ಮುಂದಾದ 'ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ' ಸಂಚಾಲಕ ಮಹೇಶ್ ಕಡಗದಾಳು ಅವರಿಗೆ ಪೊಲೀಸರು ಎಚ್ಚರಿಕೆ ನೀಡಿ ಕಳಿಸಿದರು.

ಕೋರ್ಟ್‌ ಅನುಮತಿ: ನಿಷೇಧಾಜ್ಞೆ ಹೇರಿಕೆ ಪ್ರಶ್ನಿಸಿ, ಪ್ರತಿಭಟನೆಗೆ ಅವಕಾಶ ನೀಡುವಂತೆ ರಾಷ್ಟ್ರ ಸುರಕ್ಷಾ ಜನಾಂದೋಲನಾ ಸಮಿತಿಯು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ವಿಚಾರಣೆ ನಡೆಸಿದ ನ್ಯಾ.ಆರ್. ದೇವದಾಸ್ ಅವರ ಏಕಸದಸ್ಯ ಪೀಠವು ಪ್ರಚೋದನಾಕಾರಿ ಭಾಷಣ ಮಾಡದೆ, ಒಂದೂವರೆ ಗಂಟೆ ಸಮಾವೇಶ ನಡೆಸುವಂತೆ ಷರತ್ತುಬದ್ಧ ಅನುಮತಿ ನೀಡಿತು.

ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನ ಫುಟ್‌ಬಾಲ್ ಮೈದಾನದಲ್ಲಿ ಮಧ್ಯಾಹ್ನ 3ಕ್ಕೆ ಸಮಾವೇಶ ನಡೆಯಿತು. ಸಮಿತಿಯ ಸಂಯೋಜಕ ಕೆ.ಟಿ.ಉಲ್ಲಾಸ್, ಸಂಚಾಲಕ ಮಹೇಶ್ ಕಡಗದಾಳು, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿದರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಮುಖಂಡ ಪ್ರತಾಪ ಸಿಂಹ ಪಾಲ್ಗೊಂಡಿದ್ದರು.

ವಿಜಯೇಂದ್ರ, ಪ್ರತಾಪ ಸಿಂಹ ಭೇಟಿ

ಬಿಜೆಪಿ ಭಿನ್ನರ ಗುಂಪಿನಲ್ಲಿ ಗುರುತಿಸಿಕೊಂಡಿದ್ದ ಮುಖಂಡ ಪ್ರತಾಪ ಸಿಂಹ ಅವರು, 'ಮೈಸೂರು ಚಲೋ'ದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದಿದ್ದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ನಗರದ ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ಭೇಟಿಯಾದರು.

ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, 'ಹೋರಾಟ ಮುಂದುವರಿಯಲಿದೆ. ಕೋರ್ಟ್ ಆದೇಶ ಗೌರವಿಸಿ ಪ್ರತಿಭಟಿಸಿಲ್ಲ' ಎಂದರು. 'ರಾಜ್ಯ ಸರ್ಕಾರವು ಕೂಡಲೇ ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟ ನಿಲ್ಲಿಸಬೇಕು. ಕನ್ನಡಿಗರು ಅವರಿಗಿಂತಲೂ ಜೋರಾಗಿಯೇ ಗಲಾಟೆ ಮಾಡಬಲ್ಲರು. ನಮಗೆ ಪುಂಡಾಟಿಕೆ ಇಷ್ಟವಿಲ್ಲ. ಕನ್ನಡಿಗರ ವಿಚಾರದಲ್ಲಿ ಸರ್ಕಾರವು ರಾಜಕಾರಣ ಮಾಡುವುದಿಲ್ಲ ಎಂದುಕೊಂಡಿದ್ದೇನೆ' ಎಂದರು.

'ಮಾ. 23ರಿಂದ ಕಾರ್ಯಕರ್ತರ ಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ, ನಾನು ಮತ್ತು ಸಚಿವರು, ಉಸ್ತುವಾರಿ ಜಿಲ್ಲೆಗಳ ಕ್ಷೇತ್ರಗಳಲ್ಲಿ ಮಾರ್ಚ್ 23ರಿಂದ ಏಪ್ರಿಲ್ 1ರವರೆಗೆ ಪಕ್ಷದ ಕಾರ್ಯಕರ್ತರ ಸಭೆ ನಡೆಸಲಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಲು ಕಂಡಿರುವ ಪಕ್ಷದ ಅಭ್ಯರ್ಥಿಗಳ ಜತೆ ಕೆಪಿಸಿಸಿಯ 'ಭಾರತ್ ಜೋಡೊ' ಭವನದಲ್ಲಿ ಸೋಮವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಸಮಯ ಸಿಕ್ಕಿದರೆ ಪ್ರತಿ ಶನಿವಾರ ಅಥವಾ ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕರ್ತರ ಸಭೆ ನಡೆಸಬೇಕು. ನಾನು ದಿನಕ್ಕೆ 2-3 ಕ್ಷೇತ್ರಗಳಂತೆ ಬೆಂಗಳೂರಿನ 28 ಕ್ಷೇತ್ರಗಳಿಗೆ ಭೇಟಿ ನೀಡಿ ಕಾರ್ಯಕರ್ತರ ಸಭೆ ಮಾಡಲು ತೀರ್ಮಾನಿಸಿದ್ದೇನೆ' ಎಂದರು.

'ಇಡೀ ವರ್ಷ ಪಕ್ಷದ ಸಂಘಟನೆಗೆ ಮೀಸಲಿಡುವಂತೆ ಬೆಳಗಾವಿಯಲ್ಲಿ ನಡೆದ ಪಕ್ಷದ ಅಧಿವೇಶನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಸೂಚನೆ ನೀಡಿದ್ದರು. ಹೀಗಾಗಿ, ಪಕ್ಷದ ಮರು ಸಂಘಟನೆಗೆ ಗಮನಹರಿಸಲಾಗುವುದು. ಹಲವು ವರ್ಷಗಳಿಂದ ಜವಾಬ್ದಾರಿ ಹೊತ್ತಿರುವವರಿಗೆ ಬೇರೆ ಹೊಣೆ ವಹಿಸಲಾಗುವುದು. ಎಲ್ಲೆಲ್ಲಿ ಪಕ್ಷದ ಸಮಿತಿಗಳ ರಚನೆ, ಪದಾಧಿಕಾರಿಗಳ ನೇಮಕ ಆಗಬೇಕೊ ಅವೆಲ್ಲವನ್ನೂ ಶೀಘ್ರದಲ್ಲಿ ಮಾಡಲಾಗುವುದು' ಎಂದರು.

ಎಲ್ಲ ಕ್ಷೇತ್ರಗಳಲ್ಲಿ ಪಕ್ಷದ ಕಚೇರಿ: 'ಮಾರ್ಚ್ ಮೊದಲ ಅಥವಾ ಎರಡನೇ ವಾರದಲ್ಲಿ ನೂತನ ಕಾಂಗ್ರೆಸ್ ಕಚೇರಿಗಳಿಗೆ ಬೆಂಗಳೂರಿನಲ್ಲಿ ವರ್ಚುವಲ್ ಮೂಲಕ ಶಂಕು ಸ್ಥಾಪನೆ ನಡೆಸಲು ಉದ್ದೇಶಿಸಿದ್ದು, ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರಿಗೆ ಆಹ್ವಾನ ನೀಡಲಿದ್ದೇನೆ' ಎಂದರು.

ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಲು ಮಂಗಳವಾರ (ಫೆ. 25) ದೆಹಲಿಗೆ ಹೋಗುತ್ತೇನೆ. ಪಕ್ಷದ ವರಿಷ್ಠರು ಸಮಯ ನೀಡಿದರೆ ಅವರನ್ನೂ ಭೇಟಿ ಮಾಡುತ್ತೇನೆ
ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

'ಐದು ವರ್ಷಗಳಿಂದ ಪಕ್ಷದಲ್ಲಿ ಸಂಯೋಜಕರಾಗಿ ಕೆಲಸ ಮಾಡುತ್ತಿರುವವರಿಗೆ ಬಡ್ತಿ ನೀಡಲಾಗುವುದು. ಬ್ಲಾಕ್ ಅಧ್ಯಕ್ಷರನ್ನು ನಿಗಮ, ಮಂಡಳಿಗಳಿಗೆ ನಾಮನಿರ್ದೇಶನ ಮಾಡಲು ಸೂಚಿಸಲಾಗಿದೆ. ಮುಖ್ಯಮಂತ್ರಿ ಜತೆ ಚರ್ಚಿಸಿ ಹೆಸರುಗಳನ್ನು ಶೀಘ್ರ ಅಂತಿಮಗೊಳಿಸಲಾಗುವುದು' ಎಂದರು.

'ವಿಧಾನ ಪರಿಷತ್‌ನ ಖಾಲಿ ಸ್ಥಾನಗಳಿಗೆ ನಾಮನಿರ್ದೇಶನ ಕುರಿತು ವರಿಷ್ಠರ ಜೊತೆ ಚರ್ಚಿಸಲು ಕಳೆದ ತಿಂಗಳ ಅಂತ್ಯದಲ್ಲಿಯೇ ದೆಹಲಿಗೆ ಹೋಗಬೇಕಿತ್ತು. ಮುಖ್ಯಮಂತ್ರಿ ಅವರು ಚೇತರಿಸಿಕೊಂಡ ನಂತರ ಮಾಡುತ್ತೇವೆ' ಎಂದರು.

ಸಾಲಬಾಧೆ: ದಂಪತಿ ಆತ್ಮಹತ್ಯೆ, ಮಗಳಿಗಾಗಿ ಶೋಧ

ಮಂಡ್ಯ: ಒಂದೇ ಕುಟುಂಬದ ಮೂವರು ಸೋಮವಾರ ತಾಲ್ಲೂಕಿನ ಚಂದಗಾಲು ಸಮೀಪ ವಿಶ್ವೇಶ್ವರಯ್ಯ ನಾಲೆಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದು, ಶ್ರೀರಂಗಪಟ್ಟಣದ ಗಂಜಾಂ ನಿವಾಸಿಗಳಾದ ಆಟೊರಿಕ್ಷಾ ಚಾಲಕ ಮಾಸ್ತಪ್ಪ (65) ಹಾಗೂ ಅವರ ಪತ್ನಿ ರತ್ನಮ್ಮ (53) ಶವವಾಗಿ ಪತ್ತೆಯಾಗಿದ್ದಾರೆ. ಅವರ ಪುತ್ರಿ ಲಕ್ಷ್ಮಿ(14) ಪತ್ತೆಗೆ ಕಾರ್ಯಾಚರಣೆ ನಡೆದಿದೆ.

'ಮಧ್ಯಾಹ್ನ ಆಟೊರಿಕ್ಷಾದಲ್ಲಿ ಬಂದು ನಾಲೆಯ ಏರಿ ಮೇಲೆ ವಾಹನ ನಿಲ್ಲಿಸಿ, ವಿಷ ಕುಡಿದು ನಂತರ ನಾಲೆಗೆ ಜಿಗಿದಿದ್ದಾರೆ. ಕುಟುಂಬ ನಿರ್ವಹಣೆಗಾಗಿ ಮಾಸ್ತಯ್ಯ ಹಲವರಿಂದ ಒಟ್ಟು ₹12 ಲಕ್ಷ ಕೈಸಾಲ ಪಡೆದಿದ್ದರು. ಮರುಪಾವತಿಗಾಗಿ ಒತ್ತಡ ಹೆಚ್ಚಾದ್ದರಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಅವರ ಸಹೋದರ ಶಂಕರ್ ಮಾಧ್ಯಮದವರಿಗೆ ತಿಳಿಸಿದ್ದಾರೆ.

'ಶಾಂತವೇರಿ ಗೋಪಾಲಗೌಡ' ಪ್ರಶಸ್ತಿ ಪ್ರಕಟ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 'ಶಾಂತವೇರಿ ಗೋಪಾಲಗೌಡ ಸಂಸ್ಕೃತಿ ಪ್ರಶಸ್ತಿ'ಗೆ ಸಾಹಿತಿ ಕಾಳೇಗೌಡ ನಾಗವಾರ ಅವರು ಆಯ್ಕೆಯಾಗಿದ್ದಾರೆ.



ಪ್ರಶಸ್ತಿಯು ₹25 ಸಾವಿರ, ಪ್ರಶಸ್ತಿ ಪತ್ರ ಹಾಗೂ ಕಂಚಿನ ಫಲಕ ಒಳಗೊಂಡಿದೆ. ಮಾರ್ಚ್ 14ರಂದು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

'ವಿ.ವಿಗಳ ವ್ಯಾಪ್ತಿ ಪುನರ್‌ವಿಂಗಡಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಬರುವ ಕಾಲೇಜುಗಳ ಪುನರ್ ವಿಂಗಡಣೆಗಾಗಿ ಸಮಿತಿ ರಚಿಸಲಾಗಿದೆ. ಸಮಿತಿ ನೀಡುವ ವರದಿ ಆಧರಿಸಿ ಸರ್ಕಾರ ತೀರ್ಮಾನ ಕೈಗೊಳ್ಳಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಕೃಷಿ ಇಲಾಖೆ ಅಧಿಕಾರಿಗಳ ಜತೆ ವಿಧಾನ ಸೌಧದಲ್ಲಿ ಸೋಮವಾರ ನಡೆಸಿದ ಸಭೆಯಲ್ಲಿ ಅವರು ಈ ವಿಷಯ ಪ್ರಸ್ತಾಪಿಸಿ ಮಾತನಾಡಿದರು.

ಕೆಲವು ಕೃಷಿ–ತೋಟಗಾರಿಕೆ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಹೆಚ್ಚು ಕಾಲೇಜುಗಳಿದ್ದು, ಇನ್ನು ಕೆಲವು ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಕಡಿಮೆ ಕಾಲೇಜುಗಳಿವೆ. ಇನ್ನು ಮುಂದೆ ಕಾಲೇಜುಗಳನ್ನು ಸಮಾನವಾಗಿ ಹಂಚಿಕೆ ಮಾಡುವುದು ಪುನರ್‌ವಿಂಗಡಣೆಯ ಉದ್ದೇಶ ಎಂದು ಅವರು ಹೇಳಿದರು.

'ವಿದ್ಯಾರ್ಥಿಗಳು, ರೈತರು ಮತ್ತು ಕೃಷಿ ವಿಶ್ವವಿದ್ಯಾಲಯಗಳ ಹಿತದೃಷ್ಟಿಯಿಂದ ಪುನರ್‌ವಿಂಗಡಣೆ ಅಗತ್ಯವಿದೆ. ಸರ್ಕಾರಕ್ಕೆ ಎಲ್ಲ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳೂ ಸಮಾನ. ಹೀಗಾಗಿ ಎಲ್ಲಾ ಜಿಲ್ಲೆಗಳು ಮತ್ತು ವಿಶ್ವವಿದ್ಯಾಲಯಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಹೇಳಿದರು.

ಕೃಷಿ ವಿಶ್ವವಿದ್ಯಾಲಯಗಳು ಸಂಶೋಧನೆ ಮತ್ತು ಪ್ರಾತ್ಯಕ್ಷಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ರೈತರನ್ನು ತಾಂತ್ರಿಕವಾಗಿ ಸಶಕ್ತರನ್ನಾಗಿ ಮಾಡಿ, ಕೃಷಿ ಕ್ಷೇತ್ರವನ್ನು ಸದೃಢಗೊಳಿಸಬೇಕು. ನಿಶ್ಚಿತ ಮತ್ತು ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸಬೇಕು ಎಂದು ಚಲುವರಾಯ ಸ್ವಾಮಿ ಸೂಚಿಸಿದರು.

'ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ತಾಂತ್ರಿಕ, ಆಡಳಿತಾತ್ಮಕ, ಆರ್ಥಿಕ ಸಮಸ್ಯೆ ಮತ್ತು ಸವಾಲುಗಳನ್ನು ಆದ್ಯತೆ ಮೇರೆಗೆ ಪಟ್ಟಿ ಮಾಡಿ ಪ್ರಸ್ತಾವನೆ ಸಿದ್ಧಪಡಿಸಬೇಕು. ಈ ಕುರಿತು ಮಾರ್ಚ್ ಬಳಿಕ ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟವರೊಂದಿಗೆ ಚರ್ಚೆ ನಡೆಸುತ್ತೇನೆ' ಎಂದು ಹೇಳಿದರು.

ಮಂಡ್ಯ ವಿ.ಸಿ ಫಾರಂನಲ್ಲಿ ಹೊಸದಾಗಿ ಆರಂಭಿಸಲು ಉದ್ದೇಶಿಸಿರುವ ನೂತನ ವಿಶ್ವವಿದ್ಯಾಲಯ ಈ ಶೈಕ್ಷಣಿಕ ವರ್ಷದಿಂದಲೇ ಕಾರ್ಯಾರಂಭ ಮಾಡಲಿದೆ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಕೃಷಿ ಇಲಾಖೆ ಕಾರ್ಯದರ್ಶಿ ಡಾ.ರವಿಶಂಕರ್ ಮತ್ತು ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಭಾಗವಹಿಸಿದ್ದರು.

ಹಂಪನಾಗೆ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿನ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಮೂಲಕ ನೀಡುವ ಟಿ.ವಿಮಲಾ ವಿ. ಪೈ ಪ್ರಾಯೋಜಿತ 2024ನೇ ಸಾಲಿನ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿಗೆ ಲೇಖಕ ಹಂ.ಪ. ನಾಗರಾಜಯ್ಯ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ. ಮಾರ್ಚ್ 23 ರಂದು ನಡೆಯಲಿರುವ ಗೋವಿಂದ ಪೈ ಸಂಶೋಧನ ಸಂಪುಟದ ದ್ವಿತೀಯ ಭಾಗದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.



ಈ ಪ್ರಶಸ್ತಿಯನ್ನು ಟಿ.ವಿ. ಮೋಹನದಾಸ್ ಪೈ ಅವರು ಸ್ಥಾಪಿಸಿದ್ದು, ತಾಳ್ತಜೆ ವಸಂತ ಕುಮಾರ್, ಕೆ. ಚಿನ್ನಪ್ಪ ಗೌಡ, ಪ್ರಭಾಕರ ಜೋಶಿ, ಕಿಶೋರಿ ನಾಯಕ್, ಎಸ್.ವಿ. ಪಾಡಿಗಾರ್ ಅವರು ಆಯ್ಕೆ ಸಮಿತಿಯಲ್ಲಿದ್ದರು ಎಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಬಿ. ಜಗದೀಶ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶರಣ ಸ್ಮಾರಕ ರಕ್ಷಣಾ ಪ್ರಾಧಿಕಾರ ರಚನೆಗೆ ಮುಖ್ಯಮಂತ್ರಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಣರ ಜನ್ಮಸ್ಥಳ, ಐಕ್ಯಸ್ಥಳ ಹಾಗೂ ಇತರೆ ಸ್ಮಾರಕಗಳ ರಕ್ಷಣೆಗಾಗಿ 'ಶರಣ ಸ್ಮಾರಕ ರಕ್ಷಣಾ ಪ್ರಾಧಿಕಾರ' ರಚನೆ, ಬಸವತತ್ವ ಪ್ರಚಾರಕ್ಕೆ ₹500 ಕೋಟಿ ನೆರವು ಸೇರಿದಂತೆ ಮಠಾಧೀಶರ ಬೇಡಿಕೆಗಳನ್ನು ಹಂತಹಂತವಾಗಿ ಈಡೇರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಲಿಂಗಾಯತ ಮಠಗಳೂ ಸೇರಿದಂತೆ ಬಸವತತ್ವ ಪಾಲಿಸುವ ವಿವಿಧ ಮಠಾಧೀಶರು, ಸಚಿವರು, ಶಾಸಕರು, ಸಮಾಜದ ಮುಖಂಡರು ಸೋಮವಾರ ನೀಡಿದ ವಿವಿಧ ಬೇಡಿಕೆಗಳ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

ಬಸವಣ್ಣನವರ ವಿಚಾರ ಮತ್ತು ಹೋರಾಟ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಪೂರಕವಾಗಿದೆ. ಬಸವಣ್ಣ ಅವರ ವಿಚಾರಗಳೇ ಸಂವಿಧಾನದಲ್ಲಿ ಅಡಕವಾಗಿವೆ ಎಂದರು.

ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿರುವ ಜಾತಿ ವ್ಯವಸ್ಥೆಗೆ ಪಟ್ಟಭದ್ರರು ನೀರು ಗೊಬ್ಬರ ಹಾಕುತ್ತಿದ್ದಾರೆ. ಅದಕ್ಕಾಗಿಯೇ ಜಾತಿವಾದಿಗಳಿಗೆ ಅವರ ವಿಚಾರಗಳು ಹಿಡಿಸುವುದಿಲ್ಲ. ಬಹಿರಂಗವಾಗಿ ವಿರೋಧಿಸಲು ಸಾಧ್ಯವಾಗದ ಕಾರಣ, ಆಂತರಿಕವಾಗಿ ವಿರೋಧಿಸುತ್ತಿದ್ದಾರೆ ಎಂದು ಟೀಕಿಸಿದರು. ಮುಖ್ಯಮಂತ್ರಿ ಭೇಟಿಗೂ ಮೊದಲು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನಿವಾಸದಲ್ಲಿ ಮಠಾಧೀಶರು, ಸಮುದಾಯದ ಸಚಿವರು, ಶಾಸಕರು ಸಭೆ ನಡೆಸಿದರು. ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮೀಜಿ, ಮಠಾಧೀಶರಾದ ಆನಂದಪುರದ ಮಲ್ಲಿಕಾರ್ಜುನ ಮರುಘರಾಜೇಂದ್ರ ಸ್ವಾಮೀಜಿ, ತೋಂಟದ ಸಿದ್ದಲಿಂಗ ಸ್ವಾಮೀಜಿ, ಭಾಲ್ಕಿಯ ಬಸವಲಿಂಗ ದೇವರು, ಮಾತೆ ಜ್ಞಾನೇಶ್ವರಿ, ಬಸವಕುಮಾರ ಸ್ವಾಮೀಜಿ, ಸಿದ್ದರಾಮೇಶ್ವರ ಸ್ವಾಮೀಜಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ. ಸೋಮಶೇಖರ್, ಸಾಹಿತಿ ಗೊ.ರು. ಚನ್ನಬಸಪ್ಪ, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಮಾಜಿ ಸಚಿವ ಎಸ್.ಎಸ್. ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.



ಬಸವತತ್ವ ಪಾಲಿಸುವ ವಿವಿಧ ಮಠಗಳ ಮಠಾಧೀಶರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ವಿವಿಧ ಬೇಡಿಕೆಗಳಿರುವ ಮನವಿಯನ್ನು ಸಲ್ಲಿಸಿದರು. ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ಸಚಿವ ಎಂ.ಬಿ. ಪಾಟೀಲ, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ, ಶಾಸಕ ವಿನಯ ಕುಲಕರ್ಣಿ ಹಾಜರಿದ್ದರು

ಲಿಂಗಾಯತ ಮಠಾಧೀಶರ ಬೇಡಿಕೆ

- ಬಸವಣ್ಣನವರ ವಿಚಾರಧಾರೆಗಳನ್ನು ಜನರಿಗೆ ತಲುಪಿಸಲು 2025–26ನೇ ಸಾಲಿನ ಬಜೆಟ್‌ನಲ್ಲಿ ₹100 ಕೋಟಿ ಅನುದಾನ, ಮುಂದಿನ ನಾಲ್ಕು ವರ್ಷಗಳಲ್ಲಿ ₹500 ಕೋಟಿ ಮೀಸಲಿಡಬೇಕು
- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣ ರಸ್ತೆಯಲ್ಲಿ ಬಸವಣ್ಣನವರ ಬೃಹತ್ ಪ್ರತಿಮೆ
- ಬೆಂಗಳೂರಿನಲ್ಲಿ 25 ಎಕರೆ ಪ್ರದೇಶದಲ್ಲಿ ಅಕ್ಷರಧಾಮದ ಮಾದರಿ ಶರಣ ದರ್ಶನ ಕೇಂದ್ರ
- ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ಮತ್ತು ಸಂಶೋಧನ ಕೇಂದ್ರ
- ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬಸವಭವನ ನಿರ್ಮಾಣ
- ಶರಣ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಸಾರಕ್ಕಾಗಿಯೇ ಇರುವ ಸಂಸ್ಥೆಗಳಿಗೆ ಅನುದಾನ

ಕ್ಷೇಮ ಕುಶಲ



ಕಜ್ಜಿ ಇದಕ್ಕುಂಟು ಸುಲಭ ಚಿಕಿತ್ಸೆ

ಡಾ. ಬಿ. ಆರ್. ಸುಹಾಸ್

‘ನಿಮಗೆ ಕಜ್ಜಿಯಾಗಿದೆ’ ಎಂದು ಚರ್ಮವೈದ್ಯರು ಹೇಳಿದ ಕೂಡಲೇ ಅನೇಕ ರೋಗಿಗಳು ಹೌಹಾರುತ್ತಾರೆ!

‘ಅಯ್ಯೋ! ಅಂಥ ಭಯಂಕರ ರೋಗ ನನಗಾಗಿಲ್ಲ ಡಾಕ್ಟ್ರೇ! ಏನೋ ಸುಮ್ಮನೆ ಕೆರೆತ ಅಷ್ಟೇ. ಸರಿಯಾಗಿ ನೋಡಿ ಡಾಕ್ಟ್ರೇ!’ – ಎಂದು ಅಲವತ್ತುಕೊಳ್ಳುತ್ತಾರೆ! ಇದಕ್ಕೆ ಕಾರಣವೆಂದರೆ ಕಜ್ಜಿಯನ್ನು ನಾಯಿಯೊಂದಿಗೆ ತಳುಕು ಹಾಕಿಕೊಂಡಿರುವುದು!

ನಿಜ. ನಾಯಿಗೆ ಕಜ್ಜಿ ಬಂದರೆ ಅದರ ಮೈಯ ರೋಮಗಳೆಲ್ಲ ಉದುರಿ, ಅಲ್ಲಲ್ಲ ಗಟ್ಟಿಯಾದ ಮಚ್ಚೆಗಳಾಗಿ, ಅದರ ದೇಹ ವಿಕಾರವಾಗಿ ಕಾಣುವುದು. ಆದರೆ ಮನುಷ್ಯರಿಗೆ ಕಜ್ಜಿ ಬಂದರೆ ಹಾಗೆ ಕಾಣುವುದಿಲ್ಲ. ನಮ್ಮಲ್ಲಿ ವಿಶಿಷ್ಟವಾಗಿ ಬೆರಳುಸಂದುಗಳು, ಮೊಣಕೈಯ ಒಳಭಾಗ, ತೋಳು, ಕಂಕುಳು, ಸ್ತನಗಳ ಕೆಳಗೆ, ನಾಭಿಯ ಸುತ್ತ, ತೊಡೆಸಂದು, ಗುಪ್ತಾಂಗಗಳು, ಹಾಗೂ ಪೃಷ್ಠದ ಮೇಲೆ ಗುಳ್ಳೆಗಳು, ನೀರ್ಗುಳ್ಳೆಗಳು, ಕೆರೆದ ಗುರುತುಗಳು ಮತ್ತು ಕೆಲವೊಮ್ಮೆ ಗಂಟಿನಂಥ ದಪ್ಪ ಗುಳ್ಳೆಗಳು ಆಗುತ್ತವೆ. ಈ ಪ್ರದೇಶಗಳನ್ನು ಒಂದು ಕಾಲ್ಪನಿಕ ಚಕ್ರಾಕಾರವಾಗಿ ಸೇರಿಸಬಹುದು. ಅದನ್ನು ‘ಹೆಬ್ರಾನ ಚಕ್ರ’ (Circle of Hebra) ಎನ್ನುತ್ತಾರೆ. ಹೀಗಾದಾಗ ಮೈಯೆಲ್ಲಾ ತುರಿಸುತ್ತಿದ್ದು, ಇದು ರಾತ್ರಿಯ ವೇಳೆ ಹೆಚ್ಚುತ್ತದೆ. ಕಜ್ಜಿಯ ಅತ್ಯಂತ ವಿಶಿಷ್ಟ ಗುರುತೆಂದರೆ ಬರ್ರೊ ಅಥವಾ ಬಿಲ. ಇದು ಒಂದು ಅಲೆಯಾಕಾರದ ದಾರದಂಥ ಬಿಳಿ ಗುರುತಾಗಿದ್ದು, ಅದರ ತೆರೆದ ತುದಿಯಲ್ಲಿ ಒಂದು ಗುಳ್ಳೆಯಿರುತ್ತದೆ. ಇದು ಶಿಶ್ನ ಇಲ್ಲವೇ ಬೆರಳುಸಂದುಗಳಲ್ಲಿ ಕಂಡುಬರುತ್ತದೆ. ಆದರೆ ಇದು ಸುಲಭವಾಗಿ ಕಾಣಸಿಗುವುದಿಲ್ಲ.



ಕಜ್ಜಿ ಅಥವಾ ‘ಸ್ಕೇಬೀಸ್’ (Scabies) ಕಾಯಿಲೆ ಬರುವುದು ನುಸಿ ಅಥವಾ ‘ಮೈಟ್’ ಎಂಬ ಕೀಟದಿಂದ. ವೈಜ್ಞಾನಿಕವಾಗಿ ಇದನ್ನು ‘ಸಾರ್ಕೋಪ್ಟೆಸ್ ಸ್ಕೇಬೀ’ (Sarcoptes scabie) ಎನ್ನುತ್ತಾರೆ. ಇದೊಂದು ರಕ್ತವನ್ನು ಹೀರುವ ಪರಾವಲಂಬಿ ಕೀಟ; ನಮ್ಮ ದೇಹದ ಚರ್ಮವನ್ನು ಬಿಲ ಕೊರೆದು ಪ್ರವೇಶಿಸಿ ಅದರ ಮೇಲ್ಮೈಯಲ್ಲಿ ನೆಲೆಸುತ್ತದೆ. ಹೆಣ್ಣುನುಸಿ ತನ್ನ ಜೀವನಚಕ್ರದಲ್ಲಿ ನಲವತ್ತರಿಂದ ಐವತ್ತು ಮೊಟ್ಟೆಗಳನ್ನಿರಿಸುತ್ತವೆ; ಮೊಟ್ಟೆಯೊಡೆದು ಬರುವ ಮರಿಗಳು ಮೈಯೆಲ್ಲಾ ಹರಡುತ್ತವೆ.

ಕಜ್ಜಿಯು ಒಬ್ಬರಿಂದೊಬ್ಬರಿಗೆ ಸುಲಭವಾಗಿ ಅಂಟುತ್ತದೆ. ಸ್ನಾನವನ್ನು ಮಾಡದೆ ಅಶುದ್ಧವಾಗಿರುವುದು, ಅತಿಯಾದ ಜನಸಂದಣಿಯಲ್ಲಿ ಓಡಾಡುವುದು; ಗಾಳಿ-ಬೆಳಕುಗಳಿಲ್ಲದ, ಹೆಚ್ಚು ಜನರಿರುವ ಮನೆಗಳಲ್ಲಿ ವಾಸಿಸುವುದು – ಇವು ಕಜ್ಜಿ ಹರಡಲು ಕಾರಣಗಳು. ಮಕ್ಕಳಲ್ಲಿ ಇದು ಹೆಚ್ಚು. ರೋಗನಿರೋಧಕ ಶಕ್ತಿ ಕಡಿಮೆಯಿರುವವರಲ್ಲಿ ಕಜ್ಜಿ ತೀವ್ರವಾಗಿ ಆಗುತ್ತದೆ.

ಕಜ್ಜಿಯಲ್ಲಿ ಮುಖ್ಯವಾಗಿ ತುರಿಕೆಯಿರುವುದರಿಂದ ಕೆರೆದು ಗಾಯಗಳಾಗಿ ಅವುಗಳಿಗೆ ಬ್ಯಾಕ್ಟೀರಿಯಾ ಅಂಟಿ ಎರಡನೆಯ ಸೋಂಕಾಗಬಹುದು. ಆಗ ಕೀವುಗುಳ್ಳೆಗಳು, ಕುರುವಿನಂಥ ಊತಗಳು ಉಂಟಾಗಿ, ಅವು ನೋವನ್ನು ತರುತ್ತವೆ. ಕಜ್ಜಿಯ ಚಿಕಿತ್ಸೆ ಬಹಳ ಸುಲಭ. ‘ಪರ್ಮೆಥ್ರಿನ್’ ಎಂಬ ಮುಲಾಮು ಇದಕ್ಕೆ ರಾಮಬಾಣದಂತೆ ಕೆಲಸ ಮಾಡುತ್ತದೆ. ಕಜ್ಜಿಯ ಕೀಟವನ್ನು ಕೊಲ್ಲುವ ಇದು ನಮಗೇನೂ ತೊಂದರೆ ಮಾಡುವುದಿಲ್ಲ. ಇದನ್ನು ವೈದ್ಯರ ನಿರ್ದೇಶಾನುಸಾರ, ರಾತ್ರಿ ಗಲ್ಲದಿಂದ ಕೆಳಗೆ ಮೈ ಪೂರಾ ಸವರಿ, ಹನ್ನೆರಡು ಗಂಟೆಗಳ ಬಳಿಕ, ಅಂದರೆ ಬೆಳಿಗ್ಗೆ ಅದೇ ಸಮಯಕ್ಕೆ ಸ್ನಾನ ಮಾಡಿ ತೊಳೆಯಬೇಕು. ಮುಲಾಮು ಕೀಟದ ಮೊಟ್ಟೆಗಳ ಮೇಲೆ ಪ್ರಭಾವ ಬೀರದು. ಆದುದರಿಂದ, ಒಂದು ವಾರದಲ್ಲಿ ಮರಿಗಳು ಹೊರಬರುವುದರಿಂದ ಒಂದು ವಾರದ ನಂತರ ಮುಲಾಮನ್ನು ಪುನಃ ಬಳಸಬೇಕಾಗುತ್ತದೆ. ಹೀಗೆ ಈ ಮುಲಾಮನ್ನು ಎರಡು ಬಾರಿ ಬಳಸಿದರೆ ಕಜ್ಜಿ ಗುಣವಾಗುತ್ತದೆ. ಆದರೆ ನವೆ ಮತ್ತು ಗುಳ್ಳೆಗಳು ದೇಹದ ಪ್ರತಿಕ್ರಿಯೆಯಾದ್ದರಿಂದ ಇವುಗಳಿಗೆ ಬೇರೆ ಮುಲಾಮು ಮತ್ತು ಔಷಧಗಳು ಬೇಕಾಗುತ್ತವೆ.

ಮೇಲೆ ವಿವರಿಸಿದ ಕಜ್ಜಿಯು ಸಾಮಾನ್ಯ ಬಗೆಯದ್ದಾಗಿದ್ದು, ಈ ರೀತಿ ಉಂಟಾದಾಗ ಮೈಮೇಲೆ ಹತ್ತರಿಂದ ಹದಿನೈದು ನುಸಿಗಳಿರುತ್ತವೆ. ಆದರೆ ದೇಹದ ರೋಗನಿರೋಧಕ ಶಕ್ತಿ ಬಹಳ ಕಡಿಮೆಯಿದ್ದರೆ, ಗಟ್ಟಿಯಾದ ಪದರಗಳಿರುವ ಮಚ್ಚೆಗಳಾಗುವ ತೀವ್ರ ಬಗೆಯ ಕಜ್ಜಿಯಾಗುತ್ತದೆ. ಇದನ್ನು ‘ನಾರ್ವೇಜಿಯನ್ ಕಜ್ಜಿ’ (Norwegian Scabies) ಅಥವಾ ‘ಕ್ರಸ್ಟೆಡ್ ಸ್ಕೇಬೀಸ್’ (Crusted Scabies) ಎನ್ನುತ್ತಾರೆ. ಈ ಬಗೆಯ ಕಜ್ಜಿಯಲ್ಲಿ ಮೈಮೇಲೆ ಸಾವಿರಾರು ನುಸಿಗಳಿರುತ್ತವೆ. ಇದಕ್ಕೆ ತೀವ್ರ ಚಿಕಿತ್ಸೆ ಬೇಕಾಗುತ್ತದೆ; ಮುಲಾಮಿನ ಜೊತೆಗೆ ಮಾತ್ರೆಗಳೂ ಬೇಕಾಗುತ್ತವೆ.

ಕಜ್ಜಿಯು ಪ್ರಾಣಿಗಳಿಂದಲೂ ನಮಗೆ ಅಂಟಬಹುದು. ಮುಖ್ಯವಾಗಿ ಕಜ್ಜಿಯು ನಾಯಿಗಳಿಂದ ಅಂಟುತ್ತದೆ. ಆದ್ದರಿಂದ ನಾಯಿಯೊಂದಿಗೆ ಒಡನಾಡುವವರು ಎಚ್ಚರವಾಗಿರಬೇಕು; ಅದಕ್ಕೆ ಕಜ್ಜಿ ಬಂದಿದೆ ಎಂದು ಸಂಶಯವಾದರೆ ಪಶುವೈದ್ಯರಿಗೆ ತೋರಿಸಬೇಕು.

ಕಜ್ಜಿಯು ಒಬ್ಬರಿಂದೊಬ್ಬರಿಗೆ ಅಂಟುವುದರಿಂದ, ಕೆಲವೊಮ್ಮೆ ಒಬ್ಬರಿಗೆ ಚಿಕಿತ್ಸೆ ಮಾಡಿದರೂ ಅವರಿಂದ ಅವರ ಸಮೀಪವರ್ತಿಗಳಿಗೆ ಅಂಟಿ, ರೋಗಲಕ್ಷಣಗಳು ಕಾಣಿಸಿಕೊಳ್ಳದೇ ಅವರಿಂದ ಪುನಃ ಇವರಿಗೇ ಅಂಟಬಹುದು. ಹೀಗಾದಾಗ ಅದಕ್ಕೆ ‘ಪಿಂಗ್ ಪಾಂಗ್ ಪರಿಣಾಮ’ (Ping pong effect) ಎನ್ನುತ್ತಾರೆ. ಇದನ್ನು ತಪ್ಪಿಸಲು, ರೋಗಿಯ ಸಮೀಪವರ್ತಿಗಳಿಗೂ ಚಿಕಿತ್ಸೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಹಾಸ್ಟೆಲ್, ಶಾಲೆ, ಜೈಲುಗಳಲ್ಲಿ ಹಾಗೂ ಮನೆಗಳಲ್ಲಿಯ ಸಮೀಪವರ್ತಿಗಳಿಗೆ ಹೀಗೆ ಮಾಡಬೇಕಾಗುತ್ತದೆ.

ಕೆಲವೊಮ್ಮೆ ಶುಭ್ರವಾಗಿರುವವರಲ್ಲಿ ಕಜ್ಜಿಯಾದಾಗ ಅದರ ಲಕ್ಷಣಗಳು ಬಹಳ ಕಡಿಮೆಯಿರುತ್ತವೆ. ಇದನ್ನು ‘ಅಡಗಿದ ಕಜ್ಜಿ ’(Hidden Scabies) ಎನ್ನುತ್ತಾರೆ. ಅಂತೆಯೇ ಸ್ಟಿರಾಯ್ಡ್ ಮುಲಾಮನ್ನು ಬಳಸಿ, ಇಲ್ಲವೇ ತಪ್ಪಾದ ಸ್ವಯಂ ಚಿಕಿತ್ಸೆ ಮಾಡಿಕೊಂಡರೆ ರೋಗ ಲಕ್ಷಣಗಳು ಸ್ಪಷ್ಟವಾಗಿರದೇ ಬೇರೆಯೇ ರೀತಿ ಇರುತ್ತವೆ. ಇದನ್ನು ‘ಛದ್ಮ ಕಜ್ಜಿ’ (Scabies incognito) ಎನ್ನುತ್ತಾರೆ. ಹಾಗಾಗಿ ಮೈಯೆಲ್ಲಾ ಕೆರೆತವಾದರೆ, ಅದರಲ್ಲೂ ರಾತ್ರಿಯಲ್ಲಿ ಹೆಚ್ಚಾಗಿದ್ದರೆ, ಚರ್ಮವೈದ್ಯರಿಗೆ ತೋರಿಸಬೇಕು. ಕಜ್ಜಿಯು ಅಂಟುರೋಗವಾಗಿರುವುದರಿಂದ ಶುಭ್ರವಾಗಿರುವವರಲ್ಲೂ ಇದು ಬರಬಹುದು.

ಕಜ್ಜಿ ಒಂದು ಸಾಮಾನ್ಯವಾದ ಸೌಮ್ಯ ಚರ್ಮರೋಗ. ಇದಕ್ಕೆ ಹೆದರಬೇಕಿಲ್ಲ; ಆದರೆ ಬೇಗನೆ ಸೂಕ್ತ ಚಿಕಿತ್ಸೆ ಮಾಡಿಸಿಕೊಳ್ಳಬೇಕು. ಇಲ್ಲವಾದರೆ ಇದು ಇತರರಿಗೂ ಹರಡಿ, ಕೆರೆತದಿಂದ ಇತರ ಸಮಸ್ಯೆಗಳೂ ಉಂಟಾಗುತ್ತವೆ.

ನೀರು ಜೀವಾಮೃತ

ಡಾ. ಕುಶ್ವಂತ್ ಕೋಳಿಬೈಲು

ಮನುಷ್ಯ ತಾನು ಸೇವಿಸುವ ಗಾಳಿ ಮತ್ತು ನೀರಿನ ಗುಣಮಟ್ಟದ ಮೇಲೆ ಅವನ ಆರೋಗ್ಯ ಅವಲಂಬಿತವಾಗಿರುತ್ತದೆ. ಪ್ರಪಂಚದ ಎಲ್ಲ ದೇಶಗಳ ಮತ್ತು ಪ್ರದೇಶಗಳ ನೀರಿನ ಗುಣಮಟ್ಟ ಒಂದೇ ರೀತಿಯದ್ದಾಗಿರುವುದಿಲ್ಲ. ಬಡರಾಷ್ಟ್ರಗಳಲ್ಲಿ ಹೆಚ್ಚಿರುವ ಆರೋಗ್ಯದ ಸಮಸ್ಯೆಗಳು, ಕಡಿಮೆ ಮಟ್ಟದಲ್ಲಿರುವ ಜನರ ಜೀವಿತಾವಧಿ ಮತ್ತು ಹೆಚ್ಚಿರುವ ಶಿಶುಗಳ ಮರಣಪ್ರಮಾಣಗಳಿಗೆ ಕಳಪೆ ಗುಣಮಟ್ಟದ ನೀರು ಕೂಡ ಮುಖ್ಯ ಕಾರಣ. ಅಶುದ್ಧವಾದ ನೀರಿನಿಂದ ಅತಿಸಾರ, ವಾಂತಿ ಮತ್ತು ಕರುಳಿನ ಸೋಂಕು ಕೂಡ ಉಂಟಾಗಬಹುದು. ಶ್ವಾಸಕೋಶದ ಸೋಂಕನ್ನು ಹೊರತುಪಡಿಸಿದರೆ ಬಡದೇಶಗಳಲ್ಲಿ ಅತಿಸಾರವು ಮಕ್ಕಳ ಅತಿ ಹೆಚ್ಚು ಮರಣಕ್ಕೆ ಕಾರಣವಾಗುತ್ತದೆ. ಈ ಕಾರಣಗಳಿಗಾಗಿ ವಿವಿಧ ದೇಶಗಳಲ್ಲಿರುವ ನೀರಿನ ಗುಣಮಟ್ಟ ಮತ್ತು ಅದರಿಂದ ಉಂಟಾಗುವ ಆರೋಗ್ಯಸಮಸ್ಯೆಗಳ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯುನೆಸ್ಕೊ ವಿಶೇಷ ನಿಗಾ ವಹಿಸುತ್ತದೆ. ಪ್ರತಿಯೊಬ್ಬ ಮನುಷ್ಯನಿಗೆ ಆತನ ಸೇವನೆಗೆ, ಅಡುಗೆಗೆ ಮತ್ತು ವ್ಯಕ್ತಿಗತ ಸ್ವಚ್ಛತೆಗಾಗಿ ಕನಿಷ್ಠ ಏಳೂವರೆ ಲೀಟರಿನಷ್ಟು ನೀರು ನಿತ್ಯ ಬೇಕಾಗುತ್ತದೆ. ಬಟ್ಟೆ ತೊಳೆಯುವುದರಿಂದ ಹಿಡಿದು ಮನೆಯ ಸ್ವಚ್ಛತಾ ಕಾರ್ಯಗಳನ್ನು ಲೆಕ್ಕ ಹಾಕಿದರೆ ಪ್ರತಿಯೊಬ್ಬನಿಗೆ ನಿತ್ಯ ಐವತ್ತು ಲೀಟರಿನಷ್ಟಾದರೂ ನೀರಿನ ಅಗತ್ಯವಿದೆ. ಮನುಷ್ಯನು ಕೃಷಿಯಿಂದ ಹಿಡಿದು ಕೈಗಾರಿಕೆಗಳವರೆಗೆ ನೀರಿನ ಮೇಲೆಯೇ ಅವಲಂಬಿತನಾಗಿದ್ದಾನೆ. ಭೂಮಿಯ ಮೇಲೆ ಶೇ 79ರಷ್ಟು ನೀರಿನ ಪ್ರಮಾಣವಿದ್ದರೂ ಅದರಲ್ಲಿ ಶೇ 96ರಷ್ಟು ಸಾಗರದಲ್ಲಿರುವ ಉಪ್ಪುನೀರು. ಉಳಿದಿರುವ ಶೇ 3ರಿಂದ 4ರಷ್ಟು ನೀರು ಮಾತ್ರ ಮನುಷ್ಯನ ದಿನನಿತ್ಯದ ಅಗತ್ಯಗಳಿಗೆ ಸೂಕ್ತವಾದ ನೀರು.

ನೀರನ್ನು ಅದರ ಗುಣಮಟ್ಟದ ಆಧಾರದ ಮೇಲೆ ವಿಂಗಡಿಸಲಾಗಿದೆ. ಕುಡಿಯಲು ಬಳಸಬಹುದಾದ ನೀರು, ಸ್ನಾನ ಮಾಡಲು ಬಳಸಬಹುದಾದ ನೀರು, ಮೀನು ಸಾಕಣೆಗೆ ಬಳಸಬಹುದಾದ ನೀರು, ಕೃಷಿಗೆ ಬಳಸಬಹುದಾದ ನೀರು ಮತ್ತು ಕೈಗಾರಿಕೆಗಳಲ್ಲಿ ಬಳಸಬಹುದಾದ ನೀರಿನ ಗುಣಮಟ್ಟಗಳಲ್ಲಿ ವಿವಿಧ ವ್ಯತ್ಯಾಸಗಳಿವೆ. ಸ್ನಾನಕ್ಕೆ ಬಳಸಬಹುದಾದ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಹಾಗೆಯೆ ಕೈಗಾರಿಕೆಗಳಲ್ಲಿ ಬಳಸಬಹುದಾದ ನೀರನ್ನು ಕೃಷಿಗೆ ಬಳಸಲಾಗುವುದಿಲ್ಲ. ನೀರು ಹಲವು ಪದಾರ್ಥಗಳಿಂದ ಮತ್ತು ಕೆಲವು ಕಾರಣಗಳಿಂದ ಕಲುಷಿತಗೊಳ್ಳುತ್ತದೆ. ನೀರಿನ ಮೂಲಕ್ಕೆ ಕೊಳಚೆನೀರು ಸೇರುವುದರಿಂದ ಸಾಂಕ್ರಾಮಿಕ ರೋಗಗಳನ್ನು ಉಂಟುಮಾಡುವ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳು ನೀರಿನಲ್ಲಿ ಸೇರಿಕೊಳ್ಳುತ್ತವೆ. ನೀರಿಗೆ ವಿವಿಧ ರಾಸಾಯನಿಕ ಪದಾರ್ಥಗಳು ಮತ್ತು ಕೀಟನಾಶಕ/ಕಳೆನಾಶಕಗಳೂ ಸೇರಿಕೊಳ್ಳಬಹುದು. ಮಾತ್ರವಲ್ಲ, ಸೀಸ, ಪಾದರಸದಂಥ ‘ಹೆವಿ ಮೆಟಲ್’ಗಳು ಸೇರಿ ನೀರು ಮತ್ತಷ್ಟು ಅಪಾಯಕಾರಿಯಾಗಬಲ್ಲದು. ಕೆಲವು ಪ್ರದೇಶಗಳ ಅಂತರ್ಜಲದಲ್ಲಿ ಸ್ವಾಭಾವಿಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಫ್ಲೋರಿನ್ ಮತ್ತು ಆರ್ಸನಿಕ್ ಕೂಡ ಮನುಷ್ಯನ ಆರೋಗ್ಯಕ್ಕೆ ಅಪಾಯಕಾರಿ.

ನಾವು ಬಳಸುವ ನೀರಿನ ಮೂಲ ಯಾವುದು ಮತ್ತು ಅದು ನಮ್ಮನ್ನು ತಲುಪುವ ಮೊದಲು ಯಾವುದೆಲ್ಲ ರೀತಿಯಲ್ಲಿ ಶುದ್ಧೀಕರಣ ಆಗಿದೆ ಎಂದು ತಿಳಿದುಕೊಳ್ಳುವುದು ಉತ್ತಮ

ನೀರಿನಲ್ಲಿರುವ ಅಪಾಯಕಾರಿ ಸೂಕ್ಷ್ಮಾಣುಜೀವಿಗಳ ಪ್ರಮಾಣ, ಆಮ್ಲೀಯತೆ, ಆಮ್ಲಜನಕದ ಪ್ರಮಾಣ ಮತ್ತು ನೀರಿನಲ್ಲಿ ಬೆರೆತಿರುವ ರಾಸಾಯನಿಕ ಪದಾರ್ಥಗಳ ಪ್ರಮಾಣದ ಮೇಲೆ ನಾವು ನೀರನ್ನು ವಿಂಗಡಿಸುತ್ತೇವೆ. ನಾವು ಕುಡಿಯಲು ಬಳಸುವ ನೀರಿನಲ್ಲಿ ಅಪಾಯಕಾರಿ ಸೂಕ್ಷ್ಮಾಣುಜೀವಿಗಳು ಇರಬಾರದು. ಕುಡಿಯಲು ಬಳಸುವ ನೀರಿನ ಆಮ್ಲೀಯತೆಯು 6.5ರಿಂದ 8.5ರ ಒಳಗಿರಬೇಕು. ಕುಡಿಯಲು ಬಳಸುವ ನೀರಿನಲ್ಲಿ ಉತ್ತಮ ಪ್ರಮಾಣದಲ್ಲಿ ಆಮ್ಲಜನಕ ಕರಗಿರಬೇಕು. ಎಲ್ಲದ್ದಕ್ಕಿಂತ ಮುಖ್ಯವಾಗಿ ಕುಡಿಯುವ ನೀರಿನಲ್ಲಿ ಯಾವುದೇ ಹಾನಿಕಾರಕ ರಾಸಾಯನಿಕಗಳು ಮತ್ತು ಅಪಾಯಕಾರಿ ಲೋಹಗಳು ಬೆರೆತಿರಬಾರದು.

ಕುದಿಸಿ ಆರಿಸಿದ ನೀರನ್ನು ಕುಡಿಯುವುದು ಆರೋಗ್ಯಕ್ಕೆ ಉತ್ತಮವೆಂಬ ಮನುಷ್ಯ ಬಹಳ ಹಿಂದಿನಿಂದಲೂ ನಂಬಿದ್ದಾನೆ. ನೀರನ್ನು ಕುದಿಸುವುದರಿಂದ ಅದರಲ್ಲಿರುವ ಅಪಾಯಕಾರಿ ಸೂಕ್ಷ್ಮಾಣುಜೀವಿಗಳು ಸಾಯುತ್ತವೆ, ನಿಜ. ಆದರೆ, ನೀರಿನಲ್ಲಿ ಇರಬಹುದಾದ ರಾಸಾಯನಿಕ ಪದಾರ್ಥಗಳ ಮತ್ತು ಲೋಹಗಳ ಪ್ರಮಾಣ ಹೀಗೆ ಕುದಿಸುವುದರಿಂದ ವ್ಯತ್ಯಾಸವಾಗುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ನಗರಗಳಿಗೆ ನೀರನ್ನು ಪೈಪುಗಳ ಮೂಲಕ ಸರಬರಾಜು ಮಾಡುತ್ತಾರಷ್ಟೆ. ಈ ವ್ಯವಸ್ಥೆಯಲ್ಲಿ ನೀರನ್ನು ಕುದಿಸಿ ಕೀಟಾಣುಗಳನ್ನು ನಾಶಪಡಿಸಲಾಗದಲ್ಲವೇ?. ಅಂತಹ ಸಂದರ್ಭದಲ್ಲಿ ಪ್ರಪಂಚದ ಹೆಚ್ಚಿನ ಕಡೆ ನೀರಿನಲ್ಲಿರುವ ಅಪಾಯಕಾರಿ ಸೂಕ್ಷ್ಮಾಣುಜೀವಿಗಳನ್ನು ನಾಶ ಮಾಡಲು ನೀರಿಗೆ ಸೂಕ್ತ ಪ್ರಮಾಣದ ಕ್ಲೋರಿನ್ ಅನ್ನು ಬಳಸಲಾಗುತ್ತದೆ. ಇದು ಕಡಿಮೆ ಖರ್ಚಿನಲ್ಲಿ ಆಗುವ ಕೆಲಸವಾದುದರಿಂದ ಈ ಕ್ರಮವು ಹೆಚ್ಚು ಪ್ರಚಲಿತವಾಗಿದೆ. ಆದರೆ, ಕ್ಲೋರಿನ್‌ನಿಂದ ನೀರಿನ ರುಚಿ ಮತ್ತು ವಾಸನೆ ಬದಲಾಗುವುದು ಸಹಜ. ಸೂರ್ಯನ ಬೆಳಕು ಕೂಡ ನೀರಿನಲ್ಲಿರುವ ಸೂಕ್ಷ್ಮಾಣುಗಳನ್ನು ನಾಶಮಾಡಬಲ್ಲದು. ನೀರನ್ನು ಓಝೋನ್ ಮತ್ತು ಯುವಿ ವಿಕಿರಣಗಳ ಮೂಲಕವೂ ಶುದ್ಧೀಕರಿಸಬಹುದು. ದುಬಾರಿಯಾದ ಈ ಕ್ರಮದಿಂದಲೂ ರಾಸಾಯನಿಕಗಳನ್ನು ನೀರಿನಿಂದ ಬೇರ್ಪಡಿಸಲಾಗದು. ಹೀಗಾಗಿ ನೀರಿನಲ್ಲಿ ಬೆರೆತಿರುವ ರಾಸಾಯನಿಕಗಳನ್ನು, ಖನಿಜ ಮತ್ತು ಲೋಹಗಳನ್ನು ಬೇರ್ಪಡಿಸಲು ನೀರನ್ನು ಫಿಲ್ಟರ್ ಮೂಲಕವೇ ಶುದ್ಧೀಕರಣ ಮಾಡಬೇಕಾಗುತ್ತದೆ. ಮರಳು ಅಥವಾ ಕಾರ್ಬನ್ ಮೂಲಕ ನೀರನ್ನು ನಿಧಾನವಾಗಿ ಫಿಲ್ಟರ್ ಮಾಡಬಹುದು. ಜತೆಗೆ ಇನ್ನೂ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಕೂಡ ಫಿಲ್ಟರ್ ಮಾಡಬಹುದು.



ನಾವು ಕುಡಿಯಲು ಬಳಸುವ ನೀರು ಸೂಕ್ತ ರೀತಿಯಲ್ಲಿ ಫಿಲ್ಟರ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಮತ್ತು ಅದರಲ್ಲಿರುವ ಅಪಾಯಕಾರಿ ಸೂಕ್ಷ್ಮಾಣುಜೀವಿಗಳನ್ನು ಕುದಿಸುವ ಮೂಲಕ ಅಥವಾ ಕ್ಲೋರಿನ್ ಮೂಲಕ ನಿರ್ನಾಮ ಮಾಡಿದ ಬಳಿಕವಷ್ಟೆ ಕುಡಿಯಲು ಬಳಸಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

24) ಸರಾಸರಿಯನ್ನು ಕಂಡುಹಿಡಿಯಿರಿ.

ಪುಸ್ತಕಗಳ ಸಂಖ್ಯೆ x	ವಿದ್ಯಾರ್ಥಿಗಳ ಸಂಖ್ಯೆ (f)
0	35
1	64
2	68
3	18
4	15
	N=200

ಉತ್ತರ :

ಪುಸ್ತಕಗಳ ಸಂಖ್ಯೆ x	ವಿದ್ಯಾರ್ಥಿಗಳ ಸಂಖ್ಯೆ (f)	fx
0	35	00
1	64	64
2	68	136
3	18	54
4	15	60
	N = 200	314

ಸರಾಸರಿ=

$$= \sum \frac{fx}{n}$$

$$= \frac{314}{200} = 1.5$$

ಸರಾಸರಿ = 1.5


25) 10 cm ತ್ರಿಜ್ಯವುಳ್ಳ ವೃತ್ತದಲ್ಲಿನ ಒಂದು ಜ್ಯಾವು ವೃತ್ತಕೇಂದ್ರದಲ್ಲಿ ಲಂಬಕೋನವನ್ನುಂಟು ಮಾಡುತ್ತದೆ. ಜ್ಯಾದಿಂದ ಉಂಟಾದ

1) ಲಘುವೃತ್ತಖಂಡ

2) ಅಧಿಕ ತ್ರಿಜ್ಯಾಂತರ ಖಂಡಗಳ ವಿಸ್ತೀರ್ಣಗಳನ್ನು ಕಂಡುಹಿಡಿಯಿರಿ.

(π = 3.14 ಎಂದು ಬಳಸಿ).

ಪರಿಹಾರ:–



ಇಲ್ಲಿ ವೃತ್ತದಲ್ಲಿ O ವೃತ್ತ ಕೇಂದ್ರವಾಗಿದೆ. AB ವೃತ್ತದ ಜ್ಯಾ ಆಗಿದೆ

$\angle BOA = 90°$

ಇಲ್ಲಿ ವೃತ್ತದಲ್ಲಿ ವೃತ್ತ ತ್ರಿಜ್ಯ(r)= 10 cm

(1) ಲಘು ವೃತ್ತಖಂಡದ ವಿಸ್ತೀರ್ಣ= $(90/360°)\times\pi r^2$

$= (¼)\times(22/7)\times 10^2$

ಅಥವಾ ಲಘು ವೃತ್ತಖಂಡದ= 78.5 cm^2

ΔAOBವಿಸ್ತೀರ್ಣ= = ½×OB×OA

OB ಮತ್ತು OA ವೃತ್ತ ತ್ರಿಜ್ಯ(r) = 10 cm

ΔAOBವಿಸ್ತೀರ್ಣ = ½×10×10= 50 cm^2

ಲಘು ವೃತ್ತಖಂಡದ ವಿಸ್ತೀರ್ಣ=

ಲಘು ವೃತ್ತಖಂಡದ ವಿಸ್ತೀರ್ಣ– ΔAOBವಿಸ್ತೀರ್ಣ

$= 78.5 - 50$

$= 28.5\ cm^2$

2) ಅಧಿಕ ತ್ರಿಜ್ಯಾಂತರ ಖಂಡಗಳ ವಿಸ್ತೀರ್ಣ=

ವೃತ್ತದ ವಿಸ್ತೀರ್ಣ–ಲಘು ವೃತ್ತಖಂಡದ ವಿಸ್ತೀರ್ಣ

$= (3.14\times 10^2) - 78.5$

$= 235.5\ cm^2$

26) ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54 ಹಾಗೂ ಅದರ ಮೊದಲ 11 ಪದಗಳ ಮೊತ್ತ 693 ಆದರೆ, ಸಮಾಂತರ ಶ್ರೇಢಿಯನ್ನು ಕಂಡುಹಿಡಿಯಿರಿ ಮತ್ತು ಈ ಶ್ರೇಢಿಯ ಎಷ್ಟನೇ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ?

ಪರಿಹಾರ:– ಒಂದು ಸಮಾಂತರ ಶ್ರೇಢಿಯ 2ನೇ ಮತ್ತು 4ನೇ ಪದಗಳ ಮೊತ್ತ 54

$a_2 + a_4 = 54$

$a + d + a + 3d = 54$

$2a + 4d = 54$

$a + 2d = 27$ ….. (i)

ಮೊದಲ 11 ಪದಗಳ ಮೊತ್ತ 693

$S_{11} = 693$

$\frac{11}{2}[2a + (11-1)d] = 693$

$2a + 10d = 693\frac{2}{11}$

$2a + 10d = 126$

$a + 5d = 63$ ……... (ii)

(i) ರಲ್ಲಿ (ii) ಅನ್ನು ಕಳೆದಾಗ

$a + 2d = 27$

$a + 5d = 63$

$-3d = -36$

$\therefore d = 12$

ಈಗ ಇರುವ ಜಾಗದಲ್ಲಿ 12ನ್ನು ಹಾಕಿದಾಗ

$a + 2(12) = 27$

$\therefore a = 3$

ಸಾಮಾನ್ಯ AP ಯು ಹೀಗಿದೆ

$a,\ a+d,\ a+2d,\ a+3, ….$

$3,\ 3+12,\ 3+24,\ 3+36, …$

$3,\ 15,\ 27,\ 39, …$

ಆದ್ದರಿಂದ ಸಮಾಂತರ ಶ್ರೇಢಿ = 3, 15, 27, 39, …

$x_n = 132 + a_{54}$

$x_n = 132 + a + 53d$

$x_n = 132 + 3 + 636$

$x_n = 771$

$a + (n-1) = 771$

$3 + (n-1)12 = 771$

$12(n-1) = 768$

$n - 1 = 64$

$n = 65$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿರುತ್ತದೆ

27) ಕೊಟ್ಟಿರುವ ನಕ್ಷೆಯು **y= p(x)** ಬಹುಪದೋಕ್ತಿಯನ್ನು ಸೂಚಿಸುತ್ತದೆ. **p(x)** ಹೊಂದಿರುವ ಶೂನ್ಯತೆಗಳ ಸಂಖ್ಯೆ ಬರೆಯಿರಿ

(ಮುಂದುವರಿಯುವುದು)

II PUC PHYSICS

REVISION: MODEL QUESTIONS

25. Name the electromagnetic waves used for the following applications.

a) The radar systems used in aircraft navigation.

b) The remote switches of household electronic systems such as TV.

Ans:- For radar systems in aircraft navigation, microwaves are used, while for remote switches on household electronics like TVs, infrared waves are used

26. ‘The charges are additive in nature’. Explain.

Ans:- The additive nature of charge is one of the property of electric charge. The entire electric charge of a system is equal to the algebraic sum of electric charges located in the system. This is the law of superimposition of electric charge.

27. What are intrinsic and extrinsic semiconductors?


Ans:- Intrinsic Semiconductors are always in pure form. 1. Extrinsic Semiconductors are made by doping some impurity in the pure semiconductors.

28. State Faraday's law and Lenz's law of electromagnetic induction.

Ans:- Faraday's law considers how the changing magnetic fields can cause current to flow in wires. Lenz's law in electromagnetic induction states that the direction of the induced current will be such that the magnetic field generated by the induced current will oppose the initial changing magnetic field which created it.

29. Draw the electric field lines for a system of two positive point charges.

Ans:-



30. Write the SI unit of charge.


Ans:- Coulomb (or) C

31. Name the scientist who confirmed the existences of electromagnetic wave.

Ans:- Maxwell

32. Draw the pattern of magnetic field lines for a bar magnet.

Ans:-



33 Name the charge carriers in metallic conductors.

Ans:- Free electrons

34. Give the expression foe energy stored in an inductance coil carrying current.

Ans:- $U = \frac{1}{2}LI^2$

35. North Pole of a bar magnet is moved towards a metal ring. What is the direction of induced current in the ring when viewed from magnet side?

Ans:- Anticlockwise.

36. How is r.m.s voltage of a.c related to peak value of a.c voltage?

Ans:-

$$V_{rms} = \frac{V_0}{\sqrt{2}} \text{ (or) } V_{rms} = \frac{V_m}{\sqrt{2}}$$

37. What is wavefront of light waves?

Ans:- Wavefront is the locus of points which oscillate in phase. It is the surface of constant phase.

II. Answer any five of the following questions:-

38. The amount of work done in bringing a point charge of 3 mC from infinity to a point P is 0.06 J. Find the electric potential at the point P.

Ans:-

Electric Potential at the Point P is 20 volts.

Given: Work Done (W) = 0.06 J (joules)

Charge (q) = 3 mC (milliCoulombs)

TO FIND- Electric Potential at the Point P

SOLUTION -The electric potential (V) at a point is defined as the electric potential energy (U) per unit charge (q) at that point. Mathematically, it's represented as: **V= q/U**

First, let's convert the charge from milliCoulombs (mC) to Coulombs (C):

1 mC = 0.001 C

So, 3 mC = 3 * 0.001 C = 0.003 C

Now, we can calculate the electric potential (V) at point P using the given work done and the charge:

V= 0.003C /0.06J =20V

Therefore, the electric potential at point P is 20 volts.

39. State and explain Coulomb's law in electrostatics.

Ans:- ***Statement:*** The electrostatic force between two point charges is directly proportional to the product of magnitude of charges and inversely proportional to the square of the distance between them. The direction of this force is along the line joining the two charges.

Explanation: Let q_1 and q_2 be the magnitude of two charges separated by a distance ‘r’. Let F be the force between them,

From Coulomb's law, $F \alpha \frac{q_1 q_2}{r^2}$

$$F = \frac{1}{4\pi\varepsilon_0}\frac{q_1 q_2}{r^2}$$

where ε_0 is the absolute permittivity of free space.

40. Write an expression for refractive index of the material of prism in terms of its angle and minimum deviation. Does it hold good for all positions?

(Contd…..)

ಸಮಸ್ಯೆ ನಿವಾರಣೆಗೆ ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚೆ ನಡೆಸುತ್ತೇನೆ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

‘ಬಸ್‌ಗೆ ಮಸಿ–ತಪ್ಪಿತಸ್ಥರ ವಿರುದ್ಧ ಕ್ರಮ’

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಾಗಲಕೋಟೆ: ‘ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್‌ಗಳಿಗೆ ಕಪ್ಪು ಬಣ್ಣ ಬಳಿದ ಘಟನೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರದ ಜತೆ ಮುಖ್ಯ ಕಾರ್ಯದರ್ಶಿ ಚರ್ಚಿಸುವರು. ಅಗತ್ಯವಿದ್ದರೆ, ನಾನೇ ಖುದ್ದು ಮಾತನಾಡುವೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬಾಗಲಕೋಟೆಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ನೆರೆಯ ರಾಜ್ಯಗಳ ಬಸ್‌ಗಳಿಗೆ ಮಸಿ ಬಳಿಯುವುದರಲ್ಲಿ ಅರ್ಥವಿಲ್ಲ. ಸಾರಿಗೆ ನಿಗಮಗಳಿಗೆ ನಷ್ಟವಾಗುತ್ತದೆ. ಮಹಾರಾಷ್ಟ್ರದವರು ಇಲ್ಲಿ ಬರುತ್ತಾರೆ, ನಮ್ಮವರು ಅಲ್ಲಿಗೆ ಹೋಗುತ್ತಾರೆ. ಕರ್ನಾಟಕದಲ್ಲಿ ಮಹಾರಾಷ್ಟ್ರ ಬಸ್‌ಗೆ ಮಸಿ ಬಳಿದವರ ವಿರುದ್ಧ ಕ್ರಮವಾಗಲಿದೆ. ಅಂತೆಯೇ ಮಹಾರಾಷ್ಟ್ರದಲ್ಲಿ ನಮ್ಮ ಬಸ್ ತಡೆದು ಮಸಿ ಬಳಿದವರ ವಿರುದ್ಧ ಅಲ್ಲಿನ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದರು.

ಬೆಳಗಾವಿಯ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಅವರನ್ನು ಭೇಟಿಯಾದ ಸಚಿವರು, ‘ಪೋಕ್ಸೊ ಪ್ರಕರಣ ದಾಖಲಾಗಿದ್ದರಿಂದ ನಿರ್ವಾಹಕ ಮಹಾದೇವ ಹುಕ್ಕೇರಿ ಆತಂಕಗೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳುವ ಮುನ್ನ ಪೊಲೀಸರು ವಿವೇಚನೆ ಬಳಸಬೇಕಿತ್ತು’ ಎಂದರು.

‘ಪೋಕ್ಸೊ ಪ್ರಕರಣ ದಾಖಲಿಸಿಕೊಂಡ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಬಗ್ಗೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಚರ್ಚಿಸುವರು. ಈ ಪ್ರಕರಣ ಹಿಂಪಡೆಯುವಂತೆ ಮತ್ತು ಆರೋಪಿಗಳ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸುವ ಬಗ್ಗೆ ಗೃಹ ಸಚಿವರ ಜತೆ ಮಾತನಾಡುವೆ’ ಎಂದರು.

‘ರಾಜ್ಯದಲ್ಲಿ ನಿತ್ಯ 1.72 ಲಕ್ಷ ಟ್ರಿಪ್ ಬಸ್ ಕಾರ್ಯಾಚರಣೆ ಮಾಡುತ್ತವೆ. ಕಳೆದ 65 ವರ್ಷಗಳಲ್ಲಿ ಬಸ್‌ನಲ್ಲಿ ಇಂಥ ಘಟನೆ ನಡೆದಿದೆ ಎಂಬ ದೂರು ಬಂದಿಲ್ಲ. ಇದೇ ಮೊದಲ ಸಲ ಉದ್ದೇಶಪೂರ್ವಕವಾಗಿ ನಿರ್ವಾಹಕನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳು ಹಲ್ಲೆ ಮಾಡಿದ ಬಸ್‌ನಲ್ಲಿ 90 ಜನ ಪ್ರಯಾಣಿಕರಿದ್ದರು’ ಎಂದರು.



ಬೆಳಗಾವಿ ಜಿಲ್ಲಾಸ್ಪತ್ರೆಯಲ್ಲಿ ಸೋಮವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಅವರನ್ನು ಭೇಟಿಯಾಗಿ, ಆರೋಗ್ಯ ವಿಚಾರಿಸಿದರು –ಪ್ರಜಾವಾಣಿ ಚಿತ್ರ

> ನಿರ್ವಾಹಕನ ಮೇಲೆ ನಡೆದ ಹಲ್ಲೆ ಇಬ್ಬರ ವೈಯಕ್ತಿಕ ಜಗಳ. ಇದಕ್ಕೆ ಕನ್ನಡ–ಮರಾಠಿ ಬಣ್ಣ ಬಳಿಯಬಾರದು. ಇದರಿಂದ ಬೆಳಗಾವಿ ಅಭಿವೃದ್ಧಿಗೆ ಪೆಟ್ಟು ಬೀಳುತ್ತದೆ
> **ಸತೀಶ ಜಾರಕಿಹೊಳಿ**, ಜಿಲ್ಲಾ ಉಸ್ತುವಾರಿ ಸಚಿವ

> ಮಹಾರಾಷ್ಟ್ರದ ಸಾರಿಗೆ ಸಂಸ್ಥೆಯ ಅಧಿಕಾರಿಗಳ ಜತೆ ಮಾತನಾಡುವಂತೆ ನಮ್ಮ ಅಧಿಕಾರಿಗೆ ತಿಳಿಸಿದ್ದೇನೆ. ಬೆಳಗಾವಿಯಿಂದ ಮಹಾರಾಷ್ಟ್ರಕ್ಕೆ ಬಸ್ ಸಂಚರಿಸುವ ಕುರಿತು ಮಾತನಾಡುವೆ
> **ರಾಮಲಿಂಗಾರೆಡ್ಡಿ**, ಸಾರಿಗೆ ಸಚಿವ



ಮಹಾರಾಷ್ಟ್ರದ ಸೋಲಾಪುರದಲ್ಲಿ ಸೋಮವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಚಾಲಕನ ಮುಖಕ್ಕೆ ಕೇಸರಿ ಬಣ್ಣ ಬಳಿಯಲಾಗಿದೆ

ಬಸ್, ಚಾಲಕನಿಗೆ ಕೇಸರಿ ಬಣ್ಣ ಹಚ್ಚಿದ ಶಿವಸೇನಾ

ವಿಜಯಪುರ: ಮಹಾರಾಷ್ಟ್ರದ ಸೋಲಾಪುರದ ಸಾತ್ ರಸ್ತೆಯಲ್ಲಿ ಸೋಮವಾರ ಶಿವಸೇನಾ (ಉದ್ಧವ್ ಠಾಕ್ರೆ) ಬಣದ 20 ಕಾರ್ಯಕರ್ತರು, ಇಳಕಲ್–ಸೋಲಾಪುರ ನಡುವೆ ಸಂಚರಿಸುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್‌ನ್ನು ತಡೆದು ಮುಖಂಡರು ಅಲ್ಲದೆ ಚಾಲಕನ ಮುಖಕ್ಕೆ ಕೇಸರಿ ಬಣ್ಣ ಬಳಿದರು. ‘ಜೈ ಮಹಾರಾಷ್ಟ್ರ’ ಎಂದು ಘೋಷಣೆ ಹಾಕಿದರು. ಸದರ್ ಬಜಾರ್ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದರು.

ಶುಭಂ ಶೆಳಕೆ ವಿರುದ್ಧ ಪ್ರಕರಣ

ಬೆಳಗಾವಿ: ನಿರ್ವಾಹಕನ ಮೇಲಿನ ಹಲ್ಲೆ ಸಮರ್ಥಿಸಿಕೊಂಡ ಮಹಾರಾಷ್ಟ್ರ ಏಕೀಕರಣ ಯುವ ಸಮಿತಿ ಮುಖಂಡ ಶುಭಂ ಶೆಳಕೆ ವಿರುದ್ಧ ಮಾಳಮಾರುತಿ ಠಾಣೆಯಲ್ಲಿ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಲ್ಲೆ: ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದ ಉಪಾಧ್ಯಕ್ಷ ಜಯವಂತ ನಿಡಗಲಕರ ಅವರ ಮೇಲೆ ಮಹಾರಾಷ್ಟ್ರದ ಚಾಂದಗಡ ತಾಲ್ಲೂಕಿನ ವ್ಯಕ್ತಿ ಬಳಿ ಕೆಲವರು ಸೋಮವಾರ ಹಲ್ಲೆ ಮಾಡಿದ್ದಾರೆ. ಆದರೆ, ಈವರೆಗೆ ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

‘ಸಣ್ಣಬಾಳೆಕುಂದ್ರಿಯಲ್ಲಿ ನಿರ್ವಾಹಕನ ಮೇಲೆ ಹಲ್ಲೆ ಮಾಡಿದ ಐವರನ್ನು ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದ ಆರೋಪಿಗಳ ಬೆಂಬಲಕ್ಕೆ ಶಿವಸೇನಾ ಬರುವಂತಾಗಿದೆ. ಅದು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬಾರದು’ ಎಂದರು.

ಸಂಚಾರ ಬಂದ್: ‘ಕರ್ನಾಟಕ ಮತ್ತು ಮಹಾರಾಷ್ಟ್ರ ಮಧ್ಯೆ ಬಸ್ ಸಂಚಾರ ಸ್ಥಗಿತಗೊಂಡು ಮೂರು ದಿನಗಳಾಗಿವೆ. ಪೊಲೀಸರ ಸೂಚನೆ ಮೇರೆಗೆ ನಾವು ಬಸ್ ಬಿಡುತ್ತಿಲ್ಲ. ಪರಿಸ್ಥಿತಿ ಆಧರಿಸಿ ಅವರು ಅನುಮತಿ ಕೊಟ್ಟರೆ ಬಸ್ ಬಿಡಲಾಗುವುದು’ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜೇಶ ಹುದ್ದಾರ ಹೇಳಿದರು.



ಮಲೆ ಮಹದೇಶ್ವರ ಬೆಟ್ಟದಲ್ಲಿ ಸೋಮವಾರ ಸಂಜೆ ಸೇರಿದ್ದ ಭಕ್ತರು

ಮಾದಪ್ಪನ ಬೆಟ್ಟದಲ್ಲಿ ಭಕ್ತಗಣ

ಪ್ರಜಾವಾಣಿ ವಾರ್ತೆ

ಮಹದೇಶ್ವರಬೆಟ್ಟ (ಚಾಮರಾಜನಗರ ಜಿಲ್ಲೆ): ಪ್ರಸಿದ್ಧ ಧಾರ್ಮಿಕ ಯಾತ್ರಾಸ್ಥಳವಾದ ಇಲ್ಲಿನ ಮಾದಪ್ಪನ ಸನ್ನಿಧಿಯಲ್ಲಿ ಮಂಗಳವಾರದಿಂದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಪ್ರಾರಂಭವಾಗುತ್ತಿದ್ದು, ಐದು ದಿನಗಳ ಉತ್ಸವಕ್ಕೆ ಕರ್ನಾಟಕ ರಾಜ್ಯದಲ್ಲದೆ ನೆರೆಯ ತಮಿಳುನಾಡಿನಿಂದಲೂ ಸಾವಿರಾರು ಭಕ್ತರು ಪಾದಯಾತ್ರೆಯಲ್ಲಿ ಬಂದು ಸೇರಿದ್ದಾರೆ.

ಭಕ್ತರಿಗೆ ವಿಶೇಷ ದಾಸೋಹ ವ್ಯವಸ್ಥೆ, ರಾಜಗೋಪುರದ ಮುಂಭಾಗ ನೆರಳಿನ ವ್ಯವಸ್ಥೆ ಮಾಡಲಾಗಿದೆ. ನೂಕು ನುಗ್ಗಲು ತಡೆಗೂ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ. ಹೆಚ್ಚುವರಿ ಲಾಡು ಕೌಂಟರ್ ತೆರೆಯಲಾಗಿದೆ. ವಿವಿಧ ಕಡೆಗಳಲ್ಲಿ ಕುಡಿಯುವ ನೀರು, ಶೌಚಾಲಯ ಸೌಕರ್ಯ ಒದಗಿಸಲಾಗಿದೆ. ಮಹದೇಶ್ವರ ಬೆಟ್ಟ ಹಾಗೂ ದೇವಾಲಯ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದೆ.

ರಾಜ್ಯದ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ಕಾಲ್ನಡಿಗೆಯಲ್ಲಿ ಬಂದಿದ್ದು, ಅವರಿಗೆ ನೇರ ದರ್ಶನ ಹಾಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ತಾಳುಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗೆ ನೀರು, ನೆರಳಿನ ವ್ಯವಸ್ಥೆಯೂ ಇದೆ. ದಾನಿಗಳು ಹಾಗೂ ಭಕ್ತರು ಹಣ್ಣು, ನೀರು, ಮಜ್ಜಿಗೆ, ಪಾನಕ, ಬಿಸ್ಕತ್, ಹಾಲು ನೀಡುತ್ತಿದ್ದಾರೆ. ಭಕ್ತರು ದೇವಾಲಯ ಆವರಣದಲ್ಲಿ ಜಮಾಯಿಸಿದ್ದು, ಐದು ದಿನ ಆವರಣದಲ್ಲೇ ಇದ್ದು ಹರಕೆ ಹಾಗೂ ಕಾಣಿಕೆ ಸಲ್ಲಿಸಿ ಊರಿಗೆ ಮರಳುತ್ತಾರೆ.

ತನಿಖಾ ಆಯೋಗ–ಕಾಯ್ದಿರಿಸಿದ ಆದೇಶ

ಪಂಚಮಸಾಲಿ ಮೀಸಲಾತಿ ಹೋರಾಟ • ಶಾಂತಿಯುತ ಪ್ರತಿಭಟನಕಾರರ ಮೇಲೆ ಲಾಠಿಚಾರ್ಜ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಮತ್ತು ಲಿಂಗಾಯತ ಉಪ ಪಂಗಡಗಳಿಗೆ ಒಬಿಸಿ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ ಬಗ್ಗೆ ತನಿಖಾ ಆಯೋಗ ರಚಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಸಂಬಂಧ ಕೂಡಲಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ನ್ಯಾಯಾಲಯದ ಆದೇಶದ ಅನುಸಾರ ಶಾಂತಿಯುತ ಪ್ರತಿಭಟನೆಗೆ ಅನುಮತಿ ನೀಡಲಾಗಿತ್ತು. ಆದರೆ, ಪ್ರತಿಭಟನಕಾರರು ಮತ್ತು ಕೆಲವು ಗಲಭೆಕೋರರು ಕಾನೂನು ಕೈಗೆತ್ತಿಕೊಂಡಿದ್ದರು. ಈ ವೇಳೆ 23 ಮಂದಿ ಪೊಲೀಸರು ಗಾಯಗೊಂಡಿದ್ದಾರೆ. ಪೊಲೀಸ್ ವಾಹನಗಳು ಜಖಂಗೊಂಡಿವೆ’ ಎಂದರು.

ಸ್ವಾಮೀಜಿ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ನಿಷೇಧಾಜ್ಞೆ ವಿಧಿಸಿರುವಾಗಲೇ ನಿರ್ದಿಷ್ಟ ಸ್ಥಳದಲ್ಲಿ ಪ್ರತಿಭಟನೆ ನಡೆಸಲು ನ್ಯಾಯಾಲಯ ನಮಗೆ ಅನುಮತಿ ನೀಡಿತ್ತು. ಸಚಿವರು ಮನವಿ ಸ್ವೀಕರಿಸಿದ ಬಳಿಕ ಪ್ರತಿಭಟನಕಾರರು ಸ್ಥಳದಿಂದ ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಲಾಠಿ ಪ್ರಹಾರ ನಡೆಸಲಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳೂ ಇದರಲ್ಲಿ ಭಾಗಿಯಾಗಿರುವ ಕಾರಣ ನಿಷ್ಪಕ್ಷಪಾತ ತನಿಖೆಯ ಅಗತ್ಯವಿದೆ’ ಎಂದರು. ಹೈಕೋರ್ಟ್ ವಕೀಲೆ ಪೂಜಾ ಆರ್. ಸವದತ್ತಿ ವಕಾಲತ್ತು ವಹಿಸಿದ್ದಾರೆ.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸಿತು. ‘ಬೆಳಗಾವಿಯ ಸುವರ್ಣ ಸೌಧದ ಬಳಿ 2024ರ ಡಿಸೆಂಬರ್ 10ರಂದು ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದು, ಈ ಕುರಿತಂತೆ ತನಿಖಾ ಆಯೋಗ ರಚಿಸಲು ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಮಹೇಶ್ ಜೋಶಿಗೆ ₹1.20 ಲಕ್ಷ ದಂಡ

ಬೆಂಗಳೂರು: 12 ವರ್ಷ ಹಳೆಯ ಪ್ರಕರಣವೊಂದರಲ್ಲಿ, ಬೆಂಗಳೂರು ದೂರದರ್ಶನ ಕೇಂದ್ರದ ನಿರ್ದೇಶಕರಾಗಿದ್ದ ಮಹೇಶ್ ಜೋಶಿ ಅವರಿಗೆ ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯವು ₹1.20 ಲಕ್ಷ ದಂಡ ವಿಧಿಸಿದೆ. ಈಗ ಅವರು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿದ್ದಾರೆ.

ದಂಡದ ಮೊತ್ತವನ್ನು ವಾರ್ಷಿಕ ಶೇ 24ರಷ್ಟು ಬಡ್ಡಿ ಸಮೇತ ದೂರುದಾರರಿಗೆ ಪರಿಹಾರವಾಗಿ ನೀಡಬೇಕು ಎಂದು ನ್ಯಾಯಾಲಯ ಆದೇಶಿಸಿದೆ.

1984ರಲ್ಲಿ ದೂರದರ್ಶನ ನಿರ್ದೇಶಕರಾಗಿದ್ದಾಗ ಮಹೇಶ್ ಜೋಶಿ ಅವರು ಮೋಹನ್ ರಾಂ ಸೇರಿ ಏಳು ಸಹೋದ್ಯೋಗಿಗಳ ವಿರುದ್ಧ ವಂಚನೆ ಪ್ರಕರಣ ದಾಖಲಿಸಿದ್ದರು. ಆದರೆ ಆ ಪ್ರಕರಣ ಸುಳ್ಳು ಎಂದು 2013ರಲ್ಲಿ ಹೈಕೋರ್ಟ್ ತೀರ್ಪು ನೀಡಿ, ಪ್ರಕರಣವನ್ನು ವಜಾ ಮಾಡಿತ್ತು.

ಹೈಕೋರ್ಟ್ ತೀರ್ಪಿನ ನಂತರ ಮೋಹನ್ ರಾಂ ಅವರು, ತಮಗಾಗಿದ್ದ ಮಾನಸಿಕ ಹಿಂಸೆ ಮತ್ತು ಆರ್ಥಿಕ ನಷ್ಟ ಸೇರಿ ₹1.20 ಲಕ್ಷ ಪರಿಹಾರ ಕೋರಿ ನಗರ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ 14ನೇ ಸಿವಿಲ್ ನ್ಯಾಯಾಲಯವು ಫೆ.19ರ ಬುಧವಾರ ಆದೇಶ ನೀಡಿದೆ.



ಮಹೇಶ್ ಜೋಶಿ

‘ದಂಡವನ್ನು ಪರಿಹಾರವಾಗಿ ಪಾವತಿ ಮಾಡುವುದರ ಜತೆಗೆ ಸುಳ್ಳು ಪ್ರಕರಣದ ಸಂಬಂಧ ದೂರದರ್ಶನದಲ್ಲಿ ಹಾಗೂ ರಾಜ್ಯದ ಪ್ರಮುಖ ಇಂಗ್ಲಿಷ್ ಹಾಗೂ ಕನ್ನಡ ದಿನಪತ್ರಿಕೆಯಲ್ಲಿ ಕ್ಷಮೆ ಕೋರಬೇಕು. ತೀರ್ಪು ಬಂದ ಏಳು ದಿನಗಳಲ್ಲಿ ಇವನ್ನು ಮಾಡಬೇಕು’ ಎಂದು ನ್ಯಾಯಾಧೀಶರಾದ ಎ.ಎಂ.ನಳಿನಿ ಕುಮಾರಿ ಅವರು ಆದೇಶಿಸಿದ್ದಾರೆ.

‘ಸೂಚಿತ ಅವಧಿಯಲ್ಲಿ ಪರಿಹಾರದ ಹಣ ಪಾವತಿಸದೇ ಇದ್ದಲ್ಲಿ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುವುದು ಮತ್ತು ಏಳು ದಿನ ಜೈಲು ಶಿಕ್ಷೆ ವಿಧಿಸಲಾಗುವುದು’ ಎಂದು ಆದೇಶಿಸಿದ್ದಾರೆ.

ಮಧ್ಯಂತರ ತಡೆ

ದಂಡ ವಿಧಿಸಿ ವಿಚಾರಣಾ ನ್ಯಾಯಾಲಯವು ನೀಡಿರುವ ಆದೇಶವನ್ನು ಪ್ರಶ್ನಿಸಿ ಮಹೇಶ ಜೋಶಿ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಮುಂದಿನ ವಿಚಾರಣೆವರೆಗೆ (ಮಾರ್ಚ್ 6), ವಿಚಾರಣಾ ನ್ಯಾಯಾಲಯದ ಆದೇಶಕ್ಕೆ ಸೋಮವಾರ ತಡೆ ನೀಡಿರುವ ಹೈಕೋರ್ಟ್ ಏಕಸದಸ್ಯ ಪೀಠವು, ಅದಕ್ಕೂ ಮುನ್ನ ₹ 1.50 ಲಕ್ಷವನ್ನು ಠೇವಣಿಯಾಗಿ ನ್ಯಾಯಾಲಯದಲ್ಲಿ ಇರಿಸುವಂತೆ ಜೋಶಿ ಅವರಿಗೆ ಆದೇಶಿಸಿದೆ.

ಮಾಹಿತಿ ಆಯುಕ್ತರ ನೇಮಕ: ಮಾ.5ಕ್ಕೆ ವಿಚಾರಣೆ

ಬೆಂಗಳೂರು: ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಹಿತಿ ಆಯುಕ್ತರ ನೇಮಕಾತಿ ಪ್ರಶ್ನಿಸಿದ ಅರ್ಜಿಯಲ್ಲಿ ಮಧ್ಯಂತರ ಆದೇಶ ನೀಡಿಕೆಗೆ ಸಂಬಂಧಿಸಿದಂತೆ; ಇದೇ ವಿಷಯವಾಗಿ ಸುಪ್ರೀಂ ಕೋರ್ಟ್‌ನಲ್ಲಿರುವ ಅರ್ಜಿ ವಿಚಾರಣೆ ಬಳಿಕ ಪಟ್ಟಿ ಮಾಡುವಂತೆ ಹೈಕೋರ್ಟ್ ನಿರ್ದೇಶಿಸಿದೆ.

ಮಾಹಿತಿ ಆಯುಕ್ತರ ಹುದ್ದೆಯ ಆಕಾಂಕ್ಷಿಯಾಗಿದ್ದ ಜೆ.ಪಿ.ನಗರ 7ನೇ ಹಂತದ ನಿವಾಸಿಯಾದ ಸಾಮಾಜಿಕ ಕಾರ್ಯಕರ್ತ ಕೆ.ಮಲ್ಲಿಕಾರ್ಜುನ ರಾಜು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ನ್ಯಾಯಪೀಠವು ಸೋಮವಾರ ಮಧ್ಯಂತರ ಆದೇಶ ಪ್ರಕಟಿಸಬೇಕಿತ್ತು. ಆದರೆ, ‘ಮಾಹಿತಿ ಆಯುಕ್ತರ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳಿಗೂ ನಿರ್ದೇಶನ ನೀಡಿತ್ತು. ಈ ಕುರಿತಾದ ಅಂಜಲಿ ಭಾರದ್ವಾಜ್ ವರ್ಸಸ್ ಕೇಂದ್ರ ಸರ್ಕಾರದ ಪ್ರಕರಣ ಮಾರ್ಚ್ 4ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ನಿಗದಿಯಾಗಿದೆ. ಅಂದು ರಾಜ್ಯ ಸರ್ಕಾರ ಅನುಪಾಲನಾ ವರದಿ ಸಲ್ಲಿಸಬೇಕಿದೆ. ಹೀಗಾಗಿ, ಸುಪ್ರೀಂ ಕೋರ್ಟ್ ಆದೇಶಕ್ಕೆ ಒಳಪಟ್ಟಂತೆ ಈ ಅರ್ಜಿಯನ್ನು ಮಾರ್ಚ್ 5ರಂದು ವಿಚಾರಣೆಗೆ ಪಟ್ಟಿ ಮಾಡಬೇಕು’ ಎಂದು ಆದೇಶಿಸಿತು.

ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ.ಪ್ರಸಾದ್ ಹಾಗೂ ಆಯುಕ್ತರಾಗಿ ಕೆ.ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ.ಚನ್ನಾಳ, ಎಸ್.ರಾಜಶೇಖರ, ಕೆ. ಬದ್ರುದ್ದೀನ್ ಮತ್ತು ಬಿ.ಆರ್.ಮಮತಾ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ರದ್ದುಪಡಿಸುವಂತೆ ಅರ್ಜಿದಾರರು ಕೋರಿದ್ದಾರೆ.

‘ಆರ್ಥಿಕ ಜವಾಬ್ದಾರಿಯ ಬಜೆಟ್ ಮಂಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು, ನೀರು, ಪೆಟ್ರೋಲ್, ವಿದ್ಯುತ್, ಆಸ್ತಿ ತೆರಿಗೆ ಸೇರಿ ವಿವಿಧ ದರ ಮತ್ತು ಶುಲ್ಕಗಳ ಏರಿಕೆಯಿಂದ ರಾಜ್ಯದ ಜನ ತತ್ತರಿಸಿದ್ದಾರೆ. ಜನರ ಬವಣೆ ತಗ್ಗಿಸಲು ಮುಂಬರುವ ಬಜೆಟ್‌ನಲ್ಲಿ, ಆರ್ಥಿಕ ಜವಾಬ್ದಾರಿ, ಅಭಿವೃದ್ಧಿ ಪರ ಮತ್ತು ವಿವೇಚನೆಯ ಹಣಕಾಸು ನಿರ್ವಹಣೆಗೆ ಅಡಿಪಾಯ ಹಾಕಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಈ ಕುರಿತು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಹಿರಂಗ ಪತ್ರ ಬರೆದಿದ್ದು, ಆರ್ಥಿಕ ಪರಿಸ್ಥಿತಿಯ ಕುರಿತು ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದ್ದಾರೆ.

‘ಯಾವುದೇ ಒಂದು ಸರ್ಕಾರ ವಿತ್ತೀಯ ಬದ್ಧತೆ ಪೂರೈಸಲು ಸಾಲ ತೆಗೆದುಕೊಳ್ಳುವುದು ಸಹಜ. ಅಂತಹ ಸಾಲವನ್ನು ಬಂಡವಾಳ ಹೂಡಿಕೆಗಳಿಗೆ ಬಳಸಬೇಕೇ ಹೊರತು. ರಾಜಸ್ವ ವೆಚ್ಚಕ್ಕಲ್ಲ. ಆದರೆ, ಸತತ ಎರಡು ವರ್ಷ ರಾಜಸ್ವ ಕೊರತೆಯ ಬಜೆಟ್ ಮಂಡಿಸುವುದರೊಂದಿಗೆ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ಕಾಯ್ದೆಯ ನಿರ್ವಹಣೆಯನ್ನು ಉಲ್ಲಂಘಿಸಿದ್ದೀರಿ’ ಎಂದು ಅವರು ಹೇಳಿದ್ದಾರೆ.



ಬಿ.ವೈ. ವಿಜಯೇಂದ್ರ

‘ಎಸ್‌ಸಿಪಿ–ಟಿಎಸ್‌ಪಿ ಯೋಜನೆಗೆ ಕಾಯ್ದಿರಿಸಲಾದ ಮೊತ್ತದಲ್ಲಿ ₹25,426 ಕೋಟಿಯನ್ನು ಇತರೆ ಯೋಜನೆಗಳಿಗೆ ಬಳಸಿಕೊಂಡಿರುವುದನ್ನು ನೀವೇ ಒಪ್ಪಿಕೊಂಡಿದ್ದೀರಿ. ಅಲ್ಲದೇ, ಲೋಕೋಪಯೋಗಿ, ನೀರಾವರಿ, ಕಂದಾಯ ಸೇರಿದಂತೆ ನಾನಾ ಇಲಾಖೆಗಳು ₹6,000 ಕೋಟಿ ಬಿಲ್ ಬಾಕಿ ಉಳಿಸಿಕೊಂಡಿವೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ. 15 ಬಾರಿ ಬಜೆಟ್ ಮಂಡಿಸಿರುವ ನಿಮಗೆ ಇದು ಶೋಭೆ ತರುತ್ತದೆಯೇ’ ಎಂದು ಪ್ರಶ್ನಿಸಿದ್ದಾರೆ.

‘ಎರಡೇ ವರ್ಷದಲ್ಲಿ ₹2 ಲಕ್ಷ ಕೋಟಿ ಸಾಲದ ಹೊರೆಯನ್ನು ಕನ್ನಡಿಗರ ಮೇಲೆ ಹೊರಿಸಿದ್ದೀರಿ. ಮುಂಬರುವ ಬಜೆಟ್‌ನಲ್ಲಿ ಇನ್ನು ಎಷ್ಟು ಸಾಲದ ಹೊರೆ ಹೊರಿಸುತ್ತೀರಿ ಎಂಬ ಆತಂಕ ಜನರನ್ನು ಕಾಡುತ್ತಿದೆ. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳಿಗೆ ರಾಜ್ಯ ಸರ್ಕಾರ ಅಗತ್ಯ ಹಣ ಹಂಚಿಕೆ ಮಾಡಲು ವಿಫಲವಾದರೆ, ಕೇಂದ್ರದ ಸಹಾಯಧನ ಕಳೆದುಕೊಳ್ಳುವ ಅಪಾಯವಿದೆ’ ಎಂದು ಅವರು ಎಚ್ಚರಿಸಿದ್ದಾರೆ.

‘ಮುಂದಿನ ಬಾರಿ ಬಜೆಟ್ ಮಂಡಿಸುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೆ, ರಾಜ್ಯದ ಜನರ ನಿರ್ಣಾಯಕ ಅಗತ್ಯಗಳನ್ನು ಪೂರೈಸುವುದರ ಜತೆಗೆ ರಾಜ್ಯದ ಆರ್ಥಿಕ ಸ್ಥಿರತೆಯನ್ನು ಬಲಪಡಿಸಲು ನಿಮಗೆ ಇದು ಸದಾವಕಾಶ’ ಎಂದು ಹೇಳಿದ್ದಾರೆ.

₹4 ಕೋಟಿ ನಷ್ಟ: ತಹಶೀಲ್ದಾರ್ ಅಮಾನತು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ದೇವದುರ್ಗದ ಗ್ರೇಡ್–2 ತಹಶೀಲ್ದಾರ್ ಆರ್.ವೆಂಕಟೇಶ ಅವರನ್ನು ಸರ್ಕಾರದ ಅಧೀನ ಕಾರ್ಯದರ್ಶಿ (ಕಂದಾಯ ಇಲಾಖೆ ಸೇವೆಗಳು) ರಾಘವೇಂದ್ರ ಟಿ. ಅವರು ಸೇವೆಯಿಂದ ಅಮಾನತು ಮಾಡಿ ಆದೇಶಿಸಿದ್ದಾರೆ.

2024–25ನೇ ಸಾಲಿನಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ವಿವಿಧ ಪಿಂಚಣಿ ಯೋಜನೆಯಡಿ ಅತಿ ಹೆಚ್ಚು ಅರ್ಜಿಗಳನ್ನು (10,470) ವಿಲೇವಾರಿ ಮಾಡಿರುವುದು ಕಂಡುಬಂದಿದ್ದರಿಂದ ಜಿಲ್ಲಾಧಿಕಾರಿಯು ರಾಯಚೂರು ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ತಂಡ ರಚಿಸಿ ವರದಿ ನೀಡಲು ಸೂಚಿಸಿದ್ದರು.



ಆರ್.ವೆಂಕಟೇಶ

ಗ್ರೇಡ್‌–2 ತಹಶೀಲ್ದಾರ್ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನದಿಂದ 2024ರ ಜನವರಿಯಿಂದ ಡಿಸೆಂಬರ್‌ವರೆಗೆ ವಿವಿಧ ಮಾಸಾಶಸನ ಅರ್ಜಿ ವಿಲೇವಾರಿ ಪಟ್ಟಿಯನ್ನು ಪರಿಶೀಲಿಸಿದಾಗ ದೇವದುರ್ಗ ಹೋಬಳಿ ವ್ಯಾಪ್ತಿಯಲ್ಲಿ 12,526 ಅರ್ಜಿಗಳು ವಿಲೇವಾರಿ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿದೆ. ಸಂಧ್ಯಾ ಸುರಕ್ಷಾ ಯೋಜನೆಗೆ ಸಂಬಂಧಿಸಿದ ಒಟ್ಟು ಅನರ್ಹ ಅರ್ಜಿಗಳು 8,279, ವೃದ್ಧಾಪ್ಯ ವೇತನ ಯೋಜನೆಯ 3,478 ಅನರ್ಹ ಫಲಾನುಭವಿಗಳಿಗೆ ವಿವಿಧ ಮಾಸಾಶನ ಮಂಜೂರು ಮಾಡಿ ಸರ್ಕಾರಕ್ಕೆ ಸುಮಾರು ₹4 ಕೋಟಿ ನಷ್ಟ ಮಾಡಿದ್ದಾರೆ ಎಂದು ಉಪವಿಭಾಗಾಧಿಕಾರಿ ಪ್ರಾಥಮಿಕ ತನಿಖಾ ವರದಿಯಲ್ಲಿ ಉಲ್ಲೇಖಿಸಿದ್ದರು.

ಗ್ರಾಮ ಆಡಳಿತ ಅಧಿಕಾರಿ ಹಾಗೂ ಕಂದಾಯ ನಿರೀಕ್ಷಕರು ಅನರ್ಹ ಫಲಾನುಭವಿಗಳನ್ನು ತಿರಸ್ಕರಿಸಿದ ಅರ್ಜಿಗಳಿಗೂ ಗ್ರೇಡ್–2 ತಹಶೀಲ್ದಾರ್ ಮಾಸಾಶನ ನೀಡಿದ್ದಾರೆ. ತನಿಖೆಗೆ ಒಳಪಡಿಸಿದ 12 ತಿಂಗಳಲ್ಲಿ ₹4 ಕೋಟಿ ನಷ್ಟ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957ರ ನಿಯಮ 10(1) (ಡಿ) ರನ್ವಯ ಅಂತಿಮ ವರದಿಯನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ.

ಬಡವರಿಗೆ ಮಾತ್ರ ‘ಗ್ಯಾರಂಟಿ’

ಒಂದನೇ ಪುಟದಿಂದ...

ಆಗ ಮಧ್ಯೆ ಪ್ರವೇಶಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್‌ಬಾಬು, ‘ಸರ್ಕಾರದ ಬಳಿ ಹಣ ಇಲ್ಲವಾಗಿದೆ. ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲಾಗದೆ ಯೋಜನೆಯ ಸೌಲಭ್ಯ ಕಡಿತ ಮಾಡಲು ಮುಂದಾಗಿದೆ’ ಎಂದು ಕಾಲೆಳೆದರು. ಆಗ ತಿಪಟೂರು ಶಾಸಕ ಕೆ.ಷಡಕ್ಷರಿ, ‘ಐದು ವರ್ಷ ಐದು ಗ್ಯಾರಂಟಿ ಕೊಡುತ್ತೇವೆ ಎಂದು ಹೇಳಿದ್ದೇವೆ. ಯಾವುದೇ ಕಾರಣಕ್ಕೂ ನಿಲ್ಲಿಸಬಾರದು’ ಎಂದು ಆಗ್ರಹಿಸಿದರು.

ಸಭೆಯಲ್ಲಿ ಪರ, ವಿರೋಧ ವ್ಯಕ್ತವಾಗಿದ್ದರಿಂದ ಚರ್ಚೆಯನ್ನು ಹೆಚ್ಚು ಸಮಯ ಮುಂದುವರಿಸಲಿಲ್ಲ. ‘ಸರ್ಕಾರದ ಹಂತದಲ್ಲಿ ನಿರ್ಧರಿಸಲಾಗುವುದು’ ಎಂದು ಹೇಳಿ ವಿಷಯಾಂತರ ಮಾಡಿದರು.

ಲೋಕಾಯುಕ್ತ ತನಿಖೆ; ಸ್ಮಶಾನಕ್ಕೆ ಹೋಲಿಸಿದ ಸಚಿವ ರಾಜಣ್ಣ

ತುಮಕೂರು: ‘ಯಾವುದೇ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ಕೊಡುವುದೂ ಒಂದೇ ಸ್ಮಶಾನಕ್ಕೆ ಹೋಗುವುದೂ ಒಂದೇ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಅಸಹನೆ ವ್ಯಕ್ತಪಡಿಸಿದರು.

ನಗರದಲ್ಲಿ ಸೋಮವಾರ ನಡೆದ ಕೆಡಿಪಿ ಸಭೆಯಲ್ಲಿ ಸಚಿವರು ಲೋಕಾಯುಕ್ತ ತನಿಖೆ ಬಗ್ಗೆ ಆಕ್ರೋಶ ಹೊರಹಾಕಿದರು.



ಕೆ.ಎನ್.ರಾಜಣ್ಣ

ನಕಲಿ ಸಾಗುವಳಿ ಚೀಟಿ ಸೃಷ್ಟಿಸಿಕೊಂಡು ವಂಚಿಸಿದ್ದರೂ ಸಂಬಂಧಿಸಿದವರ ವಿರುದ್ಧ ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ದೊಡ್ಡ ಮಟ್ಟದ ಹಗರಣ ನಡೆದಿದ್ದು ಲೋಕಾಯುಕ್ತಕ್ಕೆ ವಹಿಸಬೇಕು ಎಂದು ಶಾಸಕ ಎಂ.ಟಿ.ಕೃಷ್ಣಪ್ಪ ಆಗ್ರಹಿಸಿದರು. ಆಗ ರಾಜಣ್ಣ, ‘ಲೋಕಾಯುಕ್ತ ಯಾವ ರೀತಿ ತನಿಖೆ ನಡೆಸುತ್ತದೆ ಎಂಬುದನ್ನು ನೋಡಿದ್ದೇವೆ’ ಎಂದು ಅವರು ತಿಳಿಸಿದರು.

ನಿದ್ದೆಗೆ ಜಾರುವ ಶಾಸಕರಿಗೆ ಸುಖಾಸೀನ ಕುರ್ಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಮಂಡಲದ ಅಧಿವೇಶನ ಮಾರ್ಚ್ 3ರಿಂದ ಆರಂಭವಾಗಲಿದ್ದು, ಮಧ್ಯಾಹ್ನದ ಭೋಜನದ ನಂತರ ವಿಧಾನಸಭೆ ಕಲಾಪಕ್ಕೆ ಶಾಸಕರು ಗೈರಾಗುವುದನ್ನು ತಪ್ಪಿಸಲು ಮೊಗಸಾಲೆಯಲ್ಲಿಯೇ ‘ಸುಖಾಸೀನ ಕುರ್ಚಿ’ಗಳನ್ನು ಅಳವಡಿಸಲು ಸಭಾಧ್ಯಕ್ಷ ಯು.ಟಿ. ಖಾದರ್ ನಿರ್ಧರಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಖಾದರ್, ‘ಭೋಜನದ ಬಳಿಕ ಕೆಲ ಹೊತ್ತು ನಿದ್ದೆಗೆ ಜಾರುವ ಅಭ್ಯಾಸ ಹೊಂದಿರುವ ಶಾಸಕರು, ಆ ನೆಪದಲ್ಲಿ ಕಲಾಪಕ್ಕೆ ಗೈರಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಬಾಡಿಗೆಗೆ ಸುಖಾಸೀನ ಕುರ್ಚಿಗಳನ್ನು ಪಡೆದು ಅಳವಡಿಸುವ ಉದ್ದೇಶವಿದೆ’ ಎಂದರು.

‘ಮಧ್ಯಾಹ್ನ ಊಟ ಮುಗಿಸಿದ ಬಳಿಕ ನಿದ್ದೆ ಮಾಡಲು ಸಮಯಾವಕಾಶ ನೀಡುವಂತೆ ಕೆಲವು ಹಿರಿಯ ಶಾಸಕರು ಮನವಿ ಮಾಡಿದ್ದಾರೆ. ಆ ಕಾರಣಕ್ಕೆ ವಿಧಾನ ಸೌಧದಿಂದ ಹೊರಗೆ ಹೋಗುವ ಶಾಸಕರು ಮರಳಿ ಬರುವ ಸಾಧ್ಯತೆ ಇಲ್ಲ. ಸುಖಾಸೀನ ಕುರ್ಚಿ ಒದಗಿಸಿದರೆ ಶಾಸಕರಿಗೆ ಅನುಕೂಲ ಮಾಡಿಕೊಡಬಹುದು’ ಎಂದೂ ಹೇಳಿದರು.

‘ಮೊಗಸಾಲೆಯಲ್ಲಿ ಕನಿಷ್ಠ 15 ಸುಖಾಸೀನ ಕುರ್ಚಿಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಅಧಿವೇಶನದ ಸಂದರ್ಭದಲ್ಲಿ ಶಾಸಕರು ಎದುರಿಸುತ್ತಿರುವ ಕೆಲವು ಸಮಸ್ಯೆಗಳನ್ನು ಪರಿಗಣಿಸಿ ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಊಟ, ಚಹಾ-ಕಾಫಿ ಮತ್ತು ತಿಂಡಿಗಳ ವ್ಯವಸ್ಥೆ ಮಾಡಲಾಗಿದೆ. 2024ರ ಜುಲೈನಲ್ಲಿ ನಡೆದ ವಿಧಾನಮಂಡಲದ ಅಧಿವೇಶನಗಳಲ್ಲಿಯೂ ಸುಖಾಸೀನ ಕುರ್ಚಿಗಳನ್ನು ಅಳವಡಿಸಲಾಗಿತ್ತು’ ಎಂದು ಅವರು ಹೇಳಿದರು.

‘ಸಂಗಂ’ ಪುರಸ್ಕಾರ ಕಾದಂಬರಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯ ‘ಸಂಗಂ ಸಂಸ್ಥೆ’ಯು ‘ಸಂಗಂ ಸಾಹಿತ್ಯ ಪುರಸ್ಕಾರ’ ಪ್ರಶಸ್ತಿಗಳನ್ನು ನೀಡಲಿದ್ದು, 2022-24ರ ಸಾಲಿನಲ್ಲಿ ಪ್ರಥಮ ಮುದ್ರಣ ಕಂಡ ಕಾದಂಬರಿಗಳನ್ನು ಆಹ್ವಾನಿಸಿದೆ.

‘ಕಾದಂಬರಿಯ 4 ಪ್ರತಿಗಳನ್ನು ಕಳುಹಿಸಬೇಕು. ಹಸ್ತಪ್ರತಿ, ಅನುವಾದಿತ, ಸಂಪಾದಿತ, ಮರುಮುದ್ರಿತ ಕೃತಿಗಳಿಗೆ ಅವಕಾಶವಿಲ್ಲ. ಕಾದಂಬರಿಗಳ ಸಲ್ಲಿಕೆಗೆ ಮಾರ್ಚ್ 20 ಕೊನೆಯ ದಿನ. ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ’ ಎಂದು ಸಂಸ್ಥೆಯ ಕಾರ್ಯದರ್ಶಿ ಡಾ.ಕೆ. ಶಿವಲಿಂಗಪ್ಪ ಹಂದಿಹಾಳು ತಿಳಿಸಿದ್ದಾರೆ.

ಮಾಹಿತಿಗೆ ವಿಳಾಸ: ಅಜಯ ಬಣಕಾರ್, ‘ಹೂನಗೆ’, ಪ್ಲಾಟ್ ನಂ- 2, ಎರಡನೇ ಕ್ರಾಸ್, ಬಾಲಾಜಿ ಕಾಲೋನಿ, ತಾಳೂರು ರಸ್ತೆ, ಬಳ್ಳಾರಿ–583103. ದೂರವಾಣಿ ಸಂಖ್ಯೆ 94483 71009 ಅಥವಾ 9449622737.

ಕಮಲ ಪಾಳಯದ ಆಂತರಿಕ ಚುನಾವಣಾ ರಾಜಕಾರಣ • ಹಲವು ರಾಜ್ಯಗಳಲ್ಲಿ ಬಣಗಳ ಕಿತ್ತಾಟ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕ ತಡ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕಾಗಿ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಬಣಗಳ ಕಿತ್ತಾಟ ತೀವ್ರಗೊಂಡಿರುವುದರಿಂದ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ನೇಮಕದ ಮೇಲೆ ಪರಿಣಾಮ ಬೀರಿದೆ. ರಾಜ್ಯಗಳ ಬೇಗುದಿ ಶಮನಗೊಂಡ ಬಳಿಕವೇ ಹೊಸ ರಾಷ್ಟ್ರೀಯ ಅಧ್ಯಕ್ಷರ ನೇಮಕವಾಗುವ ಸಂಭವ ಇದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅವಧಿ 2024ರ ಆರಂಭದಲ್ಲಿ ಪೂರ್ಣಗೊಂಡಿತ್ತು. ಲೋಕಸಭಾ ಚುನಾವಣೆವರೆಗೆ ಅವರ ಅವಧಿಯನ್ನು ವಿಸ್ತರಿಸಲಾಗಿತ್ತು. ಬಳಿಕ ಅವರು ಕೇಂದ್ರ ಸಂಪುಟಕ್ಕೆ ಸೇರ್ಪಡೆ ಯಾಗಿದ್ದರು. ಜನವರಿಯೊಳಗೆ ನೂತನ ರಾಷ್ಟ್ರೀಯ ಅಧ್ಯಕ್ಷರನ್ನು ನೇಮಿಸಲಾಗುತ್ತದೆ ಎಂದು ಪಕ್ಷ ಪ್ರಕಟಿಸಿತ್ತು. ರಾಜ್ಯ ಘಟಕಗಳ ಅಧ್ಯಕ್ಷರ ಚುನಾವಣೆಗಾಗಿ ಎರಡು ತಿಂಗಳ ಹಿಂದೆಯೇ ಚುನಾವಣೆ ಉಸ್ತುವಾರಿಗಳನ್ನು ನೇಮಿಸಲಾಗಿತ್ತು. ಆದರೆ, ರಾಜ್ಯಗಳಲ್ಲಿ ಚುನಾವಣಾ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಪಕ್ಷದ ಸಂವಿಧಾನದ ಪ್ರಕಾರ, ಕನಿಷ್ಠ ಶೇ 50ರಷ್ಟು ರಾಜ್ಯಗಳಲ್ಲಿ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಿರುವುದು ಸೇರಿದಂತೆ ಸಾಂಸ್ಥಿಕ ಚುನಾವಣೆಗಳ ನಂತರ ಹೊಸ ರಾಷ್ಟ್ರೀಯ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ಪಕ್ಷದ ಹಾಲಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ಬಂಡಾಯ ಎದ್ದಿದೆ. ಪಕ್ಷದ ನಾಯಕರ ವಿರುದ್ಧ ಹೇಳಿಕೆಗಳನ್ನು ನೀಡಿ ಶಿಸ್ತು ಉಲ್ಲಂಘಿಸಿದ ಕಾರಣಕ್ಕೆ ಯತ್ನಾಳ ಅವರಿಗೆ ಕೇಂದ್ರ ಶಿಸ್ತು ಸಮಿತಿ ಎರಡು ನೋಟಿಸ್ ನೀಡಿತ್ತು. ಅದಕ್ಕೆ ಯತ್ನಾಳ ಬಗ್ಗಿಲ್ಲ. ವಿಜಯೇಂದ್ರ ವಿರುದ್ಧ ವಾಗ್ದಾಳಿಯನ್ನು 'ಇನ್ನಷ್ಟು' ತೀವ್ರಗೊಳಿಸಿದೆ. ಚುನಾವಣೆ ನಡೆಸಿ ಮೂರು ವರ್ಷಗಳ ಅವಧಿಗೆ ಹೊಸ ಅಧ್ಯಕ್ಷರನ್ನು ನೇಮಿಸುವುದೇ ಅಥವಾ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಧ್ಯಕ್ಷರನ್ನು ನೇಮಕ ಮಾಡುವುದೇ ಎಂಬುದರ ಬಗ್ಗೆ ವರಿಷ್ಠರು ಗೊಂದಲಕ್ಕೆ ಸಿಲುಕಿದ್ದಾರೆ. ವಿಜಯೇಂದ್ರ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿದರೆ ಯತ್ನಾಳ ಅವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಸ್ಥಾನಮಾನ ನೀಡುವ ಬಗ್ಗೆ ಚರ್ಚೆಗಳು ನಡೆದಿವೆ.

ತೆಲಂಗಾಣದಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಬಂಡಿ ಸಂಜಯ್ ಕುಮಾರ್ ಅವರನ್ನು ಬದಲಿಸಿ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರನ್ನು 2023ರ ಜುಲೈನಲ್ಲಿ ನೇಮಕ ಮಾಡಲಾಗಿತ್ತು. ಪಕ್ಷಕ್ಕೆ ಆಕ್ರಮಣಕಾರಿ ವ್ಯಕ್ತಿತ್ವದ ನಾಯಕ ಬೇಕು ಎಂದು ಕೆಲವು ನಾಯಕರು ಪಟ್ಟು ಹಿಡಿದಿದ್ದಾರೆ. 'ನಲ್ಗೊಂಡ ಮತ್ತು ಸೂರ್ಯಾಪೇಟೆ-ಯಂತಹ ಕೆಲವು ಜಿಲ್ಲೆಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಕುರಿತು ಭಿನ್ನಾಭಿಪ್ರಾಯಗಳಿದ್ದವು. ಈ ಸಮಸ್ಯೆಯನ್ನು ಬಗೆಹರಿಸಲಾಗಿದೆ. ರಾಜ್ಯ ಘಟಕದ ಅಧ್ಯಕ್ಷರಾಗಲು ಹಲವು ಆಕಾಂಕ್ಷಿಗಳಿದ್ದಾರೆ. ರಾಜ್ಯ ನಾಯಕರ ನಡುವಿನ ಭಿನ್ನಾಭಿಪ್ರಾಯ ಶೀಘ್ರ ಬಗೆಹರಿಯುವ ವಿಶ್ವಾಸ ಇದೆ' ಎಂದು ಹಿರಿಯ ನಾಯಕರೊಬ್ಬರು ಹೇಳಿದರು.

'ಒಬ್ಬ ವ್ಯಕ್ತಿ-ಒಂದು ಹುದ್ದೆ' ಎಂಬ ನೀತಿಗೆ ಪಕ್ಷ ಅಂಟಿಕೊಂಡರೆ ತೆಲಂಗಾಣ ಹಾಗೂ ಗುಜರಾತ್ ರಾಜ್ಯ ಘಟಕದ ಅಧ್ಯಕ್ಷರು ಬದಲಾಗಲಿದ್ದಾರೆ. ಜಿ. ಕಿಶನ್ ರೆಡ್ಡಿ ಹಾಗೂ ಗುಜರಾತ್ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಸಿ.ಆರ್.ಪಾಟೀಲ ಅವರು ಕೇಂದ್ರ ಸಚಿವರಾಗಿದ್ದಾರೆ.

ಮಧ್ಯ ಪ್ರದೇಶದಲ್ಲಿ ಐದು ವರ್ಷಗಳಿಂದ ವಿ.ಡಿ.ಶರ್ಮಾ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಅವರನ್ನು ಬದಲಿಸಿ ಹೊಸ ಮುಖಕ್ಕೆ ಅವಕಾಶ ನೀಡಬೇಕು ಎಂಬ ಬೇಡಿಕೆ ಇದೆ. ಮುಖ್ಯಮಂತ್ರಿ ಮೋಹನ್ ಯಾದವ್ ಇತರ ಹಿಂದುಳಿದ ವರ್ಗದವರಾಗಿದ್ದು (ಒಬಿಸಿ), ಬ್ರಾಹ್ಮಣ ಅಥವಾ ರಜಪೂತ ಸಮುದಾಯದವರನ್ನು ನೂತನ ಅಧ್ಯಕ್ಷರನ್ನಾಗಿ ನೇಮಿಸಲು ವರಿಷ್ಠರು ಒಲವು ತೋರಿದ್ದಾರೆ.

ಉತ್ತರ ಪ್ರದೇಶದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷರ ಚುನಾವಣೆ ಪಕ್ಷಕ್ಕೆ ಕಗ್ಗಂಟಾಗಿದೆ. ಸುಮಾರು 15 ಜಿಲ್ಲೆಗಳಲ್ಲಿ ಬಣ ಬಡಿದಾಟದಿಂದಾಗಿ ಪ್ರಕ್ರಿಯೆ ಹಳಿ ತಪ್ಪಿದೆ. ಹೀಗಾಗಿ, ರಾಜ್ಯ ಘಟಕದ ಅಧ್ಯಕ್ಷರ ಸ್ಥಾನಕ್ಕೆ ಇನ್ನೂ ಚುನಾವಣೆ ನಡೆದಿಲ್ಲ. ಮಹಾಕುಂಭ ಮೇಳದಿಂದಾಗಿ ಚುನಾವಣಾ ಪ್ರಕ್ರಿಯೆ ತಡವಾಗಿದೆ ಎಂದು ಪಕ್ಷದ ನಾಯಕರು ಸಮಜಾಯಿಷಿ ನೀಡುತ್ತಾರೆ.

'ಪಕ್ಷದ ಸಂವಿಧಾನದ ಪ್ರಕಾರ, ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗುತ್ತದೆ. ಆದರೆ, ಈ ಪ್ರಕ್ರಿಯೆ ಹೆಚ್ಚಾಗಿ ಒಮ್ಮತದ ಮೂಲಕ ನಡೆಯುತ್ತದೆ. ನಾಯಕತ್ವ ಗುಣ, ಜಾತಿ ಮತ್ತಿತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಲಾಗುತ್ತದೆ. ಜತೆಗೆ, ರಾಜ್ಯದ ನಾಯಕರ ಅಭಿಪ್ರಾಯವನ್ನೂ ಕೇಳಲಾಗುತ್ತದೆ. ಕರ್ನಾಟಕದಲ್ಲಿನ ಬಣ ಕಿತ್ತಾಟ ಸಮಸ್ಯೆ ಸಂಕೀರ್ಣವಾಗಿದೆ. ಎರಡೂ ಬಣಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಸೂತ್ರ ಹೆಣೆಯಬೇಕಿದೆ' ಎಂದು ಹಿರಿಯ ನಾಯಕರೊಬ್ಬರು ಅಭಿಪ್ರಾಯಪಟ್ಟರು.

ಕೇರಳ, ತಮಿಳುನಾಡಲ್ಲೂ ಬದಲು?

ಪಶ್ಚಿಮ ಬಂಗಾಳ, ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ಮುಂದಿನ ವರ್ಷ ನಡೆಯಲಿದೆ. ಅದಕ್ಕೂ ಮುನ್ನ ಪಕ್ಷ ಸಂಘಟನೆಯನ್ನು ಬಲಪಡಿಸುವ ಬದಲಾವಣೆಗಳಾಗುವ ಸಾಧ್ಯತೆ ಇದೆ. ಈ ರಾಜ್ಯಗಳಲ್ಲಿ ಹಾಲಿ ಅಧ್ಯಕ್ಷರ ನೇತೃತ್ವದಲ್ಲಿ ಪಕ್ಷ ಚುನಾವಣೆ ಎದುರಿಸಲಿದೆಯೇ ಅಥವಾ ಹೊಸ ಮುಖಕ್ಕೆ ಮಣೆ ಹಾಕಲಿದೆಯೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಪಶ್ಚಿಮ ಬಂಗಾಳದಲ್ಲಿ ಸುಕಾಂತ ಮಜುಂದಾರ್ ಮೂರು ವರ್ಷಗಳಿಂದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ತಮಿಳುನಾಡಿನಲ್ಲಿ ಮಾಜಿ ಐಪಿಎಸ್ ಅಧಿಕಾರಿ ಕೆ.ಅಣ್ಣಾಮಲೈ ಅವರನ್ನು 2021ರ ಜುಲೈನಲ್ಲಿ ಈ ಹುದ್ದೆಗೆ ನೇಮಿಸಲಾಗಿತ್ತು. ಕೇರಳದಲ್ಲಿ ಕೆ. ಸುರೇಂದ್ರನ್ ಅವರು ಐದು ವರ್ಷಗಳಿಂದ ಪಕ್ಷದ ಮುಖ್ಯಸ್ಥರಾಗಿದ್ದಾರೆ.

ಸುದ್ದಿ 2 ನಿಮಿಷ

ಪರಿಹಾರ ಪ್ಯಾಕೇಜ್; ಷರತ್ತು ಬೇಡ: ಪ್ರಿಯಾಂಕಾ



ನವದೆಹಲಿ (ಪಿಟಿಐ): ವಯನಾಡ್ ಭೂಕುಸಿತ ಸಂತ್ರಸ್ತರಿಗೆ ಬಿಡುಗಡೆ ಮಾಡಿರುವ ಪರಿಹಾರ ಪ್ಯಾಕೇಜ್ ಅನ್ನು ಅನುದಾನವಾಗಿ ಪರಿವರ್ತಿಸುವಂತೆ ಒತ್ತಾಯಿಸಿ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ತಮ್ಮ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಚೂರಲ್‌ಮಲ ಮತ್ತು ಮುಂಡಕ್ಕೈ ಪ್ರದೇಶದಲ್ಲಿ ಕಳೆದ ವರ್ಷ ಜುಲೈನಲ್ಲಿ ಸಂಭವಿಸಿದ ಭೂಕುಸಿತದ ಸಂತ್ರಸ್ತರು ಎದುರಿಸುತ್ತಿರುವ ಸಂಕಷ್ಟಗಳನ್ನು ಅವರು ಪತ್ರದಲ್ಲಿ ವಿವರಿಸಿ, ಕೇಂದ್ರ ಸರ್ಕಾರ ನೆರವಿನ ಹಸ್ತ ಚಾಚಬೇಕೆಂದು ಕೋರಿದ್ದಾರೆ.

ಕೇರಳದ ಸಂಸದರ ಮನವಿಯಂತೆ ಕೇಂದ್ರ ಸರ್ಕಾರವು ಸಂತ್ರಸ್ತರಿಗೆ ₹529.50 ಕೋಟಿ ಮೊತ್ತದ ಪರಿಹಾರ ಪ್ಯಾಕೇಜ್ ಘೋಷಿಸಿದೆ ಎಂಬುದನ್ನು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಆದರೆ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡುವಾಗ ಷರತ್ತು ವಿಧಿಸಲಾಗಿದೆ. ಹಣವನ್ನು ಸಾಮಾನ್ಯ ಅನುದಾನದ ರೀತಿ ವಿತರಿಸದೆ, ಸಾಲದ ರೂಪದಲ್ಲಿ ವಿತರಿಸಲಾಗುವುದು ಎಂದು ಹೇಳಿದೆ. ಮತ್ತೊಂದು, ಪರಿಹಾರದ ಮೊತ್ತವನ್ನು 2025ರ ಮಾರ್ಚ್ 31ರ ಒಳಗಾಗಿ ಸಂಪೂರ್ಣ ಖರ್ಚು ಮಾಡುವಂತೆಯೂ ತಿಳಿಸಿದೆ. ಈ ಷರತ್ತುಗಳಿಂದ ಸಂತ್ರಸ್ತರಿಗೆ ಅನ್ಯಾಯವಾಗಿದೆ' ಎಂದಿದ್ದಾರೆ.

ಈಶಾ: ಶಿವರಾತ್ರಿ ಆಚರಣೆಗೆ ತಡೆ ಕೋರಿದ್ದ ಅರ್ಜಿ ವಜಾ

ಚೆನ್ನೈ (ಪಿಟಿಐ): ಕೊಯಮತ್ತೂರಿನಲ್ಲಿರುವ ಈಶಾ ಪ್ರತಿಷ್ಠಾನದಲ್ಲಿ ಮಹಾಶಿವರಾತ್ರಿ ಆಚರಣೆಗೆ ಅನುಮತಿ ನೀಡದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

ಈಶಾ ಪ್ರತಿಷ್ಠಾನವು ಕೊಯಮತ್ತೂರಿನಲ್ಲಿ ಕೊಳಚೆ ನೀರನ್ನು ಸರಿಯಾಗಿ ಸಂಸ್ಕರಿಸುತ್ತಿಲ್ಲ, ಸರಿಯಾಗಿ ಸಂಸ್ಕರಿಸದ ಕೊಳಚೆ ನೀರನ್ನು ಅದು ಹೊರಬಿಡುತ್ತಿದೆ, ತೀವ್ರ ಪ್ರಮಾಣದಲ್ಲಿ ಶಬ್ದ ಮಾಲಿನ್ಯ ಉಂಟುಮಾಡುತ್ತಿದೆ ಎಂಬ ಆರೋಪಗಳ ಅಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂಬ ಕೋರಿಕೆ ಸಹ ಈ ಅರ್ಜಿಯಲ್ಲಿ ಇತ್ತು. ಎಸ್.ಟಿ. ಶಿವಜ್ಞಾನಮ್ ಎನ್ನುವವರು ಈ ಅರ್ಜಿ ಸಲ್ಲಿಸಿದ್ದರು.

ಪ್ರತಿಷ್ಠಾನವು ಕಳೆದ ವರ್ಷ ಅಕ್ರಮಗಳನ್ನು ಎಸಗಿತ್ತು ಎಂಬ ಆರೋಪಗಳ ಹಿನ್ನೆಲೆಯಲ್ಲಿ, ಈ ವರ್ಷ ಕಾರ್ಯಕ್ರಮ ಆಯೋಜಿಸಲು ಅವಕಾಶ ಕಲ್ಪಿಸಬಾರದು ಎಂದು ಅವರು ಕೋರಿದ್ದರು.

ಪ್ರತಿಷ್ಠಾನವು ಮಹಾಶಿವರಾತ್ರಿ ಆಚರಣೆ ಸಂದರ್ಭದಲ್ಲಿ ನಿಯಮಗಳನ್ನು ಸರಿಯಾಗಿ ಪಾಲಿಸುತ್ತದೆಯೇ ಎಂಬುದನ್ನು ಪರಿಶೀಲಿಸುವಂತೆ ತಮಿಳುನಾಡು ಮಾಲಿನ್ಯ ನಿಯಂತ್ರಣ ಮಂಡಳಿಗೆ (ಟಿಎನ್‌ಪಿಸಿಬಿ) ಹೈಕೋರ್ಟ್ ಕಳೆದ ವಾರ ಸೂಚಿಸಿತ್ತು. ಕೊಳಚೆ ನೀರನ್ನು ಸಂಸ್ಕರಿಸಲು ಅಗತ್ಯವಿರುವ ಸೌಲಭ್ಯವು ಈಶಾ ಪ್ರತಿಷ್ಠಾನದಲ್ಲಿ ಇದೆ ಎಂದು ಮಂಡಳಿಯು ಹೈಕೋರ್ಟ್‌ಗೆ ತಿಳಿಸಿತು.

ಠಾಣೆಯಲ್ಲಿ ಗಣೇಶ್ ನಾಯ್ಕ್ ಜನತಾ ದರ್ಬಾರ್

ಮುಂಬೈ: ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಅತ್ತ ಪ್ರಯಾಗರಾಜ್‌ನಲ್ಲಿ ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡುತ್ತಿದ್ದರೆ, ಅರಣ್ಯ ಸಚಿವ ಗಣೇಶ್ ನಾಯ್ಕ್ ಅವರು ಇತ್ತ ಠಾಣೆಯಲ್ಲಿ 'ಜನತಾ ದರ್ಬಾರ್' ನಡೆಸಿದ್ದಾರೆ. ಇದು ಮಹಾಯುತಿ ಮೈತ್ರಿಕೂಟದ ಬಿಜೆಪಿ ಮತ್ತು ಶಿವಸೇನಾನಡುವಿನ ಶೀತಲ ಸಮರವನ್ನು ತೀವ್ರಗೊಳಿಸುವಂತೆ ಇದೆ. ಠಾಣೆಯು ಶಿಂದೆ ಅವರ ನೆಲೆಯೂ ಹೌದು.



ಏಕನಾಥ ಶಿಂದೆ

ನಾಯ್ಕ್ ಅವರು ಬಿಜೆಪಿ ಸೇರುವ ಮೊದಲು ಅವಿಭಜಿತ ಶಿವಸೇನಾ ಹಾಗೂ ಅವಿಭಜಿತ ಎನ್‌ಸಿಪಿಯಲ್ಲಿ ಇದ್ದವರು. ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಅವರು 'ಜನತಾ ದರ್ಬಾರ್' ಎಂಬ ಕಾರ್ಯಕ್ರಮ ಆಯೋಜಿಸುತ್ತಿದ್ದಾರೆ. ಶಿಂದೆ ಅವರು ಠಾಣೆ ಜಿಲ್ಲೆಯ ಉಸ್ತುವಾರಿಯೂ ಹೌದು. ನಾಯ್ಕ್ ಅವರು ಪಾಲ್ಘರ್ ಜಿಲ್ಲೆಯ ಉಸ್ತುವಾರಿ.

ಸಚಿವರು ತಮ್ಮ ಪಕ್ಷದ ಕಚೇರಿಯಲ್ಲಿ, ಸಚಿವರ ಬಂಗಲೆಯಲ್ಲಿ ಅಥವಾ ತಮ್ಮ ಜಿಲ್ಲೆಯಲ್ಲಿ 'ಜನತಾ ದರ್ಬಾರ್' ಆಯೋಜಿಸುವುದು ವಾಡಿಕೆ. ಆದರೆ ನಾಯ್ಕ್ ಅವರು ಶಿಂದೆ ಅವರು ಉಸ್ತುವಾರಿಯಾಗಿರುವ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ನಡೆಸಿದ್ದಾರೆ.

'ರಾಜಕೀಯದಲ್ಲಿ ಯಾವ ನಾಯಕನೂ ಶಾಶ್ವತವಾಗಿ ಪ್ರಬಲನಾಗಿರುವುದಿಲ್ಲ. ಜನರು ಒಬ್ಬ ವ್ಯಕ್ತಿಯನ್ನು ಎಷ್ಟರಮಟ್ಟಿಗೆ ಸ್ವೀಕರಿಸುತ್ತಾರೆ ಎಂಬುದು ಆ ವ್ಯಕ್ತಿಯ ನಾಯಕತ್ವವನ್ನು ತೀರ್ಮಾನಿಸುತ್ತದೆ' ಎಂದು ನಾಯ್ಕ್ ಹೇಳಿದ್ದಾರೆ.

ಬಿಜೆಪಿ, ಎಎಪಿ ಮಧ್ಯೆ ಜಟಾಪಟಿ

ಭಾವಚಿತ್ರ ತೆರವು ವಿವಾದ: ಬಿಜೆಪಿ ದಲಿತ ಹಾಗೂ ಸಿಖ್ ವಿರೋಧಿ– ಆರೋಪ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆ ಅಧಿವೇಶನದ ಮೊದಲ ದಿನದ ಕಲಾಪವು ಭಾವಚಿತ್ರ ತೆರವು ವಿಚಾರ ಬಿಜೆಪಿ ಹಾಗೂ ಆಮ್‌ಆದ್ಮಿ ಪಕ್ಷದ ನಾಯಕರ ನಡುವೆ ಮಾತಿನ ಚಕಮಕಿಗೆ ವೇದಿಕೆಯಾಯಿತು.

ನೂತನ ಸ್ಪೀಕರ್ ಅಭಿನಂದಿಸಿ ಮಾತನಾಡಿದ ವಿಧಾನಸಭೆಯ ವಿರೋಧ ಪಕ್ಷದ ನಾಯಕಿ ಆತಿಶಿ, 'ದಲಿತ ಹಾಗೂ ಸಿಖ್ ವಿರೋಧಿ ನೇತೃತ್ವದ ಪಕ್ಷವೊಂದು ದೆಹಲಿ ಮುನ್ನಡೆಸುತ್ತಿರುವುದು ದುರದೃಷ್ಟಕರ. ಮುಖ್ಯಮಂತ್ರಿ ಕಚೇರಿಯಿಂದ ಬಾಬಾ ಸಾಹೇಬ್ ಅಂಬೇಡ್ಕರ್, ಭಗತ್ ಸಿಂಗ್ ಅವರ ಭಾವಚಿತ್ರಗಳನ್ನು ತೆಗೆದುಹಾಕ-ಲಾಗಿದೆ' ಎಂದು ಆರೋಪಿಸಿದರು.

ಇದರ ಬೆನ್ನಲ್ಲೇ ಪ್ರತಿಕ್ರಿಯಿಸಿದ ದೆಹಲಿ ಬಿಜೆಪಿ ಘಟಕ, 'ಮುಖ್ಯಮಂತ್ರಿ ಕಚೇರಿಯಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್, ಭಗತ್‌ಸಿಂಗ್, ಮಹಾತ್ಮಗಾಂಧಿ, ರಾಷ್ಟ್ರಪತಿ, ಪ್ರಧಾನಿ ಭಾವಚಿತ್ರ ಅಳವಡಿಸಲಾಗಿದೆ' ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಚಿತ್ರ ಬಿಡುಗಡೆಗೊಳಿಸಿದೆ.

ಕೇಜ್ರಿವಾಲ್ ಕಿಡಿ: 'ಭಾವಚಿತ್ರ ತೆಗೆಯುವ ಮೂಲಕ ಅಂಬೇಡ್ಕರ್ ಅವರ ಲಕ್ಷಾಂತರ ಅನುಯಾಯಿಗಳ ಭಾವನೆಗಳಿಗೆ ಧಕ್ಕೆ ಉಂಟು ಮಾಡಲಾಗಿದೆ' ಎಂದು ಆಮ್‌ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

'ಬಿಜೆಪಿ ಸರ್ಕಾರವು ಅಂಬೇಡ್ಕರ್ ಭಾವಚಿತ್ರ ತೆಗೆದು, ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರವನ್ನು ಹಾಕಿದೆ. ನೀವು ಪ್ರಧಾನಿ ಚಿತ್ರವನ್ನೂ ಹಾಕಿ, ಆದರೆ ಬಾಬಾ ಸಾಹೇಬರ ಭಾವಚಿತ್ರ ತೆಗೆಯದೇ, ಮೊದಲಿನ ಹಾಗೆ ಮುಂದುವರಿಸಿ' ಎಂದು ಅವರು ಮನವಿ ಮಾಡಿದರು.



ದೆಹಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕಿ ಆತಿಶಿ ನೇತೃತ್ವದಲ್ಲಿ ಎಎಪಿ ಶಾಸಕರು ಸೋಮವಾರ ಸದನದಲ್ಲಿ ಪ್ರತಿಭಟನೆ ನಡೆಸಿದರು

–ಪಿಟಿಐ ಚಿತ್ರ

ಮುಖ್ಯಮಂತ್ರಿ ಕಚೇರಿ ಸೇರಿದಂತೆ ಸರ್ಕಾರದ ಎಲ್ಲ ಕಚೇರಿಗಳಲ್ಲಿ ಅಂಬೇಡ್ಕರ್, ಭಗತ್‌ಸಿಂಗ್ ಅವರ ಭಾವಚಿತ್ರ ಮಾತ್ರ ಅಳವಡಿಸಬೇಕು ಎಂದು 2022ರ ಗಣರಾಜ್ಯೋತ್ಸವದ ದಿನ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಆದೇಶ ಹೊರಡಿಸಿದ್ದರು.

ತಿರುಗೇಟು: 'ಮೂರು ವರ್ಷಗಳ ಕಾಲ ಸಿಎಜಿ ವರದಿಯನ್ನು ಆಮ್‌ಆದ್ಮಿ ಸರ್ಕಾರವು ಹೊಸಕಿ ಹಾಕಿತ್ತು. ವಿಧಾನಸಭೆಯಲ್ಲಿ ಮಂಗಳವಾರ ಸಿಎಜಿ ವರದಿ ಮಂಡನೆಯಾಗಲಿದೆ. ಈ ವಿಚಾರವನ್ನು ಮರೆಮಾಚಲು ಆಮ್‌ಆದ್ಮಿ ಪಕ್ಷವು ಭಾವಚಿತ್ರ ತೆರವು ವಿವಾದ ಸೃಷ್ಟಿಸಿ, ನಾಟಕ ಮಾಡುತ್ತಿದೆ. ಅಂಬೇಡ್ಕರ್ ಅವರಿಗೆ ಬಿಜೆಪಿ ಗೌರವ ನೀಡುವಷ್ಟು ಯಾರೂ ಗೌರವ ನೀಡುತ್ತಿಲ್ಲ' ಎಂದು ದೆಹಲಿ ಸಚಿವ ಮಜಿಂದರ್ ಸಿಂಗ್ ಸಿರ್ಸಾ ತಿಳಿಸಿದರು.

'ಭ್ರಷ್ಟಾಚಾರ ಪ್ರಕರಣದಲ್ಲಿ ಆಮ್‌ಆದ್ಮಿ ಪಕ್ಷದ ಹಲವು ನಾಯಕರು ಜೈಲಿನಲ್ಲಿದ್ದಾರೆ. ಸಿಎಜಿ ವರದಿ ಹೊರಬಂದರೆ ಮತ್ತಷ್ಟು ನಾಯಕರು ಜೈಲು ಪಾಲಾಗಲಿದ್ದಾರೆ. ಹೀಗಾಗಿಯೇ ಈ ವಿವಾದ ಸೃಷ್ಟಿಸಿದ್ದಾರೆ' ಎಂದು ಸಚಿವ ರವೀಂದರ್ ಇಂದ್ರಾಜ್ ಆರೋಪಿಸಿದರು. 'ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವಾಸವಿದ್ದ ವಿವಾದಾತ್ಮಕ 'ಶೀಷಮಹಲ್' ಬಂಗಲೆಗೆ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ದು ತೋರಿಸಲಾಗುವುದು' ಎಂದು ಸಚಿವ ಪರ್ವೇಶ್ ವರ್ಮಾ ಹೇಳಿದ್ದಾರೆ.

ಸ್ಪೀಕರ್ ಆಯ್ಕೆ: ಬಿಜೆಪಿ ಶಾಸಕ ವಿಜೇಂದರ್ ಗುಪ್ತಾ ದೆಹಲಿ ವಿಧಾನಸಭೆಯ ಸ್ಪೀಕರ್ ಆಗಿ ಆಯ್ಕೆ ಆಗಿದ್ದಾರೆ.

ಮಹಿಳೆಯರ ಖಾತೆಗೆ ಹಣ ಪಾವತಿಸಲು ಆಗ್ರಹ

ನವದೆಹಲಿ: ಚುನಾವಣೆಯಲ್ಲಿ ನೀಡಿದ ಭರವಸೆಯಂತೆ ಮಹಿಳೆಯರಿಗೆ ₹2,500 ಗೌರವಧನ ಪಾವತಿಸುವಂತೆ ಒತ್ತಾಯಿಸಿ ವಿರೋಧ ಪಕ್ಷದ ನಾಯಕಿ ಆತಿಶಿ ನೇತೃತ್ವದಲ್ಲಿ ಸೋಮವಾರ ಮುಖ್ಯಮಂತ್ರಿ ರೇಖಾ ಗುಪ್ತಾ ಕಚೇರಿ ಮುಂದೆಯೇ ಪ್ರತಿಭಟನೆ ನಡೆಯಿತು.

'ಮೊದಲ ಸಂಪುಟ ಸಭೆಯಲ್ಲಿ ಭರವಸೆ ಈಡೇರಿಸುವುದಾಗಿ ಪ್ರಧಾನಿ ಮೋದಿ ಅವರು ಚುನಾವಣಾ ಪ್ರಚಾರದ ವೇಳೆ ಹೇಳಿದ್ದರು. ಈ ಕುರಿತು ಚರ್ಚಿಸಲು ದೆಹಲಿ ಮುಖ್ಯಮಂತ್ರಿ ಬಳಿ ಸಮಯಾವಕಾಶ ಕೋರಿದ್ದೆವು. ಆದರೆ, ಭೇಟಿಗೆ ಅವಕಾಶ ನೀಡಲಿಲ್ಲ. ಭರವಸೆ ಈಡೇರಿಸುವ ಮಾತನ್ನೂ ಆಡಿಲ್ಲ. ಮಾರ್ಚ್ 8ರ ಒಳಗಾಗಿ ಈ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಹೇಳಿದ್ದಾರೆ ಅಷ್ಟೇ' ಎಂದರು.

26 ವರ್ಷದ ಬಳಿಕ ದೆಹಲಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು, ಅಧಿವೇಶನದ ಮೊದಲ ದಿನವೇ ಪ್ರತಿಭಟನೆಗೆ ಸಾಕ್ಷಿಯಾಯಿತು.

'ಎಎಪಿಯ 32 ಶಾಸಕರು ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ'

ಚಂಡೀಗಢ (ಪಿಟಿಐ): 'ಆಮ್ ಆದ್ಮಿ ಪಕ್ಷದ (ಎಎಪಿ) 32 ಶಾಸಕರು ನನ್ನ ಸಂಪರ್ಕದಲ್ಲಿದ್ದಾರೆ' ಎಂದು ಪಂಜಾಬ್‌ನ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಪ್ರತಾಪ್ ಸಿಂಗ್ ಬಾಜವಾ ಅವರು ಸೋಮವಾರ ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಎಎಪಿ, 'ಬಾಜವಾ ಅವರೇ ಬಿಜೆಪಿ ಸೇರಲು ಮುಂಗಡವಾಗಿ ಸೀಟು ಕಾಯ್ದಿರಿಸಿದ್ದಾರೆ' ಎಂದಿದೆ.

ಪಂಜಾಬ್‌ನಲ್ಲಿ ಎರಡು ದಿನಗಳ ಅಧಿವೇಶನ ನಡೆಯುತ್ತಿದ್ದು, ವಿಧಾನ ಸೌಧದ ಮುಂಭಾಗ ಬಾಜವಾ ಅವರು ಪತ್ರಕರ್ತರೊಂದಿಗೆ ಮಾತನಾಡಿದರು. 'ಭಗವಂತ ಮಾನ್ ಅವರನ್ನು ಕೆಳಗಿಳಸಬೇಕು ಎಂದು ಕೇಜ್ರಿವಾಲ್ ಅವರು ನಿರ್ಧರಿಸಿದರೆ, ಮಾನ್ ಅವರು ಗಂಟುಮೂಟೆ ಕಟ್ಟಿಕೊಂಡು ಬಿಜೆಪಿ ಸೇರುತ್ತಾರೆ' ಎಂದರು.

'ನಮಗೆ ಸರ್ಕಾರ ಬೀಳಿಸುವ ಇರಾದೆ ಇಲ್ಲ. ಆದರೆ, 32 ಶಾಸಕರು ನನ್ನ ಸಂಪರ್ಕದಲ್ಲಿ ಇರುವುದು ನಿಜ' ಎಂದರು.

'ಬದಲಾವಣೆ ಬಯಸಿರುವ ಅಸ್ಸಾಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಸ್ಸಾಂನ ಬಿಜೆಪಿ ಸರ್ಕಾರವು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿರುವ ಕಾಂಗ್ರೆಸ್, 'ಪ್ರಧಾನಿ ನರೇಂದ್ರ ಮೋದಿ ಅವರು ಈಶಾನ್ಯ ರಾಜ್ಯದಲ್ಲಿ ಸುಳ್ಳಿನ ಕಾರ್ಖಾನೆ ಸ್ಥಾಪಿಸಿದ್ದಾರೆ' ಎಂದು ಸೋಮವಾರ ಟೀಕಿಸಿದೆ.

ಪ್ರಧಾನಿ ಅವರ ಎರಡು ದಿನಗಳ ಅಸ್ಸಾಂ ಭೇಟಿ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಆರೋಪ ಮಾಡಿದ್ದಾರೆ.

'ಅಸ್ಸಾಂನ ಜನರು ಬಿಜೆಪಿ ಮೇಲೆ ಕೋಪಗೊಂಡಿದ್ದು, ಇನ್ನೊಂದೇ ವರ್ಷದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲಿದ್ದಾರೆ' ಎಂದು ಹೇಳಿದ್ದಾರೆ.

'ಮೋದಿ ಅವರು ಅಸ್ಸಾಂನಲ್ಲಿ 'ಜುಮ್ಲಾ'ಗಳ (ಸುಳ್ಳಿನ) ಕಾರ್ಖಾನೆ ಸ್ಥಾಪಿಸಿದ್ದಾರೆ. ಬಿಜೆಪಿಯ ಅತ್ಯಂತ ಭ್ರಷ್ಟ ಮುಖ್ಯಮಂತ್ರಿ ಎನಿಸಿರುವ ಹಿಮಂತ ಬಿಸ್ವ ಶರ್ಮ ಅವರು ಅದರ 'ಮಾಸ್ಟರ್‌ಮೈಂಡ್' ಆಗಿದ್ದಾರೆ. ಈಚೆಗೆ, ಅಸ್ಸಾಂನಲ್ಲಿ ಕಾಂಗ್ರೆಸ್ ನಾಯಕರ ಮೇಲೆ ರಾಜಕೀಯವಾಗಿ ಮತ್ತು ದೈಹಿಕವಾಗಿ ಎರಡೂ ರೀತಿಯಲ್ಲಿ ದಾಳಿ ಮಾಡಲಾಗಿದೆ. ಒಂದು ವರ್ಷದ ಬಳಿಕ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ಮೂಲಕ ಜನರು ಈ ದಾಳಿಗಳಿಗೆ ಪ್ರತಿಕ್ರಿಯಿಸಲಿದ್ದಾರೆ.' ಎಂದಿದ್ದಾರೆ. ಅಸ್ಸಾಂನಲ್ಲಿ ವಿಧಾನಸಭಾ ಚುನಾವಣೆ 2026ರಲ್ಲಿ ನಡೆಯಲಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಅಸ್ಸಾಂ ಉಸ್ತುವಾರಿ ಜಿತೇಂದ್ರ ಸಿಂಗ್, 'ಬಿಸ್ವ ಶರ್ಮ ಅವರ ಸಂಬಂಧಿಕರು ಜನರನ್ನು ಬೆದರಿಸಿ ಅವರ ಚಹಾ ತೋಟಗಳು ಮತ್ತು ಜಮೀನನ್ನು ಕಬಳಿಸುತ್ತಿರುವುದು ಪ್ರಧಾನಿಗೆ ತಿಳಿದಿದೆಯೇ' ಎಂದು ಪ್ರಶ್ನಿಸಿದ್ದಾರೆ.

'ತಪ್ಪುದಾರಿಗೆಳೆಯುವ ಜಾಹೀರಾತು ದೂರು ಸಲ್ಲಿಸಲು ವ್ಯವಸ್ಥೆ ಕಲ್ಪಿಸಿ'

ನವದೆಹಲಿ (ಪಿಟಿಐ): ತಪ್ಪುದಾರಿಗೆ ಎಳೆಯುವ ಜಾಹೀರಾತುಗಳ ಕುರಿತು ದೂರು ಸಲ್ಲಿಸಲು ನಾಗರಿಕರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.



ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು, 'ಡ್ರಗ್ ಮತ್ತು ಮ್ಯಾಜಿಕ್ ರೆಮಿಡೀಸ್ (ಆಕ್ಷೇಪಾರ್ಹ ಜಾಹೀರಾತುಗಳು) ಕಾಯ್ದೆ– 1954 ಅತ್ಯಂತ ಮಹತ್ವದ್ದಾಗಿದ್ದು, ಅದರ ನಿಬಂಧನೆಗಳನ್ನು ಅನುಸರಿಸುವುದು ಅತ್ಯಗತ್ಯವಾಗಿದೆ' ಎಂದು ಹೇಳಿದೆ.

ಈ ಕುರಿತ ಅಂಶವನ್ನು ಮಾರ್ಚ್ 7ರ ವಿಚಾರಣೆ ವೇಳೆ ಪರಿಗಣಿಸುವುದಾಗಿ ಪೀಠ ತಿಳಿಸಿದೆ.

ಕರ್ನಾಟಕದಲ್ಲಿ ತಪ್ಪುದಾರಿ-ಗೆಳೆಯುವ ಜಾಹೀರಾತುಗಳ 25 ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಾಸಿಕ್ಯೂಷನ್ ಅನ್ನು ಪ್ರಾರಂಭಿಸಿಲ್ಲ ಎಂಬುದನ್ನು ಸೋಮವಾರ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಗಮನಿಸಿತು.

ಇಚ್ಛಾಶಕ್ತಿ ಇರಬೇಕು: 'ನಮ್ಮ ಪ್ರಕಾರ, ಇವೆಲ್ಲ ನೆಪಗಳಷ್ಟೆ. ಕರ್ನಾಟಕ ರಾಜ್ಯ ತನ್ನದೇ ಆದ ಪೊಲೀಸ್ ವ್ಯವಸ್ಥೆ, ಸೈಬರ್ ಸೆಲ್ ಅನ್ನು ಹೊಂದಿದೆ. ತಪ್ಪು ದಾರಿಗೆ ಎಳೆಯುವ ಜಾಹೀರಾತುಗಳ ಮೂಲಗಳನ್ನು ಅವರು ಸುಲಭವಾಗಿ ಪತ್ತೆ ಹಚ್ಚಬಹುದು. ಆದರೆ, ಅದಕ್ಕೆ ಇಚ್ಛಾಶಕ್ತಿ ಇರಬೇಕು' ಎಂದು ಪೀಠ ಹೇಳಿತು.

ಸಂಕ್ಷಿಪ್ತ ಸುದ್ದಿ

'ಏಕಕಾಲಕ್ಕೆ ಚುನಾವಣೆ: ಸಂವಿಧಾನ ವಿರೋಧಿಯಲ್ಲ'

ನವದೆಹಲಿ (ಪಿಟಿಐ): 'ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಪ್ರಜಾಪ್ರಭುತ್ವ ವಿರೋಧಿ ಎನಿಸಿಕೊಳ್ಳುವುದಿಲ್ಲ ಮತ್ತು ಇದು ಒಕ್ಕೂಟ ವ್ಯವಸ್ಥೆಯ ರಚನೆಗೂ ಧಕ್ಕೆ ತರುವುದಿಲ್ಲ' ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ.

'ಒಂದು ದೇಶ, ಒಂದು ಚುನಾವಣೆ'ಗೆ ಸಂಬಂಧಿಸಿದಂತೆ ರಚಿಸಲಾಗಿರುವ ಜಂಟಿ ಸಂಸದೀಯ ಸಮಿತಿಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಕಾನೂನು ಸಚಿವಾಲಯದ ಶಾಸನ ರಚನಾ ವಿಭಾಗ ಉತ್ತರ ನೀಡಿದೆ.



ಈ ಹಿಂದೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಯುತ್ತಿತ್ತು. ಆದರೆ, ವಿವಿಧ ರಾಜ್ಯಗಳಲ್ಲಿ ಹೇರಲಾದ ರಾಷ್ಟ್ರಪತಿ ಆಳ್ವಿಕೆ ಸೇರಿದಂತೆ ಹಲವು ಕಾರಣಗಳಿಂದಾಗಿ ಈ ಪ್ರಕ್ರಿಯೆ ಮುರಿದು ಬಿತ್ತು ಎಂದು ಅದು ವಿವರಿಸಿದೆ.

ಕಿಡಿಗೇಡಿಗಳಿಂದ ತಪ್ಪಿಸಿಕೊಳ್ಳುವಾಗ ಮಹಿಳೆ ಸಾವು



ಪಾನಾಗಢ (ಪಿಟಿಐ): ಕಾರನ್ನು ಹಿಂಬಾಲಿಸುತ್ತಿದ್ದ ಕಿಡಿಗೇಡಿಗಳಿಂದ ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ನಡೆದ ಅಪಘಾತದಲ್ಲಿ ಇವೆಂಟ್ ಮ್ಯಾನೇಜ್‌ಮೆಂಟ್ ವೃತ್ತಿ ಮಾಡುತ್ತಿದ್ದ 27 ವರ್ಷ ವಯಸ್ಸಿನ ಮಹಿಳೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದರು.

ಸಂತ್ರಸ್ತೆಯನ್ನು ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ನಿವಾಸಿ ಸುಚಂದ್ರ ಚಟ್ಟೋಪಾಧ್ಯಾಯ ಎಂದು ಗುರುತಿಸಲಾಗಿದೆ. ಸುಚಂದ್ರ ಅವರು ಇಬ್ಬರು ಸಹೋದ್ಯೋಗಿಗಳೊಂದಿಗೆ ಗಯಾಕ್ಕೆ ತೆರಳುತ್ತಿದ್ದರು. ಪಾನಾಗಢದಲ್ಲಿ ಮುಂಜಾನೆ 3 ಗಂಟೆ ಸುಮಾರಿಗೆ ಅಪಘಾತ ನಡೆದಿದೆ. ಉಳಿದ ಇಬ್ಬರು ಗಾಯಗೊಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಹೇಳಿದರು.

'ಸುಚಂದ್ರ ಸೇರಿ ಮೂವರು ಕಾರಿನಲ್ಲಿ ಹೋಗುತ್ತಿದ್ದರು. ಕಾರಿಗೆ ಪೆಟ್ರೋಲ್ ಹಾಕಿಸಿಕೊಂಡ ನಂತರ ಬಿಳಿಯ ಕಾರೊಂದು ಅವರನ್ನು ಹಿಂಬಾಲಿಸಲು ಆರಂಭಿಸಿತು. ಆ ಕಾರಿನಲ್ಲಿ ಐದು ಮಂದಿ ಇದ್ದರು. ಅವರು ಕಾರನ್ನು ವೇಗವಾಗಿ ಓಡಿಸುತ್ತಾ ಅಶ್ಲೀಲವಾಗಿ ಕಿರುಚಾಡುತ್ತಿದ್ದರು. ನಂತರ ಸುಚಂದ್ರ ಅವರ ಕಾರಿನ ಹತ್ತಿರಕ್ಕೆ ತರಲು ಆರಂಭಿಸಿದರು. ಇದರಿಂದ ಸುಚಂದ್ರ ಅವರಿದ್ದ ಕಾರು ರಸ್ತೆಯ ವಿಭಜಕಕ್ಕೆ ಡಿಕ್ಕಿ ಹೊಡೆದು ಮಗುಚಿ ಬಿದ್ದಿತು. ಕಾರಿನ ಮುಂಭಾಗದ ಪ್ರಯಾಣಿಕರ ಸೀಟಿನಲ್ಲಿ ಕುಳಿತಿದ್ದ ಸುಚಂದ್ರ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕೊಂಡೊಯ್ಯುವ ವೇಳೆಗೆ ಅವರು ಮೃತಪಟ್ಟರು' ಎಂದು ತಿಳಿಸಿದರು.

ಕಾರು ಅಪಘಾತವಾದ ಕೂಡಲೇ ಐವರು ದುಷ್ಕರ್ಮಿಗಳು ಸ್ಥಳದಿಂದ ಕಾಲ್ಕಿತ್ತು ತಲೆಮರೆಸಿಕೊಂಡಿದ್ದಾರೆ. ಎರಡೂ ಕಾರುಗಳನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

'ಬಿಜೆಪಿ ಸುಳ್ಳು ಬಯಲು'

ನವದೆಹಲಿ (ಪಿಟಿಐ): 'ಯುಎಸ್‌ಏಡ್' ನೆರವಿನ ವಿಚಾರದಲ್ಲಿ ಬಿಜೆಪಿಯ ಸುಳ್ಳುಗಳನ್ನು ಕೇಂದ್ರ ಹಣಕಾಸು ಸಚಿವಾಲಯದ ವಾರ್ಷಿಕ ವರದಿಯು ಎಳೆಎಳೆಯಾಗಿ ಬಿಚ್ಚಿಟ್ಟಿದೆ ಎಂದು ಕಾಂಗ್ರೆಸ್ ಸೋಮವಾರ ಹೇಳಿದೆ.

ಭಾರತದಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಅಮೆರಿಕವು 2.1 ಕೋಟಿ ಡಾಲರ್ (₹182 ಕೋಟಿ) ಹಣಕಾಸಿನ ನೆರವು ನೀಡಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳುತ್ತಾ ಬಂದಿದ್ದರು. ಆದರೆ, ಭಾರತದಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು 'ಯುಎಸ್‌ಏಡ್' ಅಡಿಯಲ್ಲಿ ಯಾವುದೇ ನೆರವು ಪಡೆದಿಲ್ಲ ಎಂಬುದನ್ನು ಹಣಕಾಸು ಸಚಿವಾಲಯದ ಇತ್ತೀಚಿನ ವರದಿ ಬಹಿರಂಗಪಡಿಸಿದೆ.

ವರದಿಯ ಬಗ್ಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸುಳ್ಳಿನ ಬ್ರಿಗೇಡ್ ಹಾಗೂ ವಿದೇಶಾಂಗ ಸಚಿವರ ಸುಳ್ಳುಗಳನ್ನು ಹಣಕಾಸು ಸಚಿವಾಲಯವು ಬಯಲುಮಾಡಿದೆ' ಎಂದು ಹೇಳಿದ್ದಾರೆ.

'ಭಾರತದ ಸಾರ್ವಭೌಮತ್ವ ಮಾರಾಟಕ್ಕಿಲ್ಲ'

ಕಾಂಗ್ರೆಸ್ ಹೇಳಿಕೆಗೆ ತಿರುಗೇಟು ನೀಡಿರುವ ಬಿಜೆಪಿ, ಭಾರತದ ಪ್ರಜಾ ಪ್ರಭುತ್ವವನ್ನು ಅಸ್ಥಿರಗೊಳಿಸಲು ವಿದೇಶಿ ಶಕ್ತಿಗಳು ಗುಪ್ತವಾಗಿ ನಡೆಸುತ್ತಿರುವ 'ಹಸ್ತಕ್ಷೇಪ' ವನ್ನು ಕಾಂಗ್ರೆಸ್ ಸಮರ್ಥಿಸಿಕೊಳ್ಳುತ್ತಿದೆ ಎಂದು ಆರೋಪಿಸಿದೆ.

ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, 'ಭಾರತದ ಸಾರ್ವಭೌಮತ್ವ ಮಾರಾಟಕ್ಕಿಲ್ಲ. ಅಮೆರಿಕದ ಉದ್ಯಮಿ ಜಾರ್ಜ್ ಸೊರೊಸ್ ಅವರಂತಹ ಭಾರತ ವಿರೋಧಿ ಶಕ್ತಿಗಳ ಜತೆ ನಂಟು ಹೊಂದಿರುವ ವಿದೇಶಿ ದಾನಿಗಳು ಮತ್ತು ಸಂಸ್ಥೆಗಳ ಹಸ್ತಕ್ಷೇಪವನ್ನು ಕಾಂಗ್ರೆಸ್ ಏಕೆ ಸಮರ್ಥಿಸಿಕೊಳ್ಳು-ತ್ತಿದೆ? ವಿದೇಶಿ ಶಕ್ತಿಗಳು ನೆರವು ನೀಡುವ ನೆಪದಲ್ಲಿ ಭಾರತದ ಪ್ರಜಾ ಪ್ರಭುತ್ವ ವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿವೆ' ಎಂದು ಟೀಕಿಸಿದ್ದಾರೆ.

ಬೊಜ್ಜು ಸಮಸ್ಯೆ ಹೋಗಲಾಡಿಸಲು ಆಂದೋಲನ

10 ಸೆಲೆಬ್ರಿಟಿಗಳ ಹೆಸರಿಸಿದ ಪ್ರಧಾನಿ

ನವದೆಹಲಿ (ಪಿಟಿಐ): ಬೊಜ್ಜಿನ ವಿರುದ್ಧ ಹೋರಾಟವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಆರಂಭಿಸಿದ್ದಾರೆ. ಈ ಹೋರಾಟವನ್ನು ಶಕ್ತಿಯುತ-ಗೊಳಿಸಲು 'ಸವಾಲು ಸ್ವೀಕಾರ' ಆಂದೋಲನವನ್ನು ಆರಂಭಿಸುವುದಾಗಿ ತಮ್ಮ 'ಮನದ ಮಾತು' ಕಾರ್ಯಕ್ರಮದಲ್ಲಿ ಭಾನುವಾರ ಹೇಳಿದ್ದರು.



ಮೋದಿ

ಅದರಂತೆ ಸವಾಲು ಸ್ವೀಕರಿಸುವಂತೆ ವಿವಿಧ ಕ್ಷೇತ್ರಗಳ 10 ಸೆಲೆಬ್ರಿಟಿಗಳ ಹೆಸರನ್ನು ಪ್ರಧಾನಿ ಮೋದಿ ಸೋಮವಾರ ಹೆಸರಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಉದ್ಯಮಿ ಆನಂದ್ ಮಹೀಂದ್ರಾ, ನಟರಾದ ಮೋಹನ್‌ಲಾಲ್ ಮತ್ತು ಆರ್. ಮಾಧವನ್, ಶೂಟಿಂಗ್ ಚಾಂಪಿಯನ್ ಮನು ಭಾಕರ್, ವೇಟ್‌ಲಿಫ್ಟರ್ ಮೀರಾಬಾಯಿ ಚಾನು, ಇನ್ಫೊಸಿಸ್ ಸಹ ಸಂಸ್ಥಾಪಕರಾದ ನಂದನ್ ನೀಲೇಕಣಿ ಮತ್ತು ಸುಧಾ ಮೂರ್ತಿ, ಬಾಲಿವುಡ್ ಗಾಯಕಿ ಶ್ರೇಯಾ ಘೋಷಾಲ್ ಮತ್ತು ಭೋಜ್‌ಪುರಿ ಗಾಯಕ, ನಟ ನಿರಹುವಾ ಅವರನ್ನು ಪ್ರಧಾನಿ ಮೋದಿ ಹೆಸರಿಸಿದ್ದಾರೆ.

'ಬೊಜ್ಜಿನ ವಿರುದ್ಧದ ಹೋರಾಟವನ್ನು ಶಕ್ತಿಯುತಗೊಳಿ-ಸಲು, ಅಡುಗೆ ಎಣ್ಣೆ ಬಳಕೆಯನ್ನು ಕಡಿತಗೊಳಿಸುವ ಬಗ್ಗೆ ಜಾಗೃತಿ ಮೂಡಿಸಲು ಈ ಎಲ್ಲರನ್ನು ಹೆಸರಿಸುತ್ತಿದ್ದೇನೆ. ಈ ಎಲ್ಲರೂ ಇನ್ನು 10 ಮಂದಿಯನ್ನು ಹೆಸರಿಸಲು ಕೋರುತ್ತೇನೆ' ಎಂದು ಪ್ರಧಾನಿ ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಬೊಜ್ಜಿನ ವಿರುದ್ಧ ಹೋರಾಡಲು ಅಡುಗೆ ಎಣ್ಣೆ ಬಳಕೆಯ ಪ್ರಮಾಣವನ್ನು ಶೇ 10ರಷ್ಟು ಕಡಿತ ಮಾಡುವಂತೆ ಪ್ರಧಾನಿ ಅವರು ಜನರಲ್ಲಿ ಕೋರಿದ್ದರು.




ಅಡುಗೆ ಎಣ್ಣೆ ಬಳಕೆ ಕಡಿತ ಮಾಡುವುದು ದೇಶದ ಆರ್ಥಿಕತೆಯನ್ನು ಶಕ್ತಿಯುತಗೊಳಿಸುತ್ತದೆ. ಇದರಿಂದ ದೇಶದ ಆಮದು ಕಡಿಮೆಯಾಗುತ್ತದೆ

ನಂದನ್ ನಿಲೇಕಣಿ, ಇನ್ಫೊಸಿಸ್ ಸಹ ಸಂಸ್ಥಾಪಕ



ಶೇ 10ರಷ್ಟು ಅಡುಗೆ ಎಣ್ಣೆ ಬಳಕೆ ಕಡಿತ ಮಾಡಿಕೊಳ್ಳುವ ಸಣ್ಣ ಬದಲಾವಣೆಯು ದೊಡ್ಡ ಕೊಡುಗೆ ನೀಡಬಲ್ಲದು. ಇಂಥ ಕ್ರಮ ಕೈಗೊಂಡ ಮೋದಿ ಅವರಿಗೆ ಅಭಿನಂದನೆಗಳು

ಆನಂದ್ ಮಹೀಂದ್ರಾ ಉದ್ಯಮಿ



ಬೊಜ್ಜಿನಿಂದಾಗಿ ಹೃದಯ ಸಂಬಂಧಿ ರೋಗಗಳು ಸೇರಿದಂತೆ ಹಲವಾರು ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ. ಒತ್ತಡ ಮತ್ತು ಖಿನ್ನತೆಯೂ ಎದುರಾಗುತ್ತದೆ

ಒಮರ್ ಅಬ್ದುಲ್ಲಾ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ

ವರ್ಷಾಂತ್ಯಕ್ಕೆ ಬಿಹಾರ ವಿಧಾನಸಭಾ ಚುನಾವಣೆ: ಹಲವು ಕೊಡುಗೆ ಘೋಷಿಸಿದ ಪ್ರಧಾನಿ ನರೇಂದ್ರ ಮೋದಿ

ಪಿಎಂ–ಕಿಸಾನ್: ರೈತರ ಖಾತೆಗೆ ಹಣ ವರ್ಗ

ಪ್ರಜಾವಾಣಿ ವಾರ್ತೆ

ಪಟ್ನಾ: 'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ನಿಧಿ'ಯ (ಪಿಎಂ–ಕಿಸಾನ್) ಅಡಿ ನೀಡುವ ₹22 ಸಾವಿರ ಕೋಟಿಯ 19ನೆಯ ಕಂತಿನ ಮೊತ್ತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬಿಡುಗಡೆ ಮಾಡಿದರು. ಇದರಿಂದಾಗಿ ದೇಶದಾದ್ಯಂತ ಒಟ್ಟು 9.8 ಕೋಟಿ ರೈತರಿಗೆ ಪ್ರಯೋಜನ ಆಗಲಿದೆ. ಬಿಹಾರದಲ್ಲಿ ಈ ಯೋಜನೆಯ ಫಲಾನುಭವಿ ರೈತರ ಸಂಖ್ಯೆ 82 ಲಕ್ಷ.

ಸೋಮವಾರ ಭಾಗಲ್ಪುರ ಜಿಲ್ಲೆಯಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಮೋದಿ ಅವರು ಭಾಗಿಯಾದರು. ರೈತರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಈ ಸಮಾವೇಶದಲ್ಲಿ ಮೋದಿ ಅವರು ನೇರ ನಗದು ವರ್ಗಾವಣೆ ಮೂಲಕ, ರೈಲು ಮತ್ತು ರಸ್ತೆ ಯೋಜನೆಗಳ ಘೋಷಣೆಯ ಮೂಲಕ ಹಾಗೂ ಭಾಗಲ್ಪುರದ ಕಹಲಗಾಂವ್‌ನಲ್ಲಿ ವಿಕ್ರಮಶಿಲಾ ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆಯ ಪ್ರಸ್ತಾವ ಮಾಡುವ ಮೂಲಕ ಹಲವು ಕೊಡುಗೆಗಳನ್ನು ನೀಡಿದರು.

'ನಾವು ರೈತರಿಗೆ ಅತಿಹೆಚ್ಚಿನ ಮಹತ್ವ ನೀಡಿದ್ದೇವೆ. ಆಹಾರ ಸಂಸ್ಕರಣೆ ಉದ್ಯಮಕ್ಕೂ ನಾವು ಗಮನ ನೀಡುತ್ತಿದ್ದೇವೆ. ಈ ಉದ್ಯಮದಿಂದಾಗಿ ರೈತರಿಗೂ ಪ್ರಯೋಜನವಾಗುತ್ತದೆ' ಎಂದು ಮೋದಿ ಅವರು ಹೇಳಿದರು. ಪಿಎಂ–ಕಿಸಾನ್ ಯೋಜನೆಯ ಅಡಿಯಲ್ಲಿ ರೈತರಿಗೆ ವಾರ್ಷಿಕವಾಗಿ ₹6,000 ನೀಡಲಾಗುತ್ತದೆ. ಈ ಮೊತ್ತವನ್ನು ರೈತರ ಖಾತೆಗೆ ಮೂರು ಕಂತುಗಳಲ್ಲಿ ವರ್ಗಾಯಿಸಲಾಗುತ್ತದೆ.

ಅಕ್ಟೋಬರ್‌ನಲ್ಲಿ ಬಿಹಾರ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಈ ಸಂದರ್ಭದಲ್ಲಿ ಈ ಮೊತ್ತವನ್ನು ವರ್ಗಾವಣೆ ಮಾಡಿರುವುದು ಮಹತ್ವದ್ದಾಗಿದೆ.

ಭಾಗಲ್ಪುರ ರೇಷ್ಮೆಯನ್ನು ಬಳಸಿ ತಯಾರಿಸಿದ ಸೀರೆಗಳು ದೇಶದಲ್ಲಿ ಮಾತ್ರವೇ ಅಲ್ಲದೆ, ವಿಶ್ವದ ಇತರೆಡೆಗಳಲ್ಲಿಯೂ ಪ್ರಸಿದ್ಧಿ ಪಡೆದಿವೆ ಎಂದು ಮೋದಿ ಹೇಳಿದರು.



ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಪಾಲ್ಗೊಂಡಿದ್ದರು

2005ರ ನಂತರ ಬಿಹಾರವು ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ಸಾಗುವಂತೆ ತಾವು ಮಾಡಿದ್ದು ಹೇಗೆ ಎಂಬುದನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿವರಿಸಿದರು. '2005ರಲ್ಲಿ ನಾನು ಅಧಿಕಾರ ಹಿಡಿದಾಗ ಬಿಹಾರದ ವಾರ್ಷಿಕ ಬಜೆಟ್ ಗಾತ್ರ ₹28 ಸಾವಿರ ಕೋಟಿ ಆಗಿತ್ತು. ಈಗ ಅದು ₹3 ಲಕ್ಷ ಕೋಟಿಗಿಂತ ಹೆಚ್ಚಾಗಿದೆ' ಎಂದು ನಿತೀಶ್ ಹೇಳಿದರು. ಅನುದಾನಕ್ಕಾಗಿ ಪ್ರಧಾನಿಯವರಿಗೆ ಧನ್ಯವಾದ ಅರ್ಪಿಸಿದರು.

ತೇಜಸ್ವಿ ಟೀಕೆ: ಮೋದಿ ಅವರ ಬಿಹಾರ ಭೇಟಿಯ ಪ್ರಯೋಜನ ಏನು ಎಂದು ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಪ್ರಶ್ನಿಸಿದ್ದಾರೆ.

'ಮೋದಿ ಅವರು 11 ವರ್ಷಗಳಿಂದ ಪ್ರಧಾನಿಯಾಗಿದ್ದಾರೆ, ನಿತೀಶ್ ಅವರು 20 ವರ್ಷಗಳಿಂದ ಮುಖ್ಯಮಂತ್ರಿಯಾಗಿದ್ದಾರೆ. ಆದರೆ ಬಿಹಾರವು ತಲಾವಾರು ಆದಾಯದಲ್ಲಿ, ಹೂಡಿಕೆಯಲ್ಲಿ, ರೈತರ ಆದಾಯದಲ್ಲಿ ಕೆಳಮಟ್ಟದಲ್ಲಿದೆ' ಎಂದು ತೇಜಸ್ವಿ ಅವರು ಹೇಳಿದ್ದಾರೆ.

ತರೂರ್ ಪರ ಮೃದು ಧೋರಣೆ

ತಿರುವನಂತಪುರ (ಕೇರಳ): ಸಂಸದ ಶಶಿ ತರೂರ್ ಹೇಳಿಕೆಯಿಂದ ಪಕ್ಷದ ವರ್ಚಸ್ಸಿಗೆ ಹಾನಿಯಾಗಿದ್ದರೂ ಕೇರಳದ ಕಾಂಗ್ರೆಸ್ ನಾಯಕರು, ಮೃದು ಧೋರಣೆ ತಾಳಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, 'ಟೀಕೆ ಮಾಡುತ್ತಿದ್ದಾರೆ ಎಂಬ ಕಾರಣಕ್ಕಾಗಿ ಪಕ್ಷವು ಯಾರನ್ನೂ ಮೂಲೆಗುಂಪು ಮಾಡುವುದಿಲ್ಲ. ಕಾಂಗ್ರೆಸ್ ಪಕ್ಷವು ಟೀಕೆಗಳನ್ನು ಧನಾತ್ಮಕವಾಗಿ ಪರಿಗಣಿಸುತ್ತದೆ' ಎಂದು ಹೇಳಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯ ರಮೇಶ್ ಚೆನ್ನಿತ್ತಲ, 'ಪಕ್ಷದ ವರಿಷ್ಠರನ್ನು ತರೂರ್ ಭೇಟಿಯಾಗುವ ಮುನ್ನವೇ ಸಂದರ್ಶನ ನಡೆದಿತ್ತು' ಎಂದು ಸಮರ್ಥಿಸಿಕೊಂಡಿದ್ದಾರೆ.

ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೆ.ಸುಧಾಕರನ್ ಅವರು, 'ತರೂರ್ ಅವರು ತಮ್ಮ ಮಿತಿಯನ್ನು ಮೀರುವುದಿಲ್ಲ' ಎಂದು ಭಾವಿಸುತ್ತೇನೆ ಎಂದಿದ್ದಾರೆ.

ಕೇರಳದ ಕಾಂಗ್ರೆಸ್ ಘಟಕದಲ್ಲಿ ನಾಯಕರ ಕೊರತೆ ಇದೆ ಎಂದು ತರೂರ್ ಅವರು ಇತ್ತೀಚೆಗೆ ಸಂದರ್ಶನದಲ್ಲಿ ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಸಾಮೂಹಿಕ ಅತ್ಯಾಚಾರ

ಖುಂಟಿ (ಜಾರ್ಖಂಡ್), (ಪಿಟಿಐ): ಜಿಲ್ಲೆಯಲ್ಲಿ ಮೂವರು ಬಾಲಕಿಯರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪದಡಿ ಕಾನೂನಿನ ಸಂಘರ್ಷಕ್ಕೆ ಒಳಗಾದ 18 ಬಾಲಕರನ್ನು ಬಂಧಿಸಲಾಗಿದೆ ಎಂದು ಜಾರ್ಖಂಡ್ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಅತ್ಯಾಚಾರಕ್ಕೊಳಗಾದ ಬಾಲಕಿಯರನ್ನು ಸೋಮವಾರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.

ರಾನಿಯಾ ಪ್ರದೇಶದಲ್ಲಿ ಶುಕ್ರವಾರ ತಡರಾತ್ರಿ ನಡೆದ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಐವರು ಬಾಲಕಿಯರು ಮನೆಗೆ ಮರಳುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಖುಂಟಿ ಪೊಲೀಸ್ ವರಿಷ್ಠಾಧಿಕಾರಿ ಅಮನ್ ಕುಮಾರ್ ತಿಳಿಸಿದ್ದಾರೆ.

ಐವರು ಬಾಲಕಿಯರ ಪೈಕಿ 12ರಿಂದ 16 ವರ್ಷದ ಮೂವರು ಬಾಲಕಿಯರ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಕುಟುಂಬದ ಸದಸ್ಯರು ಪೊಲೀಸರಿಗೆ ದೂರು ನೀಡಿದ್ದಾರೆ.

12ರಿಂದ 17 ವರ್ಷದೊಳಗಿನ ಬಾಲಕರು ಈ ದುಷ್ಕೃತ್ಯ ಎಸಗಿದ್ದು, ಇವರನ್ನು ಬಾಲ ಮಂದಿರದಲ್ಲಿ ಇಡಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ವಿದ್ಯಾರ್ಥಿಗೆ ಹೊಡೆದ ಶಿಕ್ಷಕಿ ಅಮಾನತು

ಚೆನ್ನೈ (ಪಿಟಿಐ): ಹಿಂದಿ ಪದ್ಯವನ್ನು ಕಂಠಪಾಠ ಮಾಡಲು ವಿಫಲನಾದ ಮೂರನೇ ತರಗತಿ ವಿದ್ಯಾರ್ಥಿಗೆ ಹೊಡೆದ ಆರೋಪದ ಮೇಲೆ ಚೆನ್ನೈನ ಶಾಲೆಯೊಂದರಲ್ಲಿ ಶಿಕ್ಷಕಿಯನ್ನು ಅಮಾನತು ಮಾಡಲಾಗಿದೆ.

'ತನಿಖೆ ಬಳಿಕ ಶಿಕ್ಷಕಿಯನ್ನು ಅಮಾನತು ಮಾಡಲಾಗಿದೆ' ಎಂದು ಶಾಲೆಯ ಆಡಳಿತ ಮಂಡಳಿಯು ಸೋಮವಾರ ತಿಳಿಸಿದೆ.

ರಾಜಾಜಿ ವಿದ್ಯಾಶ್ರಮ ಶಾಲೆಯ ಶಿಕ್ಷಕಿ, ಕಳೆದ ವಾರ ವಿದ್ಯಾರ್ಥಿಗೆ ಹೊಡೆದ ವಿಚಾರವನ್ನು ವಿದ್ಯಾರ್ಥಿಯ ಪೋಷಕರು ಆಡಳಿತ ಮಂಡಳಿಗೆ ತಿಳಿಸಿದ್ದರು. ಶಾಲೆಯು ಹಿಂಸೆಯ ವಿರುದ್ಧ 'ಶೂನ್ಯ ಸಹಿಷ್ಣು' ನಿಯಮವನ್ನು ಪಾಲಿಸುತ್ತದೆ.

ಶಾಲೆಯ ಮಾರ್ಗಸೂಚಿಯ ಪ್ರಕಾರ ದೈಹಿಕ ಶಿಕ್ಷೆ, ಬೈಗುಳ, ಭಾವನಾತ್ಮಕ ನಿಂದನೆಗೆ ನಿರ್ಬಂಧವಿದೆ. ಹೀಗಾಗಿ ಶಿಕ್ಷಕಿ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗಿದೆ.

ಜಾರ್ಜ್ ಬಂಧನ

ತಿರುವನಂತಪುರ: ದ್ವೇಷ ಭಾಷಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಮುಖಂಡ ಪಿ.ಸಿ. ಜಾರ್ಜ್ ಅವರನ್ನು ಕೇರಳ ಪೊಲೀಸರು ಸೋಮವಾರ ಬಂಧಿಸಿದ್ದಾರೆ.



ಪಿ.ಸಿ. ಜಾರ್ಜ್

ಬಂಧಿತ ಜಾರ್ಜ್ ಅವರನ್ನು ಪೊಲೀಸರು ಈರಾಟ್ಟುಪೇಟ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯವು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಜಾರ್ಜ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು.

ಇಂಟರ್‌ನೆಟ್ ದರ ನಿಯಂತ್ರಣ ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): 'ಇಂಟರ್‌ನೆಟ್ ದರವನ್ನು ನಿಯಂತ್ರಿಸಬೇಕು' ಎಂದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ರಜತ್ ಎನ್ನುವವರು ಅರ್ಜಿ ಸಲ್ಲಿಸಿದ್ದರು. 'ಇಂಟರ್‌ನೆಟ್ ಸೇವೆಗೆ ಸಂಬಂಧಿಸಿ ಭಾರತದ ಮುಕ್ತ ಮಾರುಕಟ್ಟೆಯಲ್ಲಿ ಜನರಿಗೆ ಆಯ್ಕೆಗಳಿವೆ' ಎಂದು ಹೇಳಿದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರಿದ್ದ ಪೀಠವು ಅರ್ಜಿಯನ್ನು ತಿರಸ್ಕರಿಸಿತು.

'ಅಂತರ್ಜಾಲ ಮಾರುಕಟ್ಟೆಯ ಬಹುಪಾಲನ್ನು ಜಿಯೊ, ರಿಲಯನ್ಸ್ ಕಂಪನಿಗಳೇ ನಿಯಂತ್ರಿಸುತ್ತಿವೆ' ಎಂದು ಅರ್ಜಿದಾರರು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಈ ಕಂಪನಿಗಳು ಹೆಚ್ಚು ಲಾಭ ಮಾಡಿಕೊಳ್ಳುತ್ತಿವೆ ಎಂದು ನಿಮಗೆ ಅನ್ನಿಸುತ್ತಿದ್ದರೆ, ನೀವು ಸ್ಪರ್ಧಾ ಆಯೋಗಕ್ಕೆ ದೂರು ನೀಡಿ' ಎಂದು ಹೇಳಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಒಬ್ಬ ಮನುಷ್ಯ ಯಶಸ್ವಿಯಾಗುವುದಕ್ಕೆ ಮುಖ್ಯವಾಗಿ ಆತ ಜೀವನಪೂರ್ತಿ ವಿದ್ಯಾರ್ಥಿಯಾಗಿರಬೇಕು, ಪ್ರತಿದಿನ ಕುತೂಹಲಿಯಾಗಿರಬೇಕು ಮತ್ತು ಹೊಸದೇನನ್ನಾದರೂ ಕಲಿಯುತ್ತಲೇ ಇರಬೇಕು. – ಇಂದ್ರಾ ನೂಯಿ

ಬೆಳಗಾವಿ ಪ್ರಕರಣ: ಭಾವೋದ್ವೇಗ ಬೇಡ ಜನಸಾಮಾನ್ಯರಿಗೆ ತೊಂದರೆ ಆಗದಿರಲಿ

ವಾಯವ್ಯ ಸಾರಿಗೆ ನಿಗಮದ ಬಸ್ ನಿರ್ವಾಹಕ ಮತ್ತು ಚಾಲಕನ ಮೇಲೆ ನಡೆದಿರುವ ಹಲ್ಲೆ ಪ್ರಕರಣವು ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವಿನ ಬಿಕ್ಕಟ್ಟಾಗಿ ಪರಿಣಮಿಸಿ, ಎರಡೂ ರಾಜ್ಯಗಳ ಜನಸಾಮಾನ್ಯರು ತೊಂದರೆ ಅನುಭವಿಸುವಂತಾಗಿರುವುದು ದುರದೃಷ್ಟಕರ. ಕಾನೂನು ಮಾರ್ಗದ ಮೂಲಕ ಪರಿಹರಿಸಿಕೊಳ್ಳಬೇಕಾದ ಪ್ರಕರಣ ಅನಗತ್ಯ ಭಾವೋದ್ವೇಗ ಹಾಗೂ ಅನಪೇಕ್ಷಿತ ವಿದ್ಯಮಾನಗಳಿಗೆ ಕಾರಣವಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಬಸ್ ಸಂಚಾರ ಸ್ಥಗಿತಗೊಂಡಿದೆ. ಬೆಳಗಾವಿಯಿಂದ ಕೊಲ್ಹಾಪುರ, ಪುಣೆ, ಸಾತಾರಾ, ಮುಂಬೈ ಮತ್ತಿತರ ಪ್ರದೇಶಗಳಿಗೆ ಹೋಗಬೇಕಾದವರು ತೊಂದರೆ ಅನುಭವಿಸುವಂತಾಗಿದೆ. ಆಯಾ ರಾಜ್ಯಗಳ ಸಾರಿಗೆ ನಿಗಮಗಳ ಬಸ್‌ಗಳು ತಮ್ಮ ಗಡಿಯವರೆಗಷ್ಟೇ ಕಾರ್ಯಾಚರಣೆ ನಡೆಸುತ್ತಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವೋಲ್ವೊ ಬಸ್‌ಗೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕಪ್ಪು ಮಸಿ ಬಳಿಯಲಾಗಿದೆ. ಇಂಥ ಕೃತ್ಯಗಳಿಂದ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆಯೇ ವಿನಾ ತಿಳಿಯಾಗುವುದಿಲ್ಲ. ಯಾವುದೇ ಸಮಸ್ಯೆ ಬಗೆಹರಿಸಿಕೊಳ್ಳುವ ದಿಸೆಯಲ್ಲಿ ಬಸ್ ಸಂಚಾರ ಸ್ಥಗಿತಗೊಳಿಸುವುದು ಪರಿಹಾರ ಮಾರ್ಗವಲ್ಲ ಎನ್ನುವುದನ್ನು ಪ್ರತಿಭಟನಕಾರರು ಅರ್ಥ ಮಾಡಿಕೊಳ್ಳಬೇಕು. ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಳ್ಳುವುದರಿಂದ ಶಾಲೆ-ಕಾಲೇಜುಗಳಿಗೆ ಹೋಗಿಬರುವ ವಿದ್ಯಾರ್ಥಿಗಳಿಗೆ ಅನನುಕೂಲ ಆಗುತ್ತದೆ. ಸಂತೆ ಹಾಗೂ ಪೇಟೆಗಳಿಗೆ ಹೋಗಿಬರುವ ರೈತರು ಮತ್ತು ಆಯಾ ದಿನದ ದುಡಿಮೆಯನ್ನೇ ನೆಚ್ಚಿಕೊಂಡಿರುವ ಕಾರ್ಮಿಕರು ತೊಂದರೆಗೊಳಗಾಗುತ್ತಾರೆ. ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಎಡತಾಕಬೇಕಾದ ರೋಗಿಗಳು ಎದುರಿಸಬೇಕಾದ ಸಮಸ್ಯೆ ಮತ್ತು ಸಂಕಟ ಊಹಿಸಲು ಅಸಾಧ್ಯ. ಜನಸಾಮಾನ್ಯರಿಗೆ ಆಗುವ ತೊಂದರೆಗಳನ್ನು ಗಮನದಲ್ಲಿರಿಸಿಕೊಂಡು, ಸ್ಥಗಿತಗೊಂಡಿರುವ ಬಸ್ ಸಂಚಾರವನ್ನು ತಕ್ಷಣ ಆರಂಭಿಸಲು ಉಭಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು ಹಾಗೂ ಪರಿಸ್ಥಿತಿ ತಿಳಿಗೊಳ್ಳಲು ಸಾರ್ವಜನಿಕರೂ ಸಹಕರಿಸಬೇಕು.



ಇಂಥ ಸಮಸ್ಯೆಗಳು ತಲೆದೋರಿದಾಗ ಪ್ರಕರಣಗಳು ರಾಜಕೀಯ ಬಣ್ಣ ಪಡೆದುಕೊಳ್ಳದಂತೆ ನೋಡಿಕೊಳ್ಳುವ ವಿವೇಚನೆಯನ್ನು ರಾಜಕೀಯ ಮುಖಂಡರು ಪ್ರದರ್ಶಿಸಬೇಕು

ಬೆಳಗಾವಿ ತಾಲ್ಲೂಕಿನ ಸಣ್ಣ ಬಾಳೆಕುಂದ್ರಿ ಗ್ರಾಮದಲ್ಲಿ ಬಸ್ ನಿರ್ವಾಹಕ ಮತ್ತು ಚಾಲಕನ ಮೇಲೆ ನಡೆದಿರುವ ಹಲ್ಲೆ ಯಾವ ಕಾರಣದಿಂದಲೂ ಸಮರ್ಥನೀಯವಲ್ಲ. ಟಿಕೆಟ್ ನೀಡುವ ಸಂದರ್ಭದಲ್ಲಿ, 'ಮರಾಠಿ ಮಾತನಾಡಲು ಬರುವುದಿಲ್ಲ' ಎಂದು ನಿರ್ವಾಹಕ ಹೇಳಿದ್ದನ್ನೇ ನೆಪವಾಗಿಸಿಕೊಂಡು ಯುವಕರ ಗುಂಪು ಹಲ್ಲೆ ನಡೆಸಿದೆ. ಹಲ್ಲೆಗೊಳಗಾದ ಬಸ್ ನಿರ್ವಾಹಕ ಮತ್ತು ಚಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಸಂಘರ್ಷ ಎದುರಿಸುತ್ತಿರುವ ಒಬ್ಬ ಬಾಲಕನೊಂದಿಗೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಇದಕ್ಕೆ ಪ್ರತಿಯಾಗಿ, ಬಸ್‌ನಲ್ಲಿ ನಡೆದ ಮಾತಿನ ಚಕಮಕಿಯಲ್ಲಿ ಭಾಗಿಯಾಗಿದ್ದ ಒಬ್ಬ ಬಾಲಕಿಯು ನಿರ್ವಾಹಕರ ವಿರುದ್ಧ ಪೋಕ್ಸೊ ಪ್ರಕರಣ ದಾಖಲು ಮಾಡಿದ್ದಾಳೆ. ನಿರ್ವಾಹಕ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ; ಕೆಟ್ಟ ಪದ ಬಳಸಿ, ಕೆಟ್ಟದಾಗಿ ಸನ್ನೆ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಇಬ್ಬರ ಮೇಲೂ ಪ್ರಕರಣ ದಾಖಲಾಗಿದ್ದು, ಇಡೀ ಘಟನೆ ಗೋಜಲಾಗಿದೆ. ಕಾನೂನು ಉಲ್ಲಂಘನೆಯ ಘಟನೆ ಕನ್ನಡ ಮತ್ತು ಮರಾಠಿ ಭಾಷೆಗಳ ಮೇಲಾಟದ ಪ್ರಶ್ನೆಯಾಗಿ ಬದಲಾಗಿದೆ. ಅಹಿತಕರ ಘಟನೆಗಳನ್ನು ಕಾನೂನು ಉಲ್ಲಂಘನೆಯ ರೂಪದಲ್ಲಿ ನೋಡಿ, ಕಾನೂನು ಮುಖಾಂತರವೇ ಪರಿಹಾರ ಕಂಡುಕೊಳ್ಳಬೇಕಾದ ವಿವೇಕವನ್ನು ಎರಡೂ ಸರ್ಕಾರಗಳು ಹಾಗೂ ಸಾರ್ವಜನಿಕರು ತೋರಬೇಕಾಗಿದೆ. ಕಾನೂನು ಉಲ್ಲಂಘನೆಯ ಬಿಕ್ಕಟ್ಟುಗಳನ್ನು ರಾಜ್ಯಗಳ ನಡುವಿನ ಸಮಸ್ಯೆ ಇಲ್ಲವೇ ಭಾಷೆಗಳ ನಡುವಿನ ತಿಕ್ಕಾಟದ ರೂಪದಲ್ಲಿ ನೋಡುವುದರಿಂದ ಯಾರಿಗೂ ಉಪಯೋಗವಿಲ್ಲ. ಇಂಥ ಸಮಸ್ಯೆಗಳು ತಲೆದೋರಿದಾಗ ರಾಜಕೀಯ ಮುಖಂಡರು ರೋಷಾವೇಶದಿಂದ ಮಾತನಾಡದೆ ಸಂಯಮ ವಹಿಸಬೇಕು ಹಾಗೂ ಪ್ರಕರಣಗಳು ರಾಜಕೀಯ ಬಣ್ಣ ಪಡೆದುಕೊಳ್ಳದಿರುವಂತೆ ನೋಡಿಕೊಳ್ಳುವ ವಿವೇಚನೆ ಪ್ರದರ್ಶಿಸಬೇಕು. ಬೆಳಗಾವಿಯನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕ ಹಾಗೂ ಮಹಾರಾಷ್ಟ್ರದ ನಡುವೆ ಆಗಾಗ ವಿವಾದ ರೂಪುಗೊಳ್ಳುತ್ತಲೇ ಇರುತ್ತದೆ. ಭಾಷೆಗಳ ತಿಕ್ಕಾಟದ ಸ್ವರೂಪ ಪಡೆದುಕೊಳ್ಳುವ ಸಂಘರ್ಷಗಳನ್ನು ರಾಜಕಾರಣಿಗಳು ಹಾಗೂ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿಗಾಗಿ ಬಳಸಿಕೊಂಡಿರುವ ಉದಾಹರಣೆಗಳೂ ಇವೆ. ಉಭಯ ಭಾಷಿಕರ ನಡುವಿನ ವೈಮನಸ್ಸಿನಿಂದ ಲಾಭ ಪಡೆಯುತ್ತಿರುವುದು ರಾಜಕಾರಣಿಗಳೇ ವಿನಾ ಜನಸಾಮಾನ್ಯರಲ್ಲ.

ದಿನದ ಟ್ವೀಟ್

ಪ್ರೀತಿಯಿಂದ ಬದುಕೋಣ

ನಮ್ಮ ಕುಟುಂಬದ ಸದಸ್ಯರು ಬದುಕಿದ್ದಾಗ ನಾವು ಅವರನ್ನು ಅಪಾರವಾಗಿ ಪ್ರೀತಿಸಿದರೆ, ನಮ್ಮ ಬದುಕು ಎಷ್ಟೊಂದು ಸುಂದರವಾಗಿ ಇರುತ್ತದೆ ಅಲ್ಲವೇ!

(ವಧು ಅಥವಾ ವರನ ಕುಟುಂಬದವರು, ತೀರಿಹೋದ ತಮ್ಮ ಕುಟುಂಬ ಸದಸ್ಯರ ಕಟೌಟ್ ಅಥವಾ ಮೇಣದ ಪ್ರತಿಮೆಯನ್ನು ವಿವಾಹ ನಡೆಯುವ ಸ್ಥಳದಲ್ಲಿ ತಂದು ಇರಿಸುವ ವಿದ್ಯಮಾನಕ್ಕೆ ಪ್ರತಿಕ್ರಿಯೆ)

ಕೆ.ನವೀನ್

ಕಿಡಿನುಡಿ

ಒಂದು ದೇಶದ ರಾಜಕಾರಣಿಗಳು ದೇಶದ ಪ್ರಜೆಗಳಿಗೆ ಹೆದರದೇ ಇದ್ದಾಗ, ಆ ದೇಶ ಅವನತಿ ಹೊಂದುತ್ತದೆ ಎಂಬ ಮಾತಿದೆ. ಅವರಿಗೆ ನಾವು ಭಯ ಹುಟ್ಟಿಸುವುದು ಹೇಗೆ, ನನಗೆ ತಿಳಿಯದು.



ಅನೂಪ್ ಕುಮಾರ್

25 ವರ್ಷಗಳ ಹಿಂದೆ — ಶುಕ್ರವಾರ, 25-2-2000

• 'ಭದ್ರತಾ ವ್ಯವಸ್ಥೆ ದೋಷ ಕಾರ್ಗಿಲ್ ಘರ್ಷಣೆಗೆ ಕಾರಣ'

ನವದೆಹಲಿ, ಫೆ. 24 (ಯುಎನ್‌ಐ)– ದೇಶದ ಭದ್ರತಾ ನಿರ್ವಹಣಾ ವ್ಯವಸ್ಥೆಯ ಲೋಪದೋಷಗಳೇ ಕಾರ್ಗಿಲ್ ಸಂಘರ್ಷಕ್ಕೆ ಮೂಲ ಕಾರಣ ಎಂದು ಈ ಬಗ್ಗೆ ತನಿಖೆ ನಡೆಸಿದ ಕೆ.ಸುಬ್ರಮಣ್ಯಂ ಸಮಿತಿ ಅಭಿಪ್ರಾಯಪಟ್ಟಿದೆ.

ಪಾಕಿಸ್ತಾನದ ಕಾರ್ಗಿಲ್ ಆಕ್ರಮಣವು ಕೇಂದ್ರ ಸರ್ಕಾರ, ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರ, ಭಾರತದ ಸೇನೆ, ಗುಪ್ತಚರ ವಿಭಾಗ ಸೇರಿದಂತೆ ಎಲ್ಲರಿಗೂ ಅಚ್ಚರಿಯ ಅಂಶವಾಗಿತ್ತು ಎಂದು ಸಮಿತಿ ತನ್ನ 228 ಪುಟಗಳ ವರದಿಯಲ್ಲಿ ಬಹಿರಂಗಪಡಿಸಿದೆ. ಪಾಕಿಸ್ತಾನದ ಬೃಹತ್ ಪ್ರಮಾಣದ ಅತಿಕ್ರಮಣದ ಬಗ್ಗೆ ಗೂಢಚರ್ಯ ಸಂಸ್ಥೆಗಳಿಗಾಗಲಿ ಅಥವಾ ಸೇನೆಯ ಅಧಿಕಾರಿಗಳಿಗಾಗಲಿ ಸ್ವಲ್ಪವೂ ಸುಳಿವು ದೊರಕಿರಲಿಲ್ಲ.

ವರದಿ ಮಂಡನೆ: ಕಾರ್ಗಿಲ್ ಸಂಘರ್ಷಕ್ಕೆ ಕಾರಣವಾದ ಅಂಶಗಳನ್ನು ಅಧ್ಯಯನ ಮಾಡಲು ರಚಿಸಿದ್ದ ಸಮಿತಿ ಸಲ್ಲಿಸಿದ ವರದಿಯನ್ನು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರು ಲೋಕಸಭೆಯಲ್ಲಿ ಇಂದು ಮಂಡಿಸಿದರು. ದೇಶದ ಭದ್ರತಾ ನಿರ್ವಹಣೆ ವ್ಯವಸ್ಥೆಯ ಲೋಪದೋಷಗಳ ಕುರಿತು ಸಮಿತಿ ಮಾಡಿದ 25 ಶಿಫಾರಸುಗಳನ್ನು ಸರ್ಕಾರ ಅಂಗೀಕರಿಸಿದೆ ಎಂದರು.

• ಖಾದ್ಯ ತೈಲ: ಚಿಲ್ಲರೆ ಮಾರಾಟ ನಿಷೇಧ ಜಾರಿ ಅಸಂಭವ

ಬೆಂಗಳೂರು, ಫೆ. 24– ರಾಜ್ಯದಲ್ಲಿ ಖಾದ್ಯ ತೈಲದ ಚಿಲ್ಲರೆ ಮಾರಾಟವನ್ನು ನಿಷೇಧಿಸಿ ಸರ್ಕಾರ ಹೊಡಿಸಿರುವ ಆದೇಶ ಜಾರಿಗೆ ಬರಲು ಒಂದು ತಿಂಗಳು ಮಾತ್ರ ಉಳಿದಿದೆ. ಆದರೆ ಈ ಆದೇಶವನ್ನು ಜಾರಿಗೊಳಿಸುವ ಪರಿಸ್ಥಿತಿಯಲ್ಲಿ ರಾಜ್ಯದ ಎಣ್ಣೆ ಗಿರಣಿಗಳಿಲ್ಲ. ರಾಜ್ಯದ ಬಹುತೇಕ ಎಣ್ಣೆ ಗಿರಣಿಗಳಲ್ಲಿ ಪ್ಲಾಸ್ಟಿಕ್ ಚೀಲ ಅಥವಾ ಟಿನ್‌ಗಳಲ್ಲಿ ಖಾದ್ಯ ತೈಲವನ್ನು ಭರ್ತಿ ಮಾಡಿ ಮಾರಾಟ ಮಾಡುವ ವ್ಯವಸ್ಥೆ ಇಲ್ಲದೆ ಇರುವುದೇ ಇದಕ್ಕೆ ಕಾರಣ.

ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಖಾದ್ಯ ತೈಲ ಬಳಕೆಯಿಂದ ಕೆಲವರಿಗೆ ಒಂದು ಬಗೆಯ ರೋಗ ಕಾಣಿಸಿಕೊಂಡಿದ್ದರಿಂದ ಕೇಂದ್ರ ಸರ್ಕಾರ 1998ರ ಸೆಪ್ಟೆಂಬರ್‌ನಲ್ಲಿ ಖಾದ್ಯ ತೈಲದ ಚಿಲ್ಲರೆ ಮಾರಾಟ ನಿಷೇಧಿಸಿತ್ತು. ಕೇಂದ್ರದಂತೆ ರಾಜ್ಯ ಸರ್ಕಾರವೂ ಬರುವ ಏ.1ರಿಂದ ಖಾದ್ಯ ತೈಲದ ಚಿಲ್ಲರೆ ಮಾರಾಟ ನಿಷೇಧಿಸಿದೆ. ಸುಮಾರು 27 ಬಗೆಯ ಖಾದ್ಯ ತೈಲದ ಚಿಲ್ಲರೆ ಮಾರಾಟ ನಿಷೇಧಿಸಲಾಗಿದೆ. ರಾಜ್ಯದಲ್ಲಿ ಮುಖ್ಯವಾಗಿ ಕಡಲೆಕಾಯಿ, ಸೂರ್ಯಕಾಂತಿ, ಕೊಬ್ಬರಿ, ತಾಳೆ ಇತ್ಯಾದಿ ಖಾದ್ಯ ತೈಲವನ್ನು ಸಂಸ್ಕರಿಸಿ ಮಾರಾಟ ಮಾಡಲಾಗುತ್ತಿದೆ.

50 ವರ್ಷಗಳ ಹಿಂದೆ — ಮಂಗಳವಾರ, 25-2-1975

• ಅರಸು ವಿರುದ್ಧ ಖಚಿತ ಆಪಾದನೆಗಳು

ಬೆಂಗಳೂರು, ಫೆ. 24– ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರ ವಿರುದ್ಧ ಇಂದು ವಿಧಾನಸಭೆಯಲ್ಲಿ ಹತ್ತು ಖಚಿತ ಆಪಾದನೆಗಳನ್ನು ಮಂಡಿಸಿದ ವಿರೋಧಿ ನಾಯಕ ಎಚ್.ಡಿ.ದೇವೇಗೌಡ ಅವರು ನ್ಯಾಯಾಂಗ ತನಿಖೆಗೆ ಆಗ್ರಹಪಡಿಸಿದರು.

'ಆಪಾದನೆಗಳ ಬಗ್ಗೆ ಸಾಕ್ಷ್ಯಾಧಾರಗಳನ್ನು ನೀಡಲು ನಾನು ಸಿದ್ಧ' ಎಂದು ಹೇಳಿದ ಅವರು ಅವುಗಳ ವಿಚಾರಣೆಗೆ ತನಿಖಾ ಆಯೋಗ ನೇಮಿಸಲು ಒತ್ತಾಯಪಡಿಸಿದರು. ಅಲ್ಲದೆ 'ಅವಿಶ್ವಾಸ ನಿರ್ಣಯದ ರೀತಿಯಲ್ಲಿ ಈ ಸಭೆ ಆ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಿಷ್ಪಕ್ಷಪಾತ ವಾದ ನ್ಯಾಯಾಂಗ ತನಿಖೆ ಮಾತ್ರ ತೀರ್ಮಾನಿಸಬೇಕು' ಎಂದರು.

ಆಪಾದನೆಗಳು ಹೀಗಿವೆ: ಹೇಮಾವತಿ ಯೋಜನೆಯಲ್ಲಿ ಶ್ರೀ ಬಾಲಾಜಿ ಎಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಂಪನಿಗೆ ಸುಮಾರು 98 ಲಕ್ಷ 87 ಸಾವಿರ ರೂ. ಹೆಚ್ಚಾಗಿ ಹಣ ನೀಡಿರುವುದು.

ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಯಲ್ಲಿ ಶ್ರೀ ಶಂಕರ ನಾರಾಯಣ ಕನ್‌ಸ್ಟ್ರಕ್ಷನ್ ಕಂಪನಿಗೆ ಸುಮಾರು 18 ಲಕ್ಷ ರೂ. ಹೆಚ್ಚಾಗಿ ಪಾವತಿ ಮಾಡಿರುವುದು ಮುಂತಾದವು ಈ ಆರೋಪಗಳಲ್ಲಿ ಸೇರಿವೆ.

ಉತ್ಕೃಷ್ಟ ಸಂಶೋಧನಾ ಸಂಸ್ಕೃತಿ ಬೆಳೆಸುವುದು ಯುಜಿಸಿಯ ಆದ್ಯತೆಯಾಗಬೇಕು

ಉನ್ನತ ಶಿಕ್ಷಣ: ಬದಲಾಗಲಿ ಕಾರ್ಯತಂತ್ರ



ವಿಶ್ಲೇಷಣೆ

ಜ್ಯೋತಿ

ದೇಶದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಕೂಲಂಕಷವಾಗಿ ಮಾರ್ಪಡಿಸುವ ದಿಸೆಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಇತ್ತೀಚಿನ ದಿನಗಳಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಹೊಸ ಉಪಕ್ರಮಗಳು ಸಾರ್ವಜನಿಕ ಚರ್ಚೆಗೆ ಗ್ರಾಸ ಒದಗಿಸಿವೆ. ಈ ಚರ್ಚೆಗಳನ್ನು ಗಮನಿಸಿದಾಗ, 'ಯುಜಿಸಿ ನಿಜವಾಗಿಯೂ ಮಾಡಬೇಕಾಗಿರುವುದೇನು' ಎಂಬ ಪ್ರಮುಖ ಪ್ರಶ್ನೆ ಉದ್ಭವಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತ 78 ವರ್ಷಗಳ ನಂತರವೂ ನಮ್ಮ ವಿಶ್ವವಿದ್ಯಾಲಯಗಳನ್ನು ಮೂಲತಃ ರೂಪಿಸಿದ ಪಾಶ್ಚಿಮಾತ್ಯ ಮಾದರಿಗೇ ನಾವು ಬದ್ಧರಾಗಿ ಮುಂದುವರಿಯಬೇಕೇ, ನಮ್ಮದೇ ದೇಸಿ ಮಾದರಿಯ ಐತಿಹಾಸಿಕ ಕಲಿಕಾ ವಿಧಾನಗಳಲ್ಲಿ ಬೇರೂರಿರುವ ಚೌಕಟ್ಟನ್ನು ಅಭಿವೃದ್ಧಿಪಡಿಸಬೇಕೇ ಅಥವಾ ಸ್ಥಳೀಯ ಹಾಗೂ ಜಾಗತಿಕ ಅಗತ್ಯಗಳನ್ನು ಪೂರೈಸುವ ಸಲುವಾಗಿ ಎರಡರಲ್ಲೂ ಉತ್ತಮವಾದದ್ದನ್ನು ಆಯ್ದು ಸಂಯೋಜಿಸುವ ಹೈಬ್ರಿಡ್ ಮಾದರಿಯನ್ನು ಅಳವಡಿಸಿಕೊಳ್ಳಬೇಕೇ?

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಪಾಶ್ಚಿಮಾತ್ಯ ಮಾದರಿಗಳು ವಿಶೇಷವಾಗಿ ಜ್ಞಾನಕ್ಕೆ ಕೊಡುಗೆ ನೀಡುವ ವಿಶಿಷ್ಟ ಸಂಶೋಧನೆಗೆ ಒತ್ತು ನೀಡುತ್ತವೆ. ಈ ವಿಧಾನವು ಸಾಮಾಜಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ನಡುವಿನ ಸಹಯೋಗವನ್ನು ಬೆಳೆಸುತ್ತದೆ. ಜೊತೆಗೆ, ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು, ನಾವೀನ್ಯ ಹೆಚ್ಚಿಸಲು ಮತ್ತು ಹೊಸ ಜ್ಞಾನವನ್ನು ಉತ್ಪಾದಿಸುವಲ್ಲಿ ಒಟ್ಟಾಗಿ ಕೆಲಸ ಮಾಡಲು ಪ್ರೇರೇಪಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಭಾರತೀಯ ವಿಶ್ವವಿದ್ಯಾಲಯಗಳು, ಉದ್ಯೋಗವನ್ನು ಖಾತರಿಗೊಳಿಸುವ ಮಾರ್ಗವೆಂದು ತಿಳಿದಿರುವ ಪದವಿ ಪ್ರದಾನವನ್ನು ಗುರಿಯಾಗಿ ಇಟ್ಟುಕೊಂಡಿವೆ. ಇದಕ್ಕಾಗಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ದಾಖಲಿಸುವುದರ ಮೂಲಕ ಸಂಶೋಧನೆಯ ಸಾಧ್ಯತೆಯನ್ನು ಹಿಂದಕ್ಕೆ ಸರಿಸುತ್ತವೆ. ಇದರ ಪರಿಣಾಮವಾಗಿ, ಪಿಎಚ್.ಡಿ ಪದವಿಯನ್ನು ಸಮರ್ಪಕಗೊಳಿಸಲು ಯುಜಿಸಿ ಹಲವಾರು ವಿಧಿ ನಿಯಮಗಳನ್ನು ಜಾರಿಗೆ ತಂದಿದ್ದರೂ ಉನ್ನತ ಮಟ್ಟದ ಸಂಶೋಧನಾ ಸಂಸ್ಕೃತಿಯನ್ನು ಬೆಳೆಸುವುದು ನಮಗಿನ್ನೂ ಆರಂಭಿಕ ಹಂತದ ಪ್ರಯತ್ನವಾಗಿಯೇ ಉಳಿದಿದೆ.

ದೇಶದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ತನ್ನ ಬದ್ಧತೆಯನ್ನು ಯುಜಿಸಿ ಗಂಭೀರವಾಗಿ ಪರಿಗಣಿಸುವುದಾದರೆ, ಈ ಕುರಿತು ಶಿಕ್ಷಣ ತಜ್ಞರ ಶಿಫಾರಸುಗಳನ್ನು ಪರಿಶೀಲಿಸುವುದು ಸೂಕ್ತ. ಅಂತಹ ಕೆಲ ಪ್ರಮುಖ ಅವಲೋಕನಗಳು ಹೀಗಿವೆ: ಮೊದಲನೆಯದಾಗಿ, ಯಾವುದೇ ವಿಶ್ವವಿದ್ಯಾಲಯದ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರಗತಿಯನ್ನು ಪೋಷಿಸಲು, ಶೈಕ್ಷಣಿಕ ಸ್ವಾತಂತ್ರ್ಯವನ್ನು ರಕ್ಷಿಸುವುದು ಬಹಳ ಮುಖ್ಯ. ಈ ಪಾರದರ್ಶಕತೆ ಎಂದರೆ, ಕುಲಪತಿ ಸೇರಿದಂತೆ ಆಡಳಿತಾಧಿಕಾರಿಗಳ ನೇಮಕಾತಿಯಲ್ಲಿ ಆರ್ಥಿಕ ಪ್ರಭಾವ ಯಾವುದೇ ಪಾತ್ರ ವಹಿಸದಂತೆ ಎಚ್ಚರ ವಹಿಸುವುದು. ಈ ಹುದ್ದೆಗಳನ್ನು ಅಭ್ಯರ್ಥಿಗಳ ಶೈಕ್ಷಣಿಕ ಸಾಧನೆ, ಆಡಳಿತಾತ್ಮಕ ಅನುಭವ ವನ್ನು ಆಧರಿಸಿ ಆಯ್ಕೆ ಮಾಡಬೇಕು. ನೇಮಕಾತಿಗಳು ಹಣದ ಪ್ರಭಾವದಿಂದ ನಡೆದರೆ, ಉನ್ನತ ಶಿಕ್ಷಣದಲ್ಲಿ 'ಗುಣಮಟ್ಟ' ಎಂಬ ಪರಿಕಲ್ಪನೆಯೇ ಅರ್ಥಹೀನ ಎನಿಸುತ್ತದೆ.

ಎರಡನೆಯದಾಗಿ, ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯ ಪ್ರಮುಖ ಸವಾಲೆಂದರೆ, ಅಧ್ಯಾಪಕರ ನೇಮಕಾತಿ ಮತ್ತು ಪಠ್ಯಕ್ರಮ ವಿನ್ಯಾಸದಂತಹ ನಿರ್ಣಾಯಕ ಕ್ಷೇತ್ರಗಳಲ್ಲಿ ರಾಜಕೀಯ ಹಸ್ತಕ್ಷೇಪ. ಇದು, ಶಿಕ್ಷಣ ವ್ಯವಸ್ಥೆಯನ್ನು ಆಂತರಿಕವಾಗಿ ದುರ್ಬಲಗೊಳಿಸುತ್ತಿದೆ. ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬೇಕು ಮತ್ತು ಕಲಿಸಬಾರದು ಎಂಬುದನ್ನು ಅಧಿಕಾರ ಕೇಂದ್ರಗಳು ತಮ್ಮ ಸಿದ್ಧಾಂತಗಳಿಗೆ ಅನುಗುಣವಾಗಿ ನಿರ್ದೇಶಿಸುತ್ತವೆ. ಆದ್ದರಿಂದ, ಅಧಿಕಾರಸ್ಥರು ಬದಲಾದಂತೆ ನಮ್ಮ ಪಠ್ಯಕ್ರಮಗಳು ಬದಲಾಗುತ್ತವೆ. ಅದೇ ಪ್ರಕಾರ, ಅಧ್ಯಾಪಕರ ನೇಮಕಾತಿ ಮತ್ತು ಬಡ್ತಿಗಳಲ್ಲಿಯೂ ಹಣ ಹಾಗೂ ಪ್ರಭಾವ ಬಳಕೆಯಾಗುವುದರ ಬಗ್ಗೆ ನಾವು ಆಗಾಗ್ಗೆ ಕೇಳುತ್ತಿರುತ್ತೇವೆ.

ಮೂರನೆಯದಾದ ಅತ್ಯಂತ ನಿರ್ಣಾಯಕ ಅಂಶವೆಂದರೆ, ಶಿಕ್ಷಣದ ಗುಣಮಟ್ಟಕ್ಕೆ ಆದ್ಯತೆ ಇಲ್ಲದಿರುವುದು ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಹೆಚ್ಚಿನ ಪ್ರಮಾಣದ ಒತ್ತು ನೀಡಿರುವುದು. ಜ್ಞಾನಾರ್ಜನೆಯ ಆಸಕ್ತಿ ಮತ್ತು ಅದನ್ನು ಪಡೆಯಲು ಪರಿಶ್ರಮಪಡುವ ಮಾನಸಿಕ ಸಿದ್ಧತೆ ಇರುವವರಿಗೆ ಮಾತ್ರ ಉನ್ನತ ಶಿಕ್ಷಣವನ್ನು ಮೀಸಲಿಡಬೇಕು. ಇದಾಗಬೇಕೆಂದರೆ, ನಮ್ಮ ಶೈಕ್ಷಣಿಕ ಪದವಿಗಳು ಉದ್ಯೋಗಕ್ಕೆ ಕಡ್ಡಾಯ ಆಯ್ಕೆಯ ಮಾನದಂಡಗಳಾಗಿ ಕಾರ್ಯನಿರ್ವಹಿಸದಂತೆ ನೋಡಿಕೊಳ್ಳಬೇಕು. ಶೈಕ್ಷಣಿಕ ಪದವಿಗಳನ್ನು ಉದ್ಯೋಗ ಅರ್ಹತೆಯೊಂದಿಗೆ ಸಮೀಕರಿಸುವ ಮನಃಸ್ಥಿತಿಯು ಸಂಶೋಧನೆಯನ್ನು ಗಮನಾರ್ಹವಾಗಿ ಮೂಲೆಗೆ ತಳ್ಳಿದೆ. ಇದರಿಂದಾಗಿ, ನಾವು ಸಂಶೋಧನೆಯನ್ನು ಒಂದು ಹೊಸ ಜ್ಞಾನವನ್ನು ಉತ್ಪಾದಿಸುವ ಗುರಿ ಹೊಂದಿರುವ, ಪರಿಶ್ರಮದ ಬೌದ್ಧಿಕ ಅನ್ವೇಷಣೆಯಾಗಿ ನೋಡುತ್ತಿಲ್ಲ. ಅದು ಇನ್ನೊಂದು ಪದವಿಯಾಗಿದೆ ಅಷ್ಟೇ.


ಬೋಧನಾ ಹುದ್ದೆಯ ಆಯ್ಕೆಗೆ ಪಿಎಚ್.ಡಿ ಪದವಿಯನ್ನು ಕಡ್ಡಾಯ ಮಾನದಂಡವನ್ನಾಗಿ ಮಾಡಿರುವುದರಿಂದ, ನಮ್ಮ ವಿಶ್ವವಿದ್ಯಾಲಯಗಳ ಸಂಶೋಧನಾ ಗುಣಮಟ್ಟ ಗಮನಾರ್ಹವಾಗಿ ದುರ್ಬಲಗೊಂಡಿದೆ. ನಿಜವಾದ ಸಂಶೋಧನೆಯು ಒಂದು ಅರ್ಥಗರ್ಭಿತ ಮತ್ತು ಸ್ವಯಂಪ್ರೇರಿತ ಅನ್ವೇಷಣೆಯಾಗಿದೆ. ಅದಕ್ಕೆ ಪೂರ್ಣ ಸಮಯದ ಬದ್ಧತೆ, ಮಾರ್ಗಸೂಚಿಗಳ ಕಟ್ಟುನಿಟ್ಟಾದ ಪರಿಪಾಲನೆ, ಅಂತಿಮವಾಗಿ, ಆಯ್ಕೆ ಮಾಡಿದ ಕ್ಷೇತ್ರದ ಬಗ್ಗೆ ಹೊಸ ಒಳನೋಟಗಳನ್ನು ಹೊಂದುವುದು ಅಗತ್ಯವಾಗಿರುತ್ತದೆ. ಇದನ್ನು ಎಲ್ಲರೂ ಮಾಡಲು ಸಾಧ್ಯವಿಲ್ಲ ಮತ್ತು ಮಾಡುವ ಅಗತ್ಯವೂ ಇಲ್ಲ. ಹಾಗೆಯೇ ಸಂಶೋಧನೆ ಮಾಡದವರೂ ಉತ್ತಮ ಶಿಕ್ಷಕರಾಗಬಹುದು. ಅದೇ ರೀತಿ, ಇಂದು ಉನ್ನತ ಶಿಕ್ಷಣದಲ್ಲಿ ಶಿಕ್ಷಕರು ಅತ್ಯುತ್ತಮ ಸಂಬಳವನ್ನು ಪಡೆಯುತ್ತಾರೆ. ಬಹುಶಃ, ಅವರು ಮಾಡುವ ಕೆಲಸಕ್ಕಿಂತ ಸ್ವಲ್ಪ ಹೆಚ್ಚು ಎನ್ನಬಹುದು. ಆದರೆ, ಅವರ ಕಾರ್ಯಕ್ಷಮತೆಯನ್ನು ನಿರ್ಣಯಿಸುವ ಕಠಿಣ ಮಾನದಂಡಗಳನ್ನು ಜಾರಿಗೆ ತರದೆ, ಬರೀ ಸಂಬಳವನ್ನು ಹೆಚ್ಚಿಸಿರುವುದರಿಂದ ಬೋಧನಾ ಸಮುದಾಯದಲ್ಲಿ ಆಲಸ್ಯದ ಮನೋಭಾವಕ್ಕೆ ಎಡೆಮಾಡಿಕೊಟ್ಟಂತಾಗಿದೆ. ಈ ಕುರಿತು ಶಿಕ್ಷಕರು ಗಂಭೀರ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ.

ಶಿಕ್ಷಕರ ಶೈಕ್ಷಣಿಕ ಪ್ರಗತಿಯನ್ನು ಹೆಚ್ಚಾಗಿ ಅವರ ಸಂಶೋಧನಾ ಪ್ರಕಟಣೆಗಳು ಮತ್ತು ಪ್ರಶಸ್ತಿಗಳ ಮೂಲಕ ಅಳೆಯಲಾಗುತ್ತದೆ. ಆದರೆ, ಇಂದು ಹಣ ಪಾವತಿಯ ಮೂಲಕ ಇದನ್ನು ಸಿದ್ಧಿಸಲು ಬಹಳಷ್ಟು ಮಾರ್ಗಗಳು ತೆರೆದುಕೊಂಡಿವೆ. ಉನ್ನತ ಶಿಕ್ಷಣದ ಶೈಕ್ಷಣಿಕ ಸಮಗ್ರತೆಯನ್ನು ಎತ್ತಿಹಿಡಿಯಲು, ಇಂತಹ ಸುಲಭ ಮಾರ್ಗಗಳನ್ನು ನಿರುತ್ಸಾಹಗೊಳಿಸಲು ಮತ್ತು ನಿಜವಾದ ವಿದ್ವತ್ಪೂರ್ಣ ಕೊಡುಗೆಗಳನ್ನು ಅಂಗೀಕರಿಸಲು ಯುಜಿಸಿ ಕಟ್ಟುನಿಟ್ಟಿನ ನೀತಿಗಳನ್ನು ಜಾರಿಗೆ ತರಬೇಕಾಗಿದೆ.

ವಿವಿಧ ಸಂಸ್ಥೆಗಳು ನಡೆಸುವ ವಿಶ್ವವಿದ್ಯಾಲಯ ಶ್ರೇಯಾಂಕಗಳ ಸತ್ಯಾಸತ್ಯತೆ ಹೆಚ್ಚಾಗಿ ಪ್ರಶ್ನಾರ್ಹವಾಗಿದೆ. ಉದಾಹರಣೆಗೆ, ನ್ಯಾಕ್ ಸದಸ್ಯರು ಶ್ರೇಯಾಂಕಕ್ಕಾಗಿ ಲಂಚ ಪಡೆದಿದ್ದಾರೆ ಎನ್ನಲಾದ ಇತ್ತೀಚಿನ ಹಗರಣವು ವ್ಯವಸ್ಥೆಯಲ್ಲಿನ ಗಂಭೀರ ದೋಷಗಳನ್ನು ಬಹಿರಂಗಪಡಿಸಿದೆ. ವಾಸ್ತವದಲ್ಲಿ, ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಶ್ರೇಯಾಂಕ ಪಡೆಯಲು ದಾಖಲೆಗಳನ್ನು ಸೃಷ್ಟಿಸುತ್ತವೆ. ಇದನ್ನು ಗಮನದಲ್ಲಿಟ್ಟು, ಉನ್ನತ ಶಿಕ್ಷಣದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಯುಜಿಸಿ ಪರ್ಯಾಯ ವಿಧಾನಗಳನ್ನು ಅನ್ವೇಷಿಸಬೇಕಾಗಿದೆ.

ಕೊನೆಯದಾಗಿ, ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಉತ್ಕೃಷ್ಟಗೊಳಿಸಲು ಯುಜಿಸಿ ಇನ್ನೂ ಹಲವಾರು ಪೂರಕ ಕ್ರಮಗಳನ್ನು ಜಾರಿಗೆ ತರುವುದನ್ನು ಪರಿಗಣಿಸಬೇಕು. ಇಲ್ಲಿ ಕೆಲವನ್ನು ಹೆಸರಿಸುವುದಾದರೆ, ಅಂತರಶಿಸ್ತೀಯ ಕಲಿಕೆ ಮತ್ತು ವಿಮರ್ಶಾತ್ಮಕ ಚಿಂತನೆಗೆ ಹೆಚ್ಚಿನ ಪ್ರಾಧಾನ್ಯ ನೀಡುವುದು, ಶಿಕ್ಷಕರ ನೇಮಕಾತಿ ಮತ್ತು ತರಬೇತಿಗೆ ಹೂಡಿಕೆ ಮಾಡುವ ಮೂಲಕ ಗುತ್ತಿಗೆ ಆಧಾರದ ಅಧ್ಯಾಪಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಸುತ್ತಲಿನ ಸಮುದಾಯದ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಹವಾಮಾನ ಬದಲಾವಣೆಯಂತಹ ಸವಾಲುಗಳನ್ನು ಎದುರಿಸಲು ವಿಶ್ವವಿದ್ಯಾಲಯಗಳಲ್ಲಿ ನೀತಿ ನಿರೂಪಕರೊಂದಿಗೆ ಸಮಾಲೋಚನೆ ಮಾಡುವ ವೇದಿಕೆಗಳನ್ನು ಸೃಷ್ಟಿಸುವುದು, ಕೃತಕ ಬುದ್ಧಿಮತ್ತೆಯಂತಹ ಉದಯೋನ್ಮುಖ ಕ್ಷೇತ್ರಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡುವುದು ಮತ್ತು ವಿಶ್ವವಿದ್ಯಾಲಯದ ಬೆಂಬಲದ ಮೂಲಕ ವಿದ್ಯಾರ್ಥಿಗಳ ನವೋದ್ಯಮ ಯೋಜನೆಗಳನ್ನು ಪ್ರೋತ್ಸಾಹಿಸುವಂತಹ ಕ್ರಮಗಳು ನಿರ್ಣಾಯಕವಾಗಿವೆ.

ಒಟ್ಟಿನಲ್ಲಿ, ಭಾರತದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಈ ಎಲ್ಲಾ ಉಪಕ್ರಮಗಳು ಯುಜಿಸಿಯ ಕಾರ್ಯತಂತ್ರದ ಭಾಗವಾಗುವುದು ಅತ್ಯಗತ್ಯ.



ಚುರುಮುರಿ



ದೇವರು ಬಂದ್ರಾ...

• ಡಿ.ಎಸ್.ಲಿಂಗರಾಜು

'ಬೆಂಗಳೂರು ರಿಪೇರಿ ಮಾಡಕ್ಕೆ ದೇವರು ಬಂದ್ರೂ ಕಷ್ಟ ಅಂದವ್ರಂತೆ. ಸರ್ಕಾರ ಮಾಡಬೇಕಾದ ಕೆಲಸಕ್ಕೆ ದೇವರು ಇಲ್ಲಿಂದ ಹೋಗಬೇಕಾ' ಅಂತ ದೇವಲೋಕಿಗಳು ಮನ್-ಕಿ ಬಾತ್ ಮಾತಾಡ್ತಿದ್ದರು.

'ದಿಟ ಕನ್ರಪ್ಪಾ, ಸಿಎಂ-ಡಿಸಿಎಂ ಕುರ್ಚಿಮ್ಯಾಲೆ ಕೂಕಣಕೆ ರಾಜಕಾರಣಿಗಳು ಸಾಲುಗಟ್ಟಿ ನಿಂತಿದ್ರೆ ಮಿನಿಸ್ಟರುಗಳು ಕಾಲೆಳೆದಾಟದಲ್ಲಿ, ವಿರೋಧ ಪಕ್ಷಗಳು ಜುಟ್ಟು ಹಿಡಕಂದು ಕಿತ್ತಾಡ್ತಾ ಗೈರುವಿಲೆಯಾಗ್ಯವರೆ. ಕೆಲಸೆಲ್ಲಾದವು' ಒಬ್ಬರು ಸಿಡಿದರು.

'ಕುರಿತೇಟಾಗೇಳಿದ್ರಿ. ಮೆಟ್ರೊ ದರ, ವಿದ್ಯುತ್, ಹಾಲು-ನೀರು, ಬಸ್ ಚಾರ್ಜು ಗ್ವಾಮಾಳೆಗಂಟಾ ಬಂದವೆ. ಜನ ಇ-ಖಾತೆ, ಎ-ಖಾತೆ ಅಂತ ತಲೆಗೆ ಹುಳ ಬುಟ್ಕಂದು ಕೂತವ್ರೆ. ಬಿಬಿಎಂಪಿ, ಜಲಮಂಡಳಿ ಕಂಡಲ್ಲೆಲ್ಲಾ ಗುಂಡಿ ಇಕ್ಕಿ ಹುದಿ ಹಾಕಿ ಕಮೀಷನರ್ ಕರಕಂದು ಸ್ಲೀಪಿಂಗ್ ಮೋಡಿಗೆ ಹೋಗ್ಯವೆ. ಜನ ಟ್ರಾಫಿಕ್ ಗುಂಡಿಗೆ ಬಿದ್ದು ಸೀದು ಸೀಕಲಾಯ್ತಾವರೆ' ಇನ್ನೊಬ್ಬ ದೇವತೆ ಒಪ್ಪಿದ್ರು.

'ಹೂಕಲಾ, ತೆಸ್ಲಾ ಆಟೊ ಪೈಲಟ್ ಕಾರು ಹೆಬ್ಬಾಳ ಟ್ರಾಫಿಕ್ನಲ್ಲಿ ಸಿಗಾಕ್ಯಂದು 'ಈ ಟ್ರಾಫಿಕ್ಕಲ್ಲಿ ಏಗೋ ದಾಸತ್ತು ನನಗಿಲ್ಲ, ನಾನು ಊರಿಗೋಯ್ತಿನಿ. ನನ್ನ ಕಳಿಸಿಬುಡಿ' ಅಂತ ಕಣ್ಣೀರಾಕ್ತಂತೆ' ಅಂದ ಇನ್ನೊಬ್ಬ.

'ಹೂಕಣ್ರೆ ಸಾ, ನಾನು ಸಿಲ್ಕ್ ಬೋರ್ಡ್ ಟ್ರಾಫಿಕ್ಕಲ್ಲಿ ಸಿಗೇಬಿದ್ದು ಮನೆಗೆ ತಲುಪೋತ್ಗೆ ಯೌವ್ವನ ಕಳೆದು ಮುದಿ ವಯಸ್ಸಾಗಿತ್ತಲ್ಲ, ನನ್ನ ಯಾರೂ ಗುರ್ತೇ ಹಿಡೀಲಿಲ್ಲ ಅಂತೀನಿ' ಅಂತಂದ ಟ್ರಾಫಿಕ್ ರೇಜಪ್ಪ.

'ಬುಡ್ತು ಅನ್ನಿ, ಅಧಿಕಾರಿಗಳಿಗೆ ಲೋಕಾಯುಕ್ತ, ರಾಜಕಾರಣಿಗಳ ಭಯ ಇಲ್ಲ, ರಾಜಕಾರಣಿಗಳಿಗೆ ಹೈಕಮಾಂಡ್ ಭಯ ಇಲ್ಲ, ಹೈಕಮಾಂಡಿಗೆ ಜನದ ಭಯ ಇಲ್ಲ. ಇವರಿಗೆಲ್ಲ ದುಡ್ಡಿನ ಮಬ್ಬು ಅಮರಿಕ್ಯಂಡದೆ' ಹಿರಿಯರೊಬ್ಬರು ನೊಂದ್ಕಂದ್ರು.

'ಸರ್ಕಾರದ ಕೆಲಸ ದೇವರ ಕೆಲಸ ಅಂತ ವಿಧಾನಸೌಧದ ಮ್ಯಾಲೆ ಬರೆದುಬುಟ್ಟು 'ನಮ್ಮದೇನೂ ಇಲ್ಲ. ದೇವರ ಕೆಲಸ ದೇವರೇ ನೋಡಿಕ್ಯತ್ತರೆ' ಅಂತ ರಾಜಕಾರಣಿಗಳು ಕಾಸು ಮಾಡಕ್ಕೆ ಹೊಂಟೋದ್ರೆ ಕುಲಗೆಟ್ಟಿರೊ ಯವಸ್ಥೆ ಸರಿ ಮಾಡದು ದೇವರ ಕ್ಯಾಮೆನಾ?'

ದೇವತೆಗಳು ನಗುತ್ತಾ ಮಕ್ಕುಗಿದ್ರು.

ಸಂಗತ

ಶೌಚಾಲಯ ವ್ಯವಸ್ಥೆ: ಅಲಕ್ಷ್ಯದ ಅವಸ್ಥೆ

ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವವರ ಶೌಚಾಲಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದೇ ಇರುವುದು ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುತ್ತದೆ

• ವಿಶಾಖ ಎನ್.

ಪ್ರಕರಣ ಒಂದು: ಚುಮು ಚುಮು ಚಳಿ. ಅದೇ ತಾನೆ ಬಳ್ಳಾರಿಯಿಂದ ಬಂದ ಬಸ್‌ನಿಂದ ಯಜಮಾನರೊಬ್ಬರು ಬೆಂಗಳೂರಿನ ಗೊರಗುಂಟೆಪಾಳ್ಯದಲ್ಲಿ ಇಳಿದರು. ಅವರಿಗೆ ಮೂತ್ರ ವಿಸರ್ಜನೆ ಮಾಡುವುದಿತ್ತು. ಎಲ್ಲಿಯೂ ಮುಕ್ತ ಜಾಗ ಕಾಣಲಿಲ್ಲ. ಒಂದಾದ ನಂತರ ಒಂದರಂತೆ ಬರುತ್ತಿದ್ದ ಬಸ್‌ಗಳಲ್ಲಿ ಜನ ಇಳಿಯುತ್ತಿದ್ದರು. ಅವರು ಕೇಳಿಯೇಬಿಟ್ಟರು- 'ಇಲ್ಲಿ ಮೂತ್ರ ಮಾಡುವ ಜಾಗ ಎಲ್ಲಿದೆ?' ಅರ್ಧ ಕಿ.ಮೀ. ದೂರದಲ್ಲಿದ್ದ ಮೆಟ್ರೊ ನಿಲ್ದಾಣಕ್ಕೆ ಹೋಗಬೇಕಷ್ಟೇ ಎಂದು ಹೇಳುವುದರ ವಿನಾ ಬೇರೆ ದಾರಿ ಕಾಣಲಿಲ್ಲ. 'ಅಲ್ಲಿಯವರೆಗೆ ಡ್ರಾಪ್ ಮಾಡಬಹುದೇ?' ಎಂದು ವಿನಂತಿಸಿಕೊಂಡ ಅವರು, ಆಮೇಲೆ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಸಿ, ಶೌಚಾಲಯ ಹುಡುಕಿಕೊಂಡು ಹೋಗಬೇಕಾಯಿತು. ಅಷ್ಟರಲ್ಲಿ ಅವರಿಗೆ ಅದೆಷ್ಟು ಸುಸ್ತಾಗಿತ್ತೋ ಏನೋ.


ಪ್ರಕರಣ ಎರಡು: ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ. ಟಿಕೆಟ್ ತೆಗೆದುಕೊಂಡು ಒಳಗೆ ಪ್ರವೇಶಿಸಿದ ನಂತರವಷ್ಟೇ ಶೌಚಾಲಯಕ್ಕೆ ಪ್ರವೇಶ. ಮದುವೆಗೆ ಜವಳಿ ಖರೀದಿಗೆಂದು ಬಂದಿದ್ದ ದಂಪತಿ ಅಲ್ಲಿಯಾದರೂ ಒತ್ತಡ ನೀಗಿಕೊಳ್ಳಬಹುದೆಂದು ಕುತೂಹಲಿಗಳಾಗಿದ್ದರು. ಟಿಕೆಟ್ ಕೌಂಟರ್ ಎದುರು ನಿಂತಿದ್ದ ಹತ್ತು ಮಂದಿಯನ್ನು ದಾಟುವಷ್ಟರಲ್ಲಿ ಅವರೂ ಮುಖ ಕಿವುಚಿಕೊಂಡೇ ನಿಂತಿದ್ದರು.

ಪ್ರಕರಣ ಮೂರು: ಯಶವಂತಪುರ ಮೆಟ್ರೊ ನಿಲ್ದಾಣ. ಟಿಕೆಟ್ ಖರೀದಿಸಿ, ಗೇಟು ಹಾದು ಒಳಗೆ ಹೋದ ಒಬ್ಬರು, 'ಶೌಚಾಲಯ ಎಲ್ಲಿ?' ಎಂದು ಕೇಳಿದರು. 'ಅದು ಒಳಭಾಗದಲ್ಲಿ ಇಲ್ಲ, ಹೊರಗೆ ಹೋದ ನಂತರ ಸಿಗುತ್ತದೆ' ಎಂದು ಭದ್ರತಾ ಸಿಬ್ಬಂದಿ ಹೇಳಿದರು. ಕಾರ್ಡ್ ತೋರಿಸಿದರೆ ಯಂತ್ರವು 'ಅದೇ ನಿಲ್ದಾಣದಲ್ಲಿ ಪ್ರವೇಶ ಆಗಿದ್ದರಿಂದ ತಕ್ಷಣಕ್ಕೆ ಹೊರಗೆ ಬಿಡಲಾಗದು' ಎಂಬ ಅರ್ಥದ ಇಂಗ್ಲಿಷ್ ಸಂದೇಶ ತೋರಿಸಿತು. ಅವರು ಭದ್ರತಾ ಸಿಬ್ಬಂದಿಯನ್ನು ವಿನಂತಿಸಿಕೊಂಡರು. ಅವರು, 'ಏನೂ ಮಾಡಲು ಸಾಧ್ಯವಿಲ್ಲ, ಮುಂದಿನ ನಿಲ್ದಾಣದಲ್ಲಿ ಇಳಿದು ಹೋಗಿ' ಎಂದುಬಿಟ್ಟರು.

ಪ್ರಕರಣ ನಾಲ್ಕು: ಮಹಾತ್ಮ ಗಾಂಧಿ ರಸ್ತೆಯಲ್ಲಿ ಬ್ರಿಗೇಡ್ ಜಂಕ್ಷನ್ ಕಡೆಯಿಂದ ಕುಂಬ್ಳೆ ಸರ್ಕಲ್ ಕಡೆಗೆ ಹೋಗುವ ಮಾರ್ಗದ ಮೆಟ್ರೊ ನಿಲ್ದಾಣದ ಪ್ರವೇಶ ದ್ವಾರದ ಬಳಿ ಓಡೋಡಿ ಬಂದ ಒಬ್ಬರು, 'ರೆಸ್ಟ್ ರೂಮ್ ಎಲ್ಲಿದೆ?' ಎಂದು ಕೇಳಿದರು. ರಸ್ತೆ ದಾಟಿಕೊಂಡು ಎದುರಿನ ಭಾಗಕ್ಕೆ ಹೋಗುವಂತೆ ಸೂಚಿಸಿದಾಗ, ಅವರು ಎಲ್ಲಿಯೂ ಬೋರ್ಡ್ ಕೂಡ ಇಲ್ಲವಲ್ಲ ಎಂದು ಸಂಕಟಪಡುತ್ತಾ ಹೆಜ್ಜೆ ಹಾಕಿದರು.

ಪ್ರಕರಣ ಐದು: ವೋಲ್ವೊ ಬಸ್‌ನಲ್ಲಿ ದಾವಣಗೆರೆಯಿಂದ ಬೆಂಗಳೂರಿಗೆ ಹೊರಟಿದ್ದು. ಹಿರಿಯೂರು ಬಳಿಯ ಹೋಟೆಲ್ ಒಂದರ ಎದುರು ಕೆಎಸ್‌ಆರ್‌ಟಿಸಿ ಬಸ್ ನಿಂತಿತು. ಕೆಟ್ಟ ಕಾಫಿಗೆ 30 ರೂಪಾಯಿ, ಇಡ್ಲಿ- ವಡೆಗೆ 80 ರೂಪಾಯಿ. ಅಲ್ಲಿ ಶೌಚಾಲಯ ಇರಲಿಲ್ಲ. ಪಕ್ಕದಲ್ಲಿ ಶುಲ್ಕ ಕೊಟ್ಟು, ಶೌಚಾಲಯಕ್ಕೆ ಹೋಗುವ ಇನ್ನೊಂದು ವ್ಯವಸ್ಥೆ ಇತ್ತು. ಬೆಂಗಳೂರಿನಿಂದ ದಾವಣಗೆರೆಗೆ ಹೋಗುವಾಗ ಬಸ್ ನಿಲ್ಲಿಸಿದ್ದ ಹೋಟೆಲ್ ಬಳಿ ಇದ್ದ ಶೌಚಾಲಯದಲ್ಲಿ ಶುಲ್ಕವನ್ನು ಕೊಟ್ಟಿರಲಿಲ್ಲ. 'ಇಲ್ಲಿ ಮಾತ್ರ ಯಾಕೆ ಹೀಗೆ?' ಎನ್ನುವುದಕ್ಕೆ ಕಂಡಕ್ಟರ್ ಬಳಿ ಉತ್ತರ ಇರಲಿಲ್ಲ.

ಇವೆಲ್ಲವೂ ನಮ್ಮ ಸಾರ್ವಜನಿಕ ಸಾರಿಗೆ ಹೇಗೆ ದೀರ್ಘಕಾಲಿಕ ಸಮಸ್ಯೆಯೊಂದನ್ನು ಇದುವರೆಗೆ ಉಪೇಕ್ಷಿಸಿದೆ ಎನ್ನುವುದಕ್ಕೆ ಕೆಲವು ಉದಾಹರಣೆಗಳಷ್ಟೆ. ಇತ್ತೀಚೆಗೆ ಲೋಕಸಭೆ ಕಲಾಪದಲ್ಲಿ ಮಾತನಾಡುತ್ತಾ, ಹೆದ್ದಾರಿಗಳಲ್ಲಿ ಪ್ರತಿ 40 ಕಿ.ಮೀ.ಗೆ ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸುವ ಗುರಿ ಇದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭರವಸೆ ಕೊಟ್ಟರು. ಎಲ್ಲಾ ಟೋಲ್‌ಗಳ ಬಳಿಯಲ್ಲೂ ಶೌಚಾಲಯಗಳ ನಿರ್ಮಾಣಕ್ಕೆ ಆದ್ಯತೆ ನೀಡುವುದಾಗಿಯೂ ತಿಳಿಸಿದರು. ಇದು ಎಷ್ಟರಮಟ್ಟಿಗೆ ಜಾರಿಗೆ ಬರುವುದೋ ನೋಡಬೇಕು.



ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಇತ್ತೀಚೆಗೆ ಟಿಕೆಟ್ ದರವನ್ನು ವಿಪರೀತ ಏರಿಕೆ ಮಾಡಿದೆ. ಆದರೆ, ಎಲ್ಲ ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ಗುಟ್ಟಾದ ಜಾಗಗಳಲ್ಲಿ ನಿರ್ಮಾಣ ಮಾಡಲಾಗಿದೆ. ಅದು ಎಲ್ಲಿದೆ ಎಂದು ಹುಡುಕುವುದು ಒಂದು ರೀತಿಯಲ್ಲಿ 'ಟ್ರೆಷರ್ ಹಂಟ್' ಆಟದಂತೆ.

ಒಂದು ನಿಲ್ದಾಣದಲ್ಲಿ ಟಿಕೆಟ್ ತೋರಿಸಿ ಪ್ರವೇಶ ಮಾಡಿದ ಮೇಲೆ ಶೌಚಾಲಯ ಇದ್ದರೆ, ಇನ್ನೊಂದು ನಿಲ್ದಾಣದಲ್ಲಿ ಟಿಕೆಟ್ ತೋರಿಸಿ ಒಳಕ್ಕೆ ಹೋಗುವ ಮೊದಲೇ ಶೌಚಾಲಯ ಇದೆ. ಇದರಲ್ಲಿಯೂ ಏಕಪ್ರಕಾರದ ವ್ಯವಸ್ಥೆ ಇಲ್ಲ.

ವಯಸ್ಸಾದವರು, ಮಧುಮೇಹ ಇರುವವರು ಶೌಚಾಲಯ ಬಳಸುವುದು ಅನಿವಾರ್ಯ. ಅದರಲ್ಲೂ ವಾತಾನುಕೂಲಿ ವ್ಯವಸ್ಥೆ ಇರುವ ಮೆಟ್ರೊದಲ್ಲಿ ಮೂತ್ರಕ್ಕೆ ಹೋಗಬೇಕು ಎಂದು ಅನಿಸುವುದು ಸಹಜವೇ ಆಗಿದೆ.

ಸಾರ್ವಜನಿಕರಿಂದ ಸಾರಿಗೆ ನಿಗಮಗಳು, ಬಿಎಂಆರ್‌ಸಿಎಲ್‌ನಂತಹ ವ್ಯವಸ್ಥೆಗಳು ಇಷ್ಟೆಲ್ಲ ಹಣವನ್ನು ಪೀಕುತ್ತಾ ಇದ್ದರೂ ಶೌಚಾಲಯದಂತಹ ಮೂಲಸೌಕರ್ಯ ಇನ್ನೂ ಮರೀಚಿಕೆಯೇ ಆಗಿರುವುದು ವ್ಯವಸ್ಥೆಯ ದೊಡ್ಡ ವ್ಯಂಗ್ಯ.

ವಾಚಕರ ವಾಣಿ

ಚಿಂತನೆಯಿಲ್ಲದ 'ನಮ್ಮ' ನೇತಾರರು

ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಈ ಹೊತ್ತಿನ ಶಿಕ್ಷಣದ ಕುರಿತು ಉಸಿರಾಡಲು, ಮಾತಾಡಲು ಇನ್ನೇನಿದೆ ಎಂಬಂತೆ ಮೂವರು ಲೇಖಕರು (ಚರ್ಚೆ, ಫೆ. 22) ಎಲ್ಲವನ್ನೂ ನಿಚ್ಚಳಗೊಳಿಸಿದ್ದಾರೆ. ಈಗಿನ ಮಕ್ಕಳಿಗೆ ಯಾವ ಮಾಧ್ಯಮದಲ್ಲಿ ಶಿಕ್ಷಣ ಆರಂಭಿಸಬೇಕು, ಕಾಲೇಜಿಗೆ ಬಂದ ಮೇಲೆ ಎನ್‌ಇಪಿಯೇ ಎಸ್‌ಇಪಿಯೇ, ಕೌಶಲಾಧಾರಿತ ಶಿಕ್ಷಣವೇ, ಮೂಲ ವಿಜ್ಞಾನ, ಕಲಾ ಸಂಗತಿಗಳೇ ಎನ್ನುವುದರ ಬಗ್ಗೆ ಯಾವ ಗುರಿ, ಗತಿ ಕಾಣದಂತಾಗಿದೆ. ಯಾವ ಶಿಕ್ಷಣ ಸಂಸ್ಥೆಗಳಲ್ಲೂ ಪರಿಣತ, ಕಾಯಂ ಅಧ್ಯಾಪಕರು ಇಲ್ಲ. ಮೂರ್ನಾಲ್ಕು ದಿನಗಳ ಗುಂಪಿನ ಗದ್ದಲದಲ್ಲಿ ಮುಳುಗಿ ಏಳುವ ಮೇಳಗಳಿಗೆ ಕೋಟಿಗಟ್ಟಲೆ ಹಣ ಹರಿಯಬಿಡುವ ಸರ್ಕಾರಗಳು ಹಿಂದೆ ತಾವೇ ಆರಂಭಿಸಿದ ಒಂಬತ್ತು ವಿಶ್ವವಿದ್ಯಾಲಯಗಳಿಗೆ ಮೂರು ಕಾಸಿನ ಸಹಾಯಧನ ನೀಡಲಿಲ್ಲ. ಈಗ ಮುಚ್ಚುವ ಮಾತು!

ಯಾವುದೇ ಪಕ್ಷದ ರಾಜಕಾರಣಿಗಳಿಗೆ ಅವರವರದೇ ಗುಂಪು, ಜಾತಿಯ ಸಮಾವೇಶ, ಐಷಾರಾಮಿ ಓಡಾಟ, ಅದಕ್ಕೆ ತಗಲುವ ವೆಚ್ಚ, ವಿರೋಧ ಪಕ್ಷಗಳೊಂದಿಗೆ ಸ್ನೇಹಪೂರ್ವಕ ತೋರಿಕೆಯ ಜಗಳ... ಇಂತಹವುಗಳ ಬಗ್ಗೆಯೇ ಹೆಚ್ಚು ಆಸಕ್ತಿ. ಇಂತಹ ವಿಷಯಗಳಲ್ಲೇ ಕಾಲ ಕಳೆಯುತ್ತಾ, ತಮ್ಮ ಮಕ್ಕಳ ರಾಜ್ಯಭಾರ ಮುಂದುವರಿಕೆಯೇ ಪ್ರಜಾಪ್ರಭುತ್ವ ಎಂದುಕೊಂಡಿರುವ ನೇತಾರರಿಗೆ ನಾಡಿನ ಯಾವ ಸಮಸ್ಯೆಯ ಬಗ್ಗೆಯೂ ತೀವ್ರವಾದ ಚಿಂತನೆಯಾಗಲೀ ಅದಕ್ಕೆ ಪರಿಹಾರ ಹುಡುಕುವ ಅಭಿಲಾಷೆಯಾಗಲೀ ಕಾಣುವುದಿಲ್ಲ. ಇದನ್ನು ನೋಡಿದರೆ ವ್ಯಥೆ ಕವಿದಂತೆ ಆಗುತ್ತದೆ. ಅಲ್ಲಮನ ವಚನ ವಾಕ್ಯವೊಂದು ಇದಕ್ಕೆ ಪೂರಕವಾಗಿದೆ- ಏನೆಂದರಿಯರು ಎಂತೆಂದರಿಯರು, ಜನ ಮರುಳೋ ಜಾತ್ರೆ ಮರುಳೋ ಎಂಬಂತೆ, ಎಲ್ಲರೂ ಪೂಜಿಸಿ ಏನನೂ ಕಾಣದೆ, ಲಯವಾಗಿ ಹೋದರು ಗುಹೇಶ್ವರ.

ಕೃಷ್ಣಮೂರ್ತಿ ಹನೂರು, ಮೈಸೂರು

'ನಮ್ಮ'ದಾಗುವುದೇ ಗೂಗಲ್?

ಜಗತ್ತಿನ ದೈತ್ಯ ಕಂಪನಿಗಳಲ್ಲಿ ಒಂದಾದ ಗೂಗಲ್ ದೇಶದಲ್ಲೇ ಅತಿ ದೊಡ್ಡ ಕ್ಯಾಂಪಸ್ ಅನ್ನು ಬೆಂಗಳೂರಿನಲ್ಲಿ ಆರಂಭಿಸಿರುವುದಾಗಿ ವರದಿಯಾಗಿದೆ. ಇದಕ್ಕೆ 'ಅನಂತ' ಎಂದು ಹೆಸರಿಡಲಾಗಿದ್ದು, ಸಭಾಂಗಣಕ್ಕೆ 'ಸಭಾ' ಎಂದು ಮತ್ತು ಅಲ್ಲಿಯೇ ಕಿರಿದಾದ ಕಾನನವೊಂದನ್ನು ನಿರ್ಮಿಸಿ ಅದಕ್ಕೆ 'ಅರಣ್ಯ' ಎಂದು ಕನ್ನಡದ ಪದಗಳನ್ನು ಬಳಸುವುದರೊಂದಿಗೆ, ಕನ್ನಡ ಭಾಷೆಗೆ ಗೌರವವನ್ನು ಸೂಚಿಸಿರುವುದು ಮೆಚ್ಚುಗೆಗೆ ಅರ್ಹವಾಗಿದೆ.

ಇದರೊಂದಿಗೆ ಇಂತಹ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಮಾಡಬೇಕೆಂಬ ಕನಸನ್ನು ಕಾಣುವ ಹಲವಾರು ಕನ್ನಡಿಗರಿಗೆ 'ಅನಂತ'ವು ನೆರವಾಗಬಲ್ಲದೆ? ಗೂಗಲ್ ಕಂಪನಿಯು ಕನ್ನಡದವರಿಗೆ ಆದ್ಯತೆ ನೀಡುವುದರೊಂದಿಗೆ ಕನ್ನಡಿಗರ ಕನಸನ್ನು ನನಸಾಗಿಸಬಲ್ಲದೆ? 'ನಮ್ಮ ಮೆಟ್ರೊ' ಎಂದು ಹೆಸರಿಟ್ಟುಕೊಂಡರೂ 'ಜನಸ್ನೇಹಿ' ಅಲ್ಲದ ಕಾರಣಕ್ಕೆ ವಾಸ್ತವದಲ್ಲಿ ಮೆಟ್ರೊ ನಮ್ಮದಾಗಲಿಲ್ಲ. ಈಗ ಸ್ಥಳೀಯರಿಗೆ ಅನುಕೂಲ ಕಲ್ಪಿಸುವ ಜನಸ್ನೇಹಿ ನಡೆಯ ಮೂಲಕ 'ಅನಂತ'ವಾದರೂ ನಮ್ಮದಾಗುವುದೇ?

ಮಧುಕುಮಾರ್, ಬಚ್ಚಹಳ್ಳಿ

ಗೋಪ್ಯ ಪ್ರಶಂಸೆ!

'ಸ್ತ್ರೀ ರೂಪಮೇ ರೂಪಂ' ಎಂದು ಕವಿ ಹೇಳಿರಬಹುದು, ಆದರೆ ನಾವ್ಯಾರೂ ಹೇಳದಿರುವುದೊಳಿತು!
ಏಕೆಂದರೆ ಅಪರಿಚಿತ ಮಹಿಳೆಗೆ 'ಸುಂದರವಾಗಿ ಕಾಣುತ್ತಿ'ಎಂಬಂಥ ಸಂದೇಶ ಕಳಿಸಿದರೆ ಅಶ್ಲೀಲ ಎನಿಸುವುದಂತೆ! ಹಾಗೆಂದಿದೆ, ಮುಂಬೈನ ಸೆಷನ್ಸ್ ಕೋರ್ಟ್ (ಪ್ರ.ವಾ., ಫೆ. 22).
ಹಾಗಾಗಿ, ಸ್ತ್ರೀಯ ಸೌಂದರ್ಯವನ್ನು ನೋಡಿ ಮನದಲ್ಲೇ ಆಸ್ವಾದಿಸಿ, ಕನಸಿಸಿ, ಕವನ ರಚಿಸಿ, ಆದರೆ ರವಾನಿಸದೆ ಗೋಪ್ಯವಾಗಿರಿಸಿ!

ಜೆ.ಬಿ.ಮಂಜುನಾಥ, ಪಾಂಡವಪುರ

ಪ್ರಶ್ನೆಪತ್ರಿಕೆ ನೇರವಾಗಿರಲಿ, ಸರಳವಾಗಿರಲಿ

'ಪ್ರಶ್ನಾತೀತವಾಗಲಿ ಪ್ರಶ್ನೆಪತ್ರಿಕೆ' ಎಂಬ ಲೇಖನದಲ್ಲಿ (ಸಂಗತ, ಫೆ. 24) ಬಿ.ಎಸ್.ಭಗವಾನ್ ಅವರು ಪ್ರಶ್ನೆಪತ್ರಿಕೆಗಳ ರಚನೆಯ ಕುರಿತು ಉತ್ತಮವಾಗಿ ತಿಳಿಸಿದ್ದಾರೆ. ಇತ್ತೀಚೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ಪ್ರಶ್ನೆಪತ್ರಿಕೆಗಳ ಸೋರಿಕೆ, ಪ್ರಶ್ನೆಗಳನ್ನು ಗೊಂದಲ ಉಂಟುಮಾಡುವಂತೆ ಸಿದ್ಧಪಡಿಸುವುದು ಕಂಡುಬರುತ್ತಿದೆ. ಇದು ಅಭ್ಯರ್ಥಿಗಳನ್ನು ಸಂಕಷ್ಟಕ್ಕೆ ದೂಡುತ್ತದೆ. ಇದರ ವಿರುದ್ಧ ಹೋರಾಟಗಳು ತಾರಕಕ್ಕೇರುತ್ತಿರುವುದನ್ನು ದಿನನಿತ್ಯ ಗಮನಿಸುತ್ತಿದ್ದೇವೆ.

ಮಾರ್ಚ್ ಎಂದಾಕ್ಷಣ ಪರೀಕ್ಷೆಯ ತಿಂಗಳು ಎಂದೇ ಹೆಸರಾಗಿದೆ. ಈ ತಿಂಗಳಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ನಡೆಯುತ್ತವೆ. ಹಾಗಾಗಿ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವಂತಹ ಶಿಕ್ಷಕರು, ಶೈಕ್ಷಣಿಕ ಸಂಸ್ಥೆಗಳು ಯಾವುದೇ ರೀತಿಯಲ್ಲೂ ವಿದ್ಯಾರ್ಥಿಗಳನ್ನು ಗೊಂದಲಕ್ಕೀಡು ಮಾಡುವಂತಹ ಪ್ರಶ್ನೆಗಳನ್ನು ಕೇಳದೆ, ಸರಳವಾಗಿ, ನೇರವಾದ ಪ್ರಶ್ನೆಗಳನ್ನು ಕೇಳಬೇಕು. ಈ ಮೂಲಕ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾಗದೆ ಉತ್ತರಿಸುವಂತೆ ಅನುವು ಮಾಡಿಕೊಡಲಿ. ಯಾವುದೇ ರೀತಿಯಲ್ಲೂ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗದಂತೆ, ಪರೀಕ್ಷಾ ಪೂರ್ವದಲ್ಲೇ ಮುಂಜಾಗ್ರತೆ ವಹಿಸಬೇಕು.

ಅಂಬಿಕಾ ಬಿ.ಟಿ., ಹಾಸನ

ಬೀದಿಯೋ ಗದ್ದಲದ ಕೂಪವೋ?

'ಬೆಂಗಳೂರಿನಲ್ಲಿ ಶಬ್ದಮಾಲಿನ್ಯ ಮಿತಿಮೀರಿದೆ. ಇಂತಹವರಿಗೆ ದಂಡ ವಿಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಿ' ಎಂದಿದ್ದಾರೆ ಪರಿಸರವಾದಿ ಮೋಹನ್ (ಕಿಡಿನುಡಿ, ಫೆ. 24). ನಿಜ, ಇಂದು ಶಬ್ದಮಾಲಿನ್ಯವು ಬೆಂಗಳೂರಿನಲ್ಲಷ್ಟೇ ಅಲ್ಲ ಹಳ್ಳಿ ಹಳ್ಳಿಗೂ ವ್ಯಾಪಿಸಿದೆ. ಶಬ್ದಮಾಲಿನ್ಯದಿಂದ ವೃದ್ಧರು, ರೋಗಿಗಳು ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಆದರೆ ಸ್ಥಳೀಯ ಸಂಸ್ಥೆಗಳು ಇದರ ಬಗ್ಗೆ ಬೇಜವಾಬ್ದಾರಿಯಿಂದ ವರ್ತಿಸುತ್ತಿವೆ. ಬೀದಿ ಇಂದು ಬರೀ ಬೀದಿಯಾಗಿ ಉಳಿದಿಲ್ಲ. ಅಲ್ಲಿ ಈಗ ಎಲ್ಲ ಬಗೆಯ ವ್ಯಾಪಾರಿಗಳೂ ಮೈಕ್ ಹಾಕಿಕೊಂಡೇ ವ್ಯಾಪಾರ ಮಾಡುತ್ತಾರೆ. ಹೀಗಾಗಿ, ಶಬ್ದಮಾಲಿನ್ಯ ವಿಪರೀತವಾಗಿದೆ. ಇದರಿಂದ ಪಾದಚಾರಿಗಳಿಗೆ ಬೀದಿಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಶಬ್ದಮಾಲಿನ್ಯದಿಂದ ಕೆಲವೊಮ್ಮೆ ಅಪಘಾತಗಳೂ ಸಂಭವಿಸಿರುವ ಉದಾಹರಣೆಗಳಿವೆ. ಸ್ಥಳೀಯ ಸಂಸ್ಥೆಗಳು ಈ ಕುರಿತು ಕ್ರಮ ಜರುಗಿಸಿ ಶಬ್ದಮಾಲಿನ್ಯವನ್ನು ತಡೆಗಟ್ಟಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಯುಎಸ್‌ಏಡ್ ಏನು, ಎತ್ತ...

ಕೇಂದ್ರ ಸರ್ಕಾರದ ಯೋಜನೆಗಳಿಗೇ ಹೆಚ್ಚಿನ ನೆರವು

• ಜಯಸಿಂಹ ಆರ್.

ಅಂತರರಾಷ್ಟ್ರೀಯ ನೆರವಿಗಾಗಿ 1951ರಲ್ಲಿ ಅಮೆರಿಕ ಸರ್ಕಾರವೇ ಯುಎಸ್‌ಏಡ್ ಇಲಾಖೆಯನ್ನು ರಚಿಸಿತ್ತು. ಈ ಇಲಾಖೆ ಆಯಾ ಸರ್ಕಾರಕ್ಕೆ ಮತ್ತು ಸರ್ಕಾರದ ಜತೆಗೆ ಒಪ್ಪಂದ ಮಾಡಿಕೊಂಡ ಸ್ವಯಂಸೇವಾ ಸಂಸ್ಥೆಗಳಿಗೆ ನೆರವು ನೀಡುತ್ತದೆಯೇ ಹೊರತು ರಾಜಕೀಯ ಪಕ್ಷಗಳಿಗೆ ಸಹಾಯಾನುದಾನ ಒದಗಿಸುವುದಿಲ್ಲ

ಯುಎಸ್‌ಏಡ್ ಎಂಬುದು ಯುಎಸ್‌-ಅಡ್ಮಿನಿಸ್ಟ್ರೇಷನ್ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಎಂಬುದರ ಸಂಕ್ಷಿಪ್ತ ರೂಪ. ಇದು ಯಾವುದೇ ಸ್ವಯಂಸೇವಾ ಸಂಸ್ಥೆಯಾಗಿರದೆ, ಅಮೆರಿಕ ಸರ್ಕಾರದ ಒಂದು ಇಲಾಖೆಯಾಗಿದೆ. ಅಮೆರಿಕದ ವಿದೇಶಾಂಗ ಸಚಿವಾಲಯ ಮತ್ತು ಹಣಕಾಸು ಸಚಿವಾಲಯದ ಪ್ರತಿನಿಧಿಗಳನ್ನು ಹೊಂದಿರುವ ಈ ಇಲಾಖೆ ಅಮೆರಿಕ ಅಧ್ಯಕ್ಷರ ಸುಪರ್ದಿಯಲ್ಲೇ ಕಾರ್ಯನಿರ್ವಹಿಸುತ್ತದೆ. ಮತ್ತು ಬೇರೊಂದು ದೇಶದಲ್ಲಿ ಕಾರ್ಯನಿರ್ವಹಿಸುವಾಗ ಅಲ್ಲಿನ ಸರ್ಕಾರದ ಸಹಯೋಗದಲ್ಲೇ ಸಹಾಯಾನುದಾನವನ್ನು ಹಂಚಿಕೆ ಮಾಡುತ್ತದೆ.

ಭಾರತ ಮತ್ತು ಯುಎಸ್‌ಏಡ್‌ನ ಸಂಬಂಧವೂ ಇದಕ್ಕೆ ಹೊರತಾಗಿಲ್ಲ. 1951ರಿಂದಲೂ ಅಮೆರಿಕವು ಯುಎಸ್‌ಏಡ್ ಮೂಲಕ ಭಾರತಕ್ಕೆ ಆರ್ಥಿಕ ನೆರವು ನೀಡುತ್ತಲೇ ಇದೆ. ಯುಎಸ್‌ಏಡ್, ಭಾರತದಲ್ಲಿ ಕೈಗೊಂಡ ಮತ್ತು ಜಾರಿಗೆ ತಂದಿರುವ ಬಹುತೇಕ ಕಾರ್ಯಕ್ರಮಗಳನ್ನು ಭಾರತ ಸರ್ಕಾರದ ಸಹಯೋಗದಲ್ಲಿ ಅನುಷ್ಠಾನಕ್ಕೆ ತರುತ್ತದೆ. ಮುಖ್ಯವಾಗಿ ಸರ್ಕಾರದ ಕಾರ್ಯಕ್ರಮಗಳಿಗೆ ತಾಂತ್ರಿಕ ಮತ್ತು ಆರ್ಥಿಕ ನೆರವು ಒದಗಿಸುತ್ತಾ ಬಂದಿದೆ. ಈಚಿನ ದಶಕದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಿಗೆಲ್ಲಾ ಯುಎಸ್‌ಏಡ್ ಒಂದಿಲ್ಲೊಂದು ರೀತಿಯಲ್ಲಿ ಸಹಾಯಾನುದಾನ ಒದಗಿಸಿದೆ. ಬಹುತೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ಜತೆಗೆ ಸಹಯೋಗ ಮಾಡಿಕೊಂಡ ಸ್ವಯಂಸೇವಾ ಸಂಸ್ಥೆಗಳಿಗೆ ಸಹಾಯಾನುದಾನ ಒದಗಿಸುತ್ತದೆ. ಸ್ವತಃ ಯುಎಸ್‌ಏಡ್ ಇದನ್ನು ದೃಢಪಡಿಸಿದೆ.

2001ರಿಂದ 2024ರ ಅಂತ್ಯದವರೆಗೆ ಭಾರತಕ್ಕೆ ನೇರವಾಗಿ ಒದಗಿಸಿದ ಸಹಾಯಾನುದಾನದ ದತ್ತಾಂಶವನ್ನು ಯುಎಸ್‌ಏಡ್ ಸಾರ್ವಜನಿಕರಿಗೆ ಮುಕ್ತಗೊಳಿಸಿದೆ. ಈ 24 ವರ್ಷಗಳಲ್ಲಿ ಭಾರತವು ಯುಸ್‌ಏಡ್‌ನಿಂದ ಸಹಾಯಾನುದಾನ ಪಡೆದುಕೊಳ್ಳುವ ರೀತಿಯಲ್ಲಿ ಆಗಿರುವ ಬದಲಾವಣೆಯನ್ನು ಈ ದತ್ತಾಂಶಗಳು ತೋರಿಸುತ್ತವೆ. ಈಚಿನ ನಾಲ್ಕು ವರ್ಷಗಳಲ್ಲೇ ಅತಿಹೆಚ್ಚು ಸಹಾಯಾನುದಾನ ಯುಎಸ್‌ಏಡ್‌ನಿಂದ ಭಾರತಕ್ಕೆ ಬಂದಿದೆ.

ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಸರ್ಕಾರವು ಪ್ರತಿ ವರ್ಷ ಪಡೆದ ಸಹಾಯಾನುದಾನದ ಮೊತ್ತವು ಮನಮೋಹನ ಸಿಂಗ್ ಅವರ ಸರ್ಕಾರದ ಅವಧಿಯಲ್ಲಿ ಕಡಿಮೆಯಾಗಿದೆ. ಪ್ರತಿ ವರ್ಷ ಸಹಾಯಾನುದಾನದ ಒಟ್ಟು ಮೊತ್ತ ಇಳಿಕೆಯಾಗುತ್ತಲೇ ಬಂದಿದೆ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಆರಂಭದ ಅವಧಿಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗಿಲ್ಲವಾದರೂ ಸ್ವಯಂಸೇವಾ ಸಂಸ್ಥೆಗಳ ವಿದೇಶಿ ದೇಣಿಗೆ ನಿಯಮಗಳಿಗೆ ತಿದ್ದುಪಡಿ ತಂದು, ವಿದೇಶಿ ದೇಣಿಗೆಯನ್ನು ನಿಯಂತ್ರಿಸಲು ಯತ್ನಿಸಿದೆ. ಬಳಿಕ ನೆರವು ಕಡಿತವಾಗಿದೆ ಎಂದು ಎನ್‌ಜಿಒಗಳು ಹೇಳುತ್ತಿವೆ. ಆದರೆ, ಸರ್ಕಾರದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಎನ್‌ಜಿಒಗಳಿಗೆ ಯುಎಸ್‌ಏಡ್‌ನ ಸಹಾಯಾನುದಾನ ಏರಿಕೆಯಾಗಿರುವುದು ಕಾಣುತ್ತದೆ.

ಈ ಅವಧಿಯಲ್ಲಿ ಹೆಚ್ಚು ಸಹಾಯಾನುದಾನ ಪಡೆದ ಹಲವು ಸ್ವಯಂಸೇವಾ ಸಂಸ್ಥೆಗಳು 2016ರ ನಂತರವೇ ಸ್ಥಾಪನೆಯಾಗಿವೆ ಮತ್ತು ಕೇಂದ್ರ ಸರ್ಕಾರದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಿವೆ. ಕೆಲವು ಸಂಸ್ಥೆಗಳು ಸಿಎಸ್‌ಆರ್ ನಿಧಿಯ ಮೂಲಕ ಯುಎಸ್‌ಏಡ್‌ನ ಹಣವನ್ನು ಬಳಕೆ ಮಾಡಿವೆ. ಅಂತಹ ಸಂಸ್ಥೆಗಳಲ್ಲಿ ಹಲವು, ಕೇಂದ್ರ ಸರ್ಕಾರದ ವಿವಿಧ ಮಹತ್ವಾಕಾಂಕ್ಷಿ ಯೋಜನೆಗಳ ರೂಪುರೇಷೆ ಸಿದ್ಧಪಡಿಸುವಲ್ಲಿ, ಪ್ರಚಾರ ಸೇವೆ ಮತ್ತು ಪೋರ್ಟಲ್ ಅಭಿವೃದ್ಧಿ ಸೇವೆ ಒದಗಿಸಿವೆ. ವಿಕಸಿತ ಭಾರತ, ಸ್ವಚ್ಛ ಭಾರತ ಅಭಿಯಾನ, ಆಯುಷ್ಮಾನ್ ಭಾರತ, ಹಸಿರು ಜಲಜನಕ, ಸೂರ್ಯಘರ್ ಮೊದಲಾದ ಕಾರ್ಯಕ್ರಮಗಳು ಆ ಪಟ್ಟಿಯಲ್ಲಿವೆ.

2024ರ ಕೆಲ ಯೋಜನೆಗಳು

ನಿಶಾತಾ

ಇದು ಅಮೆರಿಕದ ಜಾನ್ ಹಾಕಿನ್ಸ್ ವಿಶ್ವವಿದ್ಯಾಲಯವು ಭಾರತದಲ್ಲಿ ಕೈಗೊಂಡಿರುವ ಪ್ರಮುಖ ಯೋಜನೆಗಳಲ್ಲಿ ಒಂದು. ದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ತರಬೇತಿ, ತರಬೇತಿ ಪಠ್ಯಕ್ರಮ ರೂಪಿಸುವ ಕೆಲಸವನ್ನು ಯುಎಸ್‌ಏಡ್ ಸಹಾಯಾನುದಾನದಲ್ಲಿ ನಡೆಸುತ್ತಿದೆ. ಈ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಕುಟುಂಬ ಮತ್ತು ಆರೋಗ್ಯ ಸಚಿವಾಲಯದ ಸಹಯೋಗದಲ್ಲಿ ನಡೆಸುತ್ತಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ 'ಆಯುಷ್ಮಾನ್ ಭಾರತ'ದ ರೂಪುರೇಷೆಗಳನ್ನು ಸಿದ್ಧಪಡಿಸುವಲ್ಲಿ, ಯೋಜನೆ ನಿರ್ವಹಣಾ ವ್ಯವಸ್ಥೆ ನೀಡುವಲ್ಲಿ, ಸಿಬ್ಬಂದಿಗೆ ತಾಂತ್ರಿಕ ತರಬೇತಿ ನೀಡುವಲ್ಲಿ ಕೆಲಸ ಮಾಡುತ್ತಿದೆ. ದೇಶದಾದ್ಯಂತ 45,000 ಆರೋಗ್ಯ ಸೇವಾ ಕೇಂದ್ರಗಳನ್ನು ಸ್ಥಾಪಿಸುವಲ್ಲಿ ಕೇಂದ್ರ ಸರ್ಕಾರದೊಂದಿಗೆ ನೇರವಾಗಿ ಕೆಲಸ ಮಾಡಿರುವುದಾಗಿ ಎಂದು ವಿಶ್ವವಿದ್ಯಾಲಯವು ಹೇಳಿಕೊಂಡಿದೆ.

₹48.9 ಕೋಟಿ
2024ರಲ್ಲಿ ಪಡೆದ ಸಹಾಯಾನುದಾನ

ಕೋವಿಡ್ ಅವಧಿಯಲ್ಲಿ ದೇಶದಾದ್ಯಂತ ಕೋವಿಡ್ ಲಸಿಕೆ ನೀಡಿಕೆ ತರಬೇತಿ, ಲಸಿಕಾ ಕೇಂದ್ರಗಳ ಮಾದರಿ ರೂಪಿಸುವಲ್ಲಿ ಯುಎಸ್‌ಏಡ್ ಸಹಾಯಾನುದಾನದಲ್ಲಿ ಈ ವಿಶ್ವವಿದ್ಯಾಲಯವು ಕೆಲಸ ಮಾಡಿತ್ತು.

ಸಂವೇಗ

ಗರ್ಭಿಣಿ, ಬಾಣಂತಿ ಮತ್ತು ಶಿಶು ಆರೈಕೆಗೆಂದು ಐಪಿಇ ಗ್ಲೋಬಲ್ ಲಿಮಿಟೆಡ್ ಎಂಬ ಸಂಸ್ಥೆ ಯುಎಸ್‌ಏಡ್ ಸಹಾಯಾನುದಾನದಲ್ಲಿ ಭಾರತದಲ್ಲಿ 2021ರಲ್ಲಿ ಆರಂಭಿಸಿದ ಕಾರ್ಯಕ್ರಮವಿದು. ಯೋಜನೆ ಅಡಿ ಪೌಷ್ಟಿಕಾಂಶಯುಕ್ತ ಆಹಾರ ಪೂರೈಕೆ, ಆರೈಕೆ ಮತ್ತು ಸಿಬ್ಬಂದಿ ತರಬೇತಿ ಮಾದರಿ ರೂಪಿಸುವ ಕೆಲಸವನ್ನು

₹178.6 ಕೋಟಿ
2024ರಲ್ಲಿ ಪಡೆದ ಸಹಾಯಾನುದಾನ

ಈ ಕಂಪನಿ ಭಾರತ ಸರ್ಕಾರದ ಸಹ ಯೋಗದಲ್ಲಿ ನಡೆಸಿದೆ. 2017ರಲ್ಲಿ ಇದೇ ಸಂಸ್ಥೆ 'ಪಹಲ್' ಎಂಬ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಸಹಯೋಗದಲ್ಲಿ ಅನುಷ್ಠಾನಕ್ಕೆ ತಂದಿತ್ತು. 2021ರಲ್ಲಿ ಅದನ್ನೇ ಸುಧಾರಿಸಿ, 'ಸಂವೇಗ'ವನ್ನು ರೂಪಿಸಿತು. 2024ರ ಅಂತ್ಯಕ್ಕೆ ಈ ಯೋಜನೆಯು ಪೂರ್ಣಗೊಂಡಿದೆ. ಇದರ ಜತೆಯಲ್ಲಿ ಆರೋಗ್ಯ ಸಚಿವಾಲಯದ ಸಹಯೋಗದಲ್ಲಿ ಕ್ಷಯ ನಿರ್ಮೂಲನೆ ಕಾರ್ಯಕ್ರಮಗಳನ್ನೂ ಕೈಗೊಂಡಿದೆ.

ಸ್ವಚ್ಛ ಭಾರತ

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ 'ಸ್ವಚ್ಛ ಭಾರತ–ಗ್ರಾಮೀಣ ಅಭಿಯಾನ'ಕ್ಕೂ ಯುಎಸ್‌ಏಡ್‌ನ ಸಹಾಯಾನುದಾನವನ್ನು ಬಳಸಿಕೊಳ್ಳಲಾಗಿದೆ. ಈ ಅಭಿಯಾನದ ರೂಪುರೇಷೆಗಳನ್ನು ಸಿದ್ಧಪಡಿಸುವ, ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಶೌಚಾಲಯದ ಮಾದರಿ ರೂಪಿಸುವ ಮತ್ತು ಶೌಚಾಲಯ ಬಳಕೆ ಹಾಗೂ ಅಗತ್ಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ತಿಳಿವಳಿಕಾ ಸಾಮಗ್ರಿಗಳನ್ನು ರೂಪಿಸುವ ಕೆಲಸವನ್ನು ಆರ್‌ಟಿಐ ಇಂಟರ್‌ನ್ಯಾಷನಲ್ ಎಂಬ ಸ್ವಯಂಸೇವಾ ಸಂಸ್ಥೆ ಕೇಂದ್ರ ಸರ್ಕಾರಕ್ಕಾಗಿ ಮಾಡಿಕೊಟ್ಟಿತ್ತು. ಈಗಲೂ ತಿಳಿವಳಿಕಾ ಸಾಮಗ್ರಿಗಳನ್ನು ರೂಪಿಸಿಕೊಡುವ, ನಿರ್ವಹಿಸುವ, ಸಮೀಕ್ಷೆ ನಡೆಸುವ ಕೆಲಸವನ್ನು ಯುಎಸ್‌ಏಡ್ ಸಹಾಯಾನುದಾನದಲ್ಲಿ ಮಾಡಿಕೊಡುತ್ತಿದೆ.

₹58.10 ಕೋಟಿ
2024ರಲ್ಲಿ ಪಡೆದ ಸಹಾಯಾನುದಾನ

ಸುವಾಸಿ

ಸ್ವಚ್ಛಭಾರತ ಅಭಿಯಾನದ ಭಾಗವಾಗಿ ನಗರಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಶೌಚ ನಿರ್ವಹಣೆ ಸಂಬಂಧ ಕೆಪಿಎಂಜಿ ಇಂಟರ್‌ನ್ಯಾಷನಲ್ ಎಂಬ ಸ್ವಯಂಸೇವಾ ಸಂಸ್ಥೆಯು ಸ್ಥಳೀಯ ಸಂಸ್ಥೆಗಳ ಜತೆಗೆ ಅನುಷ್ಠಾನಕ್ಕೆ ತಂದಿರುವ ಜಾಗೃತಿ ಕಾರ್ಯಕ್ರಮ ಇದು.


₹39.02 ಕೋಟಿ
2024ರಲ್ಲಿ ಪಡೆದ ಸಹಾಯಾನುದಾನ

ಸಮಗ್ರ

ಗರ್ಭಿಣಿ, ಬಾಣಂತಿ ಮತ್ತು ಶಿಶು ಆರೈಕೆಗೆಂದು ಪಾಪುಲೇಷನ್ ಸರ್ವಿಸಸ್ ಇಂಟರ್‌ನ್ಯಾಷನಲ್ ಎಂಬ ಸ್ವಯಂ ಸೇವಾ ಸಂಸ್ಥೆ ಯುಎಸ್‌ಏಡ್ ಸಹಾಯಾನುದಾನ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಹಯೋಗದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಕಾರ್ಯಕ್ರಮ.

₹39.62 ಕೋಟಿ
2024ರಲ್ಲಿ ಪಡೆದ ಸಹಾಯಾನುದಾನ

ಮೋದಿ ಅವಧಿಯಲ್ಲೇ ಹೆಚ್ಚು ಅನುದಾನ





ಮತದಾನ ಜಾಗೃತಿಗೆ ಅನುದಾನವಿಲ್ಲ


ಭಾರತದಲ್ಲಿ ಮತದಾರರ ಜಾಗೃತಿ ಸಂಬಂಧಿ ಕಾರ್ಯಕ್ರಮಕ್ಕೆ 2021ರಿಂದ 2024ರ ಅವಧಿಯಲ್ಲಿ ಯುಎಸ್‌ಏಡ್ ಯಾವುದೇ ಸಹಾಯಾನುದಾನ ಒದಗಿಸಿಲ್ಲ ಎಂದು ಆ ಇಲಾಖೆಯ ದಾಖಲೆಗಳು ಮತ್ತು ದತ್ತಾಂಶಗಳು ಹೇಳುತ್ತವೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿರುವಂತೆ 2008ರಲ್ಲಾಗಲೀ, 2022ರಲ್ಲಾಗಲೀ ಮತದಾರರ ಜಾಗೃತಿಗೆ ಯುಎಸ್‌ಏಡ್‌ನಿಂದ ಭಾರತಕ್ಕೆ ಯಾವುದೇ ನೆರವು ಸಿಕ್ಕಿಲ್ಲ.

ಬೇರೆ ದೇಶಗಳಲ್ಲಿ ಮತದಾರರ ಜಾಗೃತಿಗೆ ಯುಎಸ್‌ಏಡ್ ಸಹಾಯಾನುದಾನ ನೀಡುತ್ತದೆಯಾದರೂ ಭಾರತದಲ್ಲಿ ಆರೋಗ್ಯ, ಶಿಕ್ಷಣ, ಮೂಲಸೌಕರ್ಯ ಅಭಿವೃದ್ಧಿ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿನ ಕಾರ್ಯಕ್ರಮಗಳಿಗಷ್ಟೇ ನೆರವು ನೀಡುತ್ತದೆ. ಟಿಬೆಟ್‌ನ ಬೌದ್ಧ ನಿರಾಶ್ರಿತರ ಪುನರ್ವಸತಿಗೆ ಯುಎಸ್‌ಏಡ್ 70ರ ದಶಕದಿಂದಲೂ ನೆರವು ನೀಡುತ್ತಾ ಬಂದಿದೆ.

ಅಮೆರಿಕದ ವಿದೇಶಾಂಗ ಸಚಿವಾಲಯ ಕೈಗೊಳ್ಳುವ ಹಲವು ಕಾರ್ಯಕ್ರಮಗಳನ್ನು ಯುಎಸ್‌ಏಡ್ ಇಲಾಖೆಯೇ ಭಾರತದಲ್ಲಿ ನೇರವಾಗಿ ಅನುಷ್ಠಾನಕ್ಕೆ ತರುತ್ತದೆ. ಅದು ಅಮೆರಿಕ ಮತ್ತು ಭಾರತ ಸರ್ಕಾರದ ನಡುವಣ ಪಾಲುದಾರಿಕೆಯ ಕಾರ್ಯಕ್ರಮಗಳಾಗಿವೆ.

ಸಿನಿ ಬಿಟ್ಸ್

ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಟಾಕ್ಸಿಕ್


ಯಶ್

ಯಶ್ ನಟನೆಯ 19ನೇ ಸಿನಿಮಾ 'ಟಾಕ್ಸಿಕ್' ಚಿತ್ರೀಕರಣದ ಹಂತದಲ್ಲಿದೆ. ಗೀತು ಮೋಹನ್‌ದಾಸ್ ನಿರ್ದೇಶನ ಮಾಡುತ್ತಿರುವ ಈ ಚಿತ್ರ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಳ್ಳುತ್ತಿದೆ. ವಿಶ್ವದೆಲ್ಲೆಡೆ ಇರುವ ಪ್ರೇಕ್ಷಕರನ್ನು ಗುರಿಯಾಗಿಟ್ಟುಕೊಂಡು ಚಿತ್ರವು ಸಿದ್ಧಗೊಳ್ಳುತ್ತಿದೆ.

'ನಿರ್ಮಾಣದ ದೃಷ್ಟಿಯಿಂದ ನೋಡುವುದಾದರೆ ಇಂಗ್ಲಿಷ್ ಹಾಗೂ ಭಾರತೀಯ ಭಾಷೆಯೊಂದರಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಳ್ಳುತ್ತಿರುವ ಮೊದಲ ಬಿಗ್ ಬಜೆಟ್ ಸಿನಿಮಾ ಇದಾಗಿದೆ. ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ಸಿನಿಮಾ ರಿಲೀಸ್ ಆಗಲಿದೆ' ಎಂದಿದೆ ಚಿತ್ರತಂಡ. ಯಶ್ ಜನ್ಮದಿನದಂದು ಚಿತ್ರದ ಗ್ಲಿಮ್ಸ್ ಬಿಡುಗಡೆಯಾಗಿದ್ದು, ರೆಟ್ರೋ ಶೈಲಿಯಲ್ಲಿ ಚಿತ್ರದ ದೃಶ್ಯಗಳಿವೆ. ಹಾಲಿವುಡ್‌ನ ಜೆ.ಜೆ.ಪೆರ್ರಿ ಚಿತ್ರದ ಸಾಹಸ ನಿರ್ದೇಶಕ. ಡಿಎನ್‌ಇಜಿ ಸ್ಟುಡಿಯೊ ಚಿತ್ರದ ವಿಎಫ್‌ಎಕ್ಸ್ ಮಾಡುತ್ತಿದೆ. 2024ರ ಆಗಸ್ಟ್‌ನಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಿತ್ತು. ಎರಡು ಭಾಷೆಗಳಲ್ಲಿ ಏಕಕಾಲದಲ್ಲಿ ಚಿತ್ರೀಕರಣ ನಡೆಯುತ್ತಿರುವ ಕಾರಣ, ತಯಾರಿ ಹಾಗೂ ಶೂಟಿಂಗ್ ದಿನಗಳು ಹೆಚ್ಚಾಗುತ್ತಿವೆ ಎಂದಿದೆ ಚಿತ್ರತಂಡ. ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿ ಚಿತ್ರತಂಡ ಮುಂಬೈನಲ್ಲೂ ಚಿತ್ರೀಕರಣ ನಡೆಸುತ್ತಿದೆ. ಈ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿದೆ. ❖

ದುಬೈನಲ್ಲಿ 'ವೀರ ಕಂಬಳ'

ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರ ನಿರ್ದೇಶನದ 'ವೀರ ಕಂಬಳ' ಚಿತ್ರ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ತೆರೆಕಾಣಲಿದ್ದು, ಚಿತ್ರದ ಚಿತ್ರೀಕರಣ ಇತ್ತೀಚೆಗೆ ದುಬೈನಲ್ಲೂ ನಡೆದಿದೆ.


ಅರುಣ್ ರೈ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದು, ನಟ ಆದಿತ್ಯ, ಶೋಭರಾಜ್ ಮುಂತಾದವರು ದುಬೈ ಭಾಗದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. 'ಕಂಬಳ' ಕರಾವಳಿಯ ಪ್ರಸಿದ್ಧ ಕ್ರೀಡೆ. ಇದನ್ನೇ ಮುಖ್ಯವಾಗಿಟ್ಟುಕೊಂಡು ರಾಜೇಂದ್ರ ಸಿಂಗ್ ಬಾಬು ಅವರು ಈ ಚಿತ್ರದ ಕಥೆ ಬರೆದಿದ್ದಾರೆ. ಈ ಚಿತ್ರ ಕನ್ನಡದಲ್ಲಿ 'ವೀರ ಕಂಬಳ' ಎಂಬ ಹೆಸರಿನಿಂದ ಹಾಗೂ ತುಳುವಿನಲ್ಲಿ 'ಬಿರ್ದುದ ಕಂಬಳ' ಎಂಬ ಹೆಸರಿನಲ್ಲಿ ಮೂಡಿಬರಲಿದೆ. ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು, ಮಂಗಳೂರು, ಮೂಡುಬಿದಿರೆ, ಬೆಂಗಳೂರು ಹಾಗೂ ದುಬೈನಲ್ಲಿ ಚಿತ್ರೀಕರಣವಾಗಿದೆ. ಏಪ್ರಿಲ್‌ನಲ್ಲಿ ಚಿತ್ರ ತೆರೆಕಾಣುವ ಸಾಧ್ಯತೆ ಇದೆ.


ಆದಿತ್ಯ

ಚಿತ್ರಕ್ಕೆ ವಿಜಯ್ ಕುಮಾರ್ ಕೊಡಿಯಾಲ್‌ಬೈಲ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನೀಡಿದ್ದಾರೆ. ಚಿತ್ರಕ್ಕೆ ಆರ್. ಗಿರಿ ಛಾಯಾಚಿತ್ರಗ್ರಹಣ, ಮದನ್ - ಹರಿಣಿ ನೃತ್ಯ ನಿರ್ದೇಶನವಿದೆ. ಆದಿತ್ಯ, ಪ್ರಕಾಶ್ ರಾಜ್, ರವಿಶಂಕರ್, ಶೋಭರಾಜ್, ನವೀನ್ ಡಿ ಪಡೀಲ್, ಗೋಪಿನಾಥ್ ಭಟ್, ರಾಧಿಕಾ ಚೇತನ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸಂಬಂಧವಿಲ್ಲದೆ ವಸ್ತುವಿಗೆ ಅರ್ಥವಿಲ್ಲ


ನುಡಿ ಬೆಳಗು
ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
139

ಸಂಬಂಧ ಇಲ್ಲದೆ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಆಗೋದಿಲ್ಲ. ಹೂವು ಅರಳಿದರೆ ಹೂವಿಗೂ ಆಕಾಶಕ್ಕೂ ಸಂಬಂಧ ಇದೆ. ಹೂವು ಕೆಳಕ್ಕೆ ಉರುಳಿದರೆ ಹೂವಿಗೂ ಭೂಮಿಗೂ ಸಂಬಂಧ ಇದೆ. ಇದನ್ನು ಸಂಬಂಧಿಕ ಸತ್ಯ ಎಂದು ಕರೀತಾರೆ. ವಸ್ತು ಮತ್ತು ವ್ಯಕ್ತಿಯ ನಡುವೆ ಸಂಬಂಧ ತಿಳಿಯದೆ ಜಗತ್ತು ಅರ್ಥವಾಗೋದಿಲ್ಲ. 'ಗೃಹಸ್ಥ' ಎಂದು ಕರೆಯುತ್ತಾರೆ. ಯಾಕೆಂದರೆ ಮನೆಗೂ ನಮಗೂ ಸಂಬಂಧ ಆಗಿದೆ ಅದಕ್ಕೆ ಗೃಹಸ್ಥ. ಒಬ್ಬ ಸನ್ಯಾಸಿ ಇರ್ತಾರೆ. ಅವರನ್ನು ಮಠಸ್ಥ ಎಂದು ಕರೆಯುತ್ತಾರೆ. ಯಾಕೆಂದರೆ ಮಠಕ್ಕೂ ಅವರಿಗೂ ಸಂಬಂಧ ಇದೆ. ಗೃಹಸ್ಥರು ಗೃಹಸ್ಥರ ತರವೇ ಇರಬೇಕು. ಪ್ಯಾಂಟು ಶರ್ಟ್ ಹಾಕಿಕೊಂಡು ಇದ್ದರೆ ಸರಿ. ಅವರು ಕಾವಿ ಹಾಕಿಕೊಂಡು ಅಡ್ಡಾಡಿದರೆ ಸರಿ ಬರೋದಿಲ್ಲ. ಹಾಗೆಯೇ ಮಠಸ್ಥರು ಕಾವಿಯನ್ನೇ ಧರಿಸಬೇಕು. ಅವರು ಜೀನ್ಸ್ ಪ್ಯಾಂಟ್, ಟಿ-ಶರ್ಟ್ ಹಾಕಿಕೊಂಡರೆ ಸರಿಬರುವುದಿಲ್ಲ. ಅಂದರೆ ಸಂಬಂಧ ಅಷ್ಟು ಗಟ್ಟಿ ಇರ್ತಾವೆ.

ಉದಾಹರಣೆಗೆ 'ರಾಮ ಯಾರು?' ಎಂಬ ಪ್ರಶ್ನೆ ಕೇಳಿ ನೋಡಿ. ಅದಕ್ಕೆ 'ಸೀತಾ ಪತಿ' ಎಂಬ ಉತ್ತರ ಬರುತ್ತದೆ. ನಾವು ರಾಮ ಹೆಂಡತಿ ಬಗ್ಗೆ ಕೇಳಿಲ್ಲ. ಕೆಲವರು 'ಅಯೋಧ್ಯೆಯ ರಾಜ' ಎನ್ನಬಹುದು. ನಾವು ಯಾವ ರಾಜ ಅಂತ ಕೇಳಿಲ್ಲ. ದಶರಥನ ಮಗ ಎಂದೂ ಕೆಲವರು ಉತ್ತರಿಸಬಹುದು. ನಾವು ಕೇಳಿದ್ದು ರಾಮ ಯಾರು ಎಂದೇ ವಿನಾ ರಾಮ ಯಾರ ಮಗ ಅಂತ ಅಲ್ಲ. ಅಂದರೆ ನಾವು ಎಲ್ಲವನ್ನೂ ಸಂಬಂಧದ ಜೊತೆ ಅರ್ಥ ಮಾಡಿಕೊಳ್ಳುತ್ತೇವೆ. ಯಾರಿಗಾದರೂ 'ನೀನು ಯಾರು' ಎಂದು ಕೇಳಿದರೆ ಅವರು ಹೆಸರು ಹೇಳುತ್ತಾರೆ. ನೀವು ಅವರ ಹೆಸರು ಕೇಳಿಲ್ಲ. ಆದರೂ ಅವರು ಹೆಸರು ಹೇಳುತ್ತಾರೆ. ಅಂದರೆ ಉತ್ತರಕ್ಕೆ ಸಂಬಂಧ ಅಗತ್ಯ. ರಾಮನನ್ನು ಬರೀ ರಾಮನೆಂದು ಅರ್ಥ ಮಾಡಲು ಸಾಧ್ಯವಿಲ್ಲ. ಸೀತೆಯ ಸಂಬಂಧದಲ್ಲಿ ಅರ್ಥ ಮಾಡಿಕೊಳ್ಳಬೇಕು. ದಶರಥನ ಸಂಬಂಧದಲ್ಲಿ ರಾಮನನ್ನು ಅರ್ಥ ಮಾಡಿಕೊಳ್ಳಬೇಕು. ಅಯೋಧ್ಯೆಯ ಸಂಬಂಧದಲ್ಲಿ ರಾಮನನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಂಬಂಧಗಳನ್ನು ತೆಗೆದುಬಿಟ್ಟರೆ ರಾಮನಿಗೆ ಅಸ್ತಿತ್ವ ಇರೋದಿಲ್ಲ. ಸಂಬಂಧಗಳ ಮೂಲಕವೇ ಜಗತ್ತನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಜಪಾನ್ ದೇಶದಲ್ಲಿ ದೊಡ್ಡ ಝೆನ್ ಗುರುಗಳೊಬ್ಬರು ಇದ್ದರು. ಅವರ ಬಳಿಗೆ ಒಬ್ಬ ಶಿಷ್ಯ ಕಲಿಯಲು ಬಂದ. ಆತ ಚೆನ್ನಾಗಿ ಕಲಿತ. ಗುರುಗಳಷ್ಟೇ ಪ್ರಭಾವಿ ಆದ. ಅವನೂ ಒಂದು ಆಶ್ರಮ ಕಟ್ಟಿದ. ಅವನಿಗೆ ಎರಡನೇ ಬುದ್ಧ ಅಂತ ಕರೆದರು. ಅವನಿಗೆ ಲಕ್ಷಾಂತರ ಶಿಷ್ಯರಾದರು. ಒಂದು ದಿನ ಆತ ಮತ್ತೆ ಗುರುಗಳ ಬಳಿಗೆ ಬಂದು ಒಂದು ಪ್ರಶ್ನೆ ಕೇಳಿದ. 'ಗುರುಗಳೇ ನಿಮ್ಮ ಬಳಿ ಕುಳಿತಾಗ ನಾನು ಶಿಷ್ಯ ಅನಸ್ತದೆ. ನನ್ನ ಶಿಷ್ಯರ ಬಳಿ ಕುಳಿತಾಗ ನಾನು ಗುರು ಅನಸ್ತದೆ. ನಾನು ನಿಜವಾಗಿ ಗುರುವೋ ಅಥವಾ ಶಿಷ್ಯನೋ' ಎಂದು ಕೇಳಿದ. 'ನನ್ನ ಸಂಬಂಧದಲ್ಲಿ ಇದ್ದಾಗ ನೀನು ಶಿಷ್ಯ. ನಿನ್ನ ಶಿಷ್ಯರ ಸಂಬಂಧದಲ್ಲಿ ಇದ್ದಾಗ ನೀನು ಗುರು. ಯಾರೂ ಇಲ್ಲದಿದ್ದಾಗ ನೀನು ಏನೂ ಅಲ್ಲ. ಅದೇ ಸತ್ಯ' ಎಂದು ಉತ್ತರಿಸಿದರು. ಅದೇ ಜೀವನ್ಮುಕ್ತ ಅವಸ್ಥೆ. ಅದನ್ನು ಅರ್ಥಮಾಡಿಕೊಳ್ಳಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 25, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಾದಶಿ ಗಂ. 12-48 ನಕ್ಷತ್ರ: ಉತ್ತರಾಷಾಢ ಗಂ. 18-31 ಯೋಗ: ವ್ಯತೀಪಾತ ಗಂ. 08-15 ನಂತರ ವರಿಯಾನ್ 29-51 ಕರಣ: ತೈತಿಲ ಗಂ. 12-48, ಕುಂಭ ಮಾಸದ 13 ನೇ ದಿನ, ಮಳೆನಕ್ಷತ್ರ: ಶತಭಿಷ 2. ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-52 ಸೂರ್ಯಾಸ್ತ : 06-35
ಮುಸ್ಲಿಂ ದಿನಾಂಕ : 26 ಶಬನ್
ಅದೃಷ್ಟ ಸಂಖ್ಯೆ : 2, 4,

ಮೇಷ: ಮಾತುಗಾರಿಕೆಯಿಂದ ಸಹೋದರರಿಗೆ ನೋವಾಗಬಹುದು ಅಥವಾ ಕಲಹ ಉಂಟಾಗಬಹುದು. ಮೊದಲ ಆದ್ಯತೆ ವೃತ್ತಿಪರ ಕೆಲಸಗಳ ಬಗೆಗೆ ಮಾತ್ರ ಇರಲಿ. ಸ್ವಂತವಾಗಿ ವ್ಯಾಪಾರ ಮಾಡಲು ಯೋಚನೆ ಮಾಡಬಹುದು.

ವೃಷಭ: ಉದ್ಯೋಗಿಗಳಿಗೆ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಸಂಪಾದನೆಗೆ ತಕ್ಕ ಹಾಗೆ ವಾಸಸ್ಥಾನ ಬದಲಾವಣೆಯಾಗುವ ಲಕ್ಷಣವಿದೆ.

ಮಿಥುನ: ಸಣ್ಣಪುಟ್ಟ ಅಳುಕುಗಳನ್ನು ಬಿಟ್ಟು ಧೈರ್ಯಂ ಸರ್ವತ್ರ ಸಾಧನಂ ಎನ್ನುವ ವಾಕ್ಯದಂತೆ ಹೆದರದೆ ಧೈರ್ಯದಿಂದ ಮುನ್ನುಗ್ಗಿ. ಸಾಕು ಪ್ರಾಣಿಗಳ ಆರೋಗ್ಯದಲ್ಲಿ ಏರುಪೇರಾಗುವುದು, ಅಸಮಾಧಾನಕ್ಕೆ ಕಾರಣವಾಗುವುದು.

ಕರ್ಕಾಟಕ: ಕೆಲಸದಲ್ಲಿ ಮಗ್ನರಾಗುವುದರಿಂದ ದಿನಚರ್ಯವು ಸುಖ ಶಾಂತಿಯಿಂದ ತುಂಬಿರುತ್ತದೆ. ಐಷಾರಾಮಿ ವಿದೇಶಿ ವಸ್ತುಗಳ ಖರೀದಿ ಮನಸ್ಸಿಗೆ ಸಂತೋಷ ಉಂಟುಮಾಡುತ್ತದೆ.

ಸಿಂಹ: ಕುಟುಂಬದವರ ಒಳಜಗಳದಿಂದ ಮುಖ್ಯ ಕಾರ್ಯಕ್ರಮಕ್ಕೆ ತಡೆಯಾಗುವುದು. ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಸಿಗುವ ಸಾಧ್ಯತೆಗಳಿವೆ. ಮಕ್ಕಳ ಮೇಲಿದ್ದ ಮುನಿಸು ಕರಗುವುದು.

ಕನ್ಯಾ: ಇತರರನ್ನು ಹೀಯಾಳಿಸುವ, ಅನವಶ್ಯಕವಾಗಿ ತಿರಸ್ಕರಿಸುವ ಅಥವಾ ನಿಂದನೆ ಮಾಡುವ ಮನೋಭಾವವನ್ನು ಕಡಿಮೆ ಮಾಡಿಕೊಳ್ಳಿ. ವಿದೇಶ ಪ್ರಯಾಣಕ್ಕೆ ಬೇಕಾದ ಹಣಕಾಸಿನ ಹೊಂದಿಕೆಯಾಗುವುದು.

ತುಲಾ: ಕೌಟುಂಬಿಕ ವಿಚಾರದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳಲು ಹಿಂಜರಿಕೆ ಬೇಡ. ದಿನದ ಪೂರ್ವಾರ್ಧದಲ್ಲಿ ಶುಭಫಲವನ್ನು ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರ ಫಲ ಇರಲಿದೆ.

ವೃಶ್ಚಿಕ: ಕೆಲಸದ ವಿಚಾರದಲ್ಲಿ ಹಿರಿಯರ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಕಂಪನಿಯ ಹಣಕಾಸಿನ ನಿರ್ವಹಣೆಯಲ್ಲಿ ಪಾತ್ರ ಪ್ರಮುಖವಾಗುವುದು. ಮಹಾಲಕ್ಷ್ಮಿಯನ್ನು ಪೂಜಿಸಿ ಏಳಿಗೆಯನ್ನು ಹೊಂದುವಿರಿ.

ಧನು: ಸಾಂಸಾರಿಕ ವಿಚಾರ ಮತ್ತು ವ್ಯಾಪಾರ ವ್ಯವಹಾರದ ವಿಚಾರಗಳಲ್ಲಿ ಗೌಪ್ಯತೆ ಕಾಪಾಡಿಕೊಳ್ಳಿರಿ. ಹೆಂಡತಿಯ ಸಲಹೆ ದಿನಚರಿಯಲ್ಲಿ ಸಹಾಯಕವಾಗುವುದು. ಶಕ್ತಿಯಿಂದಾಗದ್ದು ಯುಕ್ತಿಯಿಂದ ಮಾಡುವಿರಿ.

ಮಕರ: ಖಾದ್ಯ ಪದಾರ್ಥಗಳ ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗಲಿವೆ. ಮನದ ಕ್ಲೇಶವು ದೂರಾಗುತ್ತದೆ. ಆದರೆ ಯೋಗಾಭ್ಯಾಸ ರೂಢಿಸಿಕೊಳ್ಳಿರಿ.

ಕುಂಭ: ಯೋಜನೆಗಳನ್ನು ಇತರರು ಅಪೇಕ್ಷಿಸುವಂತೆ ಅಥವಾ ಸ್ವೀಕರಿಸುವಂತೆ ಮಾಡುವ ಸಾಮರ್ಥ್ಯ ಅದ್ಭುತವಾದದ್ದು. ನಿರುದ್ಯೋಗಿಗಳಿಗೆ ನೂತನ ತಾತ್ಕಾಲಿಕ ಉದ್ಯೋಗ ದೊರೆತು ಸಮಾಧಾನವಾಗುವುದು.


ಮೀನ: ವೃತ್ತಿಯಲ್ಲಿನ ಬದಲಾವಣೆ ಮಾಡುವ ಬಗ್ಗೆ ಹೆಂಡತಿಯೊಡನೆ ಮತ್ತು ಸ್ನೇಹಿತರೊಡನೆ ಚರ್ಚಿಸಿ ತೀರ್ಮಾನಿಸುವುದು ಒಳ್ಳೆಯದು. ಸ್ನೇಹಿತರ ಜತೆಗಿನ ಕಷ್ಟ-ಸುಖದ ಸಂಭಾಷಣೆ ಅಭಿವೃದ್ಧಿಗೆ ದಾರಿ ದೀಪ.

ಪದಬಂಧ 5964

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಚಿತವಾಗಿ ಕೊಡುವುದು ಖಂಡಿತವಾಗಿಯೂ ನಿಶ್ಚಿತ! (3)
3.ದಾರಹಿಡಿದು ದಾರಿಯಲ್ಲಿ ನಡೆಯಲು ಈ ಅಪ್ಪಣೆ ಚೀಟಿ! (4)
5.ನಕ್ಷತ್ರರಾಶಿಗಳಲ್ಲಿ ಆರನೆಯದು (3)
6.ರವೆಯನ್ನು ಆನೆಯ ಮೇಲೆ ಸಾಗಿಸುವುದು (3)
8.ಕಸಿ ಮಾಡಿದ ಸಸಿ ನೆಡುವುದಕ್ಕೇ ಈ ತಳಮಳ! (4)
9.ನಡುವಿದ್ದ ಮಾವ ಉಲ್ಟಾ ನಿಂತು ಒಂಬತ್ತು ತಿಂಗಳಾಯ್ತು! (4)
11.ಕದಕ್ಕೆ ಉಜ್ಜಿದ ಕೆನ್ನೆ (3)
13.ಪಥದ ಹತ್ತಿರ ಮಾಡಿದ ಪ್ರತಿಜ್ಞೆ (3)
16.ದ್ವಾದಶಿ ನಂತರದ ತಿಥಿ (4)
17.ಆಜುಬಾಜು ಇರುವವರೆಲ್ಲಾ ಕುಳಿತಿರುವ ಹಡಗು (3)

ಮೇಲಿಂದ ಕೆಳಕ್ಕೆ
1.ಈತ ಕನ್ನಡ ಚಿತ್ರದ ವಿಲನ್! (5)
2.ವಿನೋದಕ್ಕೊಂದು ಪರ್ಯಾಯ ಪದ (3)
3.ಮಾವನೇ ತಿರುಗಿ ನಿಂತು ಮಾಡಿದ ಮಾಟ (4)
4.ಉಲ್ಟಾ ಆದರೂ ಇದು ದುರಸ್ತಿಯೇ! (3)
6.ಕರದಲ್ಲೇ ಸೀಕರಣೆ ಕುಡಿಯುತ್ತಿಹನಲ್ಲಾ ಈ ವಿಲಾಸಿ! (3)
7.ಒನಪು ತೋರಿದಾಗಲೇ ಬಂದಿರುವ ಸ್ಮರಣೆ (3)
10.ಬರದಲ್ಲೂ ಪೂರೈಕೆ! (5)
12.ಬೆಲೆಯಿಟ್ಟುಕೊಂಡೇ ಬಂದಿದ್ದಾನೆ ದಿಕ್ಕಿಲ್ಲದವ (4)
14.ಪತ್ರದೊಳಗೇ ಪುಣ್ಯಕರವಾದುದು ಇದೆ (3)
15.ಮಜದಲ್ಲೇ ಇದ್ದಾನಲ್ಲಾ ಈ ಮನುಷ್ಯ! (3)



5963ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕವುದಿ 3.ಅಂಡಜ 5.ಸ್ವಾದ 6.ನಗ 8.ನವಮಿ 9.ಕಣಜ 10.ಉದಾರಿ 11.ಪ್ರಭಾತ 12.ಯಮಸ 14.ನಂತರ 15.ನವ 17.ಮುದ 18.ವಿವರ 19.ರಜನಿ

ಮೇಲಿಂದ ಕೆಳಕ್ಕೆ:
1.ಕದ 2.ದಿನ 3.ಅಂಟುಕ 4.ಜನಜನಿತ 5.ಸ್ವಾಮಿವಿವೇಕಾನಂದ 7.ಗಡಾರಿ 10.ಉದಯರವಿ 11.ಪ್ರಧಾನ 13.ಸಮರ 16.ವರ 17.ಮುನಿ

ಸುಡೊಕು 6349


		8		7			6	
			4		2	3		1
	3	1		5			8	
6		4		3			5	
5	7	2	6		9			8
				2			4	
3				1			9	
	2	5	8			6		7
1				6			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6348 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7


ಷೇರುಪೇಟೆ ವಹಿವಾಟು 856



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,795
ಇಂದಿನ ಅಂತ್ಯ	22,553
▼	242
ದಿನದ ಕನಿಷ್ಠ	22,518

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹500
12 ಕ್ಕೆ	₹67
ಮೈಸೂರು	
100ಕ್ಕೆ	₹500

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಕೆ.ಜಿ)	₹253-666
ದ್ವಿತಳಿ (ಕೆ.ಜಿ)	₹267-845

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಮಂಗಳೂರು	₹7500-10500
ತಿಪಟೂರು	₹14000-14801
ತುರುವೇಕೆರೆ	₹13800-14700

ವಿನಿಮಯ ದರ

$	ಡಾಲರ್	86.72
£	ಪೌಂಡ್	109.60
€	ಯೂರೊ	90.81
¥	ಯನ್ (100ಕ್ಕೆ)	58

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸಿಪ್ಪೆಗೋಟು	5099-16510	ಶಿರಸಿ	
ಕೋಕ	20000-27500	ಶಿವಮೊಗ್ಗ		ಬೆಟ್ಟೆ	25019-38699
ಹೊಸತು	30000-37000	ಚಿಟ್ಟೆ	40000-53509	ಬಿಳೆಗೋಟು	16199-28218
ಹಳತು	45200-49200	ಗೊರಬಲು	18009-28189	ಚಾಲಿ	31208-36269
ಕುಮಟ		ರಾಶಿ	30189-51911	ಕೆಂಪುಗೋಟು	11999-28818
ಚಾಲಿ	32569-36599	ಸರಕು	50069-88910	ರಾಶಿ	40598-45809
ಚಿಪ್ಪು	15099-25019	ಸಿದ್ದಾಪುರ		ಯಲ್ಲಾಪುರ	
ಕೋಕ	6089-21899	ಬಿಳೆಗೋಟು	20000-23609	ಅಪಿ	60679-71015
ಫ್ಯಾಕ್ಟರಿ	3589-21899	ಚಾಲಿ	32099-37409	ಬಿಳೆಗೋಟು	12099-26701
ಹೊಸಚಾಲಿ	29089-34499	ಕೋಕ	13009-23109	ಚಾಲಿ	27469-39109
ಸಾಗರ		ಹೊಸಚಾಲಿ	26509-34699	ಕೋಕ	4499-15929
ಬಿಳೆಗೋಟು	7249-18600	ಕೆಂಪುಗೋಟು	19819-20389	ಕೆಂಪುಗೋಟು	12899-26112
ಚಾಲಿ	15579-34009	ರಾಶಿ	42099-49199	ರಾಶಿ	39709-60000
ಕೋಕ	6099-18599	ತಟ್ಟಿಬೆಟ್ಟೆ	27089-38699	ತಟ್ಟಿಬೆಟ್ಟೆ	27701-38709
ಕೆಂಪುಗೋಟು	10199-22599				
ರಾಶಿ	25509-52139				

ಭಾರತದ ಆರ್ಥಿಕತೆ ವೇಗವಾಗಿ ಮುಂದುವರಿಯಲಿದೆ: ಮೋದಿ



ಭೋಪಾಲ್ (ಪಿಟಿಐ): ಮುಂಬರುವ ವರ್ಷಗಳಲ್ಲಿಯೂ ಭಾರತವು ಅತಿ ವೇಗವಾಗಿ ಬೆಳೆಯುವ ಆರ್ಥಿಕತೆಯಾಗಿ ಮುಂದುವರಿಯಲಿದೆ ಎಂಬ ವಿಶ್ವಾಸವನ್ನು ವಿಶ್ವ ಬ್ಯಾಂಕ್ ವ್ಯಕ್ತಪಡಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಿಳಿಸಿದರು.

'ಇನ್ವೆಸ್ಟ್ ಮಧ್ಯಪ್ರದೇಶ-ಜಾಗತಿಕ ಹೂಡಿಕೆದಾರರ ಸಮಾವೇಶ-2025' ಉದ್ಘಾಟಿಸಿದ ನಂತರ ಅವರು ಮಾತನಾಡಿದರು.

ಭಾರತವು ಜಾಗತಿಕ ವೈಮಾನಿಕ ಸಂಸ್ಥೆಗಳಿಗೆ ಆಸಕ್ತಿಯ ಸಾಧನಗಳನ್ನು ಪೂರೈಸುವ ಪ್ರಮುಖ ರಾಷ್ಟ್ರವಾಗಿದೆ. ಜವಳಿ, ಪ್ರವಾಸೋದ್ಯಮ ಮತ್ತು ತಂತ್ರಜ್ಞಾನ ವಲಯಗಳಲ್ಲಿ ಕೋಟ್ಯಂತರ ಉದ್ಯೋಗಗಳ ಸೃಷ್ಟಿಯಾಗಲಿವೆ ಎಂದು ಹೇಳಿದರು.

ಡಬಲ್ ಎಂಜಿನ್ ಸರ್ಕಾರ ಸ್ಥಾಪನೆ ಬಳಿಕ ಮಧ್ಯಪ್ರದೇಶ ರಾಜ್ಯದ ಅಭಿವೃದ್ಧಿಯ ವೇಗ ದುಪ್ಪಟ್ಟಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು, ಮಧ್ಯಪ್ರದೇಶ ಸರ್ಕಾರದ 18 ನೀತಿಗಳನ್ನು ಅನಾವರಣಗೊಳಿಸಿದರು.

ವಿಶ್ವ ಬ್ಯಾಂಕ್ ಇತ್ತೀಚೆಗೆ ತನ್ನ 'ಜಾಗತಿಕ ಆರ್ಥಿಕ ಹೊರನೋಟ' ವರದಿಯಲ್ಲಿ, ಭಾರತವು ಮುಂದಿನ ಎರಡು ವರ್ಷವೂ ಅತಿ ವೇಗವಾಗಿ ಬೆಳೆಯುವ ಪ್ರಮುಖ ಆರ್ಥಿಕತೆಯಾಗಿ ಮುಂದುವರಿಯಲಿದೆ ಎಂದು ಹೇಳಿತ್ತು.

₹2.1 ಲಕ್ಷ ಕೋಟಿ ಹೂಡಿಕೆಗೆ ಅದಾನಿ ಸಮೂಹ ಘೋಷಣೆ

ಭೋಪಾಲ್ (ಪಿಟಿಐ): 'ಮಧ್ಯಪ್ರದೇಶದ ವಿವಿಧ ಯೋಜನೆಗಳಲ್ಲಿ ₹2.1 ಲಕ್ಷ ಕೋಟಿ ಮೊತ್ತದ ಬಂಡವಾಳವನ್ನು ಹೂಡಿಕೆ ಮಾಡಲಾಗುವುದು' ಎಂದು ಅದಾನಿ ಸಮೂಹ ಘೋಷಿಸಿದೆ.

ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಸೋಮವಾರ ಮಾತನಾಡಿದ ಸಮೂಹದ ಅಧ್ಯಕ್ಷ ಗೌತಮ್ ಅದಾನಿ, 'ಪಂಪ್ಡ್ ಸ್ಟೋರೇಜ್, ಸಿಮೆಂಟ್, ಗಣಿಗಾರಿಕೆ, ಥರ್ಮಲ್ ವಿದ್ಯುತ್ ಯೋಜನೆಗಳಲ್ಲಿ ₹1.10 ಲಕ್ಷ ಕೋಟಿ ಹೂಡಿಕೆ ಮಾಡಲಾಗುವುದು. ಸ್ಮಾರ್ಟ್‌ಸಿಟಿ, ವಿಮಾನ ನಿಲ್ದಾಣದ ಯೋಜನೆಯಲ್ಲಿ ₹1 ಲಕ್ಷ ಕೋಟಿ ಹೂಡಿಕೆ ಮಾಡಲಾಗುವುದು. ಇದು 2030ರ ವೇಳೆಗೆ 1.20 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು ಹೇಳಿದ್ದಾರೆ.

ಇಂಧನ, ಮೂಲಸೌಕರ್ಯ, ತಯಾರಿಕಾ, ಸರಕು, ಕೃಷಿ ವಲಯದಲ್ಲಿ ₹50 ಸಾವಿರ ಕೋಟಿಯನ್ನು ಈಗಾಗಲೇ ಹೂಡಿಕೆ ಮಾಡಲಾಗಿದೆ. ಇದು 25 ಸಾವಿರಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿದೆ ಎಂದರು.

ಈ ಯೋಜನೆಗಳು ಕೇವಲ ಹೂಡಿಕೆಗಳ ಬಗ್ಗೆ ಅಲ್ಲ, ಬದಲಾಗಿ ರಾಜ್ಯವನ್ನು ಕೈಗಾರಿಕಾ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ರಾಷ್ಟ್ರೀಯ ನಾಯಕನನ್ನಾಗಿ ಮಾಡುವ ಮಹತ್ವದ ಮೈಲುಗಲ್ಲುಗಳಾಗಿವೆ ಎಂದು ಹೇಳಿದ್ದಾರೆ.

ಎನ್‌ಸಿಎಲ್‌ಎಟಿ ನೀಡಿದ್ದ ತಡೆ ತೆರವು • ಷೇರುಪೇಟೆಗೆ ಕಂಪನಿ ಮಾಹಿತಿ

ಕಾಫಿ ಡೇ: ದಿವಾಳಿ ಪ್ರಕ್ರಿಯೆ ಶುರು

ನವದೆಹಲಿ (ಪಿಟಿಐ): ಕೆಫೆ ಕಾಫಿ ಡೇ ಮಳಿಗೆಗಳ ಮಾಲೀಕತ್ವ ಹೊಂದಿರುವ ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ಕಂಪನಿಯ ವಿರುದ್ಧ ದಿವಾಳಿ ಸಂಹಿತೆಯ ಅಡಿಯಲ್ಲಿನ ಪ್ರಕ್ರಿಯೆಗಳು ಮತ್ತೆ ಚಾಲನೆ ಪಡೆದಿವೆ.

ಸುಪ್ರೀಂ ಕೋರ್ಟ್ ನಿಗದಿ ಮಾಡಿದ್ದ ಗಡುವಾದ ಫೆಬ್ರುವರಿ 21ಕ್ಕೆ ಮೊದಲು ಆದೇಶ ನೀಡಲು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಗೆ (ಎನ್‌ಸಿಎಲ್‌ಎಟಿ) ಸಾಧ್ಯವಾಗಿಲ್ಲ. ಹೀಗಾಗಿ ದಿವಾಳಿ ಸಂಹಿತೆಯ ಅಡಿಯಲ್ಲಿನ ಪ್ರಕ್ರಿಯೆಗಳು ಪುನರಾರಂಭ ಆಗಿವೆ.

ಅಮಾನತುಗೊಂಡಿರುವ ಮಂಡಳಿಯ ನಿರ್ದೇಶಕರು ಸಲ್ಲಿಸಿದ ಮೇಲ್ಮನವಿಯ ವಿಚಾರಣೆಯನ್ನು ಎನ್‌ಸಿಎಲ್‌ಎಟಿ ಚೆನ್ನೈ ಪೀಠವು ಕಳೆದ ವಾರ ಪೂರ್ಣಗೊಳಿಸಿ, ಆದೇಶ ಕಾಯ್ದಿರಿಸಿತ್ತು ಎಂದು ಸಿಡಿಇಎಲ್ ಷೇರುಪೇಟೆಗೆ ಮಾಹಿತಿ ನೀಡಿದೆ.

'ಮೇಲ್ಮನವಿಯು ಫೆಬ್ರುವರಿ 21ರವರೆಗೆ ಇತ್ಯರ್ಥ ಆಗಿಲ್ಲ. ಹೀಗಾಗಿ, ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆಗೆ ನೀಡಿದ್ದ ತಡೆಯಾಜ್ಞೆಯು ತೆರವಾಗುತ್ತದೆ. ಇದರ ಪರಿಣಾಮವಾಗಿ, ದಿವಾಳಿ ಪ್ರಕ್ರಿಯೆ ಪುನರಾರಂಭ ಆಗುತ್ತದೆ...' ಎಂದು ಅದು ನೀಡಿರುವ ಮಾಹಿತಿಯಲ್ಲಿ ವಿವರಿಸಲಾಗಿದೆ.

ಮುಖ್ಯಾಂಶಗಳು

- ಐಬಿಸಿ ಅಡಿಯಲ್ಲಿ ದಿವಾಳಿ ಪ್ರಕ್ರಿಯೆ
- ಎನ್‌ಸಿಎಲ್‌ಎಟಿ ನೀಡಿದ್ದ ತಡೆ ತೆರವು
- ₹228 ಕೋಟಿ ಬಾಕಿ ಇರಿಸಿಕೊಂಡಿರುವ ಸಿಡಿಇಎಲ್



ಎನ್‌ಸಿಎಲ್‌ಎಟಿ ತನ್ನ ಆದೇಶವನ್ನು ಕಾಯ್ದಿರಿಸಿದ್ದು, ಅದನ್ನು ಇನ್ನಷ್ಟೇ ಪ್ರಕಟ ಮಾಡಬೇಕಿದೆ ಎಂದು ತಿಳಿಸಿದೆ.

ಸಿಡಿಇಎಲ್ ಕಂಪನಿಯು ₹228.45 ಕೋಟಿ ಪಾವತಿ ಬಾಕಿ ಇರಿಸಿಕೊಂಡಿದೆ ಎಂದು ಆರೋಪಿಸಿ ಐಡಿಬಿಐ ಟ್ರಸ್ಟಿಷಿಪ್ ಸರ್ವಿಸಸ್ ಲಿಮಿಟೆಡ್ (ಐಡಿಬಿಐಟಿಎಸ್‌ಎಲ್), ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಪೀಠಕ್ಕೆ ಅರ್ಜಿ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ ಎನ್‌ಸಿಎಲ್‌ಟಿ, ಮಧ್ಯಂತರ ಪರಿಹಾರಕ್ಕೆ ವೃತ್ತಿಪರರನ್ನು (ಐಆರ್‌ಪಿ) ನೇಮಕ ಮಾಡಿತ್ತು.

ಅಮಾನತುಗೊಂಡ ಆಡಳಿತ ಮಂಡಳಿಯು ಎನ್‌ಸಿಎಲ್‌ಟಿ ಆದೇಶವನ್ನು ಎನ್‌ಸಿಎಲ್‌ಎಟಿ ಮುಂದೆ ಪ್ರಶ್ನಿಸಿತ್ತು. ಬೆಂಗಳೂರು ಪೀಠದ ಆದೇಶಕ್ಕೆ ಎನ್‌ಸಿಎಲ್‌ಎಟಿ ತಡೆ ನೀಡಿತ್ತು.

ಈ ತಡೆಯಾಜ್ಞೆಯನ್ನು ಐಡಿಬಿಐಟಿಎಸ್‌ಎಲ್, ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತು. ಮೇಲ್ಮನವಿ ಇತ್ಯರ್ಥಪಡಿಸಬೇಕು ಎಂದು ಎನ್‌ಸಿಎಲ್‌ಎಟಿ ಚೆನ್ನೈ ಪೀಠಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು.

ಫೆಬ್ರುವರಿ 21ಕ್ಕೆ ಮೊದಲು ಮೇಲ್ಮನವಿ ಇತ್ಯರ್ಥ ಆಗದಿದ್ದಲ್ಲಿ, ಎನ್‌ಸಿಎಲ್‌ಎಟಿ ನೀಡಿರುವ ತಡೆ ತಾನಾಗಿಯೇ ತೆರವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಆಗ ಸ್ಪಷ್ಟಪಡಿಸಿತ್ತು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 856 ಅಂಶ ಕುಸಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಆಗಿವೆ. ವಿದೇಶಿ ಬಂಡವಾಳದ ಹೊರಹರಿವು ಮತ್ತು ಅಮೆರಿಕದ ಸುಂಕ ನೀತಿಯಿಂದಾಗಿ ಷೇರು ಸೂಚ್ಯಂಕಗಳು ಕುಸಿತ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಸೂಚ್ಯಂಕದ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ₹4.22 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 856 ಅಂಶ (ಶೇ 1.14) ಇಳಿಕೆಯಾಗಿ, 74,454ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 242 ಅಂಶ (ಶೇ 1.06) ಕಡಿಮೆಯಾಗಿ, 22,553ಕ್ಕೆ ಕೊನೆಗೊಂಡಿತು.

ಕಳೆದ ಐದು ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,542 (ಶೇ 2) ಮತ್ತು ನಿಫ್ಟಿ 406 ಅಂಶ (ಶೇ 1.76) ಕುಸಿದಿದೆ.

ದೇಶದ ಷೇರುಸೂಚ್ಯಂಕಗಳು ಎಂಟು ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದ್ದು, ಸೆನ್ಸೆಕ್ಸ್ 75 ಸಾವಿರ ಅಂಶಕ್ಕಿಂತ ಕೆಳಗಿಳಿದಿದೆ.

ಎಚ್‌ಸಿಎಲ್ ಟೆಕ್, ಜೊಮಾಟೊ, ಟಿಸಿಎಸ್, ಇನ್ಫೊಸಿಸ್, ಟೆಕ್ ಮಹೀಂದ್ರ, ಭಾರ್ತಿ ಏರ್‌ಟೆಲ್, ಟಾಟಾ ಸ್ಟೀಲ್ ಮತ್ತು ಎನ್‌ಟಿಪಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಮಹೀಂದ್ರ ಆ್ಯಂಡ್ ಮಹೀಂದ್ರ, ಕೋಟಕ್ ಮಹೀಂದ್ರ ಬ್ಯಾಂಕ್, ಮಾರುತಿ ಸುಜುಕಿ, ನೆಸ್ಲೆ ಮತ್ತು ಐಟಿಸಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.



ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರ ನಡೆದ ವಹಿವಾಟಿನಲ್ಲಿ ₹3,449 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಏಷ್ಯಾದ ಮಾರುಕಟ್ಟೆಯಲ್ಲಿ ಸೋಲ್, ಶಾಂಘೈ ಮತ್ತು ಹಾಂಗ್ ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ.

'ತಂತ್ರಜ್ಞಾನ ವಲಯದ ವರಮಾನ ₹24.50 ಲಕ್ಷ ಕೋಟಿ ನಿರೀಕ್ಷೆ'

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ತಂತ್ರಜ್ಞಾನ ವಲಯದ ವರಮಾನವು ಶೇ 5.1ರಷ್ಟು ಪ್ರಗತಿ ಸಾಧಿಸಲಿದ್ದು, ₹24.50 ಲಕ್ಷ ಕೋಟಿ ವರಮಾನ ದಾಖಲಾಗುವ ನಿರೀಕ್ಷೆ ಇದೆ ಎಂದು ಐ.ಟಿ ಉದ್ಯಮ ಸಂಘಟನೆ ನಾಸ್ಕಾಂ ಸೋಮವಾರ ಹೇಳಿದೆ.

2025–26ರ ಆರ್ಥಿಕ ವರ್ಷದಲ್ಲಿ ಉದ್ಯಮದ ವರಮಾನವು ₹26 ಲಕ್ಷ ಕೋಟಿ ದಾಟಬಹುದು. ಇದು 2024–25ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 6ರಷ್ಟು ಹೆಚ್ಚಳ ಎಂದು ಅಧ್ಯಕ್ಷ ರಾಜೇಶ್ ನಂಬಿಯಾರ್ ಹೇಳಿದ್ದಾರೆ.

ಪ್ರಸಕ್ತ ವರ್ಷದಲ್ಲಿ ಉದ್ಯಮಕ್ಕೆ 1.26 ಲಕ್ಷ ಉದ್ಯೋಗಿಗಳು ಸೇರ್ಪಡೆಯಾಗಿದ್ದು, ಒಟ್ಟು ಉದ್ಯೋಗಿಗಳ ಸಂಖ್ಯೆ 58 ಲಕ್ಷವಾಗಿದೆ. ಐ.ಟಿ ಸೇವೆಗಳ ಕಂಪನಿ ವರಮಾನವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 4.3ರಷ್ಟು ಪ್ರಗತಿ ಸಾಧಿಸಿ, ₹11.88 ಲಕ್ಷ ಕೋಟಿ ಆಗಲಿದೆ. ಕಂಪನಿಗಳ ದೇಶೀಯ ವರಮಾನ ₹5 ಲಕ್ಷ ಕೋಟಿಯಷ್ಟಾಗಲಿದ್ದು, ಶೇ 7ರಷ್ಟು ಪ್ರಗತಿ ಸಾಧಿಸಲಿದೆ. ರಫ್ತು ವರಮಾನವು ₹19.46 ಲಕ್ಷ ಕೋಟಿ ಆಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

4 ಸಾವಿರ ಸಿಬ್ಬಂದಿ ವಜಾಕ್ಕೆ ಡಿಬಿಎಸ್ ನಿರ್ಧಾರ

ಮುಂಬೈ (ಪಿಟಿಐ): ಮುಂದಿನ ಮೂರು ವರ್ಷದಲ್ಲಿ 4 ಸಾವಿರ ಸಿಬ್ಬಂದಿಯನ್ನು ಕೆಲಸದಿಂದ ವಜಾಗೊಳಿಸಲು ಡಿಬಿಎಸ್ ಬ್ಯಾಂಕ್ ನಿರ್ಧರಿಸಿದೆ.

ಬ್ಯಾಂಕ್‌ನ ಕಾರ್ಯಾಚರಣೆಯಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ಇದರಿಂದಾಗಿ 4 ಸಾವಿರ ಸಿಬ್ಬಂದಿಯನ್ನು (ಶೇ 10ರಷ್ಟು) ಕೆಲಸದಿಂದ ವಜಾಗೊಳಿಸಬೇಕಾಗುತ್ತದೆ ಎಂದು ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಾಹಕ ಪೀಯೂಷ್ ಗುಪ್ತಾ ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆ (ಎ.ಐ) ಬಹಳ ಶಕ್ತಿಶಾಲಿಯಾಗಿದೆ. ಡಿಬಿಎಸ್ ಎರಡು ವರ್ಷಗಳ ಹಿಂದೆಯೇ ಜನರೇಟಿವ್ ಎ.ಐ ಜಾರಿಗೆ ತರಲು ಪ್ರಾರಂಭಿಸಿತು. ಗ್ರಾಹಕರ ಸಂಪರ್ಕ, ಕ್ರೆಡಿಟ್ ಅಂಡರ್ ರೈಟಿಂಗ್, ನೇಮಕಾತಿ ಸೇರಿದಂತೆ ವಿವಿಧ ವ್ಯವಹಾರ ದಾದ್ಯಂತ ಎ.ಐ ಅನ್ನು ಬಳಸಲಾಗುತ್ತಿದೆ ಎಂದು ಹೇಳಿದರು.

ಹೊರರಾಜ್ಯಗಳಿಂದ ಕುಸಿದ ಬೇಡಿಕೆ

ತಗ್ಗಿದ ಟೊಮೆಟೊ ಧಾರಣೆ

ಪ್ರಜಾವಾಣಿ ವಾರ್ತೆ

ಕೋಲಾರ: ಹೊರ ರಾಜ್ಯಗಳ ವರ್ತಕರಿಂದ ಬೇಡಿಕೆ ಕಡಿಮೆಯಾದ ಕಾರಣ ಟೊಮೆಟೊ ಧಾರಣೆ ಕುಸಿತ ಕಂಡಿದೆ. ಕಳೆದ ಹತ್ತು ದಿನಗಳಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ. ಟೊಮೆಟೊ ಬೆಲೆ ₹10 ಇದೆ.

ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಹರಾಜಿನಲ್ಲಿ 15 ಕೆ.ಜಿ ಬಾಕ್ಸ್ ಟೊಮೆಟೊ ₹120ರಿಂದ ₹150ಕ್ಕೆ ಮಾರಾಟ ಆಗುತ್ತಿದೆ. ರೈತರಿಗೆ ಕೆ.ಜಿಗೆ ಸರಾಸರಿ ₹8 ದರ ಲಭಿಸುತ್ತಿದೆ.

ಕೋಲಾರದ ಎಪಿಎಂಸಿ ಮಾರುಕಟ್ಟೆಗೆ ಚಿತ್ರದುರ್ಗ, ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರದಿಂದಲೇ ಶೇ 90ರಷ್ಟು ಟೊಮೆಟೊ ಇಲ್ಲಿಗೆ ಬರುತ್ತಿದೆ. ಸದ್ಯ ಆರು ಸಾವಿರ ಕ್ವಿಂಟಲ್ ಅಂದರೆ 40 ಸಾವಿರ ಬಾಕ್ಸ್ ಟೊಮೆಟೊ ಆವಕ ಆಗುತ್ತಿದೆ. ಶೇ 10ರಷ್ಟು ಟೊಮೆಟೊ ಮಾತ್ರ ಕೋಲಾರದ್ದು.

ಜಿಲ್ಲೆಯಲ್ಲಿ ರೈತರು ಸದ್ಯ ಕಡಿಮೆ ಪ್ರಮಾಣದಲ್ಲಿ ಟೊಮೆಟೊ ಬೆಳೆದಿದ್ದು, ಗುಣಮಟ್ಟವೂ ಕಡಿಮೆ ಆಗಿದೆ. ಜೂನ್‌ನಲ್ಲಿ ಟೊಮೆಟೊ ಸುಗ್ಗಿ ಆರಂಭವಾಗಲಿದೆ.

'ಉತ್ತರ ಪ್ರದೇಶ, ಗುಜರಾತ್, ಒಡಿಶಾದಲ್ಲಿ ಹೆಚ್ಚು ಟೊಮೆಟೊ ಬೆಳೆಯುತ್ತಿದ್ದಾರೆ. ಅಲ್ಲಿಯ ಮಾರುಕಟ್ಟೆಯ ದರದಲ್ಲಿಯೂ ಭಾರಿ ಕುಸಿತವಾಗಿದೆ. ಅಲ್ಲಿಂದ ತಮಿಳುನಾಡಿಗೆ



ಕೋಲಾರ ಎಂಪಿಎಂಸಿ ಮಾರುಕಟ್ಟೆಯಲ್ಲಿ ಟೊಮೆಟೊ ಹರಾಜು

ಬಹಳ ಕಡಿಮೆ ದರದಲ್ಲಿ ಪೂರೈಕೆ ಆಗುತ್ತಿದೆ. ಹೀಗಾಗಿ, ಇಲ್ಲಿನ ಟೊಮೆಟೊಗೆ ಬೇಡಿಕೆ ತಗ್ಗಿದೆ. ಗುಣಮಟ್ಟವೂ ಕಡಿಮೆ ಆಗಿದೆ' ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ಕಿರಣ್ 'ಪ್ರಜಾವಾಣಿ'ಗೆ ತಿಳಿಸಿದರು.

ಸದ್ಯ ಕೋಲಾರದಿಂದ ಕೃಷ್ಣಗಿರಿ ಹಾಗೂ ಚಿತ್ತೂರಿನ ಜ್ಯೂಸ್ ಕಾರ್ಖಾನೆಯವರು ಟೊಮೆಟೊ ಖರೀದಿ ಮಾಡುತ್ತಿದ್ದಾರೆ. ಅಲ್ಲಿ 130ಕ್ಕೂ ಅಧಿಕ ಕಾರ್ಖಾನೆಗಳಿದ್ದು ಟೊಮೆಟೊದಿಂದ ವಿವಿಧ ಉತ್ಪನ್ನ ತಯಾರಿಸುತ್ತಾರೆ ಎಂದರು.

'ಕ್ರೆಡಿಟ್ ಸಹಕಾರ ಸಂಘ ಸ್ಥಾಪನೆಗೆ ಪ್ರಸ್ತಾವ ಸಲ್ಲಿಕೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಮಹಿಳಾ ಸ್ವ-ಸಹಾಯ ಸಂಘಗಳಿಗೆ ಸರ್ಕಾರದಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸಲು ಕ್ರೆಡಿಟ್ ಸಹಕಾರ ಸಂಘ ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ನಗರದಲ್ಲಿ ಸೋಮವಾರ ಮಹಿಳಾ ಸ್ವ-ಸಹಾಯ ಗುಂಪುಗಳ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದ 'ರಾಷ್ಟ್ರೀಯ ನಮ್ಮ ಸರಸ್ ಮೇಳ'ವನ್ನು ಉದ್ಘಾಟಿಸಿ ಮಾತನಾಡಿದರು.

'ಮೈಕ್ರೊ ಫೈನಾನ್ಸ್‌ಗಳ ದುಬಾರಿ ಬಡ್ಡಿ ದರ, ಸಾಲ ವಸೂಲಾತಿಯಿಂದ ಮಹಿಳಾ ಸ್ವ-ಸಹಾಯ ಸಂಘಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹೀಗಾಗಿ, ಸರ್ಕಾರ ಮಟ್ಟದಿಂದಲೇ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಟ್ಟರೆ ಕುಟುಂಬ ನಿರ್ವಹಣೆಗೆ ಉಪಯೋಗವಾಗುತ್ತದೆ ಎಂಬುದನ್ನು ಮನಗಂಡು ಸಹಕಾರ ಸಂಘ ಸ್ಥಾಪನೆಯ ಪ್ರಸ್ತಾವ ಇರಿಸಲಾಗಿದೆ' ಎಂದರು.

'ಮಹಿಳೆಯರ ಜೀವನಕ್ಕೆ ಆಧಾರ ಮತ್ತು ಆದಾಯದ ಮಾರ್ಗವನ್ನು ಕಂಡುಕೊಡಲು ₹25 ಕೋಟಿ ವೆಚ್ಚದಲ್ಲಿ 2,500 ಕಾಫಿ ಕಿಯೋಸ್ಕ್‌ಗಳನ್ನು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಇಲಾಖೆಯಿಂದ ನೀಡಲಾಗುವುದು. ಪ್ರತಿ ಕಾಫಿ ಕಿಯೋಸ್ಕ್‌ಗೆ ₹1 ಲಕ್ಷ ವೆಚ್ಚ ಆಗಲಿದ್ದು, ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರುತ್ತೇವೆ' ಎಂದು ಭರವಸೆ ನೀಡಿದರು.

ಎಲ್‌ಐಸಿಗೆ ನೋಟಿಸ್

ನವದೆಹಲಿ (ಪಿಟಿಐ): 2020-21ರ ಆರ್ಥಿಕ ವರ್ಷಕ್ಕೆ ಪಡೆದ ಹೆಚ್ಚುವರಿ ಹೂಡುವಳಿ ತೆರಿಗೆ ಜಮೆಗಾಗಿ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ತೆರಿಗೆ ಪ್ರಾಧಿಕಾರವು ₹57.2 ಕೋಟಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿ ಮಾಡಿದೆ ಎಂದು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಸೋಮವಾರ ಷೇರುಪೇಟೆಗೆ ತಿಳಿಸಿದೆ.

ದೆಹಲಿಯ ಸಹಾಯಕ ಆಯುಕ್ತರಿಂದ ನೋಟಿಸ್ ಅನ್ನು ಸ್ವೀಕರಿಸಲಾಗಿದೆ. ಜಿಎಸ್‌ಟಿ ₹31 ಕೋಟಿ, ಬಡ್ಡಿ ₹23 ಕೋಟಿ ಮತ್ತು ದಂಡ ₹3 ಕೋಟಿ ಒಳಗೊಂಡಿದೆ. ಇದು ನಿಗಮದ ಹಣಕಾಸು ವಹಿವಾಟು ಹಾಗೂ ಇತರೆ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಎಲ್‌ಐಸಿ ತಿಳಿಸಿದೆ.

ಬಾಂಗ್ಲಾ ವಾಯುನೆಲೆ ಮೇಲೆ ದಾಳಿ: ಹಿಮ್ಮೆಟ್ಟಿಸಿದ ಸೇನೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಕೋಕ್ಸ್ ಬಜಾರ್ ನಗರದಲ್ಲಿರುವ ವಾಯುನೆಲೆ ಮೇಲೆ ದಿಢೀರ್ ದಾಳಿ ನಡೆಯಿತು. ಭದ್ರತಾ ಪಡೆಗಳು ಸೋಮವಾರ ದಾಳಿಕೋರರನ್ನು ಹಿಮ್ಮೆಟ್ಟಿಸಿದವು. ಈ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

'ದುಷ್ಕರ್ಮಿಗಳು ವಾಯುನೆಲೆಯ ಮೇಲೆ ದಿಢೀರ್ ದಾಳಿ ನಡೆಸಿದರು. ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗಿದೆ' ಎಂದು ಸಾರ್ವಜನಿಕ ಸಂಪರ್ಕ ಆಂತರಿಕ ಸೇವೆ ನಿರ್ದೇಶನಾಲಯ (ಐಎಸ್‌ಪಿಆರ್) ತಿಳಿಸಿದೆ.

ಸ್ಥಳೀಯ ವರ್ತಕರೊಬ್ಬರು ಮೃತಪಟ್ಟಿದ್ದಾರೆ ಎಂದು ಉಪ ಆಯುಕ್ತ ಮಹಮ್ಮದ್ ಸಲಾಹುದ್ದೀನ್ ತಿಳಿಸಿದರು.

ವಿಮಾನ ನಿಲ್ದಾಣ ವಿಸ್ತರಣೆ ಯೋಜನೆಗಾಗಿ ಸ್ಥಳೀಯರನ್ನು ಸ್ಥಳಾಂತರಿಸಬೇಕಾಗುತ್ತದೆ. ಇದಕ್ಕೆ ಕೆಲವು ಸ್ಥಳೀಯರಿಂದ ವಿರೋಧ ವ್ಯಕ್ತವಾಗುತ್ತಿದೆ. ಹೀಗಾಗಿ ದಾಳಿ ನಡೆದಿರಬಹುದು ಎಂದು ವರದಿಯಾಗಿದೆ.

ಸಂಕ್ಷಿಪ್ತ ಸುದ್ದಿ

ಟ್ರಂಪ್–ಮ್ಯಾಕ್ರನ್ ಭೇಟಿ



ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರನ್ನು ಶ್ವೇತಭವನಕ್ಕೆ ಸೋಮವಾರ ಬರಮಾಡಿಕೊಂಡರು.

ಟ್ರಂಪ್ ಅವರ 'ಅಮೆರಿಕ ಮೊದಲು' ನೀತಿಯ ಪರಿಣಾಮವಾಗಿ ಅಟ್ಲಾಂಟಿಕ್ ಸಾಗರದ ಎರಡೂ ಬದಿಗಳಲ್ಲಿರುವ ದೇಶಗಳ ನಡುವಿನ ಸಂಬಂಧದ ಭವಿಷ್ಯದ ಬಗ್ಗೆ ಅನಿಶ್ಚಿತತೆ ಮೂಡಿರುವ ಸಂದರ್ಭದಲ್ಲಿ ಮ್ಯಾಕ್ರನ್ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದಾರೆ.

ಟ್ರಂಪ್ ಮತ್ತು ಮ್ಯಾಕ್ರನ್ ಅವರು ಜಿ–7 ದೇಶಗಳ ನಾಯಕರ ಜೊತೆ ವರ್ಚುವಲ್ ವೇದಿಕೆಯ ಮೂಲಕ ಸಭೆ ನಡೆಸಲಿದ್ದಾರೆ. ಅಲ್ಲಿ ರಷ್ಯಾ–ಉಕ್ರೇನ್ ಯುದ್ಧದ ಬಗ್ಗೆ ಚರ್ಚೆ ನಡೆಯಲಿದೆ.

ಪಿಟಿಐ ನಾಯಕರ ಮನೆಗಳ ಮೇಲೆ ಪೊಲೀಸರಿಂದ ದಾಳಿ

ಲಾಹೋರ್ (ಪಿಟಿಐ): ಇಲ್ಲಿನ ಪಂಜಾಬ್ ಪ್ರಾಂತ್ಯದ ಪೊಲೀಸರು ಸೋಮವಾರ ಪಾಕಿಸ್ತಾನ ತೆಹ್ರೀಕ್–ಎ–ಇನ್ಸಾಫ್ ಪಕ್ಷದ (ಪಿಟಿಐ) ನಾಯಕರ ಮನೆ ಮೇಲೆ ದಾಳಿ ನಡೆಸಿ ಹಲವು ನಾಯಕರನ್ನು ಬಂಧಿಸಿದ್ದಾರೆ.

ದೇಶದಲ್ಲಿ ಪಿಟಿಐ ಚಟುವಟಿಕೆಗಳಿಗೆ ಮತ್ತೆ ಚಾಲನೆ ನೀಡಲಾಗುವುದು ಎಂದು ಘೋಷಣೆ ಮಾಡಿದ ಬೆನ್ನಲ್ಲೇ, ಈ ಬೆಳವಣಿಗೆ ನಡೆದಿದೆ.

'ರಾವಲ್ಪಿಂಡಿಯಲ್ಲಿ ಪಕ್ಷದ ಕಾರ್ಯಕರ್ತರ ಸಮಾವೇಶ ನಡೆಸಲು ಸಾವಿರಾರು ಕಾರ್ಯಕರ್ತರು ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ, ಪೊಲೀಸರು ಎಲ್ಲರನ್ನು ಸುತ್ತುವರಿದು ಬಂಧಿಸಿದ್ದಾರೆ' ಎಂದು ಪಕ್ಷದ ಹಿರಿಯ ನಾಯಕ ಶೌಕತ್ ಬಸ್ರಾ ತಿಳಿಸಿದ್ದಾರೆ.

ಫ್ರಿಡ್‌ರಿಚ್ ಮೆರ್ಜ್ ಮುಂದಿನ ಚಾನ್ಸಲರ್?

ಬರ್ಲಿನ್ (ಎಪಿ): ಜರ್ಮನಿಯ ಸಂಸತ್ತಿಗೆ ನಡೆದ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟಗೊಂಡಿದ್ದು, ಫ್ರಿಡ್‌ರಿಚ್ ಮೆರ್ಜ್ ನೇತೃತ್ವದ ಮೈತ್ರಿಕೂಟ ಮುನ್ನಡೆ ಕಾಯ್ದುಕೊಂಡಿದೆ. ಹೀಗಾಗಿ, ಅವರೇ ಮುಂದಿನ ಚಾನ್ಸಲರ್ ಆಗುವುದು ಖಚಿತವಾಗಿದೆ.

ಜರ್ಮನಿಯ ಅರ್ಥವ್ಯವಸ್ಥೆ ಸ್ಥಿರಗೊಳಿಸಬೇಕು, ಅಕ್ರಮ ವಲಸಿಗರಿಗೆ ಕಡಿವಾಣ ಹಾಕಬೇಕೆಂಬ ವಿಚಾರಗಳೇ ಚುನಾವಣಾ ಪ್ರಚಾರದಲ್ಲಿ ಪ್ರಾಮುಖ್ಯ ಪಡೆದಿದ್ದವು. ಕೆಲವು ವಾರಗಳಿಂದ ಈಚೆಗೆ ಈ ವಿಚಾರದಲ್ಲಿ ಮೆರ್ಜ್ ಅವರು ಕಠಿಣ ನಿಲುವು ಪ್ರದರ್ಶಿಸಿದ್ದರು.

ಚುನಾವಣಾ ಆಯೋಗವು ಪ್ರಕಟಿಸಿದ ಫಲಿತಾಂಶದಲ್ಲಿ ಸೆಂಟರ್ ರೈಟ್ ಕ್ರಿಶ್ಚಿಯನ್ ಡೆಮಾಕ್ರಟಿಕ್ ಹಾಗೂ ಕನ್ಸರ್ವೇಟಿವ್ ಪೊಲಿಟಿಕಲ್ ಅಲಯನ್ಸ್ (ಸಿಡಿಯು–ಸಿಎಸ್‌ಯು) ಒಕ್ಕೂಟವು ಹೆಚ್ಚಿನ ಕ್ಷೇತ್ರದಲ್ಲಿ ಗೆದ್ದಿವೆ. ಜರ್ಮನಿ ಸಂಸತ್ತಿನ 630 ಕ್ಷೇತ್ರಗಳ ಪೈಕಿ ಮೆರ್ಜ್ ನೇತೃತ್ವದ ಸಿಡಿಯು–ಸಿಎಸ್‌ಯು ಒಕ್ಕೂಟವು 208 ಕ್ಷೇತ್ರಗಳಲ್ಲಿ ಗೆಲುವು ಪಡೆದಿದ್ದರೆ, ಅಲ್ಟರ್ನೇಟಿವ್ ಫಾರ್ ರೈಟ್ (ಎಎಫ್‌ಡಿ) 152ರಲ್ಲಿ ಗೆಲುವು ಪಡೆದುಕೊಂಡಿದೆ. ಈಸ್ಟರ್ ವೇಳೆಗೆ (ಏಪ್ರಿಲ್ 20) ನೂತನ ಸರ್ಕಾರ ರಚಿಸಲಾಗುವುದು ಎಂದು ಮತದಾನದ ದಿನವೇ ಮೆರ್ಜ್ ಘೋಷಿಸಿದ್ದರು.

ಪಕ್ಷ ಸ್ಥಾಪನೆಗೆ ಬಾಂಗ್ಲಾದೇಶದ ವಿದ್ಯಾರ್ಥಿಗಳು ಸಜ್ಜು

ಢಾಕಾ (ರಾಯಿಟರ್ಸ್): ಪ್ರಧಾನಿ ಶೇಖ್ ಹಸೀನಾ ಅವರ ಪದಚ್ಯುತಿಗೆ ಕಾರಣವಾದ ಪ್ರತಿಭಟನೆಯಲ್ಲಿ ಮುಂಚೂಣಿ ಪಾತ್ರ ವಹಿಸಿದ್ದ ಬಾಂಗ್ಲಾದೇಶದ ವಿದ್ಯಾರ್ಥಿಗಳು ಹೊಸ ರಾಜಕೀಯ ಪಕ್ಷ ಕಟ್ಟಲು ಸಜ್ಜಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಾರತಮ್ಯ ವಿರೋಧಿ ವಿದ್ಯಾರ್ಥಿಗಳ ಸಂಘವು ಆರಂಭಿಸಿದ್ದ ಪ್ರತಿಭಟನೆಯು ನಂತರ ವಿದ್ಯಾರ್ಥಿಗಳ ಚಳವಳಿಯಾಗಿ ಮಾರ್ಪಟ್ಟಿತ್ತು. ರಾಷ್ಟ್ರದಾದ್ಯಂತ ದೊಡ್ಡಮಟ್ಟದ ಕ್ರಾಂತಿಗೆ ನಾಂದಿ ಹಾಡಿತ್ತು. ಪರಿಣಾಮವಾಗಿ ಪ್ರಧಾನಿ ಆಗಿದ್ದ ಹಸೀನಾ ಅವರು ಭಾರತಕ್ಕೆ ಪಲಾಯನ ಮಾಡಬೇಕಾಯಿತು.

'ವಿದ್ಯಾರ್ಥಿಗಳ ತಂಡವು ಹೊಸ ರಾಜಕೀಯ ಪಕ್ಷ ಸ್ಥಾಪಿಸುವ ತಮ್ಮ ಯೋಜನೆಯನ್ನು ಅಂತಿಮಗೊಳಿಸಿದ್ದಾರೆ. ಬುಧವಾರ ನಡೆಯಲಿರುವ ಕಾರ್ಯಕ್ರಮ ದಲ್ಲಿ ಪಕ್ಷವನ್ನು ಅನಾವರಣಗೊಳಿಸಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿ ಮುಖಂಡ ಮತ್ತು ಬಾಂಗ್ಲಾ ಮಧ್ಯಂತರ ಸರ್ಕಾರದ ಸಲಹೆಗಾರ ನಹೀದ್ ಇಸ್ಲಾಂ ಅವರು ನೂತನ ಪಕ್ಷದ ಸಂಚಾಲಕರಾಗಿ ಅಧಿಕಾರ ವಹಿಸಿಕೊಳ್ಳುವ ನಿರೀಕ್ಷೆ ಇದೆ. ಹೊಸ ಪಕ್ಷದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಉದ್ದೇಶದಿಂದ ಹಾಲಿ ಹುದ್ದೆಗೆ ರಾಜೀನಾಮೆ ನೀಡುವ ಸಾಧ್ಯತೆಗಳಿವೆ ಎಂದು ಹೇಳಿವೆ. ನಹೀದ್ ಅವರು ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

2025ರ ಅಂತ್ಯದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ ಎಂದು ಹಂಗಾಮಿ ಪ್ರಧಾನಿ ಮಹಮ್ಮದ್ ಯೂನುಸ್ ಅವರು ಹೇಳಿದ್ದಾರೆ.

ಬಾಂಬ್ ಬೆದರಿಕೆ: ರೋಮ್‌ನಲ್ಲಿ ಇಳಿದ ನ್ಯೂಯಾರ್ಕ್–ದೆಹಲಿ ವಿಮಾನ

ನ್ಯೂಯಾರ್ಕ್ (ಪಿಟಿಐ): 'ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ಅಮೆರಿಕ ಏರ್‌ಲೈನ್ಸ್‌ಗೆ ಸೇರಿದ ವಿಮಾನವನ್ನು ಬಾಂಬ್ ಬೆದರಿಕೆ ಕಾರಣದಿಂದಾಗಿ ರೋಮ್‌ನಲ್ಲಿ ಇಳಿಸಲಾಯಿತು. ನಂತರ ವಿಮಾನದಲ್ಲಿ ಕೂಲಂಕಷ ತಪಾಸಣೆ ನಡೆಸಿ, ಮರು ಹಾರಾಟಕ್ಕೆ ಅನುಮತಿ ನೀಡಲಾಗಿದೆ' ಎಂದು ಏರ್‌ಲೈನ್ಸ್ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

'ಮಂಗಳವಾರದ ಹೊತ್ತಿಗೆ ದೆಹಲಿಯತ್ತ ವಿಮಾನ ಪ್ರಯಾಣ ಬೆಳೆಸಲಿದೆ' ಎಂದು ಹೇಳಿದೆ. ಫೆ.22ರಂದು ನ್ಯೂಯಾರ್ಕ್‌ನ ಜಾನ್.ಎಫ್.ಕೆನಡಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅಮೆರಿಕನ್ ಏರ್‌ಲೈನ್ಸ್ –292 ವಿಮಾನವು ದೆಹಲಿಯತ್ತ ಹೊರಟಿತ್ತು. ಮಾರ್ಗಮಧ್ಯದಲ್ಲಿ ಬೆದರಿಕೆಯ ಕಾರಣಕ್ಕೆ ರೋಮ್‌ನತ್ತ ತಿರುಗಿಸಲಾಯಿತು.

'ಭದ್ರತಾ ವಿಚಾರವಾಗಿ ವಿಮಾನ ಸಿಬ್ಬಂದಿಯೇ ಆತಂಕ ವ್ಯಕ್ತಪಡಿಸಿದ್ದರಿಂದ, ಫೆ.23ರ ಸಂಜೆ 5.30ಕ್ಕೆ ರೋಮ್‌ನ ಲಿಯನಾರ್ಡೊ ಡ ವಿಂಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಕೆಳಗಿಳಿಸಲಾಯಿತು' ಎಂದು ಅಮೆರಿಕನ್ ಏರ್‌ಲೈನ್ಸ್ ತಿಳಿಸಿದೆ. 'ವಿಮಾನದಲ್ಲಿದ್ದ 199 ಪ್ರಯಾಣಿಕರು ಹಾಗೂ ಸಿಬ್ಬಂದಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಸಂಸ್ಥೆ ತಿಳಿಸಿದೆ.

ಜೊನಾಥನ್ ರೆನಾಲ್ಡ್ಸ್, ಪೀಯೂಷ್ ಗೋಯಲ್ ಘೋಷಣೆ

ಭಾರತ- ಬ್ರಿಟನ್ ಮುಕ್ತ ವ್ಯಾಪಾರ ಒಪ್ಪಂದ ಮಾತುಕತೆ ಪುನರಾರಂಭ

ನವದೆಹಲಿ (ಪಿಟಿಐ): ಮುಕ್ತ ಮಾರುಕಟ್ಟೆ ಒಪ್ಪಂದದ ಕುರಿತಾದ ಮಾತುಕತೆಯನ್ನು ಪುನರಾರಂಭಿಸುವುದಾಗಿ ಭಾರತ ಮತ್ತು ಬ್ರಿಟನ್ ಸೋಮವಾರ ಘೋಷಿಸಿವೆ.

ದೆಹಲಿಯಲ್ಲಿ ನಡೆದ ಸಭೆಯ ಬಳಿಕ ಬ್ರಿಟನ್‌ನ ವಾಣಿಜ್ಯ ಸಚಿವ ಜೊನಾಥನ್ ರೆನಾಲ್ಡ್ಸ್ ಮತ್ತು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಜಂಟಿ ಹೇಳಿಕೆ ನೀಡಿದ್ದಾರೆ.

ಮುಂದಿನ 10 ವರ್ಷಗಳಲ್ಲಿ ಎರಡೂ ದೇಶಗಳ ನಡುವಿನ ₹20 ಶತಕೋಟಿ ದ್ವಿಪಕ್ಷೀಯ ವ್ಯವಹಾರವು ದ್ವಿಗುಣಗೊಳ್ಳುವ ಅಥವಾ ಮೂರು ಪಟ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಸಚಿವ ಪೀಯೂಷ್ ಗೋಯಲ್ ಹೇಳಿದರು.

ವಲಸೆಯು ಎಂದಿಗೂ ವ್ಯಾಪಾರದ ಭಾಗವಾಗಿಲ್ಲ. ಮುಕ್ತ ವ್ಯಾಪಾರ ಒಪ್ಪಂದದ



ಬ್ರಿಟನ್‌ನ ವಾಣಿಜ್ಯ ಸಚಿವ ಜೊನಾಥನ್ ರೆನಾಲ್ಡ್ಸ್ ಅವರು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರ ಜೊತೆ ನವದೆಹಲಿಯಲ್ಲಿನ ರಾಷ್ಟ್ರೀಯ ಕರಕುಶಲ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದರು – ಪಿಟಿಐ ಚಿತ್ರ

ಮಾತುಕತೆಯಲ್ಲಿ ಭಾರತ ಎಂದಿಗೂ ವಲಸೆಯ ಬಗ್ಗೆ ಪ್ರಸ್ತಾಪಿಸಿಲ್ಲ. ಇನ್ನು ಮುಂದೆಯೂ ಪ್ರಸ್ತಾಪಿಸುವುದಿಲ್ಲ ಎಂದು ಪೀಯೂಷ್ ಗೋಯಲ್ ಹೇಳಿದರು.

ಭಾರತದೊಂದಿಗಿನ ಮುಕ್ತ ವ್ಯಾಪಾರ ಒಪ್ಪಂದವನ್ನು(ಎಫ್‌ಟಿಎ) ಮುಂದುವರಿಸುವುದು ಬ್ರಿಟನ್ ಸರ್ಕಾರದ ಆದ್ಯತೆಯಾಗಿದೆ ಎಂದು ಜೊನಾಥನ್ ರೆನಾಲ್ಡ್ಸ್ ಅವರು ಹೇಳಿದ್ದಾರೆ.

ಕಳೆದ ವರ್ಷ ಉಭಯ ದೇಶಗಳಲ್ಲಿನ ಸಾರ್ವತ್ರಿಕ ಚುನಾವಣೆಯಿಂದ ಸ್ಥಗಿತಗೊಂಡಿದ್ದ ಮಾತುಕತೆಯನ್ನು ಪುನರಾರಂಭಿಸಲಾಗುತ್ತದೆ ಎಂದು ಬ್ರಿಟನ್ ವಾಣಿಜ್ಯ ಮತ್ತು ವ್ಯವಹಾರ ಇಲಾಖೆ(ಡಿಬಿಟಿ) ತಿಳಿಸಿದೆ.

ಬ್ರಿಟನ್‌ನ ಹೂಡಿಕೆ ಸಚಿವ ಪೋಪಿ ಗಸ್ಟ್‌ಫ್‌ಸನ್ ಅವರು ಮುಂಬೈ ಮತ್ತು ಬೆಂಗಳೂರಿನಲ್ಲಿ ಹೂಡಿಕೆದಾರರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಡಿಬಿಟಿ ಹೇಳಿದೆ.

ಎರಡನೇ ಸೋಲಿನೊಡನೆ ಹೊರಬಿದ್ದ ಬಾಂಗ್ಲಾದೇಶ • ಆತಿಥೇಯ ಪಾಕ್ ತಂಡವೂ ನಿರ್ಗಮನ

ರಚಿನ್ ಶತಕ, ಸೆಮಿಗೆ ಕಿವೀಸ್



ರಾವಲ್ಪಿಂಡಿ (ಎಎಫ್‌ಪಿ): ಹಣೆಯ ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಪುನರಾಗಮನ ಮಾಡಿದ ರಚಿನ್ ರವೀಂದ್ರ (112, 105ಎ, 4x12, 6x1) ಸೊಗಸಾದ ಶತಕ ಬಾರಿಸಿದರು. ಅವರ ಶತಕದ ನೆರವಿನಿಂದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ 'ಎ' ಗುಂಪಿನ ಪಂದ್ಯದಲ್ಲಿ ನ್ಯೂಜಿಲೆಂಡ್ ಸೋಮವಾರ 5 ವಿಕೆಟ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿ ಸೆಮಿಫೈನಲ್‌ಗೆ ಮುನ್ನಡೆಯಿತು.

ನ್ಯೂಜಿಲೆಂಡ್ (+0.863) ಸತತ ಎರಡನೇ ಗೆಲುವಿನೊಡನೆ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಭಾರತ (+0.647) ಎರಡೂ ಪಂದ್ಯ ಗೆದ್ದರೂ ನೆಟ್ ರನ್‌ರೇಟ್ ಕಡಿಮೆ ಇದ್ದ ಕಾರಣ ಎರಡನೇ ತಂಡವಾಗಿ ನಾಕೌಟ್‌ಗೆ ಮುನ್ನಡೆಯಿತು. ಎರಡು ಸೋಲುಗಳೊಂದಿಗೆ ಆತಿಥೇಯ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಹೊರಬಿದ್ದಂತಾಯಿತು.

ಆಫ್ ಸ್ಪಿನ್ನರ್ ಮೈಕೆಲ್ ಬ್ರೇಸ್‌ವೆಲ್ ಜೀವನಶ್ರೇಷ್ಠ ಬೌಲಿಂಗ್ (26ಕ್ಕೆ4) ಪ್ರದರ್ಶಿಸಿ ಬಾಂಗ್ಲಾದೇಶ ತಂಡವನ್ನು 9 ವಿಕೆಟ್‌ಗೆ 236 ರನ್‌ಗಳಿಗೆ ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆರಂಭದ ಕುಸಿತದಿಂದ ಚೇತರಿಸಿದ ನ್ಯೂಜಿಲೆಂಡ್ 23 ಎಸೆತಗಳಿರುವಂತೆ 5 ವಿಕೆಟ್‌ಗೆ 240 ರನ್ ಹೊಡೆದು ಗೆಲುವು ಆಚರಿಸಿತು. ನ್ಯೂಜಿಲೆಂಡ್ ಉದ್ಘಾಟನಾ ಪಂದ್ಯದಲ್ಲಿ ಪಾಕಿಸ್ತಾನದ ಮೇಲೆ 60 ರನ್‌ಗಳಿಂದ ಜಯಗಳಿಸಿತ್ತು.

ರವೀಂದ್ರ ಅವರಿಗೆ ಏಕದಿನ ಪಂದ್ಯಗಳಲ್ಲಿ ಇದು ನಾಲ್ಕನೇ ಶತಕ. ಅವರು 30 ರನ್ ದಾಟಿದಾಗ ಈ ಮಾದರಿಯಲ್ಲಿ ಸಾವಿರ ರನ್‌ಗಳ ಮೈಲಿಗಲ್ಲು ದಾಟಿದರು. ಅನುಭವಿಗಳಾದ ವಿಲ್ ಯಂಗ್ (0) ಮತ್ತು ಕೇನ್ ವಿಲಿಯಮ್ಸನ್ (5) ಅವರು 15 ರನ್ ಗಳಾಗುವಷ್ಟರಲ್ಲಿ ನಿರ್ಗಮಿಸಿದ್ದರು. ಆದರೆ ಎರಡು ಉಪಯುಕ್ತ ಜೊತೆಯಾಟಗಳ ಮೂಲಕ ರವೀಂದ್ರ ಅವರು ತಂಡ ಹಳಿ ತಪ್ಪದಂತೆ ನೋಡಿಕೊಂಡರು. ಮೂರನೇ ವಿಕೆಟ್‌ಗೆ ಕಾನ್ವೆ ಜೊತೆ 57 ರನ್ ಸೇರಿಸಿದರಲ್ಲದೇ, ನಾಯಕ ಟಾಮ್ ಲೇಥಮ್ (55, 76ಎ) ಜೊತೆ ಮಹತ್ವದ 129 ರನ್ ಜೊತೆಯಾಟ ವಾಡಿದರು. ಗ್ಲೆನ್ ಫಿಲಿಪ್ಸ್ (ಔಟಾಗದೇ 21) ಮತ್ತು ಬ್ರೇಸ್‌ವೆಲ್ (ಅಜೇಯ 11) ಗೆಲುವಿನ ಔಪಚಾರಿಕತೆ ಮುಗಿಸಿದರು.



ವಿಕೆಟ್ ಪಡೆದ ಸಂಭ್ರಮದಲ್ಲಿ ಮೈಕಲ್ ಬ್ರೇಸ್‌ವೆಲ್ —ಎಎಫ್‌ಪಿ ಚಿತ್ರಗಳು

ಇದಕ್ಕೆ ಮೊದಲು, ಬ್ಯಾಟಿಂಗಿಗೆ ಕಳುಹಿಸಲ್ಪಟ್ಟ ಬಾಂಗ್ಲಾ ಪರ ಆರಂಭ ಆಟಗಾರ ನಜ್ಮುಲ್ ಹುಸೇನ್ ಶಾಂತೊ 77 ರನ್ (110ಎ, 4x9) ಹೊಡೆದರೆ, ಕೆಳಮಧ್ಯಮ ಕ್ರಮಾಂಕದಲ್ಲಿ ಜೇಕರ್ ಅಲಿ 45 ರನ್ ಗಳಿಸಿ ತಂಡ 200 ರನ್‌ಗಳ ಮೊತ್ತ ದಾಟಲು ಕಾರಣರಾದರು.

ಮೊದಲ ವಿಕೆಟ್‌ಗೆ ತಂಜಿದ್ ಹುಸೇನ್ (24, 24ಎ) ಮತ್ತು ಶಾಂತೊ ಎಂಟು ಓವರುಗಳಲ್ಲಿ 45 ರನ್ ಸೇರಿಸಿದ್ದರು. ಆದರೆ 34 ವರ್ಷ ವಯಸ್ಸಿನ ಬ್ರೇಸ್‌ವೆಲ್ ಮೊದಲ ಓವರಿನಲ್ಲೇ ಈ ಜೊತೆಯಾಟ ಮುರಿದರು. ತಂಜಿದ್ ಮಿಡ್‌ವಿಕೆಟ್‌ನಲ್ಲಿ ಕೇನ್ ವಿಲಿಯಮ್ಸ್ ಅವರಿಗೆ ಕ್ಯಾಚಿತ್ತರು.

ವೇಗದ ಬೌಲರ್ ವಿಲ್ ಓ ರೋರ್ಕ್ ನಂತರ ಮೆಹಿದಿ ಹಸನ್ ಮಿರಾಜ್ (13) ಅವರ ವಿಕೆಟ್ ಪಡೆದರು. ಮಧ್ಯಮ ಕ್ರಮಾಂಕದ ಆಟಗಾರರು ಬ್ರೇಸ್‌ವೆಲ್ ಅವರ ಪರಿಣಾಮಕಾರಿ ಬೌಲಿಂಗ್ ಎದುರು ರನ್ ಗಳಿಸಲು ಪರದಾಡಿದರು. ಬ್ರೇಸ್‌ವೆಲ್ ಮತ್ತೆ ಮೂರು ವಿಕೆಟ್‌ಗಳನ್ನು (ತೌಹಿದ್ ಹೃದಯ್, ಮುಷ್ಫಿಕುರ್ ರಹೀಂ ಮತ್ತು ಮಹಮದುಲ್ಲಾ) ಪಡೆದು ಬಾಂಗ್ಲಾ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಸ್ಕೋರುಗಳು: ಬಾಂಗ್ಲಾದೇಶ: 50 ಓವರುಗಳಲ್ಲಿ 9 ವಿಕೆಟ್‌ಗೆ 236 (ತಂಜಿದ್ ಹಸನ್ 24, ನಜ್ಮುಲ್ ಹುಸೇನ್ ಶಾಂತೊ 77, ಜೇಕರ್ ಅಲಿ 45, ರಿಷದ್ ಹುಸೇನ್ 26; ಮೈಕಲ್ ಬ್ರೇಸ್‌ವೆಲ್ 26ಕ್ಕೆ4, ವಿಲ್ ಓ ರೋರ್ಕ್ 48ಕ್ಕೆ2); ವಿರುದ್ಧ ನ್ಯೂಜಿಲೆಂಡ್: 46.1 ಓವರುಗಳಲ್ಲಿ 5 ವಿಕೆಟ್‌ಗೆ 240 (ಡೆವಾನ್ ಕಾನ್ವೆ 30, ರಚಿನ್ ರವೀಂದ್ರ 112, ಟಾಮ್ ಲೇಥಮ್ 55, ಗ್ಲೆನ್ ಫಿಲಿಪ್ಸ್ ಔಟಾಗದೇ 21). ಪಂದ್ಯದ ಆಟಗಾರ: ಮೈಕಲ್ ಬ್ರೇಸ್‌ವೆಲ್

ರಾವಲ್ಪಿಂಡಿ: ರನ್ ಸುಗ್ಗಿ ನಿರೀಕ್ಷೆ

ಆಸ್ಟ್ರೇಲಿಯಾ– ದಕ್ಷಿಣ ಆಫ್ರಿಕಾ ತಂಡಗಳ ಸೆಣಸಾಟ ಇಂದು

ರಾವಲ್ಪಿಂಡಿ (ಪಿಟಿಐ): ಬಿರುಸಿನ ಬ್ಯಾಟಿಂಗ್ ಕ್ರಮಾಂಕದ ಹೊಂದಿರುವ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು, ಚಾಂಪಿಯನ್ಸ್ ಟ್ರೋಫಿ 'ಬಿ' ಗುಂಪಿನ ಪಂದ್ಯದಲ್ಲಿ ಮಂಗಳವಾರ ಮುಖಾಮುಖಿ ಆಗಲಿವೆ. ಗೆಲ್ಲುವ ತಂಡದ ಸೆಮಿಫೈನಲ್ ಪ್ರವೇಶ ಸುಗಮವಾಗಲಿದೆ.

ಬಲಹೀನ ಆಸ್ಟ್ರೇಲಿಯಾ ತಂಡ ಈ ಟೂರ್ನಿಗೆ ಬಂದಿಳಿದಾಗ, ಕ್ರಿಕೆಟ್ ಪಂಡಿತರು ಆ ತಂಡದಿಂದ ಉತ್ತಮ ಪ್ರದರ್ಶನ ನಿರೀಕ್ಷಿಸಿರಲಿಲ್ಲ. ಆದರೆ ಲಾಹೋರ್‌ನಲ್ಲಿ ಇಂಗ್ಲೆಂಡ್ ಎದುರು ದಾಖಲೆ ಮೊತ್ತವನ್ನು ಬೆನ್ನಟ್ಟಿ ಕಾಂಗರೂ ಪಡೆ ಪರಾಕ್ರಮ ಮೆರೆದಿದೆ. ಐಸಿಸಿ ಟೂರ್ನಿಯಲ್ಲಿ ಪುಟಿದೇಳುವ ತನ್ನ ಸಾಮರ್ಥ್ಯವನ್ನು ಮತ್ತೊಮ್ಮೆ ಪ್ರದರ್ಶಿಸಿದೆ.

ಲಾಹೋರ್‌ನಲ್ಲಿ ಇಬ್ಬನಿಯು, ಮೊತ್ತ ಬೆನ್ನಟ್ಟುವ ತಂಡಕ್ಕೆ ನೆರವಾಗಿತ್ತು. ರಾವಲ್ಪಿಂಡಿಯ ಪಿಂಡಿ ಕ್ರೀಡಾಂಗಣದಲ್ಲೂ ಇಂತಹದ್ದೇ ಪರಿಸ್ಥಿತಿಯಿದೆ.

ಆಸ್ಟ್ರೇಲಿಯಾ ತಂಡವು ಘಟಾನುಘಟಿ ಬೌಲರ್‌ಗಳಾದ ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್, ಜೋಶ್ ಹೇಜಲ್‌ವುಡ್ ಅವರಿಲ್ಲದೇ ಟೂರ್ನಿಗೆ ಬಂದಿತ್ತು. ಆದರೆ ಇಂಗ್ಲೆಂಡ್ ಒಡ್ಡಿದ ದೊಡ್ಡ ಸವಾಲಿನ ಎದುರು ತೋರಿದ ದಿಟ್ಟ ಬ್ಯಾಟಿಂಗ್, ಬೌಲರ್‌ಗಳ ಆ ಕೊರತೆಯನ್ನು ಮರೆಮಾಚಿತು. ನಾಯಕ ಸ್ಟೀವ್ ಸ್ಮಿತ್ ಮತ್ತು ಟ್ರಾವಿಸ್ ಹೆಡ್ ಮಾತ್ರ ಆ ಪಂದ್ಯದಲ್ಲಿ ವಿಫಲರಾಗಿದ್ದರು. ಅವರೂ ಹರಿಣಗಳ ಪಡೆ ಎದುರು ಉತ್ತಮವಾಗಿ ಆಡಿದಲ್ಲಿ ಆಸ್ಟ್ರೇಲಿಯಾ ಸಾಮರ್ಥ್ಯ ಇನ್ನಷ್ಟು ಹೆಚ್ಚಬಹುದು.



ಸ್ಟೀವ್ ಸ್ಮಿತ್



ತೆಂಬಾ ಬವುಮಾ

ಆದರೆ ಅನನುಭವಿ ಬೌಲಿಂಗ್ ವಿಭಾಗ ಸುಧಾರಿತ ಪ್ರದರ್ಶನ ನೀಡಬೇಕಾಗಿದೆ. ಎಡಗೈ ವೇಗಿ ಸ್ಪೆನ್ಸರ್ ಜಾನ್ಸನ್ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೌಲಿಂಗ್ ಮಾಡಿಲ್ಲ. ಆರನೇ ಬೌಲರ್ ಪಾತ್ರವನ್ನು ಲಾಬುಷೇನ್ ಮತ್ತು ಶಾರ್ಟ್ ಹಂಚಿಕೊಳ್ಳಬಹುದು.

ಆಸ್ಟ್ರೇಲಿಯಾಕ್ಕೆ ಶತಕ ವೀರ ಜೋಸ್ ಇಂಗ್ಲಿಸ್ ಅವರ ರೀತಿ ದಕ್ಷಿಣ ಆಫ್ರಿಕಾ ತಂಡಕ್ಕೆ ರಯಾನ್ ರಿಕೆಲ್ಟನ್ ಅವರು ಆಟವಾಡಿದ್ದಾರೆ. ಅಫ್ಗಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ರಿಕೆಲ್ಟನ್ ನಾಯಕ ತೆಂಬಾ ಬವುಮಾ, ರಸಿ ವಾನ್ ಡರ್ ಡಸೆನ್, ಏಡನ್ ಮರ್ಕರಂ ಅರ್ಧ ಶತಕ ಬಾರಿಸಿದ್ದು ಒಳ್ಳೆಯ ಲಯದಲ್ಲಿದ್ದಾರೆ.

ಈ ಹಿಂದಿನ ಪಂದ್ಯವನ್ನು ಗಾಯಾಳಾಗಿ ಕಳೆದುಕೊಂಡಿದ್ದ ಬ್ಯಾಟರ್ ಹೆನ್ರಿಚ್ ಕ್ಲಾಸೆನ್, ಮಂಗಳವಾರ ಆಡಲಿದ್ದಾರೆಯೇ ಎಂಬುದು ಖಚಿತವಾಗಿಲ್ಲ. ಆದರೆ ಕಗಿಸೊ ರಬಾಡಾ ಅವರ ನೇತೃತ್ವದ ವೇಗದ ದಾಳಿ ಎದುರಾಳಿ ತಂಡಕ್ಕಿಂತ ಪ್ರಬಲವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್



ಗೆಲುವಿನ ಸಂಭ್ರಮದಲ್ಲಿ ಯು.ಪಿ. ವಾರಿಯರ್ಸ್ ತಂಡದ ಸೋಫಿ ಎಕ್ಲೆಸ್ಟೋನ್ ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ತವರಿನಂಗಳದಲ್ಲಿ ಆರ್‌ಸಿಬಿಗೆ 2ನೇ ಆಘಾತ • ಪೆರಿ, ವೈಟ್ ಅರ್ಧಶತಕ • ರೋಚಕ ಟೈ

ವಾರಿಯರ್ಸ್‌ಗೆ ಜಯ ತಂದ 'ಸೂಪರ್' ಸೋಫಿ

• ಗಿರೀಶ ದೊಡ್ಡಮನಿ

ಮಹಿಳಾ ಪ್ರೀಮಿಯರ್ ಲೀಗ್

ಬೆಂಗಳೂರು: ಎಡಗೈ ಸ್ಪಿನ್ನರ್ ಸೋಫಿ ಎಕ್ಲೆಸ್ಟೋನ್ ಸೋಮವಾರ ರಾತ್ರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕೈಯಿಂದ ಗೆಲುವನ್ನು ಕಸಿದುಕೊಂಡರು. ಯು.ಪಿ. ವಾರಿಯರ್ಸ್ ತಂಡಕ್ಕೆ ಸೂಪರ್ ಓವರ್‌ನಲ್ಲಿ 4 ರನ್‌ಗಳ ಜಯದ ಕಾಣಿಕೆ ನೀಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ 22 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಿಗೆ ರೋಚಕ ರಸದೌತಣ ನೀಡಿದ ಪಂದ್ಯದಲ್ಲಿ ಸ್ಮೃತಿ ಮಂದಾನ ಬಳಗವು ನಿರಾಶೆ ಅನುಭವಿಸಿತು.

ಯು.ಪಿ. ವಾರಿಯರ್ಸ್ ತಂಡವು ನಿಗದಿಯ ಓವರ್‌ಗಳಲ್ಲಿ 181 ರನ್ ಗೆಲುವಿನ ಗುರಿ ಬೆನ್ನಟ್ಟಿತ್ತು. ಆರ್‌ಸಿಬಿಯ ಸ್ನೇಹ ರಾಣಾ (27ಕ್ಕೆ3) ಮತ್ತು ರೇಣುಕಾ ಠಾಕೂರ್ (36ಕ್ಕೆ2) ಅವರ ದಾಳಿಯ ಮುಂದೆ 19 ಓವರ್‌ಗಳಲ್ಲಿ 163 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿತು. ಇದರಿಂದಾಗಿ ಕೊನೆಯ ಓವರ್‌ನಲ್ಲಿ 18 ರನ್‌ಗಳನ್ನು ಹೊಡೆಯಬೇಕಿತ್ತು ಆ ಓವರ್ ಹಾಕಿದ ರೇಣುಕಾ ಅವರಿಗೆ ಸೋಫಿ ಬೆಂಡೆತ್ತಿದ್ದರು. ಮೊದಲ ಐದು ಎಸೆತಗಳಲ್ಲಿ ಎರಡು ಸಿಕ್ಸರ್, ಒಂದು ಬೌಂಡರಿ ಮತ್ತು ಒಂದು ರನ್ ಗಳಿಸಿದರು. ಇದರಿಂದಾಗಿ ಕೊನೆಯ ಎಸೆತದಲ್ಲಿ ಒಂದು ರನ್ ಮಾತ್ರ ಬೇಕಿತ್ತು.

ಆರ್‌ಸಿಬಿ ವಿಕೆಟ್‌ಕೀಪರ್ ರಿಚಾ ಘೋಷ್ ಚಾಣಾಕ್ಷತೆಯಿಂದಾಗಿ ಸೋಫಿ ರನ್ ಔಟ್ ಆದರು. ಆದರೆ ಪಂದ್ಯ ಟೈ ಆಯಿತು. ಸೂಪರ್ ಓವರ್‌ನಲ್ಲಿ ಯು.ಪಿ ತಂಡವು 8 ರನ್ ಗಳಿಸಿತು. ಸೂಪರ್ ಓವರ್ ಬೌಲಿಂಗ್ ಮಾಡಿದ ಸೋಫಿ ಅವರು ಸ್ಮೃತಿ ವಿಕೆಟ್ ಗಳಿಸಿದ್ದು ಅಲ್ಲದೇ ಕೇವಲ 4 ರನ್ ನೀಡಿದರು. ಆರ್‌ಸಿಬಿಯು ತವರಿನಂಗಳದಲ್ಲಿ ಸತತ ಎರಡನೇ ಪಂದ್ಯ ಸೋತಿತು.

ಪೆರಿ–ವೈಟ್ ಜೊತೆಯಾಟ: ಟಾಸ್ ಗೆದ್ದ ಯು.ಪಿ. ವಾರಿಯರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ ಮಂದಾನ (6 ರನ್) ಮತ್ತೊಮ್ಮೆ ದೊಡ್ಡ ಇನಿಂಗ್ಸ್ ಕಟ್ಟುವಲ್ಲಿ ವಿಫಲರಾದರು. ಇನ್ನೊಂದು ಬದಿಯಲ್ಲಿದ್ದ ಇಂಗ್ಲೆಂಡ್ ಆಟಗಾರ್ತಿ ವೈಟ್ (57; 41ಎ, 4X4, 6X3) ಅವರೊಂದಿಗೆ ಸೇರಿಕೊಂಡ ಆಸ್ಟ್ರೇಲಿಯಾ ತಾರೆ ಎಲಿಸ್ ಪೆರಿ (ಔಟಾಗದೇ 90; 56ಎ, 4X9, 6X3) ಬೌಲರ್‌ಗಳನ್ನು ದಂಡಿಸಿದರು.

ಇಲ್ಲಿ ಕಳೆದ ಶುಕ್ರವಾರ ನಡೆದಿದ್ದ ಪಂದ್ಯದಲ್ಲಿಯೂ ಮಿಂಚಿದ್ದ ಪೆರಿ ಈ ಪಂದ್ಯದಲ್ಲಿ ಮತ್ತೊಂದು ಅಬ್ಬರದ ಅರ್ಧಶತಕ ಬಾರಿಸಿದರು. ಅವರಿಗೆ ಆರಂಭಿಕ ಬ್ಯಾಟರ್ ವೈಟ್ ಜೊತೆ ನೀಡಿದರು. ಇವರಿಬ್ಬರೂ 2ನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 94 ರನ್‌ಗಳಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 180 ರನ್ ಗಳಿಸಿತು. 160ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ ಪೆರಿ 36 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ವೈಟ್ ಆಗಿನ್ನೂ 36 ರನ್ ಗಳಿಸಿದ್ದರು. ಇದರ ನಂತರ ಇಬ್ಬರೂ ಆಟದ ವೇಗ ಹೆಚ್ಚಿಸಿಕೊಂಡರು. ತಾವೆದುರಿಸಿದ 36ನೇ ಎಸೆತದಲ್ಲಿ ಲಾಂಗ್ ಆನ್‌ಗೆ ಸಿಕ್ಸರ್ ಎತ್ತಿದ ವೈಟ್ ಅರ್ಧಶತಕ ಪೂರೈಸಿದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 6ಕ್ಕೆ180 (ವೈಟ್ ಹಾಜ್ 57, ಎಲಿಸ್ ಪೆರಿ ಔಟಾಗದೇ 90, ಷಿನೆಲ್ ಹೆನ್ರಿ 34ಕ್ಕೆ1, ದೀಪ್ತಿ ಶರ್ಮಾ 42ಕ್ಕೆ1). ಯು.ಪಿ. ವಾರಿಯರ್ಸ್: 20 ಓವರ್‌ಗಳಲ್ಲಿ 180 (ಕಿರಣ್ ನವಗಿರೆ 24, ದೀಪ್ತಿ ಶರ್ಮಾ 25, ಶ್ವೇತಾ ಸೆಹ್ರಾವತ್ 31, ಸೋಫಿ ಎಕ್ಲೆಸ್ಟೋನ್ 33, ರೇಣುಕಾ ಸಿಂಗ್ 36ಕ್ಕೆ2, ಕಿಮ್ ಗಾರ್ಥ್ 40ಕ್ಕೆ2, ಸ್ನೇಹ ರಾಣಾ 27ಕ್ಕೆ3, ಎಲಿಸ್ ಪೆರಿ 10ಕ್ಕೆ2) ಫಲಿತಾಂಶ: ಟೈ. ಸೂಪರ್ ಓವರ್‌ನಲ್ಲಿ ಯು.ಪಿ ವಾರಿಯರ್ಸ್‌ಗೆ 4 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಸೋಫಿ ಎಕ್ಲೆಸ್ಟೋನ್.

ಇಂದಿನ ಪಂದ್ಯ
ಡೆಲ್ಲಿ ಕ್ಯಾಪಿಟಲ್ಸ್ Vs ಗುಜರಾತ್ ಜೈಂಟ್ಸ್
ಪಂದ್ಯ ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಕೊಹ್ಲಿಗೆ ಕವರ್ ಡ್ರೈವ್ ಖುಷಿ

ದುಬೈ (ಪಿಟಿಐ): ಭಾರತದ ಬ್ಯಾಟಿಂಗ್ ಮಾಸ್ಟರ್ ವಿರಾಟ್ ಕೊಹ್ಲಿ ಅಂತೂ ಇಂತೂ ಲಯಕ್ಕೆ ಮರಳಿದರು. ತಮ್ಮ ನೆಚ್ಚಿನ ಕವರ್ ಡ್ರೈವ್ ಪ್ರಯೋಗಿಸುವಲ್ಲಿಯೂ ಯಶಸ್ವಿಯಾಗಿದ್ದಾರೆ.

ಕಳೆದ ಕೆಲವು ತಿಂಗಳುಗಳಿಂದ ಇದೇ ಕವರ್ ಡ್ರೈವ್ ಪ್ರಯೋಗ ಮಾಡುವಾಗಲೇ ವಿಕೆಟ್ ಕಳೆದುಕೊಂಡು 'ಕ್ಯಾಚ್–22' ಸಮಸ್ಯೆ ಅನುಭವಿಸಿದ್ದರು. ಆದರೆ ಭಾನುವಾರ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಅವರು ಕವರ್ ಡ್ರೈವ್ ಆಡುವಲ್ಲಿ ಯಶಸ್ವಿಯಾದರು. 111 ಎಸೆತಗಳಲ್ಲಿ ಶತಕ ದಾಖಲಿಸಿದರು. ಭಾರತ ತಂಡವು 6 ವಿಕೆಟ್‌ಗಳಿಂದ ಗೆದ್ದು ಸೆಮಿಫೈನಲ್‌ನತ್ತ ನಡೆಯಿತು.

'ಕೆಲವು ವರ್ಷಗಳಿಂದ ಕವರ್ ಡ್ರೈವ್ (ಕ್ಯಾಚ್ 22) ಆಡುವುದು ನನ್ನ ದೌರ್ಬಲ್ಯವಾಗಿಬಿಟ್ಟಿತ್ತು. ಆದರೆ ಇವತ್ತು ಆ ಹೊಡೆತದ ಮೂಲಕವೇ ಬಹಳಷ್ಟು ರನ್‌ಗಳನ್ನು ಗಳಿಸಿದೆ' ಎಂದು ಬಿಸಿಸಿಐ ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ವಿಡಿಯೊದಲ್ಲಿ ಅವರು ಹೇಳಿದ್ದಾರೆ.



'ಕ್ರೀಸ್‌ಗೆ ಬಂದ ಆರಂಭದಲ್ಲಿ ಹೊಡೆದ ಎರಡು ಬೌಂಡರಿಗಳು ಕವರ್ ಡ್ರೈವ್ ನಿಂದಲೇ ಬಂದಿದ್ದವು. ವಿಶ್ವಾಸ ಕುದುರಿತು. ಅಂತಹದೇ ಹೊಡೆತಗಳನ್ನು ಪ್ರಯೋಗಿಸುವುದನ್ನು ಮುಂದುವರಿಸಿದೆ. ಇದರಿಂದಾಗಿ ಆಟದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತು. ವೈಯಕ್ತಿಕವಾಗಿನ ನನಗೆ ಇದು ಉತ್ತಮ ಇನಿಂಗ್ಸ್ ಮತ್ತು ತಂಡಕ್ಕೂ ದೊಡ್ಡ ಜಯ' ಎಂದು ಕೊಹ್ಲಿ ಸಂತಸ ವ್ಯಕ್ತಪಡಿಸಿದರು.

ಶಿಶು ಮಾರಾಟ ಐವರ ಬಂಧನ

ಒಂದನೇ ಪುಟದಿಂದ...

ಮಾಗಡಿಯ 21 ವರ್ಷದ ಅವಿವಾಹಿತ ಯುವತಿಗೆ ಕುಣಿಗಲ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಫೆ. 20ರಂದು ಹೆರಿಗೆಯಾಗಿತ್ತು. ತುಂಬು ಗರ್ಭಿಣಿ ಆಗಿದ್ದ ಯುವತಿಯನ್ನು ಆಕೆಯ ಪ್ರಿಯಕರ ಶ್ರೀನಂದ ಆಸ್ಪತ್ರೆಗೆ ಸೇರಿಸಿದ್ದ.

ಇನ್ನೂ ಮದುವೆಯಾಗದ ಕಾರಣ ಮಗುವನ್ನು ಮನೆಗೆ ಕರೆದೊಯ್ಯಲು ಯುವತಿ ನಿರಾಕರಿಸಿದ್ದಳು. ಆಗ ಆಕೆಯ ಪ್ರಿಯಕರನ ಸಂಬಂಧಿ ಮಾಗಡಿಯ ಜ್ಯೋತಿ ಎಂಬಾಕೆ ಕುಣಿಗಲ್ ತಾಲ್ಲೂಕು ಕೊತ್ತಗೆರೆ ಅಂಗನವಾಡಿ ಕಾರ್ಯಕರ್ತೆ ಎನ್.ಜ್ಯೋತಿ ಎಂಬುವರನ್ನು ಸಂಪರ್ಕಿಸಿ ಮಗು ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದರು.

ಅಂಗನವಾಡಿ ಕಾರ್ಯಕರ್ತೆ ಕೊತ್ತಗೆರೆಯ ಮುಬಾರಕ್ ಪಾಷಾ ಎಂಬುವರನ್ನು ಸಂಪರ್ಕಿಸಿದ್ದರು. ಪಾಷಾ ₹60 ಸಾವಿರ ನೀಡಿ ಫೆ.22ರಂದು ಆಸ್ಪತ್ರೆ ಆವರಣದಲ್ಲಿ ಮಗು ಖರೀದಿಸಿದ್ದರು.

ಮನೆಗೆ ವಾಪಸ್ ತೆರಳಿದ್ದ ಯುವತಿ ಆರೋಗ್ಯದಲ್ಲಿ ವ್ಯತ್ಯಾಸವಾಗಿದೆ. ಈ ಬಗ್ಗೆ ಕುಟುಂಬಸ್ಥರು ಪ್ರಶ್ನಿಸಿದಾಗ ತನಗೆ ಹೆರಿಗೆಯಾದ ವಿಷಯವನ್ನು ಆಕೆ ಪೋಷಕರಿಗೆ ತಿಳಿಸಿದ್ದಾಳೆ. ಆಗ ಪೋಷಕರು ಮಗು ವಾಪಸ್ ಪಡೆಯಲು ಪೊಲೀಸ್ ಠಾಣೆ ಮೆಟ್ಟಿಲು ಹತ್ತಿದ್ದಾರೆ.

'ಮದುವೆ ಆಗುವುದಾಗಿ ನಂಬಿಸಿದ ಯುವಕ ಮೋಸ ಮಾಡಿದ್ದಾನೆ. ನಮಗೆ ಮಗು ಕೊಡಿಸಿ' ಎಂದಿದ್ದಾರೆ. ಪೊಲೀಸರು ಠಾಣೆಗೆ ಕರೆ ತಂದು ವಿಚಾರಣೆ ನಡೆಸಿದಾಗ ಇಡೀ ಪ್ರಕರಣ ಹೊರ ಬಂದಿದೆ.

ತೆಲಂಗಾಣ: ಮುಂದುವರಿದ ರಕ್ಷಣಾ ಕಾರ್ಯಾಚರಣೆ

ಕಾರ್ಮಿಕರು ಬದುಕುಳಿದಿರುವ ಸಾಧ್ಯತೆ ಕ್ಷೀಣ

ನಾಗರ್‌ಕರ್ನೂಲ್ (ತೆಲಂಗಾಣ) (ಪಿಟಿಐ): ತೆಲಂಗಾಣದ ನಾಗರ್‌ಕರ್ನೂಲ್ ಜಿಲ್ಲೆಯಲ್ಲಿ ಸುರಂಗದೊಳಗೆ ಸಿಲುಕಿರುವ ಎಂಟು ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲು ರಕ್ಷಣಾ ತಂಡಗಳು ಕಾರ್ಯಾಚರಣೆ ಮುಂದುವರಿಸಿವೆ.

ಅದರೆ ದುರಂತ ನಡೆದು ಮೂರು ದಿನಗಳು ಕಳೆದರೂ ರಕ್ಷಣಾ ಕಾರ್ಯಾಚರಣೆಯಲ್ಲಿ ಹೆಚ್ಚಿನ ಪ್ರಗತಿ ಕಂಡುಬಂದಿಲ್ಲ. ನಾಗರ್‌ಕರ್ನೂಲ್ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿರುವ ಶ್ರೀಶೈಲಂ ಎಡ ದಂಡೆ ಕಾಲುವೆಯ (ಎಸ್‌ಎಲ್‌ಬಿಸಿ) ಸುರಂಗದ ಚಾವಣಿಯ ಒಂದು ಭಾಗ ಶನಿವಾರ ಕುಸಿದಿತ್ತು.

ಸೇನೆ ಮತ್ತು ಎನ್‌ಡಿಆರ್‌ಎಫ್ ಒಳಗೊಂಡಂತೆ ಹಲವು ತಂಡಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿವೆ. ಆದರೆ ಸುರಂಗದಿಂದ ಹರಿದು ಬರುತ್ತಿರುವ ಕೆಸರು ಮಿಶ್ರಿತ ನೀರಿನ ಪ್ರಮಾಣ ಹೆಚ್ಚುತ್ತಿದ್ದು, ರಕ್ಷಣಾ ತಂಡಗಳಿಗೆ ಸವಾಲಾಗಿ ಪರಿಣಮಿಸಿದೆ. ದೊಡ್ಡ ಯಂತ್ರಗಳನ್ನು ಬಳಸಿದರೆ ಇನ್ನಷ್ಟು ಮಣ್ಣು ಕುಸಿದು ಬೀಳುವ ಆತಂಕ ಎದುರಾಗಿದೆ.

ತಲಾ ಇಬ್ಬರು ಎಂಜಿನಿಯರ್‌ಗಳು ಮತ್ತು ಯಂತ್ರ ಆಪರೇಟರ್‌ಗಳು ಹಾಗೂ ನಾಲ್ವರು ಕಾರ್ಮಿಕರು ಸುರಂಗದಲ್ಲಿ ಸಿಲುಕಿದ್ದಾರೆ. ಇವರು ಉತ್ತರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್ ಹಾಗೂ ಜಾರ್ಖಂಡ್ ರಾಜ್ಯಗಳಿಗೆ ಸೇರಿದವರು.

ತೆಲಂಗಾಣ ಸಾರಿಗೆ ಸಚಿವ ಕೆ.ವೆಂಕಟ ರೆಡ್ಡಿ ಅವರು ಸೋಮವಾರ ಸ್ಥಳಕ್ಕೆ ಭೇಟಿ ನೀಡಿದರಲ್ಲದೆ, ಕಾರ್ಮಿಕರನ್ನು ಸುರಕ್ಷಿತವಾಗಿ ಹೊರ ತರುವ ವಿಶ್ವಾಸ ವ್ಯಕ್ತಪಡಿಸಿದರು.

'ಇದು ದುರದೃಷ್ಟಕರ ಘಟನೆ. ಈ ಎಂಟು ಜನರು ಬದುಕಿ ಬರಲಿ ಎಂದು ದೇವರಲ್ಲಿ ಬೇಡಿಕೊಳ್ಳುವೆ. ಕಾರ್ಮಿಕರನ್ನು ರಕ್ಷಿಸಲು ಎಲ್ಲ ಪ್ರಯತ್ನ ನಡೆಸಲಾಗುವುದು. ಅವರ ಜೀವಕ್ಕೆ ಯಾವುದೇ ಅಪಾಯವಾಗದಿರಲಿ ಎಂದು ನಾನು ಶ್ರೀಶೈಲ ಮಲ್ಲಣ್ಣ ದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದು ಹೇಳಿದರು.

ಬದುಕುಳಿದಿರುವ ಸಾಧ್ಯತೆ ಕ್ಷೀಣ: 'ಸುರಂಗದಲ್ಲಿ ಸಿಲುಕಿರುವ ಎಂಟು ಕಾರ್ಮಿಕರು ಬದುಕುಳಿದಿರುವ ಸಾಧ್ಯತೆ ಕ್ಷೀಣವಾಗಿದ್ದು, ಅವರನ್ನು ತಲುಪಲು ಎಲ್ಲ ರೀತಿಯ ಪ್ರಯತ್ನ ನಡೆಸಲಾಗುವುದು' ಎಂದು ಸಚಿವ ಜೂಪಲ್ಲಿ ಕೃಷ್ಣ ರಾವ್ ಅವರು ಸೋಮವಾರ ಬೆಳಿಗ್ಗೆ ಹೇಳಿಕೆ ನೀಡಿದ್ದಾರೆ.



ರಕ್ಷಣಾ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದ ಎನ್‌ಡಿಆರ್‌ಎಫ್ ಸಿಬ್ಬಂದಿ ಎಎಫ್‌ಪಿ ಚಿತ್ರ

ಜೀವಂತವಾಗಿ ಬರುವ ವಿಶ್ವಾಸ: ನಿರ್ಮಲ್ ಸಾಹು

'ಸುರಂಗದಲ್ಲಿ ಸಿಲುಕಿರುವ ನಮ್ಮ ಸಹೋದ್ಯೋಗಿಗಳನ್ನು ರಕ್ಷಣಾ ತಂಡದವರು ಸುರಕ್ಷಿತವಾಗಿ ಹೊರತರುವ ವಿಶ್ವಾಸ ಇದೆ. ಅವರನ್ನು ಜೀವಂತವಾಗಿ ನೋಡಬೇಕು ಎಂಬುದೇ ನಮ್ಮ ಬಯಕೆ' ಎಂದು ದುರಂತದಿಂದ ಪಾರಾಗಿ ಬಂದ ಕಾರ್ಮಿಕರಲ್ಲಿ ಒಬ್ಬರಾದ ನಿರ್ಮಲ್ ಸಾಹು ಹೇಳಿದ್ದಾರೆ.

'ಫೆ.22 ರಂದು ಬೆಳಿಗ್ಗೆ ಸುರಂಗದ ಒಳ ಹೋದಾಗ, ಚಾವಣಿಯ ಒಂದು ಭಾಗದಿಂದ ನೀರು ಸೋರಲು ಆರಂಭಿಸಿತು. ಸಡಿಲವಾದ ಮಣ್ಣು ಕೂಡಾ ಬೀಳಲು ಶುರುವಾಯಿತು. ಅಪಾಯ ಅರಿತ ನಾವು ತಕ್ಷಣವೇ ಹೊರಗೆ ಓಡಿ ಬಂದೆವು. ಆದರೆ ಎಂಟು ಮಂದಿಗೆ ಹೊರಗೆ ಬರಲು ಸಾಧ್ಯವಾಗಲಿಲ್ಲ' ಎಂದು ನಡೆದ ಘಟನೆಯನ್ನು ವಿವರಿಸಿದರು.

ಅಪಘಾತ: ಆರು ಮಂದಿ ಸಾವು

ಒಂದನೇ ಪುಟದಿಂದ...

'ಎಲ್ಲರೂ ಫೆ. 18ರಂದು ಪ್ರಯಾಗ ರಾಜ್‌ಗೆ ತೆರಳಿದ್ದರು. ಪುಣ್ಯಸ್ನಾನ ಮಾಡಿ, ಊರಿಗೆ ಮರಳುತ್ತಿದ್ದರು. ಮಧ್ಯಪ್ರದೇಶದ ಜಬಲ್‌ಪುರದ ಖಿತೌಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ನಸುಕಿನ 5ಕ್ಕೆ ಅಪಘಾತ ಸಂಭವಿಸಿದೆ. 8 ಜನರಿದ್ದ ಜೀಪ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಮಧ್ಯದ ವಿಭಜಕಕ್ಕೆ ಡಿಕ್ಕಿ ಹೊಡೆಯಿತು. ವಾಹನ ಪಲ್ಟಿಯಾಗಿ ಅವಘಡ ಸಂಭವಿಸಿದೆ' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದ್ದಾರೆ.

ಮೂರು ಆಂಬುಲೆನ್ಸ್‌ಗಳಲ್ಲಿ ಆರೂ ಮಂದಿಯ ಶವಗಳನ್ನು ಅಲ್ಲಿಂದ ರವಾನಿಸಲಾಗುತ್ತಿದೆ. ಮಂಗಳವಾರ ಮಧ್ಯಾಹ್ನ 3ರ ಸುಮಾರಿಗೆ ಸ್ವಗ್ರಾಮ ತಲುಪುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಪರಿಚಯಸ್ಥರು: ಮೃತರು ಪರಸ್ಪರ ಪರಿಚಯಸ್ಥರಾಗಿದ್ದರು. ವಿರೂಪಾಕ್ಷ ಗುಮತಿ ಮತ್ತು ಬಸವರಾಜ ಕುರಟ್ಟಿ ಗೋಕಾಕದಲ್ಲಿ ಜವಳಿ ವರ್ತಕರಾಗಿದ್ದರು. ಬಸವರಾಜ ದೊಡಮನಿ ಮತ್ತು ಈರಣ್ಣ ಶೇಬಿನಕಟ್ಟಿ ಸಾರಿಗೆ ಸಂಸ್ಥೆ ಬಸ್ ಚಾಲಕರಾಗಿದ್ದರು. ಬಾಲಚಂದ್ರ ನಾರಾಯಣ ಗೌಡರ ಅವರು ವೃತ್ತಿಯಿಂದ ಫ್ಯಾಬ್ರಿಕೇಟರ್ ಆಗಿದ್ದರು.



ವಿರೂಪಾಕ್ಷ



ಬಸವರಾಜ



ಬಸವರಾಜ ಶಿವಪ್ಪ



ಬಾಲಚಂದ್ರ



ಸುನೀಲ



ಈರಣ್ಣ

ಠಾಣೆಗೆ ಬಂದ ಸಂತ್ರಸ್ತೆ ಮೇಲೆ ಅತ್ಯಾಚಾರ

ಒಂದನೇ ಪುಟದಿಂದ...

'ದೂರು ನೀಡಲು ತೆರಳಿದ್ದ ಸಂತ್ರಸ್ತೆಯನ್ನು ಕಾನ್‌ಸ್ಟೆಬಲ್ ಅರುಣ್ ಪರಿಚಯಿಸಿಕೊಂಡು ನ್ಯಾಯ ಕೊಡಿಸುವ ಭರವಸೆ ಜತೆಗೆ ಕೆಲಸ ಕೊಡಿಸುವುದಾಗಿ ನಂಬಿಸಿದ್ದ. ಕಳೆದ ಡಿಸೆಂಬರ್‌ನಲ್ಲಿ ಬಿಟಿಎಂ ಲೇಔಟ್‌ನ ಹೋಟೆಲ್ ಒಂದರ ಕೊಠಡಿಗೆ ಬಾಲಕಿಯನ್ನು ಕರೆಸಿಕೊಂಡ ಕಾನ್‌ಸ್ಟೆಬಲ್, ಮದ್ಯದಲ್ಲಿ ಅಮಲು ಬರುವ ಔಷಧಿ ಬೆರೆಸಿ ಕುಡಿಸಿ, ಅತ್ಯಾಚಾರ ಎಸಗಿದ್ದಾನೆ. ಈ ಬಗ್ಗೆ ಯಾರಿಗಾದರೂ ತಿಳಿಸಿದರೆ ತನ್ನ ಬಳಿ ಇರುವ ಖಾಸಗಿ ವಿಡಿಯೊಗಳನ್ನು ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದ್ದಾನೆ' ಎಂದು ಸಂತ್ರಸ್ತೆಯ ತಾಯಿ ದೂರಿನಲ್ಲಿ ಆರೋಪಿಸಿದ್ದಾರೆ.

ಆರೋಪಿಗಳ ವಿರುದ್ಧ ಪೋಕ್ಸೊ ಹಾಗೂ ಬಿಎನ್‌ಎಸ್‌ನ ವಿವಿಧ ಸೆಕ್ಷನ್ ಗಳಡಿ ಪ್ರಕರಣ ದಾಖಲಿಸಿಕೊಂಡ ಮೈಕೋ ಲೇಔಟ್ ಪೊಲೀಸರು ಕೃತ್ಯ ನಡೆದ ಸ್ಥಳ ಆಧರಿಸಿ ಬೊಮ್ಮನಹಳ್ಳಿ ಠಾಣೆಗೆ ಪ್ರಕರಣ ವರ್ಗಾಯಿಸಿದ್ದರು.

ಹಲಾಲ್ ಪ್ರಮಾಣಪತ್ರ ಮೆಹ್ತಾ ಹೇಳಿಕೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಲಾಲ್ ಪ್ರಮಾಣಪತ್ರ ನೀಡುವ ಏಜೆನ್ಸಿಗಳು ಪ್ರಮಾಣಪತ್ರ ನೀಡುವ ಪ್ರಕ್ರಿಯೆಯ ಮೂಲಕ 'ಕೆಲವು ಲಕ್ಷ ಕೋಟಿಗಳಷ್ಟು' ಸಂಪಾದಿಸಿವೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನೀಡಿರುವ ಹೇಳಿಕೆಗೆ ಜಮಾತ್ ಉಲೇಮಾ–ಎ–ಹಿಂದ್ ಹಲಾಲ್ ಟ್ರಸ್ಟ್ ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪ ದಾಖಲಿಸಿದೆ.

ಜನವರಿ 20ರಂದು ನಡೆದ ವಿಚಾರಣೆಯೊಂದರ ಸಂದರ್ಭದಲ್ಲಿ ಮೆಹ್ತಾ ಈ ಹೇಳಿಕೆ ನೀಡಿದ್ದರು. ಈ ಹೇಳಿಕೆಯು ಸಂಪೂರ್ಣವಾಗಿ ತಪ್ಪು ಎಂದು ಟ್ರಸ್ಟ್ ಹೇಳಿದೆ. ಹಲಾಲ್ ಪ್ರಮಾಣಪತ್ರ ಇರುವ ಉತ್ಪನ್ನಗಳನ್ನು ನಿಷೇಧಿಸಿ ಉತ್ತರ ಪ್ರದೇಶ ಸರ್ಕಾರ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಟ್ರಸ್ಟ್ ಕೂಡ ಕೋರ್ಟ್ ಮೆಟ್ಟಿಲೇರಿದೆ.

ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠದ ಎದುರು ಮೆಹ್ತಾ ಅವರು, 'ಬಳಕೆಯಾಗುವ ಸಿಮೆಂಟ್ ಕೂಡ ಹಲಾಲ್ ಪ್ರಮಾಣಪತ್ರದ್ದಾಗಿದೆ, ಕಬ್ಬಿಣದ ಸಲಾಕೆಗಳು ಕೂಡ ಹಲಾಲ್ ಪ್ರಮಾಣಪತ್ರ ಹೊಂದಿದವು' ಎಂದು ಹೇಳಿದ್ದರು.

ಹಲಾಲ್ ಪ್ರಮಾಣಪತ್ರ ನೀಡುವ ಏಜೆನ್ಸಿಗಳು ಹಣ ಪಡೆದುಕೊಳ್ಳುತ್ತಿವೆ, ಈ ಪ್ರಕ್ರಿಯೆಯಲ್ಲಿ ಸಂಗ್ರಹ ಆಗುವ ಒಟ್ಟು ಮೊತ್ತವು ಕೆಲವು ಲಕ್ಷ ಕೋಟಿಗಳಷ್ಟು ಆಗಬಹುದು ಎಂದು ಅವರು ಹೇಳಿದ್ದರು. ಕೆಲವರಿಗೆ ಹಲಾಲ್ ಪ್ರಮಾಣಪತ್ರ ಇರುವ ಉತ್ಪನ್ನಗಳು ಬೇಕು ಎಂಬ ಕಾರಣಕ್ಕೆ ಅದರಲ್ಲಿ ನಂಬಿಕೆ ಇಲ್ಲದವರು ಉತ್ಪನ್ನಕ್ಕೆ ಹೆಚ್ಚಿನ ಮೊತ್ತ ಏಕೆ ನೀಡಬೇಕು ಎಂದು ಮೆಹ್ತಾ ಪ್ರಶ್ನಿಸಿದ್ದರು.

'ನನ್ನದೇ ನಾಯಕತ್ವ'

ಒಂದನೇ ಪುಟದಿಂದ...

'2023ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಸೋಲು ಕಂಡಿದ್ದ 86 ಕ್ಷೇತ್ರಗಳ ಪೈಕಿ ಸುಮಾರು 60 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುವ ಸಾಧ್ಯತೆಗಳಿವೆ ಎಂದು ನಮ್ಮ ಆಂತರಿಕ ಸಮೀಕ್ಷೆಗಳು ವರದಿ ನೀಡಿವೆ. ಹೀಗಾಗಿ ಪರಾಜಿತ ಅಭ್ಯರ್ಥಿಗಳ ಕಷ್ಟ ಆಲಿಸಿ, 2028ರ ಚುನಾವಣೆಗೆ ಸಜ್ಜಾಗುವಂತೆ ಸೂಚನೆ ನೀಡಲಾಗಿದೆ. ಉಳಿದಂತೆ, ಹಿನ್ನಡೆ ಇರುವ ಕ್ಷೇತ್ರಗಳಲ್ಲಿ ಯಾವ ರೀತಿ ಪಕ್ಷವನ್ನು ಕಟ್ಟಬೇಕೆಂದು ಕಾರ್ಯ ಯೋಜನೆ ಸಿದ್ಧಪಡಿಸುತ್ತೇವೆ' ಎಂದರು.

ಈಚೆಗೆ ನಡೆದ ಸರ್ಕಾರಿ ನೌಕರರ ಸಮಾವೇಶದಲ್ಲಿ ಮಾತನಾಡಿದ್ದ ಶಿವಕುಮಾರ್, ತಮ್ಮ ನಾಯಕತ್ವದಲ್ಲಿಯೇ ಮುಂದಿನ ಚುನಾವಣೆ ನಡೆಯಲಿದೆ ಎಂದಿದ್ದರು. ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಶಿವಕುಮಾರ್ ಬಳಿಯಿಂದ ಕಿತ್ತುಕೊಳ್ಳಬೇಕು ಎಂಬ ಉದ್ದೇಶದಲ್ಲಿ ದಲಿತ ಸಚಿವರು ನಡೆಸುತ್ತಿರುವ ಚಟುವಟಿಕೆ ಹಾಗೂ ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬದಲಾವಣೆಯ ಸುದ್ದಿ ಹರಿದಾಡುತ್ತಿರುವ ಹೊತ್ತಿನಲ್ಲಿ ಅವರ ಈ ಹೇಳಿಕೆ ಚರ್ಚೆಗೆ ಗ್ರಾಸವಾಗಿತ್ತು.

ಸಂಕ್ಷಿಪ್ತ ಸುದ್ದಿ

ಕಾಲ್ತುಳಿತ: ಆಯೋಗದ ಅಧಿಕಾರ ವ್ಯಾಪ್ತಿ ವಿಸ್ತರಣೆ

ಲಖನೌ: ಮಹಾ ಕುಂಭಮೇಳದಲ್ಲಿ ಸಂಗಮದ ಸಮೀಪ ಮೌನಿ ಅಮಾವಾಸ್ಯೆಯಂದು ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆಗೆ ರಚಿಸಿದ್ದ ನ್ಯಾಯಾಂಗ ಆಯೋಗದ ಅಧಿಕಾರ ವ್ಯಾಪ್ತಿಯನ್ನು ಉತ್ತರ ಪ್ರದೇಶ ಸರ್ಕಾರ ವಿಸ್ತರಿಸಿದೆ.

ಸಂಗಮ ಸಮೀಪ ನಡೆದಿದ್ದವು ಎಂದು ಎನ್ನಲಾದ ಇತರ ಎರಡು ಕಾಲ್ತುಳಿತ ಪ್ರಕರಣಗಳ ಬಗ್ಗೆಯೂ ಆಯೋಗವು ತನಿಖೆ ನಡೆಸಲಿದೆ ಎಂದು ಸರ್ಕಾರ ತಿಳಿಸಿದೆ.

ಉತ್ತರ ಪ್ರದೇಶ ಸರ್ಕಾರವು ಅಲಹಾಬಾದ್ ಹೈಕೋರ್ಟ್‌ಗೆ ಸೋಮವಾರ ಈ ಮಾಹಿತಿ ನೀಡಿದೆ.

ಉನ್ನತ ಮಟ್ಟದ ತನಿಖೆ ನಡೆಸಲು ನಿರ್ದೇಶನ ನೀಡಬೇಕು ಎಂದು ಕೋರಿ ಪಿಐಎಲ್ ಸಲ್ಲಿಕೆಯಾಗಿದೆ. ಮೌನಿ ಅಮಾವಾಸ್ಯೆಯಂದು ಇನ್ನೂ ಎರಡು ಕಡೆಗಳಲ್ಲಿ ಕಾಲ್ತುಳಿತ ನಡೆದಿದೆ ಎಂಬುದರ ಕುರಿತ ವಿಡಿಯೊ ಮತ್ತು ಮಾಧ್ಯಮ ವರದಿ ಇರುವ ಪೆನ್‌ಡ್ರೈವ್ ಅನ್ನು ಅರ್ಜಿದಾರರು ಕೋರ್ಟ್‌ಗೆ ಸಲ್ಲಿಸಿದ್ದಾರೆ.

'ಬಾವಿ ಪುನಶ್ಚೇತನ: ಸಮಿತಿ ಆಕ್ಷೇಪ'

ನವದೆಹಲಿ: ಸಂಭಲ್‌ನ ಪುರಾತನ ಬಾವಿಯ ಪುನಶ್ಚೇತನಕ್ಕೆ ಶಾಹಿ ಜಾಮಾ ಮಸೀದಿ ಸಮಿತಿಯು ಆಕ್ಷೇಪ ವ್ಯಕ್ತಪಡಿಸುತ್ತಿದೆ ಎಂದು ಉತ್ತರ ಪ್ರದೇಶವು ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಬಾವಿಯನ್ನು ಸ್ಥಳೀಯರು 'ಧರಣಿ ವರಾಹ ಕೂಪ' ಎಂದು ಕರೆಯುತ್ತಾರೆ. ಬಾವಿಯು ವಿವಾದಿತ ಸ್ಥಳದ ಹೊರಗೆ, ಸಾರ್ವಜನಿಕ ಪ್ರದೇಶದಲ್ಲಿದ್ದರೂ ಸಮಿತಿಯು ವಿರೋಧ ವ್ಯಕ್ತಪಡಿಸುತ್ತಿದೆ ಎಂದು ಹೇಳಿದೆ.

ಪುನಶ್ಚೇತನಕ್ಕೆ ಅಡ್ಡಿಪಡಿಸುವುದು ಅಕ್ರಮ ಮಾತ್ರ ಅಲ್ಲ, ಪ್ರದೇಶದ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಗೆ ಕೆಡಕು ಉಂಟುಮಾಡುವ ಕೆಲಸವಾಗಿದೆ ಎಂದು ಸರ್ಕಾರ ವರದಿಯಲ್ಲಿ ತಿಳಿಸಿದೆ.

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್

ಮೊಲ್ಲರ್‌ಗೆ ಮೆಹಿಯಾ ಆಘಾತ

ಪ್ರಜಾವಾಣಿ ವಾರ್ತೆ


ಕೊಲಂಬಿಯಾದ ನಿಕೋಲಸ್ ಮೆಹಿಯಾ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಬೆಂಗಳೂರು: ಶ್ರೇಯಾಂಕರಹಿತ ಆಟಗಾರ ನಿಕೋಲಸ್ ಮೆಹಿಯಾ ಅವರು ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಮೊದಲ ದಿನವಾದ ಸೋಮವಾರ ನಾಲ್ಕನೇ ಶ್ರೇಯಾಂಕದ ಎಲ್ಮರ್ ಮೊಲ್ಲರ್ ಅವರನ್ನು ಸೋಲಿಸಿ ಗಮನ ಸೆಳೆದರು.

ವಿಶ್ವ ಕ್ರಮಾಂಕದಲ್ಲಿ 155ನೇ ಸ್ಥಾನದಲ್ಲಿರುವ ಮೊಲ್ಲರ್, ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆ ಕ್ರೀಡಾಂಗಣದ ಅಂಕಣದಲ್ಲಿ ನಡೆದ ಮೊದಲ ಸುತ್ತಿನ ಈ ಪಂದ್ಯದಲ್ಲಿ 3-6, 4-6ರಲ್ಲಿ ಕೊಲಂಬಿಯಾದ ಮೆಹಿಯಾ ಎದುರು ಸೋಲನುಭವಿಸಿದರು. ವಿಶ್ವ ಕ್ರಮಾಂಕದಲ್ಲಿ 209ನೇ ಸ್ಥಾನದಲ್ಲಿರುವ ಮೆಹಿಯಾ ಸೊಗಸಾದ ಆಟ ಪ್ರದರ್ಶಿಸಿ ಎರಡನೇ ಸುತ್ತಿಗೇರಿದರು. ಅವರೆದುರು ಡೆನ್ಮಾರ್ಕ್‌ನ 21 ವರ್ಷ ವಯಸ್ಸಿನ ಮೊಲ್ಲರ್ ಪೇಲವವಾಗಿ ಕಂಡರು.

25 ವರ್ಷ ವಯಸ್ಸಿನ ಮೆಹಿಯಾ ಎರಡನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 2-0 ಮುನ್ನಡೆ ಪಡೆದರಲ್ಲದೇ, ತಮ್ಮ ಸರ್ವ್ ಉಳಿಸಿ ಅದನ್ನು 3-0ಗೆ ಏರಿಸಿದರು. ಇದು ಮೊದಲ ಸೆಟ್ ಗೆಲ್ಲಲು ಅವರಿಗೆ ದಾರಿಯಾಯಿತು.

ಎರಡನೇ ಸೆಟ್ ತುಂಬಾ ಭಿನ್ನವಾಗಿರಲಿಲ್ಲ. ಒಮ್ಮೆ ಮಾತ್ರ (ಎಂಟನೇ ಗೇಮ್‌ನಲ್ಲಿ) ಮೊಲ್ಲರ್, ಎದುರಾಳಿಯ ಸರ್ವ್ ಗೇಮ್ ಬ್ರೇಕ್ ಮಾಡಿ ಕೆಲ ಮಟ್ಟಿಗೆ ಪ್ರತಿರೋಧ ತೋರಿದರು. ಆದರೆ ಅಷ್ಟರಲ್ಲಿ ಮೆಹಿಯಾ ಎರಡು ಗೇಮ್‌ಗಳ ಬ್ರೇಕ್ ಪಡೆದು 5-3 ರಲ್ಲಿ ಮುನ್ನಡೆ ಕಟ್ಟಿಕೊಂಡಿದ್ದರು.

'ನಾನು ಉತ್ತಮವಾಗಿ ಸರ್ವ್‌ಗಳನ್ನು ಮಾಡಿದೆ. ಇದು ಹೋರಾಟದ ಪಂದ್ಯವಾಗಿದ್ದು, ಗೆಲುವು ಸಂತಸ ನೀಡಿದೆ' ಎಂದು ಕೊಲಂಬಿಯಾದ ಆಟಗಾರ ಪಂದ್ಯದ ನಂತರದ ಸಂವಾದದಲ್ಲಿ ಪ್ರತಿಕ್ರಿಯಿಸಿದರು.

ಆತಿಥೇಯ ಕರ್ನಾಟಕದ ಎಸ್.ಡಿ.ಪ್ರಜ್ವಲ್ ದೇವ್ ಹೋರಾಟ ತೋರಿದರೂ, ತಮಗಿಂತ ಮೇಲಿನ ಕ್ರಮಾಂಕದ ಮರೆಕ್ ಜೆಂಜೆಲ್ ಎದುರು ಸೋಲನುಭವಿಸಬೇಕಾಯಿತು. ಹಿನ್ನಡೆಯಿಂದ ಚೇತರಿಸಿಕೊಂಡ ಝೆಕ್ ಗಣರಾಜ್ಯದ ಮರೆಕ್ 6-7 (2), 6-3, 6-3 ರಿಂದ ಮೈಸೂರಿನ ಆಟಗಾರನ ವಿರುದ್ಧ ಜಯಗಳಿಸಿದರು.

ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ಆಸ್ಟ್ರೇಲಿಯಾದ ಬ್ಲೇಕ್ ಎಲ್ಲಿಸ್ 6-7 (2), 6-4, 7-6 (6) ರಿಂದ ಬೆಲ್ಜಿಯಂನ ಮೈಕೆಲ್ ಗೀರ್ಟ್ಸ್ ಅವರನ್ನು ಸೋಲಿಸಿದರೆ, ಜಪಾನ್‌ನ ರಿಯೊ ನೊಗುಚಿ 7-5, 6-2 ರಿಂದ ಜರ್ಮನಿಯ ಜಸ್ಟಿನ್ ಎಂಗೆಲ್ ಅವರನ್ನು ಮಣಿಸಿದರು.

ಪ್ರಧಾನ ಸುತ್ತಿಗೆ ಅರ್ಹತೆ ಪಡೆಯಲು ನಡೆದಿದ್ದ ಅಂತಿಮ ಪಂದ್ಯದಲ್ಲಿ ಭಾರತದ ಕರಣ್ ಸಿಂಗ್ 6-4, 7-6 (6) ರಿಂದ ಸ್ವದೇಶದ ಆರ್ಯನ್ ಶಾ ಅವರನ್ನು ಮಣಿಸಿದರು. ಅವರು ಅರ್ಹತಾ ಸುತ್ತಿನಿಂದ ಪ್ರಧಾನ ಡ್ರಾಕ್ಕೆ ಅರ್ಹತೆ ಪಡೆದ ಭಾರತದ ಏಕೈಕ ಆಟಗಾರ ಎನಿಸಿದರು. ಭಾರತದ ಬಹುತೇಕ ಆಟಗಾರರು ಭಾನುವಾರ ಅರ್ಹತಾ ವಿಭಾಗದ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು.

ಸೋಮವಾರ ನಡೆದ ಅರ್ಹತಾ ವಿಭಾಗದ ಎರಡನೇ ಸುತ್ತಿನಲ್ಲಿ ಭಾರತದ ಇನ್ನೊಬ್ಬ ಪ್ರಮುಖ ಆಟಗಾರ ಶಶಿಕುಮಾರ್ ಮುಕುಂದ್, ಝೆಕ್ ಗಣರಾಜ್ಯದ ಹ್ಯಾನೆಕ್ ಬಾರ್ಟನ್ ಅವರಿಗೆ 2-6, 6-4, 4-6ರಲ್ಲಿ ಅವರು ಸೋತರು.

ಫುಟ್‌ಬಾಲ್: ರೈಲ್ ವ್ಹೀಲ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ ವ್ಹೀಲ್ ಫ್ಯಾಕ್ಟರಿ ಎಫ್‌ಸಿ ತಂಡವು ಸೋಮವಾರ ಎ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3-2 ಗೋಲುಗಳಿಂದ ಜವಾಹರ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೈಲ್ ವ್ಹೀಲ್ ತಂಡದ ರಾಜೇಶ್ ಎಸ್. (11ನೇ ಮತ್ತು 18ನೇ ನಿ.), ಎಲ್.ನೆಹ್ಸಿಯಲ್ (80 + 2ನೇ ನಿ.) ಗೋಲುಗಳನ್ನು ಹೊಡೆದರು. ಜವಾಹರ್ ತಂಡದ ಪರ ಕಾಮ್ಮಿನ್‌ಲಿಯಾನ್ ವಾಯಿಫೆಹಿ (33ನೇ ನಿ.) ಅನ್ಮ್ಯ ಭಾಮ ಬಾನಿ (58ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ವಿಜಯನಗರ ಎಫ್‌ಸಿ 3-1 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ವಿಜಯನಗರ ತಂಡದ ಪ್ರಣವ್ ವಾರಿಯರ್ (3ನೇ ನಿ.), ಎಸ್.ಜಿ. ಆ್ಯಂಟನಿ ಕ್ಲಿಂಟ್ಯೋಮ್ (11ನೇ ನಿ.), ಸೆಮಿನಾಲ್ ಹಾಹೊಕಿಪ್ (51ನೇ ನಿ.) ಗೋಲು ಗಳಿಸಿದರು. ಚಾಲೆಂಜರ್ಸ್ ತಂಡದ ಐಸಾಕ್ ಆರ್.(80 + 2ನೇ ನಿ.) ಗೋಲು ಹೊಡೆದರು.

ಫ್ರೀಡಂ ತಂಡಕ್ಕೆ ಜಯ: ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಫ್ರೀಡಂ ಎಫ್‌ಸಿ ತಂಡ 4-0 ಗೋಲುಗಳಿಂದ ತಿಲಕ್ ಮೆಮೊರಿಯಲ್ ಎಫ್‌ಸಿ ತಂಡವನ್ನು ಮಣಿಸಿತು. ಎರಡನೇ ಪಂದ್ಯದಲ್ಲಿ ಯುನಿವರ್ಸಲ್ ಎಫ್‌ಸಿ ತಂಡ 4-1 ಗೋಲುಗಳಿಂದ ನಾಡ ಪ್ರಭು ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಸಿಎಸ್‌ಕೆಗೆ ಶ್ರೀರಾಮ್ ಬೌಲಿಂಗ್ ಕೋಚ್



ಚೆನ್ನೈ (ಪಿಟಿಐ): ಭಾರತ ತಂಡದ ಮಾಜಿ ಆಲ್‌ರೌಂಡರ್ ಶ್ರೀಧರನ್ ಶ್ರೀರಾಮ್ ಅವರು ಮುಂಬರುವ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸಹಾಯಕ ಬೌಲಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಆ ಫ್ರಾಂಚೈಸಿ ಸೋಮವಾರ ಪ್ರಕಟಿಸಿದೆ.

ಎಡಗೈ ಸ್ಪಿನ್ನರ್ ಆಗಿರುವ ಅವರು ಈ ಹಿಂದೆ 2023ರವರೆಗೆ ಆರ್‌ಸಿಬಿ ತಂಡಕ್ಕೆ ಸ್ಪಿನ್ ಬೌಲಿಂಗ್ ಕೋಚ್ ಆಗಿದ್ದರು. ಕೆಕೆಆರ್ ತಂಡಕ್ಕೆ ಮೆಂಟರ್ ಆಗಿ ನೇಮಕಗೊಂಡಿರುವ ಡ್ವೇನ್ ಬ್ರೇವೊ ಸ್ಥಾನವನ್ನು ಶ್ರೀರಾಮ್ ತುಂಬಲಿದ್ದಾರೆ.

49 ವರ್ಷ ವಯಸ್ಸಿನ ಶ್ರೀರಾಮ್ ಅವರು ಸ್ಟೀಫನ್ ಫ್ಲೆಮಿಂಗ್ (ಹೆಡ್ ಕೋಚ್), ಮೈಕ್ ಹಸಿ (ಬ್ಯಾಟಿಂಗ್ ಕೋಚ್) ಮತ್ತು ಎರಿಕ್ ಸಿಮನ್ಸ್ (ಬೌಲಿಂಗ್ ಕನ್ಸಲ್ಟೆಂಟ್) ಜೊತೆ ಕೆಲಸ ಮಾಡಲಿದ್ದಾರೆ. ಸಿಎಸ್‌ಕೆ ತಂಡದಲ್ಲಿ ಆರ್.ಅಶ್ವಿನ್, ರವೀಂದ್ರ ಜಡೇಜ, ಶ್ರೇಯಸ್ ಗೋಪಾಲ್, ನೂರ್ ಅಹ್ಮದ್, ದೀಪಕ್ ಹೂಡ ಮತ್ತು ರಚಿನ್ ರವೀಂದ್ರ ಸ್ಪಿನ್ ಬೌಲರ್‌ಗಳಾಗಿದ್ದಾರೆ.

ಪ್ಲೇ ಆಫ್‌ನತ್ತ ಬಿಎಫ್‌ಸಿ ಚಿತ್ತ

ಐಎಸ್‌ಎಲ್: ಬೆಂಗಳೂರು ತಂಡಕ್ಕೆ ಚೆನ್ನೈಯಿನ್ ಎದುರಾಳಿ

ಪ್ರಜಾವಾಣಿ ವಾರ್ತೆ


ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ

ಬೆಂಗಳೂರು: ಹ್ಯಾಟ್ರಿಕ್ ಸೋಲಿನ ನಂತರ ಸತತ ಎರಡು ಪಂದ್ಯ ಗೆದ್ದು ಆತ್ಮವಿಶ್ವಾಸ ವೃದ್ಧಿಸಿಕೊಂಡಿರುವ ಬೆಂಗಳೂರು ಎಫ್‌ಸಿ, ಇಂಡಿಯನ್ ಸೂಪರ್ ಲೀಗ್ ಪಂದ್ಯದಲ್ಲಿ ಮಂಗಳವಾರ ತವರಿನಲ್ಲಿ ಚೆನ್ನೈಯಿನ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಪ್ಲೇ ಆಫ್ ಸ್ಥಾನ ಖಚಿತ ಪಡಿಸಿಕೊಳ್ಳಲು ಎದುರು ನೋಡುತ್ತಿರುವ ಸುನಿಲ್ ಚೆಟ್ರಿ ಬಳಗವು ಕಂಠೀರವ ಕ್ರೀಡಾಂಗಣದಲ್ಲಿ ಮತ್ತೆ ಪುಟಿದೇಳುವ ವಿಶ್ವಾಸದಲ್ಲಿದೆ. ತವರಿನಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಬಿಎಫ್‌ಸಿ ತಂಡವು 3-0 ಗೋಲುಗಳಿಂದ ಜೆಮ್‌ಶೆಡ್‌ಪುರ ಎಫ್‌ಸಿ ತಂಡವನ್ನು ಹಿಮ್ಮೆಟ್ಟಿಸಿತ್ತು.

ಬೆಂಗಳೂರು ಎಫ್‌ಸಿ ತಂಡಕ್ಕೆ ಲೀಗ್ ಹಂತದಲ್ಲಿ ಇನ್ನು ಮೂರು ಪಂದ್ಯ ಮಾತ್ರ ಬಾಕಿಯಿದೆ. 21 ಪಂದ್ಯಗಳಿಂದ 34 ಅಂಕ (10 ಗೆಲುವು, 4 ಡ್ರಾ, 7 ಸೋಲು) ಪಡೆದು ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಚೆನ್ನೈಯಿನ್ ತಂಡಕ್ಕೂ ಅಷ್ಟೇ ಪಂದ್ಯ ಬಾಕಿಯಿದೆ. 22 ಪಂದ್ಯಗಳಿಂದ 24 ಅಂಕ (6 ಗೆಲುವು, 6 ಡ್ರಾ, 9 ಸೋಲು) ಗಳಿಸಿದ್ದು, ಅಂಕಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಈ ತಂಡದ ಪ್ಲೇ ಆಫ್ ಹಾದಿ ಕಠಿಣವಾಗಿದ್ದು, ಮುಂದಿನ ಪಂದ್ಯಗಳಲ್ಲಿ ಸುಧಾರಿತ ಪ್ರದರ್ಶನ ನೀಡಬೇಕಾದ ಒತ್ತಡದಲ್ಲಿದೆ.

ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನ ಪಡೆಯುವ ಎರಡು ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶ ಪಡೆಯಲಿವೆ. ಉಳಿದ ಎರಡು ಸ್ಥಾನಕ್ಕಾಗಿ ಮೂರರಿಂದ ಆರನೇ ಸ್ಥಾನದಲ್ಲಿರುವ ತಂಡಗಳು ಪೈಪೋಟಿ ನಡೆಸಲಿವೆ.

ಬಿಎಫ್‌ಸಿ ಮತ್ತು ಚೆನ್ನೈ ತಂಡಗಳು ಐಎಸ್‌ಎಲ್‌ನಲ್ಲಿ ಒಟ್ಟು 16 ಬಾರಿ ಮುಖಾಮುಖಿಯಾಗಿದೆ. ಈ ಪೈಕಿ ಒಂಬತ್ತು ಬಾರಿ ಬಿಎಫ್‌ಸಿ ತಂಡ ಪಾರಮ್ಯ ಮೆರೆದಿದೆ. ನಾಲ್ಕು ಬಾರಿ ಮಾತ್ರ ಚೆನ್ನೈ ತಂಡ ಗೆದ್ದಿದೆ. ಮೂರು ಪಂದ್ಯಗಳು ಡ್ರಾನಲ್ಲಿ ಮುಕ್ತಾಯಗೊಂಡಿದೆ.

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಪೋರ್ಟ್ಸ್ 18

ಬಾಗನ್‌ಗೆ ಐಎಸ್‌ಎಲ್ ಶೀಲ್ಡ್

ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ತಂಡವು ಇಂಡಿಯನ್ ಸೂಪರ್ ಲೀಗ್‌ನಲ್ಲಿ ಮೂರು ಸುತ್ತಿನ ಪಂದ್ಯಗಳು ಬಾಕಿ ಇರುವಂತೆಯೇ ಸತತ ಎರಡನೇ ಬಾರಿ ಐಎಸ್‌ಎಲ್ ಶೀಲ್ಡ್ ತಮ್ಮದಾಗಿಸಿಕೊಂಡಿದೆ. ಭಾನುವಾರ ನಡೆದ ಪಂದ್ಯದಲ್ಲಿ ಮೋಹನ್ ಬಾಗನ್ ತಂಡವು 1-0ಯಿಂದ ಒಡಿಶಾ ಎಫ್‌ಸಿ ತಂಡವನ್ನು ಮಣಿಸಿತು.

ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ತಂಡವು ಐಎಸ್‌ಎಲ್ ಶೀಲ್ಡ್ ಪಡೆಯಲಿದ್ದು, ಮೋಹನ್ ಬಾಗನ್ ತಂಡವು 22 ಪಂದ್ಯಗಳಿಂದ (16 ಗೆಲುವು, 4 ಡ್ರಾ, 2 ಸೋಲು) 52 ಅಂಕ ಪಡೆದಿದೆ. ಗೋವಾ ಎಫ್‌ಸಿ (42) ಎರಡನೇ ಸ್ಥಾನದಲ್ಲಿದೆ.

ಪ್ರೊ ಲೀಗ್: ಭಾರತ ತಂಡಗಳಿಗೆ ಸೋಲು

ಭುವನೇಶ್ವರ (ಪಿಟಿಐ): ಭಾರತ ಪುರುಷರ ಮತ್ತು ಮಹಿಳೆಯರ ತಂಡಗಳು ಇಲ್ಲಿನ ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯಗಳಲ್ಲಿ ಸೋಲು ಕಂಡವು.

ಭಾರತದ ವನಿತೆಯರು 2-4 ಗೋಲುಗಳಿಂದ ಒಲಿಂಪಿಕ್ ಚಾಂಪಿಯನ್ ನೆದರ್ಲೆಂಡ್ಸ್ ತಂಡದ ವಿರುದ್ಧ ಪರಾಭವಗೊಂಡರು. ಸಲಿಮಾ ಟೆಟೆ ಸಾರಥ್ಯದ ಭಾರತ ತಂಡಕ್ಕೆ ಬರೋಬ್ಬರಿ 13 ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕರೂ ಅದರ ಲಾಭ ಪಡೆಯುವಲ್ಲಿ ವಿಫಲವಾಯಿತು. ಎದುರಾಳಿ ತಂಡಕ್ಕೆ ಕೇವಲ ಮೂರು ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು.

ಭಾರತ ಪರ ಉದಿತಾ (18 ಮತ್ತು 42ನೇ ನಿಮಿಷ) ಎರಡು ಗೋಲು ಗಳಿಸಿದರು. ಈ ಗೋಲುಗಳು ಪೆನಾಲ್ಟಿ ಕಾರ್ನರ್‌ನಿಂದ ಬಂದವು. ನೆದರ್ಲೆಂಡ್ಸ್ ಪರ ಎಮ್ಮಾ ರೈಜ್‌ನೆನ್ (7ನೇ ನಿಮಿಷ), ಫೆಲಿಸ್ ಅಲ್ಬರ್ಸ್ (34ನೇ ಮತ್ತು 47ನೇ) ಮತ್ತು ಫೇ ವ್ಯಾನ್ ಡೆರ್ ಎಲ್ಸ್ಟ್ (40ನೇ) ಗೋಲು ಗಳಿಸಿದರು.

ಭಾರತದ ಗೋಲ್‌ಕೀಪರ್ ಮತ್ತು ಮಾಜಿ ನಾಯಕಿ ಸವಿತಾ ಪೂನಿಯಾಗೆ ಇದು 300ನೇ ಅಂತರರಾಷ್ಟ್ರೀಯ ಪಂದ್ಯವಾಗಿತ್ತು. ಏಳು ಪಂದ್ಯಗಳಿಂದ ಏಳು ಅಂಕ (2 ಗೆಲುವು, 1 ಡ್ರಾ, 4 ಸೋಲು) ಪಡೆದಿರುವ ಭಾರತ ಅಂಕ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ಭಾರತ ತವರಿನ ಲೆಗ್‌ನ ಕೊನೆಯ ಪಂದ್ಯದಲ್ಲಿ ಮಂಗಳವಾರ ಇದೇ ತಂಡವನ್ನು ಎದುರಿಸಲಿದೆ.

ಪುರುಷರಿಗೆ ಸೋಲು: ಹರ್ಮನ್‌ಪ್ರೀತ್ ಸಾರಥ್ಯದ ತಂಡವು 2-3 ರಿಂದ ಇಂಗ್ಲೆಂಡ್ ತಂಡದ ವಿರುದ್ಧ ಮುಗ್ಗರಿಸಿತು.

ಇಂಗ್ಲೆಂಡ್ ಪರ ನಾಯಕ ಸ್ಯಾಮ್ ವಾರ್ಡ್ (19ನೇ ಮತ್ತು 29ನೇ ನಿ) ಹಾಗೂ ಜೇಕಬ್ ಪೇಟನ್ (15ನೇ ನಿ) ಗೋಲು ಗಳಿಸಿದರು. ಭಾರತ ಪರ ಅಭಿಷೇಕ್ (18ನೇ) ಮತ್ತು ಸುಖ್‌ಜೀತ್ ಸಿಂಗ್ (39ನೇ) ಚೆಂಡನ್ನು ಗುರಿ ಸೇರಿಸಿದರು.

ಏಳು ಪಂದ್ಯಗಳಿಂದ 12 ಅಂಕ (4 ಗೆಲುವು, 3 ಸೋಲು) ಗಳಿಸಿರುವ ಭಾರತ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಭಾರತ ಮಂಗಳವಾರ ಇದೇ ತಂಡದ ವಿರುದ್ಧ ಸೆಣಸಲಿದೆ.

ಇಂದಿನ ಪಂದ್ಯಗಳು

ಮಹಿಳೆಯರ ವಿಭಾಗ
ಭಾರತ Vs ನೆದರ್ಲೆಂಡ್ಸ್ — ಪಂದ್ಯ ಆರಂಭ ಸಂಜೆ 5.15

ಪುರುಷರ ವಿಭಾಗ
ಭಾರತ Vs ಇಂಗ್ಲೆಂಡ್ — ಪಂದ್ಯ ಆರಂಭ ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಡಿ ಸ್ಪೋರ್ಟ್ಸ್